ಶ್ರೀ ವಿಷ್ಣುಸಹಸ್ರನಾಮ

(ಭಾಷ್ಯಸಹಿತ)

ಸ್ವಾಮಿ ವಿಜ್ಞಾನಂದ

ಶ್ರೀ ರಾಮಕೃಷ್ಣಾಶ್ರಮ
ಮೈಸೂರು-೨

ಶ್ರೀ ವಿಷ್ಣುಸಹಸ್ರನಾಮ

(ಭಾಷ್ಯಸಹಿತ)

ಸ್ವಾಮಿ ವಿಜ್ಞಾನಂದ

ಶ್ರೀ ರಾಮಕೃಷ್ಣಾಶ್ರಮ
ಮೈಸೂರು-೨

ಮೊದಲನೆಯ ಮುದ್ರಣ ೧೯೫೭
ತಿದ್ದಿದ ಎರಡನೆಯ ಮುದ್ರಣ ೧೯೬೧
ಮೂರನೆಯ ಮುದ್ರಣ ೧೯೬೭
ನಾಲ್ಕನೆಯ ಮುದ್ರಣ ೧೯೭೦
ಐದನೆಯ ಮುದ್ರಣ ೧೯೭೫

ಪ್ರಕಾಶಕರು

ಅಧ್ಯಕ್ಷರು, ಶ್ರೀರಾಮಕೃಷ್ಣಾಶ್ರಮ, ಮೈಸೂರು

ಮುದ್ರಕರು : ಡಿ. ರಾಜರತ್ನಂ

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಮುನ್ನುಡಿ

ಶ್ರೀಶಂಕರಭಗವತ್ಪಾದರು ತಮ್ಮ ವಿಷ್ಣುಸಹಸ್ರನಾಮಭಾಷ್ಯದಲ್ಲಿ 'ವೇದಗಳ ಸಹಸ್ರ ಶಾಖೆಗಳನ್ನು ತಿಳಿದಿರುವ ಸರ್ವಜ್ಞನೂ ಸಾಕ್ಷಾತ್ ನಾರಾಯಣಸ್ವರೂಪನೂ ಆದ ಭಗವಾನ್ ಕೃಷ್ಣದ್ವೈಪಾಯನನಿಂದ ಈ ಸ್ತವವು ರಚಿಸಲ್ಪಟ್ಟಿತು ; ಸರ್ವಫಲಸಿದ್ಧಿಗಾಗಿ ಎಲ್ಲರೂ ಇದನ್ನು ಆದರದಿಂದ ಪಠಿಸಬೇಕು '[1] ಎಂದು ಹೇಳುತ್ತಾರೆ. ಸಹಸ್ರಮೂರ್ತಿಯಾದ ಪುರುಷೋತ್ತಮನ ಸಹಸ್ರನಾಮವು ಮಹಾಭಾರತದ ಆನುಶಾಸನಿಕ ಪರ್ವದ ೧೪೯ನೆಯ ಅಧ್ಯಾಯದಲ್ಲಿ ಬರುತ್ತದೆ. ೧೪೨ ಶ್ಲೋಕಗಳನ್ನು ಒಳಗೊಂಡಿರುವ ಈ ಸಹಸ್ರನಾಮವು ಭೀಷ್ಮ–ಯುಧಿಷ್ಠಿರರ ಸಂವಾದರೂಪದಲ್ಲಿದೆ.

ಮೊದಲು ಯುಧಿಷ್ಠಿರನು ಆರು ಪ್ರಶ್ನೆಗಳನ್ನು ಕೇಳುತ್ತಾನೆ.

೧. ಲೋಕದಲ್ಲಿ ಅದ್ವಿತೀಯನಾದ ದೇವನು ಯಾರು ?

೨. ಏಕಪರಾಯಣವು ಯಾವುದು ?

೩–೪. ಮಾನವನು ಶುಭವನ್ನು ಹೊಂದಲು ಯಾರನ್ನು ಸ್ತುತಿಸಬೇಕು ಮತ್ತು ಯಾರನ್ನು ಅರ್ಚಿಸಬೇಕು ?

೫. ಸರ್ವಧರ್ಮಗಳಲ್ಲಿ ಯಾವ ಧರ್ಮವು ಶ್ರೇಷ್ಠವೆಂದು ನೀನು ಎಣಿಸುತ್ತೀಯೆ ?

೬. ಯಾವುದನ್ನು ಜಪಿಸುತ್ತ ಮಾನವನು ಜನ್ಮಸಂಸಾರಬಂಧನದಿಂದ ಮುಕ್ತನಾಗುತ್ತಾನೆ ?[2]

ಜಪ್ಯವಿಷಯವಾದ ಆರನೆಯ ಪ್ರಶ್ನೆಯ ಉತ್ತರವು ನಾಲ್ಕನೆಯ ಶ್ಲೋಕದಲ್ಲಿ ಇರುವುದೆಂದೂ,[3] ನಾಲ್ಕನೆಯ ಪ್ರಶ್ನೆಯ ಉತ್ತರವು ಐದನೆಯ

---

1. 'ಇಮಂ ಸ್ತವಮ್', ಇತ್ಯಾದಿನಾ ಸಹಸ್ರಶಾಖಾಜ್ಞೇನ ಸರ್ವಜ್ಞೇನ ಭಗವತಾ ಕೃಷ್ಣದ್ವೈಪಾಯನೇನ ಸಾಕ್ಷಾನ್ನಾರಾಯಣೇನ ಕೃತಮಿತಿ ಸರ್ವೈರೇವ ಅರ್ಥಿಭಿಃ ಸಾದರಂ ಪಠಿತವ್ಯಂ ಸರ್ವಫಲಸಿದ್ಧಯ ಇತಿ ದರ್ಶಯತಿ (೧೪೧ ನೆಯ ಶ್ಲೋಕದ ಭಾಷ್ಯ.)

2. ಕಿಮೇಕಂ ದೈವತಂ ಲೋಕೇ ಕಿಂ ವಾಪ್ಯೇಕಂ ಪರಾಯಣಮ್ ।
ಸ್ತುವಂತಃ ಕಂ ಕಮರ್ಚಂತಃ ಪ್ರಾಪ್ನುಯುರ್ಮಾನವಾಃ ಶುಭಮ್ ॥೨॥
ಕೋ ಧರ್ಮಃ ಸರ್ವಧರ್ಮಾಣಾಂ ಭವತಃ ಪರಮೋ ಮತಃ
ಕಿಂ ಜಪನ್ ಮುಚ್ಯತೇ ಜಂತುರ್ಜನ್ಮಸಂಸಾರಬಂಧನಾತ್ ॥೩॥

3. ಜಗತ್ಪ್ರಭುಂ ದೇವದೇವಮನಂತಂ ಪುರುಷೋತ್ತಮಮ್ ।
ಸ್ತುವನ್ನಾಮಸಹಸ್ರೇಣ ಪುರುಷಃ ಸತತೋತ್ಥಿತಃ ॥೪॥

ಶ್ಲೋಕದಲ್ಲಿ ಇರುವುದೆಂದೂ,[1] ಮೂರನೆಯ ಪ್ರಶ್ನೆಯ ಉತ್ತರವು ಆರನೆಯ ಶ್ಲೋಕದ ಮೂರು ಪಾದಗಳಲ್ಲಿ ಇರುವುದೆಂದೂ,[2] ಐದನೆಯ ಪ್ರಶ್ನೆಯ ಉತ್ತರವು ಎಂಟನೆಯ ಶ್ಲೋಕದಲ್ಲಿ ಇರುವುದೆಂದೂ,[3] ಎರಡನೆಯ ಪ್ರಶ್ನೆಯ ಉತ್ತರವು ಒಂಭತ್ತನೆಯ ಶ್ಲೋಕದಲ್ಲಿ ಇರುವುದೆಂದೂ,[4] ಮೊದಲನೆಯ ಪ್ರಶ್ನೆಯ ಉತ್ತರವು ಹತ್ತನೆಯ ಶ್ಲೋಕದಲ್ಲಿ ಇರುವುದೆಂದೂ,[5] ಶ್ರೀಶಂಕರಾಚಾರ್ಯರು ತಮ್ಮ ಭಾಷ್ಯಾವತರಣಿಕೆಯಲ್ಲಿ ತಿಳಿಸಿರುತ್ತಾರೆ. ಆರನೆಯ ಪ್ರಶ್ನೆಗೆ ಉತ್ತರವಾದ ನಾಲ್ಕನೆಯ ಶ್ಲೋಕದಲ್ಲಿ ಉಲ್ಲೇಖಿತವಾಗಿರುವ ಪುರುಷೋತ್ತಮನ 'ನಾಮಸಹಸ್ರವು' ವಿಷ್ಣುವಿನ ಸಹಸ್ರನಾಮಗಳು. ಈ ಸಹಸ್ರನಾಮಗಳನ್ನೇ ಪಠಿಸುತ್ತ ಜಪಿಸುತ್ತ ಸರ್ವದುಃಖಗಳನ್ನು ದಾಟುತ್ತಾನೆಂದು 'ಒಳಗಿನ ಮತ್ತು ಹೊರಗಿನ ಸಮಸ್ತ ಶತ್ರುಗಳಿಗೂ ಭಯಂಕರನೂ, ಮೋಕ್ಷಧರ್ಮಾದಿಗಳ ವಕ್ತೃವೂ, ಸರ್ವಜ್ಞನೂ'[6] ಆದ ಭೀಷ್ಮನು ಯುಧಿಷ್ಠಿರನಿಗೆ ಉಪದೇಶಿಸಿ ಸಹಸ್ರನಾಮಗಳನ್ನು ಹೇಳುತ್ತಾನೆ.

ಈ ಸ್ತುತಿರೂಪವಾದ ಅರ್ಚನೆಗೆ ಅಧಿಕ ಮಾನ್ಯತೆಯನ್ನು ಕೊಡಲು ಏನು ಕಾರಣ ಎಂಬ ಪ್ರಶ್ನೆಗೆ ಶ್ರೀಮದಾಚಾರ್ಯರೇ ಉತ್ತರವನ್ನು ಕೊಟ್ಟಿರುತ್ತಾರೆ.

೧. ಇದರಲ್ಲಿ ಇತರ ಪ್ರಾಣಿಗಳಿಗೆ ಹಿಂಸೆಯಿಲ್ಲ.

೨. ಇತರ ಮನುಷ್ಯರ ಅಥವಾ ದ್ರವ್ಯದ ಅವಶ್ಯಕತೆಯಿಲ್ಲ.

---

1. ತಮೇವ ಚಾರ್ಚಯನ್ನಿತ್ಯಂ ಭಕ್ತ್ಯಾ ಪುರುಷಮವ್ಯಯಮ್ ।
ಧ್ಯಾಯಂಸ್ತುವನ್ನಮಸ್ಯಂಶ್ಚ ಯಜಮಾನಸ್ತಮೇವ ಚ ॥೫॥
2. ಅನಾದಿನಿಧನಂ ವಿಷ್ಣುಂ ಸರ್ವಲೋಕಮಹೇಶ್ವರಮ್ ।
ಲೋಕಾಧ್ಯಕ್ಷಂ ಸ್ತುವನ್ನಿತ್ಯಂ ಸರ್ವದುಃಖಾತಿಗೋ ಭವೇತ್ ॥೬॥
3. ಏಷ ಮೇ ಸರ್ವಧರ್ಮಾಣಾಂ ಧರ್ಮೋಽಧಿಕತಮೋ ಮತಃ ।
ಯದ್ಭಕ್ತ್ಯಾ ಪುಂಡರೀಕಾಕ್ಷಂ ಸ್ತವೈರರ್ಚೇನ್ನರಃ ಸದಾ ॥೮॥
4. ಪರಮಂ ಯೋ ಮಹತ್ತೇಜಃ ಯೋ ಮಹತ್ತಪಃ
ಪರಮಂ ಯೋ ಮಹದ್ಬ್ರಹ್ಮ ಪರಮಂ ಯಃ ಪರಾಯಣಮ್ ॥೯॥
5. ಪವಿತ್ರಾಣಾಂ ಪವಿತ್ರಂ ಯೋ ಮಂಗಲಾನಾಂ ಚ ಮಂಗಲಮ್ ।
ದೈವತಂ ದೇವತಾನಾಂ ಚ ಭೂತಾನಾಂ ಯೋಽವ್ಯಯಃ ಪಿತಾ ॥೧೦॥
6. ಸರ್ವೇಷಾಂ ಬಹಿರಂತಶ್ಶತ್ರೂಣಾಂ ಭಯಹೇತುರ್ಭೀಷ್ಮಃ ಮೋಕ್ಷಧರ್ಮಾದೀನಾಂ ಪ್ರವಕ್ತಾ ಸರ್ವಜ್ಞಃ । (ನಾಲ್ಕನೆಯ ಶ್ಲೋಕದ ಭಾಷ್ಯ.)

೩. ದೇಶಕಾಲಾದಿಗಳ ನಿಯಮವಿಲ್ಲ.[1]

'ಕೃತಯುಗದಲ್ಲಿ ಧ್ಯಾನದಿಂದಲೂ, ತ್ರೇತಾಯುಗದಲ್ಲಿ ಯಜ್ಞದಿಂದಲೂ, ದ್ವಾಪರಯುಗದಲ್ಲಿ ಅರ್ಚನೆಯಿಂದಲೂ ಯಾವುದನ್ನು ಹೊಂದಬಹುದೋ ಅದನ್ನು ಕಲಿಯುಗದಲ್ಲಿ ಕೇಶವನ ಸಂಕೀರ್ತನೆಯಿಂದಲೇ ಹೊಂದಬಹುದು'[2] ಎಂದು ಪುರಾಣರತ್ನವಾದ ವಿಷ್ಣುಪುರಾಣವೇ ಹೇಳಿದೆ. 'ಯಜ್ಞಗಳಲ್ಲಿ ನಾನು ಜಪಯಜ್ಞ'[3] ಎಂದು ಭಗವದ್ವಚನವೇ ಉಂಟು. ಸಹಸ್ರನಾಮದ ಜಪವು ಈ ಯುಗದಲ್ಲಿ ಅತ್ಯಂತ ಉತ್ತಮವಾದ ಸಾಧನವೆಂಬ ದೃಢನಂಬಿಕೆಯಿಂದ ಶ್ರೀಮದಾಚಾರ್ಯರು ನಾಮಭಾಷ್ಯವನ್ನು ಬರೆದಿರುವರೆಂಬುದು ಅವರ ಅವತರಣಿಕೆಯಿಂದಲೇ ಸ್ಪಷ್ಟವಾಗಿದೆ.

ನಾಮಗಳ ಅರ್ಥವನ್ನು ತಿಳಿದುಕೊಳ್ಳುವಾಗ ಒಂದು ವಿಷಯವನ್ನು ನಾವು ನೆನಪಿನಲ್ಲಿ ಇಡಬೇಕು : ಸಹಸ್ರನಾಮದಲ್ಲಿ 'ಆದಿತ್ಯ' ಮೊದಲಾದ ನಾಮಗಳು ಬಂದಾಗ ಅವು ಪ್ರಸಿದ್ಧವಾದ ಭೌತಿಕವಸ್ತುಗಳನ್ನು ಸೂಚಿಸಿದರೂ ಆದಿತ್ಯಾದಿಗಳು ಭಗವಂತನ ವಿಭೂತಿಯಾದ ಕಾರಣ ಅವನಿಂದ ಭಿನ್ನವಲ್ಲ. ಪ್ರಸಿದ್ಧಾರ್ಥವನ್ನೇ ಗ್ರಹಿಸಿದರೂ ಅವು ಭಗವಂತನ ಸ್ತುತಿಯಾಗುತ್ತದೆಂದು ಶ್ರೀಮದಾಚಾರ್ಯರು ತಿಳಿಸಿ ವಿಷ್ಣುಪುರಾಣದ ಎರಡು ಶ್ಲೋಕಗಳನ್ನು[4] ಪ್ರಮಾಣವಾಗಿ ಉದಾಹರಿಸಿದ್ದಾರೆ.

ಭೂತಾತ್ಮ, ಇಂದ್ರಿಯಾತ್ಮ, ಪ್ರಧಾನಾತ್ಮ, ಜೀವಾತ್ಮ ಮತ್ತು ಪರಮಾತ್ಮ– ಇವೆಲ್ಲವೂ ನೀನೇ. ನಕ್ಷತ್ರಗಳೂ ವಿಷ್ಣುವೇ, ಲೋಕಗಳೂ ವಿಷ್ಣುವೇ,

---

1. ಹಿಂಸಾದಿಪುರುಷಾಂತರದ್ರವ್ಯಾಂತರದೇಶಕಾಲಾದಿನಿಯಮಾನಪೇಕ್ಷತ್ವಮಾ ಆಧಿಕ್ಯೇ ಕಾರಣಮ್ । (ಎಂಟನೆಯ ಶ್ಲೋಕದ ಭಾಷ್ಯ.)
2. ಧ್ಯಾಯನ್ ಕೃತೇ ಯಜನ್ ಯಜ್ಞೈಸ್ತ್ರೇತಾಯಾಂ ದ್ವಾಪರೇಽರ್ಚಯನ್ । ಯದಾಪ್ನೋತಿ ತದಾಪ್ನೋತಿ ಕಲೌ ಸಂಕೀರ್ತ್ಯ ಕೇಶವಮ್॥ (೬.೨.೧೭)
3. ಯಜ್ಞಾನಾಂ ಜಪಯಜ್ಞೋಽಸ್ಮಿ (ಗೀತಾ. ೧೦. ೨೫)
4. ಭೂತಾತ್ಮಾ ಚೇಂದ್ರಿಯಾತ್ಮಾ ಚ ಪ್ರಧಾನಾತ್ಮಾ ತಥಾ ಭವಾನ್ । ಆತ್ಮಾ ಚ ಪರಮಾತ್ಮಾ ಚ ತ್ವಮೇಕಃ ಪಂಚಧಾ ಸ್ಥಿತಃ॥ (೫. ೧೮. ೫೦)
   ಜ್ಯೋತೀಂಷಿ ವಿಷ್ಣುರ್ಭುವನಾನಿ ವಿಷ್ಣುರ್ವನಾನಿ ವಿಷ್ಣುರ್ಗಿರಯೋ ದಿಶಶ್ಚ ।
   ನದ್ಯಃ ಸಮುದ್ರಾಶ್ಚ ಸ ಏವ ಸರ್ವಂ ಯದಸ್ತಿ ಯನ್ನಾಸ್ತಿ ಚ ವಿಪ್ರವರ್ಯ ॥ (೨. ೧೨. ೩೮)

ವನಗಿರಿಗಳೂ ವಿಷ್ಣುವೇ; ದಿಕ್ಕುಗಳೂ ವಿಷ್ಣುವೇ; ಹೇ ವಿಪ್ರವರ್ಯ ಇರುವುದು, ಇಲ್ಲದಿರುವುದು—ಎಲ್ಲವೂ ಅವನೇ.

ಕೆಲವು ವಿಮರ್ಶಕರು ಪುನರುಕ್ತಿಯ ದೋಷವನ್ನು ಸಹಸ್ರನಾಮದಲ್ಲಿ ಕಂಡುಹಿಡಿದಿರುತ್ತಾರೆ. ನಾಮಗಳ ಅರ್ಥವೈವಿಧ್ಯವನ್ನೂ ಆಳವನ್ನೂ ಸೂಕ್ಷ್ಮವಾಗಿ ನೋಡದಿರುವುದೇ ಇದಕ್ಕೆ ಕಾರಣ. ಸಹಸ್ರನಾಮದ ಸಾಹಿತ್ಯ ರೂಪವು ಗೀರ್ವಾಣಭಾಷೆಗೆ ವಿಶೇಷವಾದುದು. 'ಸೂತ್ರ' ಸಾಹಿತ್ಯದಂತೆ ಇದರಲ್ಲಿ ಅರ್ಥಕ್ಕೆ ಅಥವಾ ಅನ್ವಯಕ್ಕೆ ಆವಶ್ಯಕವಾದ ಅನೇಕ ಪದಗಳು ಬಿಟ್ಟುಹೋಗಿರುತ್ತವೆ. ಜ್ಞಾಪಕಶಕ್ತಿಗೆ ಅನುಕೂಲವಾಗುವಂತೆ ಬಹಳ ಮಿತವಾದ ಪದಗಳಿಂದ ಸಹಸ್ರನಾಮಸಾಹಿತ್ಯವು ರಚಿಸಲ್ಪಟ್ಟಿದೆ. ಕವಿಯು ತನ್ನ ಭಾವಗಳನ್ನೂ ರಸಗಳನ್ನೂ ತತ್ತ್ವಗಳನ್ನೂ ಭಗವಂತನ ನಾಮಗಳ ಮೂಲಕವೇ ಬಹಳ ಮಿತವಾಗಿ ಹೇಳಬೇಕು. ಇಲ್ಲಿ ಮಾತುಗಳನ್ನು ಬೆಳೆಸಲು ಸ್ಥಾನವಿಲ್ಲ. 'ವಿಷ್ಣು' ಮೊದಲಾದ ಶಬ್ದಗಳು ಅನೇಕ ಸಲ ಬಂದರೂ, ವೃತ್ತಿಭೇದದಿಂದ ಅರ್ಥಭೇದವಾಗುವ ಕಾರಣ ಪುನರುಕ್ತಿಯ ದೋಷವಿಲ್ಲವೆಂದು ಶ್ರೀಮದಾಚಾರ್ಯರು ಹೇಳಿರುತ್ತಾರೆ. ಸಹಸ್ರನಾಮಗಳುಳ್ಳ ಒಂದೇ ದೇವತೆ ಯಾವುದೆಂದು ಪ್ರಶ್ನಿಸಿರುವುದರಿಂದ ಅರ್ಥವು ಒಂದೇ ಆಗಿದ್ದರೂ ಪುನರುಕ್ತಿಯ ದೋಷವಿಲ್ಲ.

ವಿಷ್ಣುಸಹಸ್ರನಾಮವು ಜನಪ್ರಿಯವಾದ ಗ್ರಂಥ. ಇದಕ್ಕೆ ಹದಿನೈದು ಭಾಷ್ಯಗಳಿವೆಯೆಂದು ದಿವಂಗತ ಶ್ರೀ ಆರ್. ಅನಂತಕೃಷ್ಣಶಾಸ್ತ್ರಿಗಳು ತಮ್ಮ ಸಹಸ್ರನಾಮದ ಆಂಗ್ಲಾನುವಾದದ ಮುನ್ನುಡಿಯಲ್ಲಿ ಹೇಳಿರುತ್ತಾರೆ. ಇತ್ತೀಚೆಗೆ ಇನ್ನೂ ಅನೇಕ ಭಾಷ್ಯಗಳು ಸಿಕ್ಕಿವೆ. ವಿಷ್ಣುಸಹಸ್ರನಾಮದ ಶಾಂಕರ ಭಾಷ್ಯದ ಹಸ್ತಪ್ರತಿಗಳು ಇಡಿಯ ಭಾರತದಲ್ಲೆಲ್ಲ ತಮಗೆ ಸಿಕ್ಕಿವೆಯೆಂದೂ, ಕೆಲವು ಪ್ರತಿಗಳು ಕ್ರಿ.ಶ. ಹದಿನಾಲ್ಕನೆಯ ಮತ್ತು ಹದಿನೈದನೆಯ ಶತಮಾನಗಳಿಗೆ ಸೇರಿದುವೆಂದೂ ಶ್ರೀ ಅನಂತಕೃಷ್ಣಶಾಸ್ತ್ರಿಗಳು ಹೇಳಿರುತ್ತಾರೆ. ಇದರಿಂದ ಶ್ರೀಮದಾಚಾರ್ಯರ ನಾಮಭಾಷ್ಯವು ದೇಶದಾದ್ಯಂತ ಎಷ್ಟು ಪ್ರಿಯವಾಗಿರುವುದೆಂದು ನಮಗೆ ತಿಳಿದುಬರುತ್ತದೆ. ಸಹಸ್ರನಾಮವು ಅದ್ವೈತ ಸಂಪ್ರದಾಯದಲ್ಲಿ ಶ್ರೇಷ್ಠತೆಯನ್ನು ಪಡೆದಿರುವಂತೆ ದ್ವೈತವಿಶಿಷ್ಟಾದ್ವೈತ ಸಂಪ್ರದಾಯಗಳಲ್ಲಿಯೂ ಪ್ರಾಧಾನ್ಯವನ್ನು ಪಡೆದಿದೆ.

ಶ್ರೀಮದ್ರಾಮಾನುಜಾಚಾರ್ಯರು ಮಾಡಿದ ಮೂರು ಪ್ರತಿಜ್ಞೆಗಳಲ್ಲಿ ಶ್ರೀಪರಾಶರಋಷಿಗಳ ಹೆಸರನ್ನು ಚಿರಸ್ಮರಣೀಯವಾಗಿ ಮಾಡುವುದು ಒಂದಾಗಿತ್ತು. ಇವರು ತಮ್ಮ ಪ್ರತಿಜ್ಞೆಯನ್ನು ನೆರವೇರಿಸಲು ತಮ್ಮ ಶಿಷ್ಯನಾದ ಕೂರೇಶನ ಮಗನಿಗೆ ಪರಾಶರನೆಂಬ ಹೆಸರನ್ನು ಕೊಟ್ಟು ಅವನು ಮುಂದೆ ವಿಷ್ಣುಸಹಸ್ರನಾಮದ ಭಾಷ್ಯವನ್ನು ಬರೆಯುವಂತೆ ಪ್ರೇರಿಸಿದರು. ಇವರೇ ಪ್ರಸಿದ್ಧರಾದ ಪರಾಶರಭಟ್ಟರು. ಪರಾಶರಭಟ್ಟರ ಭಗವದ್ಗುಣದರ್ಪಣವೆಂಬ ಸಹಸ್ರನಾಮ ಭಾಷ್ಯವು ಶ್ರೀವೈಷ್ಣವಸಂಪ್ರದಾಯದಲ್ಲಿ ಅತ್ಯಂತ ಆದರಣೀಯವಾಗಿದೆ. ಈ ಭಾಷ್ಯದ ಬಗ್ಗೆ ಶ್ರೀ ಅನಂತಕೃಷ್ಣ ಶಾಸ್ತ್ರಿಗಳು ಹೀಗೆ ಹೇಳಿರುತ್ತಾರೆ: It completely traces out all the grammatical forms of the names with thir respective references.

ಸಹಸ್ರನಾಮವು ಹಿಂದೆ ಹೇಳಿದಂತೆ ಒಬ್ಬನೇ ದೇವನ ಸಾವಿರಾರು ವಿಶೇಷಣಗಳನ್ನೂ ಲಕ್ಷಣಗಳನ್ನೂ ತಿಳಿಸುತ್ತದೆ. ಯಾವ ವಿಶೇಷಣವೂ ಭಗವಂತನ ವಿಭೂತಿಯನ್ನು ಮಿತಗೊಳಿಸುವುದಿಲ್ಲ; ಒಂದು ವಿಶೇಷಣವು ಇನ್ನೊಂದು ವಿಶೇಷಣವನ್ನು ವಿರೋಧಿಸುವುದಿಲ್ಲ. ನಮ್ಮ ಮನಸ್ಸಿಗೆ ನಿಲುಕುವ ಸಮಸ್ತ ಭಾವನೆಗಳು ಭಗವಂತನಲ್ಲಿ ಪರ್ಯವಸಾನವನ್ನು ಹೊಂದುತ್ತವೆ. ಅವನು ಅಮೂರ್ತಿಯಾದರೂ ಅನೇಕಮೂರ್ತಿ, ಪರಮಾರ್ಥತಃ ಏಕನಾದರೂ ಬಹುರೂಪವುಳ್ಳವನು. ನಿರ್ಗುಣನಾದರೂ ಸುವರ್ಣವರ್ಣವುಳ್ಳವನು, ಹೇಮಾಂಗನು, ವರಾಂಗನು ; ಅವ್ಯಕ್ತನಾದರೂ ಪುರುಷೋತ್ತಮನೆಂದು ವ್ಯಕ್ತಿತ್ವವನ್ನು ಪಡೆದಿರುತ್ತಾನೆ ; ಅಪ್ರಮೇಯನಾದರೂ ಸ್ತವಪ್ರಿಯನು ; ಶ್ರೀಶ, ಶ್ರೀನಿವಾಸ ಮೊದಲಾದ ನಾಮಗಳು ಅವನ ಶ್ರಿಯಃಪತಿತ್ವವನ್ನು ಸೂಚಿಸುತ್ತವೆ ; ಸುಂದರ ರತ್ನನಾಭ ಸುಲೋಚನ ಮೊದಲಾದ ನಾಮಗಳು ಅವನು ಧ್ಯಾನಗಮ್ಯನೆಂದು ತಿಳಿಸುತ್ತವೆ. ಯೋಗ, ಯೋಗವಿದರನೇತೃ, ಯೋಗಿ ಮೊದಲಾದ ನಾಮಗಳು ಅವನಿಗೂ ಯೋಗಕ್ಕೂ ಇರುವ ನಿಕಟ ಸಂಬಂಧವನ್ನು ಸೂಚಿಸುತ್ತವೆ. ಅವನೇ ಪ್ರಕೃತಿಗೂ ಜೀವರಿಗೂ ಸ್ವಾಮಿ.

ಭಗವಂತನ ಕಲ್ಯಾಣಗುಣಗಳನ್ನು ನಿರೂಪಿಸುವ ಸಹಸ್ರನಾಮವು ಒಂದು ಮಾನಸತೀರ್ಥ. ಇದರಲ್ಲಿ ಮಿಂದವರು ವಿರಜರಾಗುತ್ತಾರೆ. ಕೇವಲ ಬಾಹ್ಯಸ್ನಾನದಿಂದ ಅಂತರಾತ್ಮವು ಶುದ್ಧವಾಗುವುದಿಲ್ಲ. ನಾಮಜಪಕ್ಕೆ

ಅನುರೂಪವಾಗಿ ಮಹಾಭಾರತವು ಹೇಳಿರುವ ಕೆಲವು ಶ್ಲೋಕಗಳನ್ನು ಶ್ರೀಮದಾಚಾರ್ಯರು ಹೀಗೆ ಉಲ್ಲೇಖಿಸಿರುತ್ತಾರೆ:

ಯಾವುದರಲ್ಲಿ ಸ್ನಾನಮಾಡಿ ದೇವತೆಗಳೂ ವೇದಗಳೂ ಪವಿತ್ರತೆಯನ್ನು ಮತ್ತು ಪೂರ್ಣವಾದ ಏಕತ್ವವನ್ನು ಹೊಂದುವರೊ ಅದೇ ಮಾನಸತೀರ್ಥ; ಅದರಲ್ಲಿ ಸ್ನಾನಮಾಡಿ ಮಾನವನು ಅಮೃತನಾಗುತ್ತಾನೆ. ಮಾನಸತೀರ್ಥದ ಜ್ಞಾನವೆಂಬ ಸರೋವರದಲ್ಲಿ, ರಾಗದ್ವೇಷಗಳನ್ನು ನಾಶಮಾಡುವ ಧ್ಯಾನಜಲದಲ್ಲಿ ಸ್ನಾನಮಾಡುವವನು ಪರಮಗತಿಯನ್ನು ಹೊಂದುತ್ತಾನೆ. ಆತ್ಮವೆಂಬ ನದಿಯು ಸಂಯಮತೋಯದಿಂದ ತುಂಬಿದೆ; ಸತ್ಯವೇ ಅದರ ಆಳ; ಶೀಲವೇ ಅದರ ದಡ; ದಯೆಯೇ ಅದರ ತರಂಗ. ಹೇ ಪಾಂಡುಪುತ್ರ, ಅದರಲ್ಲಿ ಸ್ನಾನಮಾಡು, ಅಂತರಾತ್ಮವು ಬರಿಯ ನೀರಿನಿಂದ ಶುದ್ಧವಾಗುವುದಿಲ್ಲ.[1]

ಎಲ್ಲ ಸ್ತೋತ್ರಪಾಠಕರು ಈ ಮಾನಸತೀರ್ಥದಲ್ಲಿ ಮಿಂದು ಪವಿತ್ರರಾಗಲಿ.

ವಿಷ್ಣುಸಹಸ್ರನಾಮವನ್ನು ಸರಳ ಕನ್ನಡಕ್ಕೆ ಬಹಳ ಚೆನ್ನಾಗಿ ಅನುವಾದ ಮಾಡಿರುವ ಸ್ವಾಮಿ ವಿಜ್ಞಾನಂದರನ್ನು ನಾನು ಅಭಿನಂದಿಸುತ್ತೇನೆ. ನಾಮಗಳನ್ನು ಅನುವಾದಿಸುವಾಗ ಅವರು ಮುಖ್ಯವಾಗಿ ಶಾಂಕರಭಾಷ್ಯವನ್ನು ಅವಲಂಬಿಸಿರುತ್ತಾರೆ.

ಶ್ರೀರಾಮಕೃಷ್ಣಾಶ್ರಮ
ಮಂಗಳೂರು
೧–೮–೧೯೫೭

ಸ್ವಾಮಿ ಆದಿದೇವಾನಂದ.

---

1. ಯಸ್ಮಿನ್ ದೇವಾಶ್ಚ ವೇದಾಶ್ಚ ಪವಿತ್ರಂ ಕೃತ್ಸ್ನಮೇಕತಾಮ್ ।
ವ್ರಜೇತ್ತನ್ಮಾನಸಂ ತೀರ್ಥಂ ತತ್ರ ಸ್ನಾತ್ವಾಽಮೃತೋ ಭವೇತ್ ॥
ಜ್ಞಾನಹ್ರದೇ ಧ್ಯಾನಜಲೇ ರಾಗದ್ವೇಷಮಲಾಪಹೇ ।
ಯಃ ಸ್ನಾತಿ ಮಾನಸೇ ತೀರ್ಥೇ ಸ ಯಾತಿ ಪರಮಾಂ ಗತಿಮ್ ॥
ಆತ್ಮಾ ನದೀ ಸಂಯಮತೋಯಪೂರ್ಣಾ ಸತ್ಯಹ್ರದಾ ಶೀಲತಟಾ ದಯೋರ್ಮಿಃ ।
ತತ್ರಾವಗಾಹಂ ಕುರು ಪಾಂಡುಪುತ್ರ ನ ವಾರಿಣಾ ಶುಧ್ಯತಿ ಚಾಂತರಾತ್ಮಾ ॥

ಶ್ರೀ ವಿಷ್ಣುಸಹಸ್ರನಾಮ

ಮಂಗಲಶ್ಲೋಕಾಃ

ಶ್ರೀಪರಮಾತ್ಮನೇ ನಮಃ

ಸಚ್ಚಿದಾನಂದರೂಪಾಯ ಕೃಷ್ಣಾಯಾಕ್ಲಿಷ್ಟಕಾರಿಣೇ ।
ನಮೋ ವೇದಾಂತವೇದ್ಯಾಯ ಗುರವೇ ಬುದ್ಧಿಸಾಕ್ಷಿಣೇ ॥೧॥

ಸಚ್ಚಿದಾನಂದರೂಪನೂ, ಅಕ್ಲಿಷ್ಟಕಾರಿಯೂ[1], ವೇದಾಂತವೇದ್ಯನೂ, ಬುದ್ಧಿಸಾಕ್ಷಿಯೂ[2], ಗುರುವು ಆಗಿರುವ ಶ್ರೀಕೃಷ್ಣನಿಗೆ ನಮಸ್ಕಾರ.

ಕೃಷ್ಣದ್ವೈಪಾಯನಂ ವ್ಯಾಸಂ ಸರ್ವಲೋಕಹಿತೇ ರತಮ್ ।
ವೇದಾಬ್ಜಭಾಸ್ಕರಂ ವಂದೇ ಶಮಾದಿನಿಲಯಂ ಮುನಿಮ್ ॥೨॥

ಸರ್ವಲೋಕಹಿತದಲ್ಲಿ ತತ್ಪರನೂ, ವೇದರೂಪವಾದ ತಾವರೆಗೆ ಸೂರ್ಯನಂತಿರುವವನೂ, ಶಮಾದಿಗಳಿಗೆ ಆಶ್ರಯನೂ, ಮುನಿಯೂ ಆದ ಶ್ರೀಕೃಷ್ಣದ್ವೈಪಾಯನ ವ್ಯಾಸನಿಗೆ ನಮಸ್ಕರಿಸುತ್ತೇನೆ.

ಸಹಸ್ರಮೂರ್ತೇಃ ಪುರುಷೋತ್ತಮಸ್ಯ
ಸಹಸ್ರನೇತ್ರಾನನಪಾದಬಾಹೋಃ ।
ಸಹಸ್ರನಾಮ್ನಾಂ ಸ್ತವನಂ ಪ್ರಶಸ್ತಂ
ನಿರುಚ್ಯತೇ ಜನ್ಮಜರಾದಿಶಾಂತ್ಯೈ ॥೩॥

ಸಹಸ್ರಮೂರ್ತಿಯೂ, ಸಹಸ್ರ ನೇತ್ರಗಳು ಮುಖಗಳು ಕಾಲುಗಳು ಮತ್ತು ಕೈಗಳು ಉಳ್ಳವನೂ ಆಗಿರುವ ಶ್ರೀಪುರುಷೋತ್ತಮನ ಸಹಸ್ರನಾಮಗಳ ಪ್ರಶಸ್ತವಾದ ಸ್ತೋತ್ರವು ಜನನ, ಮುಪ್ಪು ಮೊದಲಾದುವುಗಳ ನಿವಾರಣೆಗಾಗಿ ವ್ಯಾಖ್ಯಾನಮಾಡಲ್ಪಡುತ್ತದೆ.

---

1. ಆಯಾಸವಿಲ್ಲದೆಯೇ ತನ್ನ ಕರ್ಮಗಳನ್ನು ಮಾಡುವವನು.
2. ಬುದ್ಧಿಗೆ ಸಾಕ್ಷಿಯಾಗಿರುವವನು.

ಶ್ರೀವಿಷ್ಣುಸಹಸ್ರನಾಮಸ್ತುತಿಃ

ವೈಶಂಪಾಯನನು ಜನಮೇಜಯನಿಗೆ ಹೇಳಿದನು—

ಶ್ರುತ್ವಾ ಧರ್ಮಾನಶೇಷೇಣ ಪಾವನಾನಿ ಚ ಸರ್ವಶಃ |
ಯುಧಿಷ್ಠಿರಃ ಶಾಂತನವಂ ಪುನರೇವಾಭ್ಯಭಾಷತ ||೧||

ಧರ್ಮಪುತ್ರನಾದ ಯುಧಿಷ್ಠಿರನು (ಅಭ್ಯುದಯನಿಃಶ್ರೇಯಸ್ಸುಗಳ ಉತ್ಪತ್ತಿಗೆ ಕಾರಣಗಳಾದ ಮತ್ತು ವಿಧಿರೂಪವಾದುವುಗಳಾದ) ಧರ್ಮಗಳನ್ನು ಸಂಪೂರ್ಣವಾಗಿಯೂ ಮತ್ತು ಪಾವನಗಳಾದ (ಪಾಪಕ್ಷಯವನ್ನುಂಟುಮಾಡುವ) ಧರ್ಮರಹಸ್ಯಗಳನ್ನು ಸರ್ವಪ್ರಕಾರದಿಂದಲೂ ಭೀಷ್ಮನಿಂದ ಕೇಳಿ, (ಅಲ್ಪಪ್ರಯಾಸಕರವೂ, ಸುಲಭವಾಗಿ ಹೊಂದಲ್ಪಡುವಂತಹದೂ, ಅಧಿಕಫಲವುಳ್ಳದ್ದೂ ಆದ ಸಕಲಪುರುಷಾರ್ಥಸಾಧನವು ಭೀಷ್ಮನಿಂದ ಇಷ್ಟರವರೆಗೆ ಹೇಳಲ್ಪಟ್ಟಿಲ್ಲವೆಂದು) ಶಂತನುಸುತನಾದ ಭೀಷ್ಮನನ್ನು ಪುನಃ ಪ್ರಶ್ನೆ ಮಾಡಿದನು.

ಯುಧಿಷ್ಠಿರನು ಹೇಳಿದನು—

ಕಿಮೇಕಂ ದೈವತಂ ಲೋಕೇ ಕಿಂ ವಾಪ್ಯೇಕಂ ಪರಾಯಣಮ್ |
ಸ್ತುವಂತಃ ಕಂ ಕಮರ್ಚಂತಃ ಪ್ರಾಪ್ನುಯುರ್ಮಾನವಾಃ
ಶುಭಮ್ ||೨||

ಲೋಕದಲ್ಲಿ (ಜ್ಞಾನಕ್ಕೆ ಹೇತುಭೂತಗಳಾದ ಸಮಸ್ತವಿದ್ಯೆಗಳಿಂದ ಪ್ರತಿಪಾದಿಸಲ್ಪಡುವ) ಏಕಮಾತ್ರನಾದ ದೇವನು ಯಾರು? ಮತ್ತು ಏಕಮಾತ್ರವೂ ಶ್ರೇಷ್ಠವೂ ಆದ ಆಶ್ರಯಸ್ಥಾನವಾದರೂ[1] ಯಾವುದು? ಯಾರ ಗುಣಸಂಕೀರ್ತನೆಯನ್ನು ಮಾಡಿ ಮತ್ತು ಯಾರ (ಬಾಹ್ಯಾಭ್ಯಂತರ) ಪೂಜೆಯನ್ನು (ಬಹುವಿಧವಾಗಿ) ಮಾಡಿ ಮನುಷ್ಯರು (ಸ್ವರ್ಗಾದಿಫಲರೂಪವಾದ) ಕಲ್ಯಾಣವನ್ನು ಹೊಂದುವರು?

1. ಯಾವುದನ್ನು ಪ್ರವೇಶಿಸಿದರೆ ಮನುಷ್ಯನಿಗೆ ಪುನರ್ಜನ್ಮವು ಇರುವುದಿಲ್ಲವೋ ಯಾವುದರ ಜ್ಞಾನಮಾತ್ರದಿಂದಲೇ ಆನಂದವು ಲಕ್ಷಣವಾಗಿ ಉಳ್ಳ ಮೋಕ್ಷವು ಲಭಿಸುವುದೋ, ಯಾವುದನ್ನು ತಿಳಿದರೆ ಮನುಷ್ಯನು ಯಾವುದಕ್ಕೂ ಹೆದರುವುದಿಲ್ಲವೋ, ಯಾವುದು ಶ್ರೇಷ್ಠವೂ ಹೊಂದಲ್ಪಡತಕ್ಕದ್ದೂ ಆಗಿರುವುದೋ, ಆ ಆಶ್ರಯಸ್ಥಾನವು.

ಕೋ ಧರ್ಮಃ ಸರ್ವಧರ್ಮಾಣಾಂ ಭವತಃ ಪರಮೋ ಮತಃ ।
ಕಿಂ ಜಪನ್ಮುಚ್ಯತೇ ಜಂತುರ್ಜನ್ಮಸಂಸಾರಬಂಧನಾತ್ ॥೩॥

ಸಮಸ್ತಧರ್ಮಗಳಲ್ಲಿ (ಪೂರ್ವೋಕ್ತಲಕ್ಷಣಗಳುಳ್ಳ) ಯಾವ ಧರ್ಮವು ಶ್ರೇಷ್ಠವಾದುದೆಂದು ನಿನ್ನ ಮತವು? (ಜಪಿಸಲ್ಪಡತಕ್ಕದಾದ) ಯಾವುದನ್ನು (ಉಚ್ಚಸ್ವರದಿಂದಾಗಲಿ, ಸಣ್ಣಸ್ವರದಿಂದಾಗಲಿ ಅಥವಾ ಮಾನಸಿಕವಾಗಿಯಾಗಲಿ) ಜಪಿಸುತ್ತ (ಜನನಧರ್ಮವುಳ್ಳ) ಜೀವನು ಜನ್ಮಸಂಸಾರಬಂಧನದಿಂದ ಮುಕ್ತನಾಗುತ್ತಾನೆ?

ಭೀಷ್ಮನು ಉತ್ತರ ಹೇಳಿದನು—

ಜಗತ್ಪ್ರಭುಂ ದೇವದೇವಮನಂತಂ ಪುರುಷೋತ್ತಮಮ್ ।
ಸ್ತುವನ್ನಾಮಸಹಸ್ರೇಣ ಪುರುಷಃ ಸತತೋತ್ಥಿತಃ ॥೪॥

(ಸ್ಥಾವರಜಂಗಮಾತ್ಮಕವಾದ) ಜಗತ್ತಿಗೆ ಪ್ರಭುವೂ, ಬ್ರಹ್ಮಾದಿದೇವತೆಗಳಿಗೆ ದೇವನೂ, ದೇಶತಃ ಕಾಲತಃ ಮತ್ತು ವಸ್ತುತಃ ಅಪರಿಚ್ಛಿನ್ನನೂ, ಕ್ಷರ ಅಕ್ಷರಗಳಿಗಿಂತ ಶ್ರೇಷ್ಠನೂ ಆದ ಪುರುಷೋತ್ತಮನ ಗುಣಸಂಕೀರ್ತನೆಯನ್ನು ಸಹಸ್ರನಾಮಗಳಿಂದ ಮಾಡುವುದರಲ್ಲಿ ನಿರಂತರವಾಗಿ ಉದ್ಯುಕ್ತನಾಗಿರುವ ಮನುಷ್ಯನು (ಸಕಲದುಃಖಗಳನ್ನೂ ದಾಟಿ ಹೋಗುತ್ತಾನೆ).

ತಮೇವ ಚಾರ್ಚಯನ್ನಿತ್ಯಂ ಭಕ್ತ್ಯಾ ಪುರುಷಮವ್ಯಯಮ್ ।
ಧ್ಯಾಯಂಸ್ತುವನ್ನಮಸ್ಯಂಶ್ಚ ಯಜಮಾನಸ್ತಮೇವ ಚ ॥೫॥

(ವಿನಾಶಕ್ರಿಯಾರಹಿತನಾದ) ಅದೇ ಪುರುಷೋತ್ತಮನ (ಬಾಹ್ಯಾಭ್ಯಂತರ) ಅರ್ಚನೆಯನ್ನು ಮತ್ತು ಧ್ಯಾನಸ್ತುತಿನಮಸ್ಕಾರಗಳ ಮೂಲಕ ಮಾನಸಿಕ ವಾಚಿಕ ಕಾಯಿಕ ಪೂಜೆಗಳನ್ನು ನಿತ್ಯವೂ ಭಕ್ತಿಯಿಂದ ಮಾಡುತ್ತ ಮನುಷ್ಯನು (ಸಮಸ್ತದುಃಖಗಳನ್ನು ದಾಟಿಹೋಗುತ್ತಾನೆ).

ಅನಾದಿನಿಧನಂ ವಿಷ್ಣುಂ ಸರ್ವಲೋಕಮಹೇಶ್ವರಮ್ ।
ಲೋಕಾಧ್ಯಕ್ಷಂ ಸ್ತುವನ್ನಿತ್ಯಂ ಸರ್ವದುಃಖಾತಿಗೋ ಭವೇತ್ ॥೬॥

ಷಡ್ಭಾವವಿಕಾರಗಳಿಂದ ವರ್ಜಿತನಾದ, ಸಕಲಲೋಕಗಳ ನಿಯಾಮಕರಾದ ಬ್ರಹ್ಮಾದಿಗಳಿಗೂ ಈಶ್ವರನಾದ, ಲೋಕಗಳನ್ನೆಲ್ಲ ಸ್ವಾಭಾವಿಕಜ್ಞಾನ

ದಿಂದ ಸಾಕ್ಷಾತ್ತಾಗಿ ನೋಡುವ, ಸರ್ವವ್ಯಾಪಿಯಾದ ವಿಷ್ಣುವನ್ನು ನಿತ್ಯವೂ ಸ್ತುತಿಸುತ್ತ ಮನುಷ್ಯನು ಆಧ್ಯಾತ್ಮಿಕವೇ ಮೊದಲಾದ ಸಮಸ್ತದುಃಖ ಗಳನ್ನೂ ದಾಟಿಹೋಗುತ್ತಾನೆ.

ಬ್ರಹ್ಮಣ್ಯಂ ಸರ್ವಧರ್ಮಜ್ಞಂ ಲೋಕಾನಾಂ ಕೀರ್ತಿವರ್ಧನಮ್ ।
ಲೋಕನಾಥಂ ಮಹದ್ಭೂತಂ ಸರ್ವಭೂತಭವೋದ್ಭವಮ್ ॥೭॥

ಜಗತ್ಕರ್ತೃವಾದ ಬ್ರಹ್ಮ, ಬ್ರಾಹ್ಮಣ, ತಪಸ್ಸು ಮತ್ತು ಶ್ರುತಿ ಇವರಿಗೆ ಹಿತವನ್ನುಂಟುಮಾಡುವವನೂ, ಸರ್ವಧರ್ಮಗಳನ್ನು ತಿಳಿದವನೂ, ಪ್ರಾಣಿಗಳ ಯಶಸ್ಸುಗಳನ್ನು ಸ್ವಶಕ್ತಿಪ್ರವೇಶದಿಂದ ವೃದ್ಧಿಗೊಳಿಸುವವನೂ, ಲೋಕನಾಥನೂ (ಎಂದರೆ ಲೋಕಗಳಿಂದ ಯಾಚಿಸಲ್ಪಡುವವನು, ಪೂಜಿಸಲ್ಪಡುವವನು ಅಥವಾ ಲೋಕಗಳನ್ನು ಆಳುವವನು) ಪರಮಾರ್ಥ ಸತ್ಯವಾಗಿರುವವನೂ ಮತ್ತು ತನ್ನ ಸಂನಿಧಿಮಾತ್ರದಿಂದ ಸರ್ವಭೂತಗಳ ಉತ್ಪತ್ತಿಯನ್ನು ಮಾಡುವವನೂ (ಆದ ವಿಷ್ಣುವನ್ನು ಸ್ತುತಿಸುತ್ತ ಮನುಷ್ಯನು ಸರ್ವದುಃಖಗಳನ್ನು ದಾಟಿಹೋಗುತ್ತಾನೆ).

ಏಷ ಮೇ ಸರ್ವಧರ್ಮಾಣಾಂ ಧರ್ಮೋಽಧಿಕತಮೋ ಮತಃ ।
ಯದ್ಭಕ್ತ್ಯಾ ಪುಂಡರೀಕಾಕ್ಷಂ ಸ್ತವೈರರ್ಚೇನ್ನರಃ ಸದಾ ॥೮॥

ಮನುಷ್ಯನು ಭಕ್ತಿಯಿಂದ ಹೃದಯಕಮಲದಲ್ಲಿ ಪ್ರಕಾಶಮಾನನಾದ ವಾಸುದೇವನನ್ನು ಗುಣಸಂಕೀರ್ತನರೂಪವಾದ ಸ್ತುತಿಗಳಿಂದ ಸತ್ಕಾರಪೂರ್ವಕವಾಗಿ ಯಾವಾಗಲೂ ಪೂಜಿಸಬೇಕು. ಇದೇ (ಹೀಗೆ ಪೂಜಿಸುವುದೇ) ವಿಧಿರೂಪವಾದ ಸರ್ವಧರ್ಮಗಳಲ್ಲಿ ಶ್ರೇಷ್ಠವಾದ ಧರ್ಮವೆಂದು ನನ್ನ ಮತವು.

ಪರಮಂ ಯೋ ಮಹತ್ತೇಜಃ ಪರಮಂ ಯೋ ಮಹತ್ತಪಃ ।
ಪರಮಂ ಯೋ ಮಹದ್ಬ್ರಹ್ಮ ಪರಮಂ ಯಃ
ಪರಾಯಣಮ್ ॥೯॥

ಯಾವನು ಪ್ರಕೃಷ್ಟವಾದ, ಬೃಹದಾಕಾರದ (ಚೈತನ್ಯರೂಪವಾದ ಮತ್ತು ಸರ್ವವನ್ನು ಪ್ರಕಾಶಿಸುವ) ತೇಜಸ್ಸಾಗಿರುವನೋ, ಯಾವನು ಅನವಚ್ಛಿನ್ನವಾದ ಐಶ್ವರ್ಯವುಳ್ಳವನೂ ಲೋಕಗಳನ್ನೆಲ್ಲ ಆಳುವವನೂ ಆಗಿರುವನೋ, ಯಾವನು ಸತ್ಯಾದಿಲಕ್ಷಣವುಳ್ಳ ಮಹದ್ಬ್ರಹ್ಮವಾಗಿರುವನೋ

ಮತ್ತು ಯಾವನು ಪ್ರಕೃಷ್ಟವಾದ ಮತ್ತು ಪುನರಾವೃತ್ತಿಯ (ಪುನಃ ಸಂಸಾರವನ್ನು ಹೊಂದುವುದರ) ಭಯವಿಲ್ಲದೆ ಪರವಾಶ್ರಯವಾಗಿರುವನೋ (ಆ ದೇವನು ಸರ್ವಭೂತಗಳಿಗೆ ಪರಮಗತಿಯಾಗಿರುವನು).

ಪವಿತ್ರಾಣಾಂ ಪವಿತ್ರಂ ಯೋ ಮಂಗಲಾನಾಂ ಚ ಮಂಗಲಮ್ ।
ದೈವತಂ ದೇವತಾನಾಂ ಚ ಭೂತಾನಾಂ ಯೋಽವ್ಯಯಃ
ಪಿತಾ ॥೧೦॥

ಯಾವನು ಪವಿತ್ರರಲ್ಲಿ (ಎಂದರೆ ಪವಿತ್ರತೀರ್ಥಾದಿಗಳಲ್ಲಿ) ಪವಿತ್ರನೋ,[1] ಮಂಗಲಗಳಲ್ಲಿ ಮಂಗಲನೋ,[2] ದೇವತೆಗಳಿಗೆ ದೇವನೋ[3] ಮತ್ತು ಯಾವನು ಭೂತಗಳಿಗೆ ವ್ಯಯರಹಿತನಾದ ಜನಕನೋ (ಅವನೇ ಲೋಕದಲ್ಲಿ ಏಕ ಮಾತ್ರನಾದ ದೇವನು).

1. ಪರಮಪುರುಷನಾದ ಭಗವಂತನನ್ನು ಧ್ಯಾನಿಸಿದರೆ, ಸಾಕ್ಷಾತ್ಕರಿಸಿದರೆ, ಸ್ತುತಿಸಿದರೆ, ಪೂಜಿಸಿದರೆ, ಸ್ಮರಿಸಿದರೆ ಮತ್ತು ನಮಸ್ಕರಿಸಿದರೆ, ಅವನು ಪಾಪ ಗಳನ್ನೆಲ್ಲ ನಿರ್ಮೂಲಮಾಡುತ್ತಾನೆ; ಆದುದರಿಂದ ಭಗವಂತನು ಪರಮಪವಿತ್ರನು.

ಅಥವಾ ಭಗವಂತನು ಸ್ವಯಾಥಾತ್ಮ್ಯಜ್ಞಾನದಿಂದ ಸಂಸಾರಬಂಧನಕ್ಕೆ ಕಾರಣ ವಾದ ಪುಣ್ಯಾಪುಣ್ಯರೂಪವಾದ ಕರ್ಮವನ್ನೂ, ತತ್ಕಾರಣವಾದ ಅಜ್ಞಾನವನ್ನೂ ಸಂಪೂರ್ಣವಾಗಿ ನಾಶಮಾಡುತ್ತಾನೆ; ಆದುದರಿಂದ ಅವನು ಪವಿತ್ರರಲ್ಲಿ ಪವಿತ್ರನು.

2. ಸುಖ, ಸುಖದ ಸಾಧನ ಮತ್ತು ಸುಖದ ಜ್ಞಾಪಕ (ಎಂದರೆ ಯಾವುದು ಸುಖದ ಜ್ಞಾನವನ್ನು ಕೊಡುತ್ತದೋ ಅದು)—ಇವುಗಳಿಗೆ ಮಂಗಲ ಎಂದು ಹೇಳುತ್ತಾರೆ. ಭಗವಂತನು ಇವುಗಳಿಗಿಂತಲೂ ಶ್ರೇಷ್ಠವಾದ ಮತ್ತು ಪರಮಾನಂದವು ಲಕ್ಷಣವಾಗಿ ಉಳ್ಳ ಮಂಗಲವಾಗಿರುವನಾದ್ದರಿಂದ ಅವನು ಮಂಗಲಗಳಲ್ಲಿ ಮಂಗಲನು ಎಂದು ಹೇಳಿದೆ.

3. ಭಗವಂತನು ಪ್ರಕಾಶವನ್ನು ಬೀರುವುದೇ ಮೊದಲಾದ ಗುಣಗಳಿಂದ ಅತ್ಯಂತ ಉತ್ಕೃಷ್ಟನಾಗಿರುವುದರಿಂದ ದೇವತೆಗಳಿಗೆ ದೇವರು.

ಯತಃ ಸರ್ವಾಣಿ ಭೂತಾನಿ ಭವಂತ್ಯಾದಿಯುಗಾಗಮೇ ।
ಯಸ್ಮಿಂಶ್ಚ ಪ್ರಲಯಂ ಯಾಂತಿ ಪುನರೇವ ಯುಗಕ್ಷಯೇ ॥೧೧॥

ಪೂರ್ವೋಕ್ತನಾದ ಏಕಮಾತ್ರನಾದ ದೇವನಿಂದ ಕಲ್ಪಾದಿಯಲ್ಲಿ ಸಕಲ ಭೂತಗಳೂ ಹುಟ್ಟುತ್ತವೆ ಮತ್ತು ಅವು ಪುನಃ ಮಹಾಪ್ರಲಯದಲ್ಲಿ ಅವನಲ್ಲಿಯೇ ಲಯವನ್ನು ಹೊಂದುತ್ತವೆ.

ತಸ್ಯ ಲೋಕಪ್ರಧಾನಸ್ಯ ಜಗನ್ನಾಥಸ್ಯ ಭೂಪತೇ ।
ವಿಷ್ಣೋರ್ನಾಮಸಹಸ್ರಂ ಮೇ ಶೃಣು ಪಾಪಭಯಾಪಹಮ್॥೧೨॥

ಎಲೈ ಭೂಪತಿಯೇ, ಪೂರ್ವೋಕ್ತಲಕ್ಷಣಗಳುಳ್ಳ, ಲೋಕಪ್ರಧಾನನಾದ,[1] ಜಗನ್ನಾಥನಾದ[2] ವಿಷ್ಣುವಿನ, ಅಶುಭಕರ್ಮಜನಿತವಾದ ಪಾಪವನ್ನು ಮತ್ತು ಸಂಸಾರರೂಪವಾದ ಭಯವನ್ನು ಹೋಗಲಾಡಿಸುವ, ಸಹಸ್ರನಾಮಗಳನ್ನು ನನ್ನಿಂದ (ಏಕಾಗ್ರಮನಸ್ಸಿನಿಂದ) ಕೇಳು.

1. ಭಗವಂತನು ಜ್ಞಾನಕ್ಕೆ ಹೇತುಭೂತಗಳಾದ ವಿದ್ಯೆಗಳಿಂದ ಪ್ರತಿಪಾದಿಸಲ್ಪಡುತ್ತಾನೆ. ಆದುದರಿಂದ ಅವನು ಲೋಕಪ್ರಧಾನನೆಂದು ಹೇಳಿದೆ.

2. ಜಗತ್ತಿಗೆ ಸ್ವಾಮಿಯಾಗಿರುವ, ಮಾಯೆಯಿಂದ ವಿವಿಧನಾಗಿ ತೋರುವ ನಿರ್ಲೇಪನಾದ ಪರಮಾತ್ಮನು.

ಯಾನಿ ನಾಮಾನಿ ಗೌಣಾನಿ ವಿಖ್ಯಾತಾನಿ ಮಹಾತ್ಮನಃ ।
ಋಷಿಭಿಃ ಪರಿಗೀತಾನಿ ತಾನಿ ವಕ್ಷ್ಯಾಮಿ ಭೂತಯೇ ॥೧೩॥

ಮಹಾತ್ಮನಾದ ಭಗವಂತನ ಯಾವ ನಾಮಗಳು ಗುಣಸಂಬಂಧದಿಂದ ಪ್ರವೃತ್ತವಾದುವುಗಳೋ ಮತ್ತು ಅವುಗಳಲ್ಲಿ ಯಾವುವು ಪ್ರಸಿದ್ಧವಾದುವುಗಳೋ, ಮಂತ್ರಗಳಿಂದಲೂ ಮಂತ್ರದ್ರಷ್ಟೃರಿಂದಲೂ ಯಾವುವು ಭಗವತ್ಕಥನಗಳಲ್ಲಿ ಅಲ್ಲಲ್ಲಿ ಹಾಡಲ್ಪಡುತ್ತವೋ, ಅವುಗಳನ್ನು ಪುರುಷಾರ್ಥಚತುಷ್ಟಯವನ್ನು ಇಚ್ಛಿಸುವವರ ಪುರುಷಾರ್ಥಚತುಷ್ಟಯಸಿದ್ಧಿಗೋಸ್ಕರ ಹೇಳುವೆನು.

ಶ್ರೀವಿಷ್ಣುಸಹಸ್ರನಾಮ

॥ ನ್ಯಾಸಃ ॥

ಅಸ್ಯ ಶ್ರೀವಿಷ್ಣೋರ್ದಿವ್ಯಸಹಸ್ರನಾಮಸ್ತೋತ್ರಮಂತ್ರಸ್ಯ ಭಗವಾನ್ ವೇದವ್ಯಾಸ ಋಷಿಃ । ಅನುಷ್ಟುಪ್ ಛಂದಃ । ಶ್ರೀ ವಿಷ್ಣುಃ ಪರಮಾತ್ಮಾ ದೇವತಾ । ಅಮೃತಾಂಶೂದ್ಭವೋ ಭಾನು ರಿತಿ ಬೀಜಮ್ । ದೇವಕೀನಂದನಃ ಸ್ರಷ್ಟೇತಿ ಶಕ್ತಿಃ । ತ್ರಿಸಾಮಾ ಸಾಮಗಃ ಸಾಮೇತಿ ಹೃದಯಮ್ । ಶಂಖಭೃನ್ನಂದಕೀ ಚಕ್ರೀತಿ ಕೀಲಕಮ್ । ಶಾಂರ್ಗಧನ್ವಾ ಗದಾಧರ ಇತ್ಯಸ್ತ್ರಮ್ । ರಥಾಂಗ-ಪಾಣಿರಕ್ಷೋಭ್ಯ ಇತಿ ಕವಚಮ್ । ಉದ್ಭವಃ ಕ್ಷೋಭಣೋ ದೇವ ಇತಿ ಪರಮೋ ಮಂತ್ರಃ । ಶ್ರೀಮಹಾವಿಷ್ಣುಪ್ರೀತ್ಯರ್ಥೇ ಜಪೇ ವಿನಿಯೋಗಃ ।

ಧ್ಯಾನಮ್

ಶಾಂತಾಕಾರಂ ಭುಜಗಶಯನಂ ಪದ್ಮನಾಭಂ ಸುರೇಶಂ
ವಿಶ್ವಾಧಾರಂ ಗಗನಸದೃಶಂ ಮೇಘವರ್ಣಂ ಶುಭಾಂಗಮ್ ।
ಲಕ್ಷ್ಮೀಕಾಂತಂ ಕಮಲನಯನಂ ಯೋಗಿಭಿರ್ಧ್ಯಾನಗಮ್ಯಂ
ವಂದೇ ವಿಷ್ಣುಂ ಭವಭಯಹರಂ ಸರ್ವಲೋಕೈಕನಾಥಮ್ ॥

ಶಾಂತಾಕಾರನೂ, ಶೇಷಶಾಯಿಯೂ, ಪದ್ಮನಾಭನೂ, ಸುರರಿಗೆಲ್ಲ ಈಶ್ವರನೂ, ವಿಶ್ವಕ್ಕೆ ಆಧಾರನೂ, ಆಕಾಶಸದೃಶನೂ, ಮೇಘವರ್ಣವುಳ್ಳವನೂ, ಶುಭವಾದ ಅಂಗಗಳುಳ್ಳವನೂ, ಲಕ್ಷ್ಮೀಪತಿಯೂ, ತಾವರೆಯಂತೆ ಕಣ್ಣುಗಳುಳ್ಳವನೂ, ಯೋಗಿಗಳಿಂದ ಧ್ಯಾನದ ದ್ವಾರಾ ಹೊಂದಲ್ಪಡುವವನೂ ಸಂಸಾರಭಯವನ್ನು ನಾಶಮಾಡುವವನೂ, ಸಮಸ್ತ ಲೋಕಗಳಿಗೆ ಏಕ ನಾಥನೂ ಆಗಿರುವ ಶ್ರೀವಿಷ್ಣುವನ್ನು ನಮಸ್ಕರಿಸುತ್ತೇನೆ.

ಶ್ರೀವಿಷ್ಣುಸಹಸ್ರನಾಮಸ್ತೋತ್ರಮ್

ಓಂ ವಿಶ್ವಂ ವಿಷ್ಣುರ್ವಷಟ್ಕಾರೋ ಭೂತಭವ್ಯಭವತ್ಪ್ರಭುಃ ।
ಭೂತಕೃದ್ಭೂತಭೃದ್ಭಾವೋ ಭೂತಾತ್ಮಾ ಭೂತಭಾವನಃ ॥೧॥(೯)

ಪೂತಾತ್ಮಾ ಪರಮಾತ್ಮಾ ಚ ಮುಕ್ತಾನಾಂ ಪರಮಾ ಗತಿಃ ।
ಅವ್ಯಯಃ ಪುರುಷಃ ಸಾಕ್ಷೀ ಕ್ಷೇತ್ರಜ್ಞೋಽಕ್ಷರ ಏವ ಚ ॥೨॥(೧೭)

ಯೋಗೋ ಯೋಗವಿದಾಂ ನೇತಾ ಪ್ರಧಾನಪುರುಷೇಶ್ವರಃ ।
ನಾರಸಿಂಹವಪುಃ ಶ್ರೀಮಾನ್ ಕೇಶವಃ ಪುರುಷೋತ್ತಮಃ॥೩॥(೨೪)

ಸರ್ವಃ ಶರ್ವಃ ಶಿವಃ ಸ್ಥಾಣುರ್ಭೂತಾದಿರ್ನಿಧಿರವ್ಯಯಃ ।
ಸಂಭವೋ ಭಾವನೋ ಭರ್ತಾ ಪ್ರಭವಃ ಪ್ರಭುರೀಶ್ವರಃ॥೪॥ (೩೬)

ಸ್ವಯಂಭೂಃ ಶಂಭುರಾದಿತ್ಯಃ ಪುಷ್ಕರಾಕ್ಷೋ ಮಹಾಸ್ವನಃ ।
ಅನಾದಿನಿಧನೋ ಧಾತಾ ವಿಧಾತಾ ಧಾತುರುತ್ತಮಃ ॥೫॥ (೪೫)

ಅಪ್ರಮೇಯೋ ಹೃಷೀಕೇಶಃ ಪದ್ಮನಾಭೋಽಮರಪ್ರಭುಃ ।
ವಿಶ್ವಕರ್ಮಾ ಮನುಸ್ತ್ವಷ್ಟಾ ಸ್ಥವಿಷ್ಠಃ ಸ್ಥವಿರೋ ಧ್ರುವಃ ॥೬॥ (೫೪)

ಅಗ್ರಾಹ್ಯಃ ಶಾಶ್ವತಃ ಕೃಷ್ಣೋ ಲೋಹಿತಾಕ್ಷಃ ಪ್ರತರ್ದನಃ
ಪ್ರಭೂತಸ್ತ್ರಿಕಕುಬ್ಧಾಮ ಪವಿತ್ರಂ ಮಂಗಲಂ ಪರಮ್ ॥೭॥ (೬೩)

ಈಶಾನಃ ಪ್ರಾಣದಃ ಪ್ರಾಣೋ ಜ್ಯೇಷ್ಠಃ ಶ್ರೇಷ್ಠಃ ಪ್ರಜಾಪತಿಃ ।
ಹಿರಣ್ಯಗರ್ಭೋ ಭೂಗರ್ಭೋ ಮಾಧವೋ ಮಧುಸೂದನಃ ॥೮॥ (೭೩)

ಈಶ್ವರೋ ವಿಕ್ರಮೀ ಧನ್ವೀ ಮೇಧಾವೀ ವಿಕ್ರಮಃ ಕ್ರಮಃ ।
ಅನುತ್ತಮೋ ದುರಾಧರ್ಷಃ ಕೃತಜ್ಞಃ ಕೃತಿರಾತ್ಮವಾನ್ ॥೯॥(೮೪)

ಸುರೇಶಃ ಶರಣಂ ಶರ್ಮ ವಿಶ್ವರೇತಾಃ ಪ್ರಜಾಭವಃ ।
ಅಹಃ ಸಂವತ್ಸರೋ ವ್ಯಾಲಃ ಪ್ರತ್ಯಯಃ ಸರ್ವದರ್ಶನಃ॥೧೦॥(೯೪)

ಅಜಃ ಸರ್ವೇಶ್ವರಃ ಸಿದ್ಧಃ ಸಿದ್ಧಿಃ ಸರ್ವಾದಿರಚ್ಯುತಃ ।
ವೃಷಾಕಪಿರಮೇಯಾತ್ಮಾ ಸರ್ವಯೋಗವಿನಿಃಸೃತಃ ॥೧೧॥(೧೦೩)

ವಸುರ್ವಸುಮನಾಃ ಸತ್ಯಃ ಸಮಾತ್ಮಾ ಸಮ್ಮಿತಃ ಸಮಃ ।
ಅಮೋಘಃ ಪುಂಡರೀಕಾಕ್ಷೋ ವೃಷಕರ್ಮಾ ವೃಷಾಕೃತಿಃ
॥೧೨॥ (೧೧೩)

ರುದ್ರೋ ಬಹುಶಿರಾ ಬಭ್ರುಃ ವಿಶ್ವಯೋನಿಃ ಶುಚಿಶ್ರವಾಃ ।
ಅಮೃತಃ ಶಾಶ್ವತಸ್ಥಾಣುಃ ವರಾರೋಹೋ ಮಹಾತಪಾಃ
॥೧೩॥ (೧೨೨)

ಸರ್ವಗಃ ಸರ್ವವಿದ್ಭಾನುರ್ವಿಷ್ವಕ್ಸೇನೋ ಜನಾರ್ದನಃ ।
ವೇದೋ ವೇದವಿದವ್ಯಂಗೋ ವೇದಾಂಗೋ ವೇದವಿತ್ ಕವಿಃ
॥೧೪॥ (೧೩೩)

ಲೋಕೋಧ್ಯಕ್ಷಃ ಸುರಾಧ್ಯಕ್ಷೋ ಧರ್ಮಾಧ್ಯಕ್ಷಃ ಕೃತಾಕೃತಃ ।
ಚತುರಾತ್ಮಾ ಚತುರ್ವ್ಯೂಹಶ್ಚತುರ್ದಂಷ್ಟ್ರಶ್ಚತುರ್ಭುಜಃ
॥೧೫॥ (೧೪೦)

ಭ್ರಾಜಿಷ್ಣುರ್ಭೋಜನಂ ಭೋಕ್ತಾ ಸಹಿಷ್ಣುರ್ಜಗದಾದಿಜಃ ।
ಅನಘೋ ವಿಜಯೋ ಜೇತಾ ವಿಶ್ವಯೋನಿಃ ಪುನರ್ವಸುಃ
॥೧೬॥ (೧೫೦)

ಉಪೇಂದ್ರೋ ವಾಮನಃ ಪ್ರಾಂಶುರಮೋಘಃ ಶುಚಿರೂರ್ಜಿತಃ ।
ಅತೀಂದ್ರಃ ಸಂಗ್ರಹಃ ಸರ್ಗೋ ಧೃತಾತ್ಮಾ ನಿಯಮೋ ಯಮಃ
॥೧೭॥ (೧೬೨)

ವೇದ್ಯೋ ವೈದ್ಯಃ ಸದಾಯೋಗೀ ವೀರಹಾ ಮಾಧವೋ ಮಧುಃ ।
ಅತೀಂದ್ರಿಯೋ ಮಹಾಮಾಯೋ ಮಹೋತ್ಸಾಹೋ
ಮಹಾಬಲಃ ॥೧೮॥ (೧೭೨)

ಮಹಾಬುದ್ಧಿರ್ಮಹಾವೀರ್ಯೋ ಮಹಾಶಕ್ತಿರ್ಮಹಾದ್ಯುತಿಃ ।
ಅನಿರ್ದೇಶ್ಯವಪುಃ ಶ್ರೀಮಾನಮೇಯಾತ್ಮಾ ಮಹಾದ್ರಿಧೃಕ್
॥೧೯॥ (೧೮೦)

ಮಹೇಷ್ವಾಸೋ ಮಹೀಭರ್ತಾ ಶ್ರೀನಿವಾಸಃ ಸತಾಂ ಗತಿಃ ।
ಅನಿರುದ್ಧಃ ಸುರಾನಂದೋ ಗೋವಿಂದೋ ಗೋವಿಂದಾಂ ಪತಿಃ
॥೨೦॥ (೧೮೮)

ಮರೀಚಿರ್ದಮನೋ ಹಂಸಃ ಸುಪರ್ಣೋ ಭುಜಗೋತ್ತಮಃ ।
ಹಿರಣ್ಯನಾಭಃ ಸುತಪಾಃ ಪದ್ಮನಾಭಃ ಪ್ರಜಾಪತಿಃ ॥೨೧॥ (೧೯೭)

ಅಮೃತ್ಯುಃ ಸರ್ವದೃಕ್ ಸಿಂಹಃ ಸಂಧಾತಾ ಸಂಧಿಮಾನ್ ಸ್ಥಿರಃ ।
ಅಜೋ ದುರ್ಮರ್ಷಣಃ ಶಾಸ್ತಾ ವಿಶ್ರುತಾತ್ಮಾ ಸುರಾರಿಹಾ
॥೨೨॥ (೨೦೮)

ಗುರುರ್ಗುರುತಮೋ ಧಾಮ ಸತ್ಯಃ ಸತ್ಯಪರಾಕ್ರಮಃ ।
ನಿಮಿಷೋಽನಿಮಿಷಃ ಸ್ರಗ್ವೀ ವಾಚಸ್ಪತಿರುದಾರಧೀಃ ॥೨೩॥ (೨೧೭)

ಅಗ್ರಣೀರ್ಗ್ರಾಮಣೀಃ ಶ್ರೀಮಾನ್ ನ್ಯಾಯೋ ನೇತಾ ಸಮೀರಣಃ ।
ಸಹಸ್ರಮೂರ್ಧಾ ವಿಶ್ವಾತ್ಮಾ ಸಹಸ್ರಾಕ್ಷಃ ಸಹಸ್ರಪಾತ್
॥೨೪॥ (೨೨೭)

ಆವರ್ತನೋ ನಿವೃತ್ತಾತ್ಮಾ ಸಂವೃತಃ ಸಂಪ್ರಮರ್ದನಃ ।
ಅಹಸ್ಸಂವರ್ತಕೋ ವಹ್ನಿರನಿಲೋ ಧರಣೀಧರಃ ॥೨೫॥ (೨೩೫)

ಸುಪ್ರಸಾದಃ ಪ್ರಸನ್ನಾತ್ಮಾ ವಿಶ್ವಧೃಗ್ ವಿಶ್ವಭುಗ್ ವಿಭುಃ ।
ಸತ್ಕರ್ತಾ ಸತ್ಕೃತಃ ಸಾಧುರ್ಜಹ್ನುರ್ನಾರಾಯಣೋ ನರಃ
॥೨೬॥ (೨೪೬)

ಅಸಂಖ್ಯೇಯೋಽಪ್ರಮೇಯಾತ್ಮಾ ವಿಶಿಷ್ಟಃ ಶಿಷ್ಟಕೃಚ್ಛುಚಿಃ ।
ಸಿದ್ಧಾರ್ಥಃ ಸಿದ್ಧಸಂಕಲ್ಪಃ ಸಿದ್ಧಿದಃ ಸಿದ್ಧಿಸಾಧನಃ ॥೨೭॥ (೨೫೫)

ವೃಷಾಹೀ ವೃಷಭೋ ವಿಷ್ಣುರ್ವೃಷಪರ್ವಾ ವೃಷೋದರಃ ।
ವರ್ಧನೋ ವರ್ಧಮಾನಶ್ಚ ವಿವಿಕ್ತಃ ಶ್ರುತಿಸಾಗರಃ ॥೨೮॥ (೨೬೪)

ಸುಭುಜೋ ದುರ್ಧರೋ ವಾಗ್ಮೀ ಮಹೇಂದ್ರೋ ವಸುದೋ
ವಸುಃ ।
ನೈಕರೂಪೋ ಬೃಹದ್ರೂಪಃ ಶಿಪಿವಿಷ್ಟಃ ಪ್ರಕಾಶನಃ ॥೨೯॥ (೨೭೪)

ಓಜಸ್ತೇಜೋದ್ಯುತಿಧರಃ ಪ್ರಕಾಶಾತ್ಮಾ ಪ್ರತಾಪನಃ ।
ಋದ್ಧಃ ಸ್ಪಷ್ಟಾಕ್ಷರೋ ಮಂತ್ರಶ್ಚಂದ್ರಾಂಶುರ್ಭಾಸ್ಕರದ್ಯುತಿಃ
॥೩೦॥ (೨೮೨)

ಅಮೃತಾಂಶೂದ್ಭವೋ ಭಾನುಃ ಶಶಿಬಿಂದುಃ ಸುರೇಶ್ವರಃ ।
ಔಷಧಂ ಜಗತಃ ಸೇತುಃ ಸತ್ಯಧರ್ಮಪರಾಕ್ರಮಃ ॥೩೧॥ (೨೮೯)

ಭೂತಭವ್ಯಭವನ್ನಾಥಃ ಪವನಃ ಪಾವನೋಽನಲಃ ।
ಕಾಮಹಾ ಕಾಮಕೃತ್ ಕಾಂತಃ ಕಾಮಃ ಕಾಮಪ್ರದಃ ಪ್ರಭುಃ
॥೩೨॥ (೨೯೯)
ಯುಗಾದಿಕೃದ್ ಯುಗಾವರ್ತೋ ನೈಕಮಾಯೋ ಮಹಾಶನಃ ।
ಅದೃಶ್ಯೋ ವ್ಯಕ್ತರೂಪಶ್ಚ ಸಹಸ್ರಜಿದನಂತಜಿತ್ ॥೩೩॥ (೩೦೭)
ಇಷ್ಟೋಽವಿಶಿಷ್ಟಃ ಶಿಷ್ಟೇಷ್ಟಃ ಶಿಖಂಡೀ ನಹುಷೋ ವೃಷಃ ।
ಕ್ರೋಧಹಾ ಕ್ರೋಧಕೃತ್ಕರ್ತಾ ವಿಶ್ವಬಾಹುರ್ಮಹೀಧರಃ
॥೩೪॥ (೩೧೭)
ಅಚ್ಯುತಃ ಪ್ರಥಿತಃ ಪ್ರಾಣಃ ಪ್ರಾಣದೋ ವಾಸವಾನುಜಃ ।
ಅಪಾಂ ನಿಧಿರಧಿಷ್ಠಾನಮಪ್ರಮತ್ತಃ ಪ್ರತಿಷ್ಠಿತಃ ॥೩೫॥ (೩೨೬)
ಸ್ಕಂದಃ ಸ್ಕಂದಧರೋ ಧುರ್ಯೋ ವರದೋ ವಾಯುವಾಹನಃ ।
ವಾಸುದೇವೋ ಬೃಹದ್ಭಾನುರಾದಿದೇವಃ ಪುರಂದರಃ ॥೩೬॥(೩೩೫)
ಅಶೋಕಸ್ತಾರಣಸ್ತಾರಃ ಶೂರಃ ಶೌರಿರ್ಜನೇಶ್ವರಃ ।
ಅನುಕೂಲಃ ಶತಾವರ್ತಃ ಪದ್ಮೀ ಪದ್ಮನಿಭೇಕ್ಷಣಃ ॥೩೭॥ (೩೪೫)
ಪದ್ಮನಾಭೋಽರವಿಂದಾಕ್ಷಃ ಪದ್ಮಗರ್ಭಃ ಶರೀರಭೃತ್ ।
ಮಹರ್ದ್ಧಿರ್ಋದ್ಧೋ ವೃದ್ಧಾತ್ಮಾ ಮಹಾಕ್ಷೋ ಗರುಡಧ್ವಜಃ
॥೩೮॥ (೩೫೪)
ಅತುಲಃ ಶರಭೋ ಭೀಮಃ ಸಮಯಜ್ಞೋ ಹವಿರ್ಹರಿಃ
ಸರ್ವಲಕ್ಷಣಲಕ್ಷಣ್ಯೋ ಲಕ್ಷ್ಮೀವಾನ್ ಸಮಿತಿಂಜಯಃ
॥೩೯॥ (೩೬೨)
ವಿಕ್ಷರೋ ರೋಹಿತೋ ಮಾರ್ಗೋ ಹೇತುರ್ದಾಮೋದರಃ ಸಹಃ।
ಮಹೀಧರೋ ಮಹಾಭಾಗೋ ವೇಗವಾನಮಿತಾಶನಃ
॥೪೦॥ (೩೭೨)
ಉದ್ಭವಃ ಕ್ಷೋಭಣೋ ದೇವಃ ಶ್ರೀಗರ್ಭಃ ಪರಮೇಶ್ವರಃ ।
ಕರಣಂ ಕಾರಣಂ ಕರ್ತಾ ವಿಕರ್ತಾ ಗಹನೋ ಗುಹಃ॥೪೧॥ (೩೮೩)
ವ್ಯವಸಾಯೋ ವ್ಯವಸ್ಥಾನಃ ಸಂಸ್ಥಾನಃ ಸ್ಥಾನದೋ ಧ್ರುವಃ ।
ಪರರ್ದ್ಧಿಃ ಪರಮಸ್ಪಷ್ಟಸ್ತುಷ್ಟಃ ಪುಷ್ಟಃ ಶುಭೇಕ್ಷಣಃ ॥೪೨॥ (೩೯೩)

ರಾಮೋ ವಿರಾಮೋ ವಿರತೋ ಮಾರ್ಗೋ ನೇಯೋ
ನಯೋಽನಯಃ ।
ವೀರಃ ಶಕ್ತಿಮತಾಂ ಶ್ರೇಷ್ಠೋ ಧರ್ಮೋ ಧರ್ಮವಿದುತ್ತಮಃ
॥೪೩॥ (೪೦೪)
ವೈಕುಂಠಃ ಪುರುಷಃ ಪ್ರಾಣಃ ಪ್ರಾಣದಃ ಪ್ರಣವಃ ಪೃಥುಃ ।
ಹಿರಣ್ಯಗರ್ಭಃ ಶತ್ರುಘ್ನೋ ವ್ಯಾಪ್ತೋ ವಾಯುರಧೋಕ್ಷಜಃ
॥೪೪॥ (೪೧೫)
ಋತುಃ ಸುದರ್ಶನಃ ಕಾಲಃ ಪರಮೇಷ್ಠೀ ಪರಿಗ್ರಹಃ ।
ಉಗ್ರಃ ಸಂವತ್ಸರೋ ದಕ್ಷೋ ವಿಶ್ರಾಮೋ ವಿಶ್ವದಕ್ಷಿಣಃ
॥೪೫॥ (೪೨೫)
ವಿಸ್ತಾರಃ ಸ್ಥಾವರಸ್ಥಾಣುಃ ಪ್ರಮಾಣಂ ಬೀಜಮವ್ಯಯಮ್ ।
ಅರ್ಥೋಽನರ್ಥೋ ಮಹಾಕೋಶೋ ಮಹಾಭೋಗೋ
ಮಹಾಧನಃ ॥೪೬॥ (೪೩೪)
ಅನಿರ್ವಿಣ್ಣಃ ಸ್ಥವಿಷ್ಠೋಽಭೂರ್ಧರ್ಮಯೂಪೋ ಮಹಾಮಖಃ।
ನಕ್ಷತ್ರನೇಮಿರ್ನಕ್ಷತ್ರೀ ಕ್ಷಮಃ ಕ್ಷಾಮಃ ಸಮೀಹನಃ ॥೪೭॥(೪೪೪)
ಯಜ್ಞ ಇಜ್ಯೋ ಮಹೇಜ್ಯಶ್ಚ ಕ್ರತುಃ ಸತ್ರಂ ಸತಾಂ ಗತಿಃ ।
ಸರ್ವದರ್ಶೀ ವಿಮುಕ್ತಾತ್ಮಾ ಸರ್ವಜ್ಞೋ ಜ್ಞಾನಮುತ್ತಮಮ್
॥೪೮॥ (೪೫೪)
ಸುವ್ರತಃ ಸುಮುಖಃ ಸೂಕ್ಷ್ಮಃ ಸುಘೋಷಃ ಸುಖದಃ ಸುಹೃತ್ ।
ಮನೋಹರೋ ಜಿತಕ್ರೋಧೋ ವೀರಬಾಹುರ್ವಿದಾರಣಃ
॥೪೯॥ (೪೬೪)
ಸ್ವಾಪನಃ ಸ್ವವಶೋ ವ್ಯಾಪೀ ನೈಕಾತ್ಮಾ ನೈಕಕರ್ಮಕೃತ್ ।
ವತ್ಸರೋ ವತ್ಸಲೋ ವತ್ಸೀ ರತ್ನಗರ್ಭೋ ಧನೇಶ್ವರಃ॥೫೦॥(೪೭೪)
ಧರ್ಮಗುಬ್ಧರ್ಮ ಕೃದ್ಧರ್ಮೀ ಸದಸತ್ ಕ್ಷರಮಕ್ಷರಮ್ ।
ಅವಿಜ್ಞಾತಾ ಸಹಸ್ರಾಂಶುರ್ವಿಧಾತಾ ಕೃತಲಕ್ಷಣಃ ॥೫೧॥ (೪೮೫)
ಗಭಸ್ತಿನೇಮಿಃ ಸತ್ತ್ವಸ್ಥಃ ಸಿಂಹೋ ಭೂತ ಮಹೇಶ್ವರಃ ।
ಆದಿದೇವೋ ಮಹಾದೇವೋ ದೇವೇಶೋ ದೇವಭೃದ್ ಗುರುಃ
॥೫೨॥ (೪೯೩)

ಉತ್ತರೋ ಗೋಪತಿರ್ಗೋಪ್ತಾ ಜ್ಞಾನಗಮ್ಯಃ ಪುರಾತನಃ ।
ಶರೀರಭೂತಭೃದ್ಭೋಕ್ತಾ ಕಪೀಂದ್ರೋ ಭೂರಿದಕ್ಷಿಣಃ
॥೫೩॥ (೫೦೨)
ಸೋಮಪೋಽಮೃತಪಃ ಸೋಮಃ ಪುರುಜಿತ್ ಪುರುಸತ್ತಮಃ ।
ವಿನಯೋ ಜಯಃ ಸತ್ಯಸಂಧೋ ದಾಶಾರ್ಹಃ ಸಾತ್ವತಾಂ ಪತಿಃ
॥೫೪॥ (೫೧೨)
ಜೀವೋ ವಿನಯಿತಾಸಾಕ್ಷೀ ಮುಕುಂದೋಽಮಿತವಿಕ್ರಮಃ ।
ಅಂಭೋನಿಧಿರನಂತಾತ್ಮಾ ಮಹೋದಧಿಶಯೋಽಂತಕಃ
॥೫೫॥ (೫೨೦)
ಅಜೋ ಮಹಾರ್ಹಃ ಸ್ವಾಭಾವ್ಯೋ ಜಿತಾಮಿತ್ರಃ ಪ್ರಮೋದನಃ ।
ಆನಂದೋ ನಂದನೋ ನಂದಃ ಸತ್ಯಧರ್ಮಾ ತ್ರಿವಿಕ್ರಮಃ
॥೫೬॥ (೫೩೦)
ಮಹರ್ಷಿಃ ಕಪಿಲಾಚಾರ್ಯಃ ಕೃತಜ್ಞೋ ಮೇದಿನೀಪತಿಃ ।
ತ್ರಿಪದಸ್ತ್ರಿದಶಾಧ್ಯಕ್ಷೋ ಮಹಾಶೃಂಗಃ ಕೃತಾಂತಕೃತ್
॥೫೭॥ (೫೩೭)
ಮಹಾವರಾಹೋ ಗೋವಿಂದಃ ಸುಷೇಣಃ ಕನಕಾಂಗದೀ ।
ಗುಹ್ಯೋ ಗಭೀರೋ ಗಹನೋ ಗುಪ್ತಶ್ಚಕ್ರಗದಾಧರಃ
॥೫೮॥ (೫೪೬)
ವೇಧಾಃ ಸ್ವಾಂಗೋಽಜಿತಃ ಕೃಷ್ಣೋ ದೃಢಃ
ಸಂಕರ್ಷಣೋಽಚ್ಯುತಃ ।
ವರುಣೋ ವಾರುಣೋ ವೃಕ್ಷಃ ಪುಷ್ಕರಾಕ್ಷೋ ಮಹಾಮನಾಃ
॥೫೯॥ (೫೫೭)
ಭಗವಾನ್ ಭಗಹಾನಂದೀ ವನಮಾಲೀ ಹಲಾಯುಧಃ ।
ಆದಿತ್ಯೋ ಜ್ಯೋತಿರಾದಿತ್ಯಃ ಸಹಿಷ್ಣುರ್ಗತಿಸತ್ತಮಃ ।೬೦॥ (೫೬೬)
ಸುಧನ್ವಾ ಖಂಡಪರಶುರ್ದಾರುಣೋ ದ್ರವಿಣಪ್ರದಃ ।
ದಿವಃಸ್ಪೃಕ್ ಸರ್ವದೃಗ್ವ್ಯಾಸೋ ವಾಚಸ್ಪತಿರಯೋನಿಜಃ
॥೬೧॥ (೫೭೩)
ತ್ರಿಸಾಮಾ ಸಾಮಗಃ ಸಾಮ ನಿರ್ವಾಣಂ ಭೇಷಜಂ ಭಿಷಕ್ ।
ಸಂನ್ಯಾಸಕೃಚ್ಛಮಃ ಶಾಂತೋ ನಿಷ್ಠಾ ಶಾಂತಿಃ ಪರಾಯಣಮ್
॥೬೨॥ (೫೮೫)

ಶುಭಾಂಗಃ ಶಾಂತಿದಃ ಸ್ರಷ್ಟಾ ಕುಮುದಃ ಕುವಲೇಶಯಃ ।
ಗೋಹಿತೋ ಗೋಪತಿರ್ಗೋಪ್ತಾ ವೃಷಭಾಕ್ಷೋ ವೃಷಪ್ರಿಯಃ
॥೬೩॥ (೫೯೫)

ಅನಿವರ್ತೀ ನಿವೃತ್ತಾತ್ಮಾ ಸಂಕ್ಷೇಪ್ತಾ ಕ್ಷೇಮಕೃಚ್ಛಿವಃ ।
ಶ್ರೀವತ್ಸವಕ್ಷಾಃ ಶ್ರೀವಾಸಃ ಶ್ರೀಪತಿಃ ಶ್ರೀಮತಾಂ ವರಃ
॥೬೪॥ (೬೦೪)

ಶ್ರೀದಃ ಶ್ರೀಶಃ ಶ್ರೀನಿವಾಸಃ ಶ್ರೀನಿಧಿಃ ಶ್ರೀವಿಭಾವನಃ ।
ಶ್ರೀಧರಃ ಶ್ರೀಕರಃ ಶ್ರೇಯಃ ಶ್ರೀಮಾನ್ ಲೋಕತ್ರಯಾಶ್ರಯಃ
॥೬೫॥ (೬೧೪)

ಸ್ವಕ್ಷಃ ಸ್ವಂಗಃ ಶತಾನಂದೋ ನಂದಿರ್ಜ್ಯೋತಿರ್ಗಣೇಶ್ವರಃ ।
ವಿಜಿತಾತ್ಮಾ ವಿಧೇಯಾತ್ಮಾ ಸತ್ಕೀರ್ತಿಶ್ಛಿನ್ನಸಂಶಯಃ॥೬೬॥(೬೨೩)

ಉದೀರ್ಣಃ ಸರ್ವತಶ್ಚಕ್ಷುರನೀಶಃ ಶಾಶ್ವತಸ್ಥಿರಃ ।
ಭೂಶಯೋ ಭೂಷಣೋ ಭೂತಿರ್ವಿಶೋಕಃ ಶೋಕನಾಶನಃ
॥೬೭॥ (೬೩೨)

ಅರ್ಚಿಷ್ಮಾನರ್ಚಿತಃ ಕುಂಭೋ ವಿಶುದ್ಧಾತ್ಮಾ ವಿಶೋಧನಃ ।
ಅನಿರುದ್ಧೋಽಪ್ರತಿರಥಃ ಪ್ರದ್ಯುಮ್ನೋಽಮಿತ ವಿಕ್ರಮಃ
॥೬೮॥ (೬೪೧)

ಕಾಲನೇಮಿನಿಹಾ ವೀರಃ ಶೌರಿಃ ಶೂರಜನೇಶ್ವರಃ ।
ತ್ರಿಲೋಕಾತ್ಮಾ ತ್ರಿಲೋಕೇಶಃ ಕೇಶವಃ ಕೇಶಿಹಾ ಹರಿಃ
॥೬೯॥ (೬೫೦)

ಕಾಮದೇವಃ ಕಾಮಪಾಲಃ ಕಾಮೀ ಕಾಂತಃ ಕೃತಾಗಮಃ ।
ಅನಿರ್ದೇಶ್ಯವಪುರ್ವಿಷ್ಣುರ್ವೀರೋಽನಂತೋ ಧನಂಜಯಃ
॥೭೦॥ (೬೬೦)

ಬ್ರಹ್ಮಣ್ಯೋ ಬ್ರಹ್ಮಕೃದ್ ಬ್ರಹ್ಮಾ ಬ್ರಹ್ಮ ಬ್ರಹ್ಮವಿವರ್ಧನಃ ।
ಬ್ರಹ್ಮವಿದ್ ಬ್ರಾಹ್ಮಣೋ ಬ್ರಹ್ಮೀ ಬ್ರಹ್ಮಜ್ಞೋ ಬ್ರಾಹ್ಮಣ
ಪ್ರಿಯಃ ॥೭೧॥ (೬೭೦)

ಮಹಾಕ್ರಮೋ ಮಹಾಕರ್ಮಾ ಮಹಾತೇಜಾ ಮಹೋರಗಃ ।
ಮಹಾಕ್ರತುರ್ಮಹಾಯಜ್ವಾ ಮಹಾಯಜ್ಞೋಮಹಾಹವಿಃ
॥೭೨॥ (೬೭೯)

ಸ್ತವ್ಯಃ ಸ್ತವಪ್ರಿಯಃ ಸ್ತೋತ್ರಂ ಸ್ತುತಿಃ ಸ್ತೋತಾರಣಪ್ರಿಯಃ ।
ಪೂರ್ಣಃ ಪೂರಾಯಿತಾ ಪುಣ್ಯಃ ಪುಣ್ಯ ಕೀರ್ತಿರನಾಮಯಃ
॥೭೩॥ (೬೮೯)

ಮನೋಜವಸ್ತೀರ್ಥಕರೋ ವಸುರೇತಾ ವಸುಪ್ರದಃ ।
ವಸುಪ್ರದೋ ವಾಸುದೇವೋ ವಸುರ್ವಸುಮನಾ ಹವಿಃ
॥೭೪॥ (೬೯೮)

ಸದ್ಗತಿಃ ಸತ್ಕೃತಿಃ ಸತ್ತಾ ಸದ್ಭೂತಿಃ ಸತ್ಪರಾಯಣಃ ।
ಶೂರಸೇನೋ ಯದುಶ್ರೇಷ್ಠಃ ಸನ್ನಿವಾಸಃ ಸುಯಾಮುನಃ
॥೭೫॥ (೭೦೭)

ಭೂತಾವಾಸೋ ವಾಸುದೇವಃ ಸರ್ವಾಸುನಿಲಯೋಽನಲಃ ।
ದರ್ಪಹಾ ದರ್ಪದೋ ದೃಪ್ತೋ ದುರ್ಧರೋಽಥಾಪರಾಜಿತಃ
॥೭೬॥ (೭೧೬)

ವಿಶ್ವಮೂರ್ತಿರ್ಮಹಾಮೂರ್ತಿರ್ದೀಪ್ತಮೂರ್ತಿರಮೂರ್ತಿ
ಮಾನ್ ।
ಅನೇಕಮೂರ್ತಿರವ್ಯಕ್ತಃ ಶತಮೂರ್ತಿಃ ಶತಾನನಃ ॥೭೭॥ (೭೨೪)

ಏಕೋ ನೈಕಃ ಸವಃ ಕಃ ಕಿಂ ಯತ್ತತ್ಪದಮನುತ್ತಮಮ್ ।
ಲೋಕಬಂಧುರ್ಲೋಕನಾಥೋ ಮಾಧವೋ ಭಕ್ತವತ್ಸಲಃ
॥೭೮॥ (೭೩೬)

ಸುವರ್ಣವರ್ಣೋ ಹೇಮಾಂಗೋ ವರಾಂಗಶ್ಚಂದನಾಂಗದೀ ।
ವೀರಹಾ ವಿಷಮಃ ಶೂನ್ಯೋ ಘೃತಾಶೀರಚಲಶ್ಚಲಃ ॥೭೯॥(೭೪೬)

ಅಮಾನೀ ಮಾನದೋ ಮಾನ್ಯೋ ಲೋಕಸ್ವಾಮೀ ತ್ರಿಲೋಕ
ಧೃಕ್ ।
ಸುಮೇಧಾ ಮೇಧಜೋ ಧನ್ಯಃ ಸತ್ಯಮೇಧಾ ಧರಾಧರಃ
॥೮೦॥ (೭೫೬)

ತೇಜೋ ವೃಷೋ ದ್ಯುತಿಧರಃ ಸರ್ವಶಸ್ತ್ರಭೃತಾಂ ವರಃ ।
ಪ್ರಗ್ರಹೋ ನಿಗ್ರಹೋ ವ್ಯಗ್ರೋ ನೈಕಶೃಂಗೋ ಗದಾಗ್ರಜಃ
॥೮೧॥ (೭೬೪)

ಚತುರ್ಮೂರ್ತಿಶ್ಚತುರ್ಬಾಹುಶ್ಚತುರ್ವ್ಯೂಹಶ್ಚತುರ್ಗತಿಃ ।
ಚತುರಾತ್ಮ ಚತುರ್ಭಾವಶ್ಚತುರ್ವೇದವಿದೇಕಪಾತ್ ॥೮೨॥ (೭೭೨)

ಸಮಾವರ್ತೋಽನಿವೃತ್ತಾತ್ಮಾ ದುರ್ಜಯೋ ದುರತಿಕ್ರಮಃ ।
ದುರ್ಲಭೋ ದುರ್ಗಮೋ ದುರ್ಗೋ ದುರಾವಾಸೋ
ದುರಾರಿಹಾ ॥೮೩॥ (೭೮೧)

ಶುಭಾಂಗೋ ಲೋಕಸಾರಂಗಃ ಸುತಂತುಸ್ತಂತುವರ್ಧನಃ ।
ಇಂದ್ರಕರ್ಮಾ ಮಹಾಕರ್ಮಾ ಕೃತಕರ್ಮಾ ಕೃತಾಗಮಃ
॥೮೪॥ (೭೮೯)

ಉದ್ಭವಃ ಸುಂದರಃ ಸುಂದೋ ರತ್ನನಾಭಃ ಸುಲೋಚನಃ ।
ಅರ್ಕೋ ವಾಜಸನಃ ಶೃಂಗೀ ಜಯಂತಃ ಸರ್ವವಿಜ್ಜಯೀ
॥೮೫॥ (೭೯೯)

ಸುವರ್ಣಬಿಂದುರಕ್ಷೋಭ್ಯಃ ಸರ್ವವಾಗೀಶ್ವರೇಶ್ವರಃ ।
ಮಹಾಹ್ರದೋ ಮಹಾಗರ್ತೋ ಮಹಾಭೂತೋ ಮಹಾನಿಧಿಃ
॥೮೬॥ (೮೦೬)

ಕುಮುದಃ ಕುಂದರಃ ಕುಂದಃ ಪರ್ಜನ್ಯಃ ಪಾವನೋಽನಿಲಃ ।
ಅಮೃತಾಶೋಽಮೃತವಪುಃ ಸರ್ವಜ್ಞಃ ಸರ್ವತೋಮುಖಃ
॥೮೭॥ (೮೧೬)

ಸುಲಭಃ ಸುವ್ರತಃ ಸಿದ್ಧಃ ಶತ್ರುಜಿಚ್ಛತ್ರುತಾಪನಃ ।
ನ್ಯಗ್ರೋಧೋದುಂಬರೋಽಶ್ವತ್ಥಶ್ಚಾಣೂರಾಂಧ್ರನಿಷೂದನಃ
॥೮೮॥ (೮೨೫)

ಸಹಸ್ರಾರ್ಚಿಃ ಸಪ್ತಜಿಹ್ವಃ ಸಪ್ತೈಧಾಃ ಸಪ್ತವಾಹನಃ ।
ಅಮೂರ್ತಿರನಘೋಽಚಿಂತ್ಯೋ ಭಯಕೃದ್ ಭಯನಾಶನಃ
॥೮೯॥ (೮೩೪)

ಅಣುರ್ಬೃಹತ್ಕೃಶಃ ಸ್ಥೂಲೋ ಗುಣಭೃನ್ನಿರ್ಗುಣೋ ಮಹಾನ್।
ಅಧೃತಃ ಸ್ವಧೃತಃ ಸ್ವಾಸ್ಯಃ ಪ್ರಾಗ್ವಂಶೋ ವಂಶವರ್ಧನಃ
॥೯೦॥ (೮೪೬)

ಭಾರಭೃತ್ ಕಥಿತೋ ಯೋಗೀ ಯೋಗೀಶಃ ಸರ್ವಕಾಮದಃ ।
ಆಶ್ರಮಃ ಶ್ರಮಣಃ ಕ್ಷಾಮಃ ಸುಪರ್ಣೋ ವಾಯುವಾಹನಃ
॥೯೧॥ (೮೫೬)

ಧನುರ್ಧರೋ ಧನುರ್ವೇದೋ ದಂಡೋ ದಮಯಿತಾ ದಮಃ ।
ಅಪರಾಜಿತಃ ಸರ್ವಸಹೋ ನಿಯಂತಾಽನಿಯಮೋಽಯಮಃ
॥೯೨॥ (೮೬೬)

ಸತ್ತ್ವವಾನ್ ಸಾತ್ತ್ವಿಕಃ ಸತ್ಯಃ ಸತ್ಯಧರ್ಮಪರಾಯಣಃ ।
ಅಭಿಪ್ರಾಯಃ ಪ್ರಿಯಾರ್ಹೋಽರ್ಹಃ ಪ್ರಿಯಕೃತ್ ಪ್ರೀತಿವರ್ಧನಃ
॥೯೩॥ (೮೭೫)

ವಿಹಾಯಸಗತಿರ್ಜ್ಯೋತಿಃ ಸುರುಚಿರ್ಹುತಭುಗ್ ವಿಭುಃ ।
ರವಿರ್ವಿರೋಚನಃ ಸೂರ್ಯಃ ಸವಿತಾ ರವಿಲೋಚನಃ
॥೯೪॥ (೮೮೫)

ಅನಂತೋ ಹುತಭುಗ್ ಭೋಕ್ತಾ ಸುಖದೋ ನೈಕಜೋಽಗ್ರಜಃ।
ಅನಿರ್ವಿಣ್ಣಃ ಸದಾಮರ್ಷೀ ಲೋಕಾಧಿಷ್ಠಾನಮದ್ಭುತಃ
॥೯೫॥ (೮೯೫)

ಸನಾತ್ ಸನಾತನಮಃ ಕಪಿಲಃ ಕಪಿರವ್ಯಯಃ ।
ಸ್ವಸ್ತಿದಃ ಸ್ವಸ್ತಿಕೃತ್ ಸ್ವಸ್ತಿಃ ಸ್ವಸ್ತಿಭುಕ್ ಸ್ವಸ್ತಿದಕ್ಷಿಣಃ ॥೯೬॥(೯೧೪)

ಅರೌದ್ರಃ ಕುಂಡಲೀ ಚಕ್ರೀ ವಿಕ್ರಮ್ಯೂರ್ಜಿತಶಾಸನಃ ।
ಶಬ್ದಾತಿಗಃ ಶಬ್ದಸಹಃ ಶಿಶಿರಃ ಶರ್ವರೀಕರಃ ॥೯೭॥ (೯೧೪)

ಅಕ್ರೂರಃ ಪೇಶಲೋ ದಕ್ಷೋ ದಕ್ಷಿಣಃ ಕ್ಷಮಿಣಾಂ ವರಃ ।
ವಿದ್ವತ್ತಮೋ ವೀತಭಯಃ ಪುಣ್ಯಶ್ರವಣಕೀರ್ತನಃ ॥೯೮॥ (೬೨೩)

ಉತ್ತಾರಣೋ ದುಷ್ಕೃತಿಹಾ ಪುಣ್ಯೋ ದುಃಸ್ವಪ್ನನಾನಃ ।
ವೀರಹಾ ರಕ್ಷಣಃ ಸಂತೋ ಜೀವನಃ ಪರ್ಯವಸ್ಥಿತಃ ॥೯೯॥(೯೩೧)

ಅನಂತರೂಪೋಽನಂತಶ್ರೀರ್ಜಿತಮನ್ಯುರ್ಭಯಾಪಹಃ ।
ಚತುರಶ್ರೋ ಗಭೀರಾತ್ಮಾ ವಿದಿತೋ ವ್ಯಾದಿಶೋ ದಿಶಃ
॥೧೦೦॥ (೯೪೦)

ಅನಾದಿರ್ಭೂರ್ಭುವೋ ಲಕ್ಷ್ಮೀಃ ಸುವೀರೋ ರುಚಿರಾಂಗದಃ ।
ಜನನೋ ಜನಜನ್ಮಾದಿರ್ಭೀಮೋ ಭೀಮಪರಾಕ್ರಮಃ
॥೧೦೧॥ (೯೪೯)

ಆಧಾರನಿಲಯೋಽಧಾತಾ ಪುಷ್ಪಹಾಸಃ ಪ್ರಜಾಗರಃ ।
ಊರ್ಧ್ವಗಃ ಸತ್ಪಥಾಚಾರಃ ಪ್ರಾಣದಃ ಪ್ರಣವಃ ಪಣಃ
॥೧೦೨॥ (೯೫೮)

ಪ್ರಮಾಣಂ ಪ್ರಾಣನಿಲಯಃ ಪ್ರಾಣಭೃತ್ ಪ್ರಾಣಜೀವನಃ ।
ತತ್ತ್ವಂ ತತ್ತ್ವವಿದೇಕಾತ್ಮಾ ಜನ್ಮ ಮೃತ್ಯುಜರಾತಿಗಃ
॥೧೦೩॥ (೯೬೬)

ಭೂರ್ಭವಃ ಸ್ವಸ್ತರುಸ್ತಾರಃ ಸವಿತಾ ಪ್ರಪಿತಾಮಹಃ ।
ಯಜ್ಞೋ ಯಜ್ಞಪತಿರ್ಯಜ್ವಾ ಯಜ್ಞಾಂಗೋ ಯಜ್ಞವಾಹನಃ
॥೧೦೪॥ (೯೭೫)

ಯಜ್ಞಭೃತ್ ಯಜ್ಞಕೃದ್ ಯಜ್ಞೀ ಭುಗ್ ಯಜ್ಞಸಾಧನಃ ।
ಯಜ್ಞಾಂತಕೃದ್ ಯಜ್ಞ ಗುಹ್ಯಮನ್ನಮನ್ನಾದ ಏವ ಚ
॥೧೦೫॥ (೯೮೮)

ಆತ್ಮಯೋನಿಃ ಸ್ವಯಂಜಾತೋ ವೈಖಾನಃ ಸಾಮಗಾಯನಃ ।
ದೇವಕೀನಂದನಃ ಸ್ರಷ್ಟಾ ಕ್ಷಿತೀಶಃ ಪಾಪನಾಶನಃ ॥೧೦೬॥ (೯೯೨)

ಶಂಖಭೃನ್ನಂದಕೀ ಚಕ್ರೀ ಶಾಂರ್ಗಧನ್ವಾ ಗದಾಧರಃ ।
ರಥಾಂಗಪಾಣಿ ರಕ್ಷೋಭ್ಯಃ ಸರ್ವಪ್ರಹರಣಾಯುಧಃ
॥೧೦೭॥ (೧೦೦೦)

ಸಂಕೇತಾಕ್ಷರಗಳ ವಿವರ

ಈ. ಉ.	ಈಶೋಪನಿಷತ್
ಉದ್ಯೋಗ	ಉದ್ಯೋಗಪರ್ವ
ಐ. ಉ.	ಐತರೇಯ ಉಪನಿಷತ್
ಕ. ಉ.	ಕಠೋಪನಿಷತ್
ಗೀತಾ.	ಭಗವದ್ಗೀತಾ
ಛಾ. ಉ.	ಛಾಂದೋಗ್ಯೋಪನಿಷತ್
ತೈ. ಆ.	ತೈತ್ತಿರೀಯ ಆರಣ್ಯಕ
ತೈ. ಉ.	ತೈತ್ತಿರೀಯ ಉಪನಿಷತ್
ತೈ. ಸಂ.	ತೈತ್ತಿರೀಯ ಸಂಹಿತಾ
ನಾ. ಉ.	ನಾರಾಯಣೋಪನಿಷತ್
ಪು. ಸೂ.	ಪುರುಷಸೂಕ್ತ
ಬೃ. ಉ.	ಬೃಹದಾರಣ್ಯಕೋಪನಿಷತ್
ಬೃ. ನಾ. ಉ.	ಬೃಹನ್ನಾರಾಯಣೋಪನಿಷತ್
ಮಹಾ.	ಮಹಾಭಾರತ
ಮಾ. ಉ.	ಮಾಂಡೂಕ್ಯೋಪನಿಷತ್
ಮುಂ. ಉ.	ಮುಂಡಕೋಪನಿಷತ್
ವಾ. ರಾ.	ವಾಲ್ಮೀಕಿ ರಾಮಾಯಣ
ವಿ. ಪು.	ವಿಷ್ಣುಪುರಾಣ
ವಿ. ಸ.	ವಿಷ್ಣುಸಹಸ್ರನಾಮ
ಶಾಂತಿ.	ಶಾಂತಿಪರ್ವ
ಶುಕ್ಲ. ಯಜು.	ಶುಕ್ಲ ಯಜುರ್ವೇದ
ಶ್ವೇ. ಉ.	ಶ್ವೇತಾಶ್ವತರೋಪನಿಷತ್
ಹರಿ.	ಹರಿವಂಶ

ಶ್ರೀವಿಷ್ಣುಸಹಸ್ರನಾಮಭಾಷ್ಯ

೧. ವಿಶ್ವಮ್—ಜಗತ್ಕಾರಣನು.

ಭಗವಂತನು ಜಗತ್ತಿಗೆ ಕಾರಣನಾಗಿರುವನಾದ್ದರಿಂದ ಅವನಿಗೆ ವಿಶ್ವ ಎಂದು ಹೆಸರು. ಅಥವಾ ಜಗತ್ತು ಪರಮಪುರುಷನಾದ ಪರಮಾತ್ಮನಿಂದ ಭಿನ್ನವಲ್ಲವಾದ್ದರಿಂದ ಪರಮಾತ್ಮನು ವಿಶ್ವವೆಂದು ಕರೆಯಲ್ಪಡುತ್ತಾನೆ.

'ಪುರುಷ ಏವೇದಂ ವಿಶ್ವಮ್' 'ಈ ವಿಶ್ವವು ಪುರುಷನೇ' (ಮಹಾ. ಉ. ೨. ೧. ೧೦). 'ತತ್ ಸೃಷ್ಟ್ವಾ ತದೇವಾನುಪ್ರಾವಿಶತ್' 'ಬ್ರಹ್ಮವು ಅದನ್ನು (ವಿಶ್ವವನ್ನು) ಸೃಷ್ಟಿಸಿ ಅದನ್ನೇ ಪ್ರವೇಶಿಸಿತು' (ತೈ. ಉ. ೨. ೬.)

೨. ವಿಷ್ಣುಃ—ಸರ್ವವ್ಯಾಪಕನು, ದೇಶಕಾಲವಸ್ತುಗಳಿಂದ ಅಪರಿಚ್ಛಿನ್ನನಾಗಿರುವವನು.

'ಯಚ್ಚ ಕಿಂಚಿಜ್ಜಗತ್ಸರ್ವಂ . . . ವ್ಯಾಪ್ಯ ನಾರಾಯಣಃ ಸ್ಥಿತಃ'— 'ಇಡೀ ಜಗತ್ತನ್ನು—ಜಗತ್ತಿನಲ್ಲಿ ಏನೆಲ್ಲವನ್ನು ನಾವು ನೋಡುತ್ತೇವೋ ಮತ್ತು ಏನೆಲ್ಲವನ್ನು ನಾವು ಕೇಳುತ್ತೇವೋ, ಅದೆಲ್ಲವನ್ನು—ಒಳಗೂ ಹೊರಗೂ ನಾರಾಯಣನು ವ್ಯಾಪಿಸಿ ನಿಂತಿರುವನು' (ಬೃ. ನಾ. ಉ. ೧೩. ೧. ೨)

೩. ವಷಟ್ಕಾರಃ—ಯಜ್ಞಸ್ವರೂಪನು.

ಯಜ್ಞದಲ್ಲಿ ಭಗವಂತನನ್ನು ಉದ್ದೇಶಿಸಿ ವಷಟ್ಕಾರವು ಮಾಡಲ್ಪಡುವುದಾದ್ದರಿಂದ ಭಗವಂತನಿಗೆ ವಷಟ್ಕಾರ ಎಂದು ಹೆಸರು. ಅಥವಾ ಯಾವ ಯಜ್ಞದಲ್ಲಿ ವಷಟ್ಕಾರವು ಮಾಡಲ್ಪಡುವುದೋ ಆ ಯಜ್ಞಕ್ಕೆ ವಷಟ್ಕಾರ ಎಂದು ಹೇಳುತ್ತಾರೆ. ಯಜ್ಞವು ವಿಷ್ಣುವೇ ಆಗಿರುವನಾದ್ದರಿಂದ ವಿಷ್ಣುವಿಗೂ ವಷಟ್ಕಾರ ಎಂದು ಹೆಸರು.

'ಯಜ್ಞೋ ವೈ ವಿಷ್ಣುಃ' 'ಯಜ್ಞವು ವಿಷ್ಣುವೇ' (ತೈ. ಸಂ. ೧. ೭. ೪)

೪. ಭೂತಭವ್ಯಭವತ್ಪ್ರಭುಃ — ಭೂತ-ವರ್ತಮಾನ-ಭವಿಷ್ಯತ್ ಕಾಲಗಳಿಗೆ ಪ್ರಭುವಾಗಿರುವನು.

ಭಗವಂತನು ಸತ್ತಾಮಾತ್ರವೂ ಕಾಲಭೇದಗಳಿಗೆ ಅತೀತವೂ ಆಗಿರುವ ಐಶ್ವರ್ಯವುಳ್ಳವನಾದ್ದರಿಂದ ತ್ರಿಕಾಲಗಳಿಗೆ ಪ್ರಭುವಾಗಿರುವನು.

೫. ಭೂತಕೃತ್—ಭೂತಗಳನ್ನು ಸೃಷ್ಟಿಸುವವನು ಮತ್ತು ನಾಶ ಮಾಡುವವನು.

ಭಗವಂತನು ರಜೋಗುಣವನ್ನು ಆಶ್ರಯಿಸಿ ಬ್ರಹ್ಮರೂಪದಿಂದ ಸಮಸ್ತ ಭೂತಗಳನ್ನು ಸೃಷ್ಟಿಸುತ್ತಾನೆ ಮತ್ತು ತಮೋಗುಣವನ್ನು ಅವಲಂಬಿಸಿ ರುದ್ರರೂಪದಿಂದ ಭೂತಗಳನ್ನೆಲ್ಲ ನಾಶಮಾಡುತ್ತಾನೆ.

೬. ಭೂತಭೃತ್—(ಸತ್ತ್ವಗುಣವನ್ನು ಆಶ್ರಯಿಸಿ) ಭೂತಗಳಿಗೆ ಆಧಾರವಾಗಿರುವವನು.

ಅಥವಾ ಭೂತಗಳನ್ನು ರಕ್ಷಿಸುವವನು, ಪೋಷಿಸುವವನು.

೭. ಭಾವಃ—ಪ್ರಪಂಚರೂಪದಿಂದ ಹುಟ್ಟುವವನು.

ಅಥವಾ ಸತ್ತಾಮಾತ್ರನಾಗಿ ಇರುವವನು.

೮. ಭೂತಾತ್ಮಾ—ಸಕಲ ಭೂತಗಳ ಅಂತರ್ಯಾಮಿಯಾಗಿರುವವನು.

೯. ಭೂತಭಾವನಃ—ಭೂತಗಳನ್ನು ಹುಟ್ಟಿಸುವವನು.

ಅಥವಾ ಭೂತಗಳನ್ನು ಅಭಿವೃದ್ಧಿಗೊಳಿಸುವವನು.

೧೦. ಪೂತಾತ್ಮಾ—ಪವಿತ್ರವಾದ ಮತ್ತು ಶುದ್ಧವಾದ ಆತ್ಮವುಳ್ಳವನು.

ಭಗವಂತನಿಗೆ ಭೂತಕೃತ್ ಮೊದಲಾದ ಹೆಸರುಗಳಿರುವುದರಿಂದ ಭಗವಂತನು ಗುಣಗಳಿಗೆ ಅಧೀನನು ಎಂದು ಭಾವಿಸಬಾರದು. ಭಗವಂತನು ನಿರ್ಗುಣನು ಮತ್ತು ಪವಿತ್ರಾತ್ಮನು. ಗುಣಗಳೊಡನೆ ಇರುವ ಅವನ ಸಂಬಂಧವು ಸ್ವೇಚ್ಛೆಯಿಂದ ಉಂಟಾದುದೆಂದು ತಿಳಿಯಬೇಕು.

'ಕೇವಲೋ ನಿರ್ಗುಣಶ್ಚ' 'ಪರಮಾತ್ಮನು ಕೇವಲನು ಮತ್ತು ನಿರ್ಗುಣನು' (ಶ್ವೇ. ಉ. ೬. ೧೧).

೧೧. ಪರಮಾತ್ಮಾ—ಪರಮಶ್ರೇಷ್ಠನೂ ಆತ್ಮನೂ ಆಗಿರುವವನು.

ಭಗವಂತನು ಪರಮಶ್ರೇಷ್ಠನೂ ಆತ್ಮನೂ ಆಗಿರುವನಾದ್ದರಿಂದ ಅವನಿಗೆ ಪರಮಾತ್ಮನೆಂದು ಹೆಸರು. ಅವನು ಕಾರ್ಯಕಾರಣಗಳಿಂದ ಭಿನ್ನನಾಗಿರುವನು ಮತ್ತು ನಿತ್ಯ ಶುದ್ಧ ಬುದ್ಧ ಮುಕ್ತ ಸ್ವಭಾವವುಳ್ಳವನು.

೧೨. ಮುಕ್ತಾನಾಂ ಪರಮಾಗತಿಃ—ಮುಕ್ತಪುರುಷರಿಗೆ ಪರಮಶ್ರೇಷ್ಠಗತಿಯಾಗಿರುವವನು.

ಮುಕ್ತಪುರುಷರು ಭಗವಂತನನ್ನು ಹೊಂದಿ ಪುನರಾವೃತ್ತಿಯನ್ನು (ಸಂಸಾರವನ್ನು) ಹೊಂದುವುದಿಲ್ಲ. ಆದುದರಿಂದ ಮುಕ್ತಪುರುಷರಿಗೆ ಭಗವಂತನು ಪರಮಶ್ರೇಷ್ಠಗತಿಯಾಗಿರುವನು.

'ಮಾಮುಪೇತ್ಯ ತು ಕೌಂತೇಯ ಪುನರ್ಜನ್ಮ ನ ವಿದ್ಯತೇ' 'ಎಲೈ ಅರ್ಜುನ, ನನ್ನನ್ನು ಹೊಂದಿದರೆ ಪುನರ್ಜನ್ಮವಿಲ್ಲ' (ಗೀತಾ. ೮. ೧೬).

೧೩. ಅವ್ಯಯಃ—ವಿನಾಶವಾಗಲಿ ವಿಕಾರವಾಗಲಿ ಇಲ್ಲದವನು.

೧೪. ಪುರುಷಃ—ಶರೀರವೆಂಬ ಪುರದಲ್ಲಿ ಶಯನಮಾಡುವವನು.

ಅಥವಾ (ತಾನು) ಪೂರ್ಣನೂ (ಇತರರನ್ನು) ಪೂರ್ಣಗೊಳಿಸುವವನೂ ಆಗಿರುವವನು. ಅಥವಾ ಸಂಹಾರಕಾಲದಲ್ಲಿ ಲೋಕಗಳನ್ನೆಲ್ಲ ನಾಶಮಾಡುವವನು.

೧೫. ಸಾಕ್ಷೀ—ಯಾವ ತಡೆಯೂ ಇಲ್ಲದೆ ಸ್ವರೂಪಭೂತಜ್ಞಾನದಿಂದ ಎಲ್ಲವನ್ನೂ ನೋಡುತ್ತಿರುವವನು.

೧೬. ಕ್ಷೇತ್ರಜ್ಞಃ—ಕ್ಷೇತ್ರವನ್ನು ಎಂದರೆ ಶರೀರವನ್ನು ತಿಳಿದಿರುವವನು.

'ಕ್ಷೇತ್ರಜ್ಞಂ ಚಾಪಿ ಮಾಂ ವಿದ್ಧಿ' 'ಕ್ಷೇತ್ರಜ್ಞನು ನಾನು ಎಂದು ತಿಳಿ' (ಗೀತಾ. ೧೩. ೨). 'ಕ್ಷೇತ್ರಾಣಿ ಹಿ ಶರೀರಾಣಿ . . . ತತಃ ಕ್ಷೇತ್ರಜ್ಞ ಉಚ್ಯತೇ' 'ಶರೀರಗಳೇ ಕ್ಷೇತ್ರಗಳು; ಶುಭಾಶುಭಕರ್ಮಗಳೇ ಬೀಜವು; ಯೋಗಾತ್ಮನಾದ ಭಗವಂತನು ಅವುಗಳನ್ನು ತಿಳಿದಿರುವನಾದ್ದರಿಂದ ಕ್ಷೇತ್ರಜ್ಞನೆಂದು ಕರೆಯಲ್ಪಡುತ್ತಾನೆ.' (ಮಹಾ. ಶಾಂತಿ. ೩೫೧. ೬).

೧೭. ಅಕ್ಷರಃ—ನಾಶವಿಲ್ಲದವನು.

ಕ್ಷೇತ್ರಜ್ಞನಾದ ಪರಮಾತ್ಮನಿಗೆ ನಾಶವಿಲ್ಲವಾದ್ದರಿಂದ ಅವನಿಗೆ ಅಕ್ಷರ ಎಂದು ಹೆಸರು.

೧೮. ಯೋಗಃ—ಯೋಗದಿಂದ ಪ್ರಾಪ್ಯನಾಗುವವನು.

ಮನಸ್ಸಿನೊಂದಿಗೆ ಸಮಸ್ತ ಜ್ಞಾನೇಂದ್ರಿಯಗಳನ್ನು ನಿಗ್ರಹಿಸಿ ಆತ್ಮ-ಪರಮಾತ್ಮರ ಏಕತ್ವವನ್ನು ಅರಿಯುವುದೇ ಯೋಗ. ಪರಮಾತ್ಮನು ಯೋಗದಿಂದ ಪ್ರಾಪ್ಯನಾದ್ದರಿಂದ ಅವನಿಗೂ ಯೋಗ ಎಂದು ಹೆಸರು.

೧೯. ಯೋಗವಿದಾಂ ನೇತಾ—ಯೋಗವಿದರ ಯೋಗಕ್ಷೇಮವನ್ನು ವಹಿಸುವವನು.

ಯೋಗವನ್ನು ಕುರಿತು ವಿಚಾರಿಸುವವರು, ಯೋಗವನ್ನು ಅರಿತವರು ಮತ್ತು ಯೋಗವನ್ನು ಹೊಂದಿದವರು-ಇವರೆಲ್ಲ ಯೋಗವಿದರು. ಭಗವಂತನು ಯೋಗವಿದರ ಯೋಗಕ್ಷೇಮವನ್ನು ವಹಿಸುತ್ತಾನೆ. ಆದುದರಿಂದ ಅವನು ಯೋಗವಿದರ ನೇತೃವು ಎಂದು ಹೇಳಿದೆ. 'ತೇಷಾಂ ನಿತ್ಯಾಭಿಮುಕ್ತಾನಾಂ ಯೋಗಕ್ಷೇಮಂ ವಹಾಮ್ಯಹಮ್' 'ಆ ನಿತ್ಯಯುಕ್ತರಾದ (ಯೋಗಿಗಳ) ಯೋಗಕ್ಷೇಮವನ್ನು ನಾನು ವಹಿಸುತ್ತೇನೆ.' (ಗೀತಾ. ೯. ೨೨.)

೨೦. ಪ್ರಧಾನಪುರುಷೇಶ್ವರಃ—ಪ್ರಕೃತಿಗೂ ಜೀವನಿಗೂ ಸ್ವಾಮಿಯಾಗಿರುವವನು.

೨೧. ನಾರಸಿಂಹವಪುಃ—ಮನುಷ್ಯನ ಮತ್ತು ಸಿಂಹದ ಅವಯವಗಳುಳ್ಳ ಶರೀರವನ್ನು ಧರಿಸಿದವನು.

೨೨. **ಶ್ರೀಮಾನ್**—ಶ್ರೀಯಿಂದ ಕೂಡಿದವನು.

ವಿಷ್ಣುವಿನ ವಕ್ಷಸ್ಥಳದಲ್ಲಿ ಲಕ್ಷ್ಮಿಯು ಶಾಶ್ವತವಾಗಿ ನೆಲಸಿರುವಳಾದ್ದರಿಂದ ವಿಷ್ಣುವಿಗೆ ಶ್ರೀಮಾನ್ ಎಂದು ಹೆಸರು.

೨೩. **ಕೇಶವಃ**—ಸುಂದರವಾದ ಕೇಶಗಳುಳ್ಳವನು.

ಅಥವಾ ಬ್ರಹ್ಮ (ಕ), ವಿಷ್ಣು (ಅ) ಮತ್ತು ಶಿವ (ಈಶ)—ಈ ತ್ರಿಮೂರ್ತಿಗಳು ಕೇಶಗಳು. ಇವರು ಯಾರ ಅಧೀನದಲ್ಲಿರುವರೋ ಆ ಭಗವಂತನು ಕೇಶವನು. ಅಥವಾ ಕೇಶಿ ಎಂಬ ರಾಕ್ಷಸನನ್ನು ಕೊಂದದ್ದರಿಂದ ವಿಷ್ಣುವಿಗೆ ಕೇಶವ ಎಂದು ಹೆಸರು.

೨೪. **ಪುರುಷೋತ್ತಮಃ**— ಪುರುಷಶ್ರೇಷ್ಠನು.

'ಯಸ್ಮಾತ್ ಕ್ಷರಮತೀತೋಽಹಂ . . . ಪ್ರಥಿತಃ ಪುರುಷೋತ್ತಮಃ' 'ನಾನು ಕ್ಷರಕ್ಕೆ ಅತೀತನೂ ಅಕ್ಷರಕ್ಕಿಂತ ಉತ್ತಮನೂ ಆಗಿದ್ದೇನೆ; ಆದುದರಿಂದ ಲೋಕದಲ್ಲಿಯೂ ವೇದದಲ್ಲಿಯೂ ಪುರುಷೋತ್ತಮನೆಂದು ಪ್ರಸಿದ್ಧನಾಗಿದ್ದೇನೆ.' (ಗೀತಾ. ೧೫. ೧೮).

೨೫. **ಸರ್ವಃ**—ಎಲ್ಲ ಸತ್-ಅಸತ್ ವಸ್ತುಗಳ ಉತ್ಪತ್ತಿಸ್ಥಾನ ಮತ್ತು ಲಯಸ್ಥಾನ—ಎರಡೂ ಆಗಿರುವವನು ಮತ್ತು ಎಲ್ಲ ವಸ್ತುಗಳನ್ನು ಯಾವಾಗಲೂ ತಿಳಿದಿರುವವನು.

೨೬. **ಶರ್ವಃ**—ಸಂಹಾರ ಸಮಯದಲ್ಲಿ ಸಕಲ ಪ್ರಜೆಗಳನ್ನು ಸಂಹಾರ ಮಾಡುವವನು ಅಥವಾ ಸಂಚರಿಸಲ್ಪಡುವಂತೆ ಮಾಡುವವನು.

೨೭. **ಶಿವಃ**—ಶುದ್ಧನಾಗಿರುವವನು.

ಭಗವಂತನು ನಿಸ್ತ್ರೈಗುಣ್ಯನಾದ್ದರಿಂದ ಶುದ್ಧನಾಗಿರುವನು; ಆದುದರಿಂದ ಅವನಿಗೆ ಶಿವ ಎಂದು ಹೆಸರು. ಶ್ರುತಿಯು ವಿಷ್ಣು, ಬ್ರಹ್ಮ ಮತ್ತು ಶಿವ–ಇವರಲ್ಲಿ ಅಭೇದವನ್ನು ಉಪದೇಶಿಸುತ್ತಿದೆ; ಆದುದರಿಂದ ಶಿವ ಮೊದಲಾದ ಹೆಸರುಗಳಿಂದ ವಿಷ್ಣುವೇ ಸ್ತುತಿಸಲ್ಪಡುತ್ತಾನೆ.

'ಸ ಬ್ರಹ್ಮಾ ಸ ಶಿವಃ' 'ಅವನೇ ಬ್ರಹ್ಮ, ಅವನೇ ಶಿವ' (ಬೃ. ನಾ. ಉ).

೨೮. **ಸ್ಥಾಣುಃ**—ಸ್ಥಿರವಾಗಿರುವವನು.

೨೯. **ಭೂತಾದಿಃ**—ಸಕಲ ಭೂತಗಳ ಆದಿಕಾರಣನು.

೩೦. **ನಿಧಿರವ್ಯಯಃ**—ನಾಶರಹಿತನಾದ ನಿಧಿಯಾಗಿರುವನು.

ಭಗವಂತನು ಪ್ರಲಯಕಾಲದಲ್ಲಿ ಸಕಲ ವಸ್ತುಗಳಿಗೆ ಆಶ್ರಯಸ್ಥಾನನಾಗುತ್ತಾನೆ; ಆದುದರಿಂದ ಅವನು ನಿಧಿಯು; ಮತ್ತು ನಾಶರಹಿತನಾದ್ದರಿಂದ ಅವ್ಯಯನು.

೩೧. ಸಂಭವಃ–ಸ್ವೇಚ್ಛೆಯಿಂದ ಯೋಗ್ಯರೀತಿಯಲ್ಲಿ ಹುಟ್ಟುವವನು.

'ಧರ್ಮಸಂಸ್ಥಾಪನಾರ್ಥಾಯ ಸಂಭವಾಮಿ ಯುಗೇ ಯುಗೇ', 'ಧರ್ಮ ವನ್ನು ಸ್ಥಾಪಿಸುವುದಕ್ಕಾಗಿ ಪ್ರತಿಯೊಂದು ಯುಗದಲ್ಲಿಯೂ ಹುಟ್ಟುತ್ತೇನೆ.' (ಗೀತಾ ೪. ೮.)

೩೨. ಭಾವನಃ—ಸಮಸ್ತ ಭೋಕ್ತೃಗಳ ಫಲಗಳನ್ನು ಉಂಟು ಮಾಡುವವನು.

೩೩. ಭರ್ತಾ–ಪ್ರಪಂಚಕ್ಕೆ ನೆಲೆಯಾಗಿ ಆಧಾರವಾಗಿರುವವನು.

೩೪. ಪ್ರಭವಃ—ಪ್ರಕೃಷ್ಟವಾದ ಜನ್ಮವುಳ್ಳವನು.

ಅಥವಾ ಮಹಾಭೂತಗಳು ಪ್ರಕೃಷ್ಟವಾದ ರೀತಿಯಲ್ಲಿ ಭಗವಂತನಿಂದ ಸೃಷ್ಟಿಸಲ್ಪಡುತ್ತವೆ; ಆದುದರಿಂದ ಭಗವಂತನಿಗೆ ಪ್ರಭವ ಎಂದು ಹೆಸರು.

೩೫. ಪ್ರಭುಃ–ಸಕಲ ಕಾರ್ಯಗಳಲ್ಲಿ ಅತಿಶಯವಾದ ಸಾಮರ್ಥ್ಯ ವುಳ್ಳವನು.

೩೬. ಈಶ್ವರಃ—ನಿರುಪಾಧಿಕವಾದ ಐಶ್ವರ್ಯವುಳ್ಳವನು.

'ಏಷ ಸರ್ವೇಶ್ವರಃ' 'ಈತನೇ (ಭಗವಂತನೇ) ಸರ್ವೇಶ್ವರನು' (ಮಾ.ಉ. ೬).

೩೭. ಸ್ವಯಂಭೂಃ—ತಾನಾಗಿಯೇ ಹುಟ್ಟುವವನು.

ಅಥವಾ ಸ್ವಯಂಭೂ ಎಂದರೆ ತಾನಾಗಿಯೂ ಸ್ವತಂತ್ರನಾಗಿರುವನು (ಪರ ತಂತ್ರನಲ್ಲದ) ಪರಮೇಶ್ವರನು.

೩೮. ಶಂಭುಃ—ಭಕ್ತರಿಗೆ ಸುಖವನ್ನು ಉಂಟುಮಾಡುವವನು.

೩೯. ಆದಿತ್ಯಃ—ಹನ್ನೆರಡು ಆದಿತ್ಯರಲ್ಲಿ ಶ್ರೇಷ್ಠನಾದ ಆದಿತ್ಯ ನಾಗಿರುವವನು.

ಅಥವಾ ವಿಷ್ಣುವು ಅದಿತಿಯ ಎಂದರೆ ಅಖಂಡಿತಳಾದ ಪೃಥ್ವಿಯ ಒಡೆಯ ನಾದ್ದರಿಂದ ಅವನಿಗೆ ಆದಿತ್ಯ ಎಂದು ಹೆಸರು. ಅಥವಾ ಒಬ್ಬನೇ ಒಬ್ಬ ಆದಿತ್ಯನು ಎಂದರೆ ಸೂರ್ಯನು ಅನೇಕ ಜಲಪಾತಗಳಲ್ಲಿ ಹೇಗೆ ಅನೇಕವಾಗಿ ಕಾಣುತ್ತಾನೋ ಹಾಗೆಯೇ ಒಬ್ಬನೇ ಒಬ್ಬನಾದ ಪರಮಾತ್ಮನು ಅನೇಕ ಶರೀರಗಳಲ್ಲಿ ಅನೇಕವಾಗಿ ಕಾಣುತ್ತಾನೆ. ಹೀಗೆ ಪರಮಾತ್ಮನಿಗೂ ಆದಿತ್ಯನಿಗೂ ಇರುವ ಸಾಧರ್ಮ್ಯದಿಂದ ಪರಮಾತ್ಮನು ಆದಿತ್ಯನೆಂದು ಕರೆಯಲ್ಪಡುತ್ತಾನೆ.

೪೦. ಪುಷ್ಕರಾಕ್ಷಃ—ತಾವರೆಯಂತೆ ಸುಂದರವಾದ ಕಣ್ಣುಗ ಳುಳ್ಳವನು.

೪೧. ಮಹಾಸನಃ—ಶ್ರುತಿರೂಪವಾದ ಮಹಾನ್ ನಾದವುಳ್ಳವನು.

'ಅಸ್ಯ ಮಹತೋ ಭೂತಸ್ಯ ನಿಃಶ್ವಸಿತಮೇತದ್ ಋಗ್ವೇದೋ ಯಜುರ್ವೇದಃ' 'ಋಗ್ವೇದ ಯಜುರ್ವೇದಗಳು ಈ ಮಹಾಭೂತನಾದ ಪರಮಾತ್ಮನ ನಿಃಶ್ವಾಸಗಳು' (ಬೃ. ಉ. ೨. ೪. ೧೦).

೪೨. ಅನಾದಿನಿಧನಃ—ಜನನಮರಣಗಳೆರಡೂ ಇಲ್ಲದವನು.

೪೩. ಧಾತಾ—ಅನಂದ (ಆದಿಶೇಷ) ಮೊದಲಾದವರ ರೂಪದಿಂದ ವಿಶ್ವವನ್ನು ಎತ್ತಿಹಿಡಿದಿರುವವನು.

೪೪. ವಿಧಾತಾ—ಕರ್ಮಗಳನ್ನೂ ಅವುಗಳ ಫಲಗಳನ್ನೂ ಉಂಟುಮಾಡುವವನು.

೪೫. ಧಾತುರುತ್ತಮಃ—ಆದಿಶೇಷ ಮೊದಲಾದವರಿಗೂ ಆಧಾರನಾಗಿರುವವನು.

ಅಥವಾ ಭಗವಂತನು ಪೃಥ್ವಿ ಮೊದಲಾದ ಸಕಲ ಧಾತುಗಳಿಗಿಂತ ಉತ್ಕೃಷ್ಟವಾದ 'ಚಿತ್' ಎಂಬ ಧಾತುವಾಗಿರುವನಾದ್ದರಿಂದ ಅವನಿಗೆ ಧಾತುರುತ್ತಮನೆಂದು ಹೆಸರು. ಅಥವಾ ಧಾತಾ ಎಂದರೆ ಎಂದರೆ ಬ್ರಹ್ಮ; ವಿಷ್ಣುವು ಬ್ರಹ್ಮನಿಗಿಂತಲೂ ಶ್ರೇಷ್ಠನಾದ್ದರಿಂದ ಧಾತುರುತ್ತಮನು.

೪೬. ಅಪ್ರಮೇಯಃ—ಸರ್ವಪ್ರಮಾಣಗಳಿಂದಲೂ ಅವೇದ್ಯನಾಗಿರುವವನು.

ಪರಮಾತ್ಮನು ಶಬ್ದಾದಿರಹಿತನಾದರಿಂದ ಪ್ರತ್ಯಕ್ಷಪ್ರಮಾಣಕ್ಕೆ ವಿಷಯನಲ್ಲ; ಅವನಿಗೆ ವ್ಯಾಪ್ತಲಿಂಗವಿಲ್ಲವಾದ್ದರಿಂದ ಅನುಮಾನಕ್ಕೂ ವಿಷಯನಲ್ಲ; ಭಾಗರಹಿತನಾದ್ದರಿಂದ ಪರಮಾತ್ಮನನ್ನು ಯಾವುದಕ್ಕೂ ಹೋಲಿಸಲಾಗುವುದಿಲ್ಲ. ಆದುದರಿಂದ ಉಪಮಾನ ಸಿದ್ಧನಲ್ಲ; ಪರಮಾತ್ಮನು ಹೊರತು ಅನುಪಪದ್ಯಮಾನವಾದ ವಸ್ತುವು ಬೇರೊಂದಿಲ್ಲವಾದ್ದರಿಂದ ಪರಮಾತ್ಮನು ಅರ್ಥಾಪತ್ತಿಯಿಂದಲೂ ಗ್ರಾಹ್ಯನಲ್ಲ; ಪರಮಾತ್ಮನು ಭಾವಮಾತ್ರನು (ಸತ್ತಾಮಾತ್ರನು) ಆಗಿರುವನಾದ್ದರಿಂದ ಮತ್ತು ಅಭಾವಕ್ಕೆ ಸಾಕ್ಷಿಯಾಗಿರುವನಾದ್ದರಿಂದ ಅಭಾವಕ್ಕೂ ಗೋಚರನಲ್ಲ; ಪರಮಾತ್ಮನಿಗೆ ಪ್ರಮಾಣಜನ್ಯವಾದ ಅತಿಶಯವಿಲ್ಲವಾದ್ದರಿಂದ ಶಾಸ್ತ್ರಪ್ರಮಾಣದಿಂದಲೂ ವೇದ್ಯನಲ್ಲ. ಆದುದರಿಂದ ಪರಮಾತ್ಮನು ಅಪ್ರಮೇಯನು. ಪರಮಾತ್ಮನು ಹೀಗೆ ಯಾವ ಪ್ರಮಾಣಕ್ಕೂ ವಿಷಯನಲ್ಲವಾದರೆ, ಅವನು ಶಾಸ್ತ್ರಯೋನಿ ಎಂಬುದು ಹೇಗೆ? ಅದಕ್ಕೆ ಹೀಗೆ ಉತ್ತರ ಹೇಳಬಹುದು: ಪ್ರಕಾಶಸ್ವರೂಪನಾದ ಪರಮಾತ್ಮನು ಪ್ರಮಾಣಾದಿಗಳಿಗೆಲ್ಲ ಸಾಕ್ಷಿಯಾಗಿರುವನಾದ್ದರಿಂದ ಅವುಗಳಿಗೆ (ಪ್ರಮಾಣಗಳಿಗೆ)

ವಿಷಯನಲ್ಲವಾದರೂ, ಪರಮಾತ್ಮನ ಮೇಲೆ ಅಧ್ಯಾರೋಪಿತವಾದ ಅತದ್ರೂಪವನ್ನು ಶಾಸ್ತ್ರಗಳು ಪರಿಹರಿಸುತ್ತವೆ. ಆದುದರಿಂದ ಪರಮಾತ್ಮನು ಶಾಸ್ತ್ರಪ್ರಮಾಣದಿಂದ ವೇದ್ಯನು.

ಅಥವಾ ಪರಮಾತ್ಮನು ಸಾಕ್ಷಿರೂಪನಾದ್ದರಿಂದ ಅಪ್ರಮೇಯನು.

೪೭. ಹೃಷೀಕೇಶಃ— ಇಂದ್ರಿಯಗಳಿಗೆ ಒಡೆಯನಾಗಿರುವವನು.

ಹೃಷೀಕ ಎಂದರೆ ಇಂದ್ರಿಯ; ಹೃಷೀಕೇಶ ಎಂದರೆ ಇಂದ್ರಿಯಗಳಿಗೆಲ್ಲ ಒಡೆಯನಾಗಿ ಕ್ಷೇತ್ರಜ್ಞರೂಪದಿಂದಿರುವ ಪರಮಾತ್ಮನು. ಅಥವಾ ಸೂರ್ಯರೂಪನೂ ಚಂದ್ರರೂಪನೂ ಆಗಿರುವ ಯಾವನಿಗೆ ಜಗತ್ತಿಗೆ ಹಿತವನ್ನು ಮತ್ತು ಆಹ್ಲಾದವನ್ನು ಉಂಟುಮಾಡುವ ಕೇಶಗಳು ಎಂದರೆ ರಶ್ಮಿಗಳು ಇರುವುವೋ ಆ ಭಗವಂತನು ಹೃಷೀಕೇಶನು.

೪೮. ಪದ್ಮನಾಭಃ— ಪದ್ಮನಾಭನು.

ಸರ್ವಜಗತ್ಕಾರಣರೂಪವಾದ ಪದ್ಮವು ವಿಷ್ಣುವಿನ ನಾಭಿಯಲ್ಲಿರುವುದರಿಂದ ವಿಷ್ಣುವಿಗೆ ಪದ್ಮನಾಭ ಎಂದು ಹೆಸರು.

೪೯. ಅಮರಪ್ರಭುಃ—ಅಮರರಿಗೆಲ್ಲ (ದೇವತೆಗಳಿಗೆಲ್ಲ) ಪ್ರಭುವಾಗಿರುವವನು.

೫೦. ವಿಶ್ವಕರ್ಮಾ—ಜಗತ್ತನ್ನು ನಿರ್ಮಾಣಮಾಡಿದವನು.

ಅಥವಾ ಭಗವಂತನು ವಿಶ್ವಕರ್ಮನೆಂದು ಪ್ರಸಿದ್ಧನಾಗಿರುವ ತ್ವಷ್ಟೃವಿಗೆ ಸಮಾನನಾಗಿರುವನಾದ್ದರಿಂದ ಭಗವಂತನಿಗೆ ವಿಶ್ವಕರ್ಮನೆಂದು ಹೆಸರು.

೫೧. ಮನುಃ— ಮನನಮಾಡುವವನು, ವಿಚಾರಮಾಡುವವನು.

'ನಾನ್ಯೋಽತೋಽಸ್ತಿ ಮಂತಾ' 'ಇವನಿಗಿಂದ (ಪರಮಾತ್ಮನಿಗಿಂತ) ಬೇರೆ ಮಂತೃವು (ಮನನಮಾಡುವವನು) ಯಾವನೂ ಇಲ್ಲ' (ಬೃ. ಉ. ೩. ೭. ೨೩).

೫೨. ತ್ವಷ್ಟಾ—ಸಂಹಾರಕಾಲದಲ್ಲಿ ಸರ್ವಭೂತಗಳನ್ನು ಕ್ಷೀಣವಾಗುವಂತೆ ಮಾಡುವವನು.

೫೩. ಸ್ಥವಿಷ್ಠಃ—ಅತಿಶಯವಾಗಿ ಸ್ಥೂಲವಾಗಿರುವವನು.

೫೪. ಸ್ಥವಿರಃ ಧ್ರುವಃ—ಪುರಾತನನು ಮತ್ತು ಸ್ಥಿರವಾಗಿರುವವನು.

ಭಗವಂತನು ಪುರಾತನನಾದ್ದರಿಂದ ಸ್ಥವಿರನು; ಮತ್ತು ಸ್ಥಿರವಾಗಿರುವವನಾದ್ದರಿಂದ ಧ್ರುವನು.

೫೫. ಅಗ್ರಾಹ್ಯಃ — ಕರ್ಮೇಂದ್ರಿಯಗಳಿಂದ ಗ್ರಹಿಸಲ್ಪಡಲು ಅಸಾಧ್ಯನಾಗಿರುವವನು.

'ಯತೋ ವಾಚೋ ನಿವರ್ತಂತೇ ಅಪ್ರಾಪ್ಯ ಮನಸಾ ಸಹ' 'ಯಾವುದರಿಂದ (ಅದನ್ನು) ಹೊಂದದೆ ವಾಕ್ಕುಗಳು ಮನಸ್ಸಿನೊಂದಿಗೆ ಹಿಂದಿರುಗುವುವೋ' (ತೈ. ಉ. ೨. ೯).

೫೬. ಶಾಶ್ವತಃ—ಎಂದೆಂದಿಗೂ ಇರುವವನು, ಸನಾತನನು.

'ಶಾಶ್ವತಂ ಶಿವಮಚ್ಯುತಮ್' (ಭಗವಂತನು) ಶಾಶ್ವತನೂ ಶಿವನೂ ಮತ್ತು ಅಚ್ಯುತನೂ (ಆಗಿರುವನು)' (ನಾ. ಉ. ೧೩, ೩).

೫೭. ಕೃಷ್ಣಃ—ಸಚ್ಚಿದಾನಂದಸ್ವರೂಪನು ಅಥವಾ ಕೃಷ್ಣವರ್ಣವುಳ್ಳವನು.

'ಕೃಷಾಮಿ ಪೃಥಿವೀಂ ಪಾರ್ಥ . . . ತಸ್ಮಾತ್ ಕೃಷ್ಣೋಽಹಮರ್ಜುನ' 'ಎಲೈ ಅರ್ಜುನ, ನಾನು ಕಪ್ಪು ಕಬ್ಬಿಣದ ನೇಗಿಲಿನ ರೂಪವನ್ನು ಧರಿಸಿ ಪೃಥಿವಿಯನ್ನು ಉಳುತ್ತೇನೆ ಮತ್ತು ನನ್ನ ವರ್ಣವು ಕೃಷ್ಣವರ್ಣವು. ಆದುದರಿಂದ ನಾನು ಕೃಷ್ಣನು' (ಮಹಾ. ಶಾಂತಿ, ೩೪೨. ೭೮).

೫೮. ಲೋಹಿತಾಕ್ಷಃ—ಕೆಂಬಣ್ಣದ ಕಣ್ಣುಗಳುಳ್ಳವನು.

೫೯. ಪ್ರತರ್ದನಃ ಪ್ರಲಯಕಾಲದಲ್ಲಿ ಸಕಲಭೂತಗಳನ್ನು ಸಂಹಾರಮಾಡುವವನು.

೬೦. ಪ್ರಭೂತಃ—ಜ್ಞಾನೈಶ್ವರ್ಯಾದಿ ಗುಣಗಳಿಂದ ಕೂಡಿದವನು.

೬೧. ತ್ರಿಕಕುಬ್ಧಾಮ—ಊರ್ಧ್ವದಿಕ್ಕು, ಮಧ್ಯದಿಕ್ಕು ಮತ್ತು ಅಧೋದಿಕ್ಕು—ಈ ಮೂರು ದಿಕ್ಕುಗಳಿಗೂ ನೆಲೆಯಾಗಿರುವವನು.

೬೨. ಪವಿತ್ರಮ್—ಪುನೀತಮಾಡುವ (ಪರಿಶುದ್ಧಮಾಡುವ) ದೇವತೆಯಾಗಿ ಅಥವಾ ಋಷಿಯಾಗಿ ಇರುವವನು.

೬೩. ಮಂಗಲಮ್ ಪರಮ್—ಕಲ್ಯಾಣರೂಪನಾಗಿರುವವನು ಮತ್ತು ಸಮಸ್ತ ಭೂತಗಳಿಗಿಂತ ಉತ್ಕೃಷ್ಟನಾಗಿರುವವನು.

'ಅಶುಭಾನಿ ನಿರಾಚಷ್ಟೇ . . . . ಬ್ರಹ್ಮ ತನ್ಮಂಗಲಂ ವಿದುಃ' 'ಸ್ಮರಣಮಾತ್ರದಿಂದ ಭಗವಂತನು ಮನುಷ್ಯರ ಅಶುಭಗಳನ್ನು ದೂರಮಾಡಿ ಶುಭಸಂತತಿಯನ್ನು ಕೊಡುತ್ತಾನೆ. ಆದುದರಿಂದ ಭಗವಂತನು ಮಂಗಲನೆಂದು ಹೇಳುತ್ತಾರೆ' (ವಿಷ್ಣು.)

೬೪. ಈಶಾನಃ—ಸಕಲಭೂತಗಳನ್ನು ಆಳುವವನು.

೬೫. ಪ್ರಾಣದಃ—ಪ್ರಾಣಗಳನ್ನು ಕೊಡುವನು.

ಅಥವಾ ಪ್ರಾಣಗಳನ್ನು ಚಲಿಸುವಂತೆ ಮಾಡುವವನು ಅಥವಾ ಮೃತ್ಯು ರೂಪದಿಂದ ಪ್ರಾಣಗಳನ್ನು ಹರಣಮಾಡುವವನು ಅಥವಾ ಪ್ರಾಣಗಳನ್ನು ಶುದ್ಧ ಮಾಡುವವನು.

'ಕೋ ಹ್ಯೇವಾನ್ಯಾತ್ ಕಃ ಪ್ರಾಣ್ಯಾತ್' '(ಪರಮಾತ್ಮನಿಲ್ಲದೆ ಹೋದರೆ) ಯಾರು ಉಸಿರಾಡಬಲ್ಲರು? ಯಾರು ಜೀವಿಸಬಲ್ಲರು?' (ತೈ, ಉ. ೨. ೭.)

೬೬. ಪ್ರಾಣಃ—ಉಸಿರಾಡುವವನು (ಕ್ಷೇತ್ರಜ್ಞನು ಅಥವಾ ಪರಮಾತ್ಮನು).

'ಪ್ರಾಣಸ್ಯ ಪ್ರಾಣಂ' 'ಪ್ರಾಣದ ಪ್ರಾಣವಾಗಿರುವವನು ಅಥವಾ ಮುಖ್ಯ ಪ್ರಾಣವಾಗಿರುವವನು' (ಬೃ. ಉ. ೪. ೪. ೧೮).

೬೭. ಜ್ಯೇಷ್ಠಃ—ಸಮಸ್ತ ಭೂತಗಳಿಗಿಂತ ಅತ್ಯಧಿಕವಾಗಿ ಹಿರಿಯ ನಾಗಿರುವವನು ಅಥವಾ ಸರ್ವಕ್ಕೂ ಕಾರಣನಾಗಿರುವವನು.

೬೮. ಶ್ರೇಷ್ಠಃ—ಶ್ಲಾಘ್ಯತಮನು, ಸರ್ವಾತಿಶಯನು.

೬೯. ಪ್ರಜಾಪತಿಃ—ಸಮಸ್ತ ಪ್ರಜೆಗಳಿಗೆ ಒಡೆಯನಾಗಿರುವವನು.

೭೦. ಹಿರಣ್ಯಗರ್ಭಃ— ಹಿರಣ್ಯಗರ್ಭನು,

ಹಿರಣ್ಮಯವಾದ ಅಂಡದೊಳಗೆ ಇರುವವನಾದ್ದರಿಂದ ಬ್ರಹ್ಮನಿಗೆ ಹಿರಣ್ಯ ಗರ್ಭನೆಂದು ಹೆಸರು. ಭಗವಂತನು ಬ್ರಹ್ಮನ ಆತ್ಮನಾಗಿರುವವನಾದ್ದರಿಂದ ಅವನೂ ಹಿರಣ್ಯಗರ್ಭನೆಂದು ಕರೆಯಲ್ಪಡುತ್ತಾನೆ.

೭೧. ಭೂಗರ್ಭಃ— ಭೂಮಿಯನ್ನು ತನ್ನ ಗರ್ಭದಲ್ಲಿ ಧರಿಸಿರು ವವನು.

೭೨. ಮಾಧವಃ—ಶ್ರೀಗೆ ಎಂದರೆ ಲಕ್ಷ್ಮೀದೇವಿಗೆ ಪತಿಯಾಗಿರು ವವನು.

ಅಥವಾ ಭಗವಂತನು ಮಧುವಿದ್ಯೆಯಿಂದ ತಿಳಿಯಲ್ಪಡುವವನಾದ್ದರಿಂದ ಮಾಧವನೆಂದು ಕರೆಯಲ್ಪಡುತ್ತಾನೆ.

೭೩. ಮಧುಸೂದನಃ—ಮಧು ಎಂಬ ಅಸುರನನ್ನು ಕೊಂದವನು.

'ಕರ್ಣಮಿಶ್ರೋದ್ಭವಂ ಚಾಪಿ... ಋಷಯಶ್ಚ ಜನಾರ್ದನಮ್' 'ಪುರುಷೋ ತ್ತಮನು ಬ್ರಹ್ಮನ ಮಾತನ್ನು ಗೌರವಿಸಿ ಕರ್ಣಮಿಶ್ರನ ಮಗನಾದ ಮಧು ಎಂಬ ಅಸುರನನ್ನು ಕೊಂದನು. ಆದುದರಿಂದಲೇ, ದೇವತೆಗಳು, ದಾನವರು ಮತ್ತು ಮಾನವರು ಜನಾರ್ದನನನ್ನು ಮಧುಸೂದನ ಎಂದು ಕರೆಯುತ್ತಾರೆ'. (ಮಹಾ. ಭೀಷ್ಮ. ೬೭. ೧೪-೧೬).

೭೪. **ಈಶ್ವರಃ**—ಸರ್ವಶಕ್ತಿಸಂಪನ್ನನು.

೭೫. **ವಿಕ್ರಮೀ**—ಶೌರ್ಯದಿಂದ ಕೂಡಿರುವವನು.

೭೬. **ಧನ್ವೀ**—ಧನುಸ್ಸನ್ನು ಧರಿಸಿದವನು.

'ರಾಮಃ ಶಸ್ತ್ರಭೃತಾಮಹಮ್' 'ಶಸ್ತ್ರಧಾರಿಗಳಲ್ಲಿ ನಾನು ಶ್ರೀರಾಮನು.' (ಗೀತಾ. ೧೦. ೩೧).

೭೭. **ಮೇಧಾವಿ**—ಅನೇಕ ಗ್ರಂಥಗಳನ್ನು ಧಾರಣಮಾಡುವ ಸಾಮರ್ಥ್ಯವುಳ್ಳವನು.

೭೮. **ವಿಕ್ರಮಃ**— ಹೆಜ್ಜೆಗಳಿಂದ ಜಗತ್ತನ್ನು ಅಳೆದವನು.

ಅಥವಾ ಗರುಡಪಕ್ಷಿಯ ದ್ವಾರಾ ಪ್ರಯಾಣಮಾಡುವವನು.

೭೯. **ಕ್ರಮಃ**— ನಡೆಯುವವನು.

ಚಲಿಸುವವನು ಅಥವಾ ಚಲನೆಗೆ ಕಾರಣನಾಗಿರುವವನು.

೮೦. **ಅನುತ್ತಮಃ**—ತನಗಿಂತ ಉತ್ತಮರಾದವರು ಯಾರೂ ಇಲ್ಲದವನು.

'ಯಸ್ಮಾತ್ ಪರಂ ನಾಪರಮಸ್ತಿ ಕಿಂಚಿತ್' 'ಯಾವನಿಗಿಂತ (ಪರಮಾತ್ಮನಿಗಿಂತ) ಶ್ರೇಷ್ಠವಾದುದು ಯಾವುದೂ ಇಲ್ಲವೋ' (ನಾ. ಉ. ೧೨. ೧೩). 'ನ ತ್ವತ್ಸಮೋಽಸ್ತ್ಯಭ್ಯಧಿಕಃ ಕುತೋಽನ್ಯಃ' 'ನಿನಗೆ ಸಮಾನನಾದವನು ಯಾವನೂ ಇಲ್ಲ. ಹೀಗಿರುವಾಗ ನಿನಗಿಂತ ಶ್ರೇಷ್ಠನಾದವನು ಅನ್ಯನು ಎಲ್ಲಿರುವನು?' (ಗೀತಾ. ೧೧. ೪೩).

೮೧. **ದುರಾಧರ್ಷಃ**—ದೈತ್ಯಾದಿಗಳಿಂದ ಆಕ್ರಮಿಸಲ್ಪಡಲು ಅಸಾಧ್ಯನಾಗಿರುವವನು.

೮೨. **ಕೃತಜ್ಞಃ**—ಪ್ರಾಣಿಗಳು ಮಾಡುವ ಪುಣ್ಯಾಪುಣ್ಯರೂಪವಾದ ಕರ್ಮಗಳನ್ನು ತಿಳಿಯುವವನು.

ಅಥವಾ ಭಕ್ತಿಯಿಂದ ಪತ್ರಪುಷ್ಪಾದಿ ಅಲ್ಪವಸ್ತುಗಳನ್ನು ಸಮರ್ಪಿಸುವವರಿಗೂ ಮೋಕ್ಷವನ್ನು ಕೊಡುವವನು.

೮೩. **ಕೃತಿಃ**— ಪುರುಷಪ್ರಯತ್ನಕ್ಕೆ ಆಧಾರನಾಗಿರುವವನು.

ಪುರುಷರು ಮಾಡುವ ಪ್ರಯತ್ನಕ್ಕೆ ಅಥವಾ ಕ್ರಿಯೆಗೆ ಕೃತಿ ಎಂದು ಹೇಳುತ್ತಾರೆ. ಭಗವಂತನು ಸರ್ವಾತ್ಮಕನಾದ್ದರಿಂದ ಅಥವಾ ಪುರುಷಪ್ರಯತ್ನಕ್ಕೆ ಮತ್ತು ಪುರುಷ ಕ್ರಿಯೆಗೆ ಆಧಾರನಾಗಿರುವವನಾದ್ದರಿಂದ ಅವನಿಗೂ ಕೃತಿ ಎಂದು ಹೆಸರು;

೮೪. **ಆತ್ಮವಾನ್**—ತನ್ನ ಮಹಿಮೆಯಲ್ಲಿ ಪ್ರತಿಷ್ಠಿತನಾಗಿರುವವನು.

'ಸ ಭಗವಃ ಕಸ್ಮಿನ್ ಪ್ರತಿಷ್ಠಿತ ಇತಿ ಸ್ವೇ ಮಹಿಮ್ನಿ' 'ಭಗವಂತನು ಯಾವುದರಲ್ಲಿ ಪ್ರತಿಷ್ಠಿತನಾಗಿದ್ದಾನೆ? ತನ್ನ ಮಹಿಮೆಯಲ್ಲಿಯೇ ಪ್ರತಿಷ್ಠಿತನಾಗಿದ್ದಾನೆ.' (ಛಾ. ಉ. ೭. ೨೪. ೧).

೮೫. **ಸುರೇಶಃ**—ದೇವತೆಗಳಿಗೆಲ್ಲ ಪ್ರಭುವಾಗಿರುವವನು.

ಅಥವಾ ಶುಭವನ್ನುಂಟುಮಾಡುವವರಿಗೆಲ್ಲ ಒಡೆಯನಾಗಿರುವವನು.

೮೬. **ಶರಣಮ್**—ದುಃಖಿಗಳ ದುಃಖವನ್ನು ಹೋಗಲಾಡಿಸುವವನು.

೮೭. **ಶರ್ಮ**—ಪರಮಾನಂದಸ್ವರೂಪನು.

೮೮. **ವಿಶ್ವರೇತಾಃ**—ಜಗತ್ತಿಗೆ ಕಾರಣನಾಗಿರುವವನು.

೮೯. **ಪ್ರಜಾಭವಃ**—ತನ್ನ ಸಾನ್ನಿಧ್ಯದಿಂದ ಸರ್ವಪ್ರಜೆಗಳು ಉದ್ಭವಿಸುವಂತೆ ಮಾಡುವವನು.

೯೦. **ಅಹಃ**—ಪ್ರಕಾಶರೂಪನು.

೯೧. **ಸಂವತ್ಸರಃ**—ಸಂವತ್ಸರನು.

ಕಾಲರೂಪದಿಂದ ವಿಷ್ಣುವು ಸಂವತ್ಸರನೆಂದು ಕರೆಯಲ್ಪಡುತ್ತಾನೆ.

೯೨. **ವ್ಯಾಲಃ**—ಸರ್ಪದಂತೆ ಹಿಡಿಯಲು ಅಸಾಧ್ಯವಾಗಿರುವವನು.'

ಸರ್ಪವನ್ನು ಹಿಡಿಯಲು ಅಶಕ್ಯವಾಗಿರುವ ಹಾಗೆ ಪರಮಾತ್ಮನನ್ನು ಗ್ರಹಿಸುವುದೂ ಅಶಕ್ಯವು.

೯೩. **ಪ್ರತ್ಯಯಃ**—ಪ್ರಜ್ಞಾಸ್ವರೂಪನಾಗಿರುವವನು.

'ಪ್ರಜ್ಞಾನಂ ಬ್ರಹ್ಮ' 'ಪ್ರಜ್ಞಾನವು ಬ್ರಹ್ಮ' (ಐ. ಉ. ೩. ೩).

೯೪. **ಸರ್ವದರ್ಶನಃ**—ಸರ್ವದರ್ಶನನು.

ಭಗವಂತನು ಸರ್ವಾತ್ಮಕನಾದ್ದರಿಂದ ಸಮಸ್ತ ಕಣ್ಣುಗಳೆಲ್ಲ ಭಗವಂತನವುಗಳಾಗಿರುವುವು. ಆದುದರಿಂದ ಭಗವಂತನು ಸರ್ವದರ್ಶನನು.

'ವಿಶ್ವತಶ್ಚಕ್ಷುಃ' 'ಎಲ್ಲಾ ಕಡೆಗಳಲ್ಲೂ ಕಣ್ಣುಗಳುಳ್ಳವನು.' (ಶ್ವೇ. ಉ. ೩. ೩). 'ವಿಶ್ವಾಕ್ಷಮ್' 'ಅನೇಕ ಕಣ್ಣುಗಳುಳ್ಳವನು.' (ನಾ. ಉ. ೧೩. ೧).

೯೫. **ಅಜಃ**—ಎಂದಿಗೂ ಹುಟ್ಟು ಇಲ್ಲದವನು.

'ನ ಹಿ ಜಾತೋ ನ ಜಾಯೇಽಹಂ . . . ತಸ್ಮಾದಹಮಜಃ ಸ್ಮೃತಃ 'ನಾನು ಹಿಂದೆ ಎಂದೂ ಹುಟ್ಟಲ್ಲ. ಇಂದೂ ಹುಟ್ಟುವುದಿಲ್ಲ ಮತ್ತು ಮುಂದೆ ಎಂದಿಗೂ ಹುಟ್ಟುವವನಲ್ಲ. ನಾನು ಸಕಲ ಭೂತಗಳ ಕ್ಷೇತ್ರಜ್ಞನೂ ಆಗಿರುವನಾದ್ದರಿಂದ ಅಜನೆಂದು ಕರೆಯಲ್ಪಡುತ್ತೇನೆ' (ಮಹಾ ಶಾಂತಿ. ೩೪೨. ೭೪).

೯೬. ಸರ್ವೇಶ್ವರಃ--ಸಮಸ್ತ ಈಶ್ವರರಿಗೂ ಈಶ್ವರನಾಗಿರುವವನು.

೯೭. ಸಿದ್ಧಃ—ನಿತ್ಯಸಿದ್ಧ ಸ್ವರೂಪನು.

೯೮. ಸಿದ್ಧಿಃ—ಸರ್ವವಸ್ತುಗಳಲ್ಲಿ ಸಂವಿದ್ ರೂಪದಿಂದಿರುವವನು.

ಅಥವಾ ನಿರತಿಶಯರೂಪದಿಂದಿರುವವನು; ಅಥವಾ ಫಲರೂಪದಿಂದಿರುವವನು. ಸ್ವರ್ಗಾದಿಗಳು ವಿನಾಶವುಳ್ಳವುಗಳಾದ್ದರಿಂದ ವಾಸ್ತವವಾಗಿ ಫಲಗಳಲ್ಲ.

೯೯. ಸರ್ವಾದಿಃ—ಸಕಲಭೂತಗಳಿಗೆ ಆದಿಕಾರಣನಾಗಿರುವವನು.

೧೦೦. ಅಚ್ಯುತಃ—ಅಚ್ಯುತನು.

ಭಗವಂತನು ತನ್ನ ಸ್ವರೂಪಸಾಮರ್ಥ್ಯದಿಂದ ಹಿಂದೆ ಎಂದೂ ಚ್ಯುತನಾಗಿಲ್ಲ, ಈಗಲೂ ಚ್ಯುತನಾಗುವುದಿಲ್ಲ; ಮತ್ತು ಇನ್ನು ಮುಂದೆಯೂ ಚ್ಯುತನಾಗುವವನಲ್ಲ. ಆದುದರಿಂದ ಅವನು ಅಚ್ಯುತನು.

'ಶಾಶ್ವತಂ ಶಿವಮಚ್ಯುತಮ್' (ಭಗವಂತನು) ಶಾಶ್ವತನು, ಕಲ್ಯಾಣ ಸ್ವರೂಪನು ಮತ್ತು ಅಚ್ಯುತನು' (ನಾ. ಉ. ೧೩. ೩).

೧೦೧. ವೃಷಾಕಪಿಃ—ಧರ್ಮಸ್ವರೂಪನು ಅಥವಾ ವರಾಹರೂಪವನ್ನು ಧರಿಸಿದವನು.

ಧರ್ಮವು ಸರ್ವ ಇಷ್ಟಾರ್ಥಗಳನ್ನು ವರ್ಷಿಸುತ್ತದೆ. ಆದುದರಿಂದ ಅದು ವೃಷ ಎಂದು ಕರೆಯಲ್ಪಡುತ್ತದೆ. ವರಾಹವು ಪೃಥ್ವಿಯನ್ನು ಜಲದಿಂದ ಉದ್ಧರಿಸಿತು; ಆದುದರಿಂದ ಅದು ಕಪಿ ಎಂದು ಹೇಳಲ್ಪಡುತ್ತದೆ. ವಿಷ್ಣುವು ಧರ್ಮಸ್ವರೂಪನೂ ವರಾಹರೂಪವನ್ನು ಧರಿಸಿದವನೂ ಆಗಿರುವನಾದ್ದರಿಂದ ಅವನಿಗೆ ವೃಷಾಕಪಿ ಎಂದು ಹೆಸರು.

೧೦೨. ಅಮೇಯಾತ್ಮಾ—ಅಳೆಯಲಿಕ್ಕೆ ಬಾರದ ಸ್ವರೂಪವುಳ್ಳವನು.

ಭಗವಂತನ ಆತ್ಮವು (ಸ್ವರೂಪವು) ಇಷ್ಟೇ ಎಂದು ಅಳೆಯಲು ಬರುವುದಿಲ್ಲ. ಆದುದರಿಂದ ಭಗವಂತನಿಗೆ ಅಮೇಯಾತ್ಮಾ ಎಂದು ಹೆಸರು.

೧೦೩. ಸರ್ವಯೋಗವಿನಿಸ್ಸೃತಃ— ಸಕಲ ಸಂಬಂಧಗಳಿಂದ ರಹಿತನಾಗಿರುವವನು.

ಅಥವಾ ನಾನಾ ಶಾಸ್ತ್ರಗಳಲ್ಲಿ ಹೇಳಿರುವ ಯೋಗದಿಂದ ದೂರವಿರುವವನು. (ಅಗೋಚರನಾಗಿರುವವನು).

'ಅಸಂಗೋ ಹ್ಯಯಂ ಪುರುಷಃ' ಈ ಪುರುಷನು ನಿಜವಾಗಿ ಸಂಗರಹಿತನು.' (ಬೃ. ಉ. ೪. ೩. ೧೫).

೧೦೪. ವಸುಃ—ವಾಸಸ್ಥಾನವಾಗಿರುವವನು.

ಸಕಲ ಭೂತಗಳು ಭಗವಂತನಲ್ಲಿ ನೆಲಸಿರುವುದಾದ್ದರಿಂದ ಅಥವಾ ಭಗವಂತನು ಸರ್ವಭೂತಗಳಲ್ಲಿ ನೆಲಸಿರುವನಾದ್ದರಿಂದ ಅವನಿಗೆ ವಸು ಎಂದು ಹೆಸರು.

ಅಥವಾ 'ವಸೂನಾಂ ಪಾವಕಶ್ಚಾಸ್ಮಿ' '(ಅಷ್ಟ) ವಸುಗಳಲ್ಲಿ ಪಾವಕ (ಎಂಬ ವಸುವು) ಆಗಿದ್ದೇನೆ' (ಗೀತಾ. ೧೦. ೨೩),

೧೦೫. ವಸುಮನಾಃ—ಪ್ರಶಸ್ತವಾದ ಮನಸ್ಸುಳ್ಳವನು.

ಭಗವಂತನ ಮನಸ್ಸು ರಾಗದ್ವೇಷಾದಿಕ್ಲೇಶಗಳಿಂದ ಮತ್ತು ಮದವೇ ಮೊದಲಾದ ಉಪಕ್ಲೇಶಗಳಿಂದ ಕಲುಷಿತವಾಗಿಲ್ಲವಾದ್ದರಿಂದ ಅದು ಪ್ರಶಸ್ತವಾಗಿರುವುದು.

೧೦೬. ಸತ್ಯಃ—ಸತ್ಯಸ್ವರೂಪನು.

ಅಥವಾ ಭಗವಂತನು ಮೂರ್ತರೂಪನೂ ಅಮೂರ್ತರೂಪನೂ ಆಗಿರುವನಾದ್ದರಿಂದ ಅವನಿಗೆ ಸತ್ಯ ಎಂದು ಹೆಸರು. ಅಥವಾ ಸತ್ಪುರುಷರಲ್ಲಿ ಸಾಧುಸ್ವಭಾವವಾಗಿರುವವನು.

'ಸತ್ಯಂ ಜ್ಞಾನಮನಂತಂ ಬ್ರಹ್ಮ' 'ಬ್ರಹ್ಮವು ಸತ್ಯವೂ ಜ್ಞಾನವೂ ಅನಂತವೂ (ಆಗಿರುವುದು)' (ತೈ. ಉ. ೨. ೧. ೧).

೧೦೭. ಸಮಾತ್ಮಾ—ರಾಗದ್ವೇಷಾದಿಗಳಿಂದ ದೂಷಿತವಾಗದೆ ಸಮಭಾವದಿಂದ ಇರುವ ಮನಸ್ಸುಳ್ಳವನು.

ಅಥವಾ ಸಮಸ್ತ ಭೂತಗಳಲ್ಲಿ ಸಮನೂ ಏಕನೂ ಆಗಿರುವ ಆತ್ಮನಾದ್ದರಿಂದ ಭಗವಂತನಿಗೆ ಸಮಾತ್ಮಾ ಎಂದು ಹೆಸರು.

೧೦೮. ಸಮ್ಮಿತಃ—ಸಕಲ ಪದಾರ್ಥಗಳಿಂದಲೂ ಪರಿಚ್ಛಿನ್ನನಾಗಿರುವವನು. ಅಥವಾ,

(**ಅಸಮ್ಮಿತಃ**—ಪದಾರ್ಥಗಳಿಂದಲೂ ಅಪರಿಚ್ಛಿನ್ನನಾಗಿರುವವನು ಮತ್ತು ಅಮಿತನಾಗಿರುವವನು.)

೧೦೯. ಸಮಃ ಸದಾಕಾಲವೂ ಸರ್ವವಿಕಾರಗಳಿಂದ ರಹಿತನಾಗಿರುವವನು.

ಅಥವಾ ಲಕ್ಷ್ಮಿಯೊಂದಿಗೆ ಒಡಗೂಡಿರುವವನಾದ್ದರಿಂದ ವಿಷ್ಣುವಿಗೆ ಸಮ ಎಂದು ಹೆಸರು.

೧೧೦. ಅಮೋಘಃ—ಅಮೋಘನು.

ತನ್ನನ್ನು ಪೂಜಿಸುವವರಿಗೆ, ಸ್ತುತಿಸುವವರಿಗೆ ಮತ್ತು ಸ್ಮರಿಸುವವರಿಗೆ ಸರ್ವಫಲಗಳನ್ನು ಕೊಟ್ಟು ಅವರು ಮಾಡುವ ಪೂಜೆ, ಸ್ತುತಿ ಮತ್ತು ಸ್ಮರಣೆ-ಇವುಗಳನ್ನು ವ್ಯರ್ಥಗೊಳಿಸದವನು. ಅಥವಾ ಭಗವಂತನು ಸತ್ಯಸಂಕಲ್ಪನಾದ್ದರಿಂದ ಅಮೋಘನು.

೧೧೧. ಪುಂಡರೀಕಾಕ್ಷಃ—ಹೃದಯಕಮಲದಲ್ಲಿ ಕಾಣಲ್ಪಡುವವನು ಅಥವಾ ಕಮಲದಂತೆ ಆಕಾರವುಳ್ಳ ಕಣ್ಣುಗಳುಳ್ಳವನು.

೧೧೨. ವೃಷಕರ್ಮಾ—ಧರ್ಮರೂಪವಾದ ಕರ್ಮವುಳ್ಳವನು.

೧೧೩. ವೃಷಾಕೃತಿಃ—ಧರ್ಮಸ್ಥಾಪನೆಗೋಸ್ಕರ ಶರೀರವನ್ನು ಧರಿಸುವವನು.

'ಧರ್ಮಸಂಸ್ಥಾಪನಾರ್ಥಾಯ ಸಂಭವಾಮಿ ಯುಗೇ ಯುಗೇ' 'ಧರ್ಮಸ್ಥಾಪನೆಗೋಸ್ಕರ ಪ್ರತಿಯೊಂದು ಯುಗದಲ್ಲೂ ಹುಟ್ಟುತ್ತೇನೆ' (ಗೀತಾ ೪. ೮).

೧೧೪. ರುದ್ರಃ—ಪ್ರಲಯಕಾಲದಲ್ಲಿ ಪ್ರಜೆಗಳನ್ನು ಸಂಹರಿಸಿ ಅವರು ಅಳುವಂತೆ ಮಾಡುವವನು.

ಅಥವಾ ದುಃಖವನ್ನು ಅಥವಾ ದುಃಖದ ಕಾರಣವನ್ನು ದೂರಮಾಡುವವನು.

೧೧೫. ಬಹುಶಿರಾಃ—ಅನೇಕ ಶಿರಸ್ಸುಗಳುಳ್ಳವನು.

'ಸಹಸ್ರಶೀರ್ಷಾ ಪುರುಷಃ' 'ಪುರುಷನು ಸಹಸ್ರ ಶಿರಸ್ಸುಗಳುಳ್ಳವನು' (ಪು. ಸೂ. ೧).

೧೧೬. ಬಭ್ರುಃ—ಲೋಕಗಳನ್ನೆಲ್ಲ ಹೊತ್ತುಕೊಂಡಿರುವವನು.

೧೧೭. ವಿಶ್ವಯೋನಿಃ—ವಿಶ್ವಕ್ಕೆ ಕಾರಣನಾಗಿರುವವನು.

೧೧೮. ಶುಚಿಶ್ರವಾಃ—ಪವಿತ್ರವಾದವುಗಳೂ ಶ್ರವಣಮಾಡತಕ್ಕವುಗಳೂ ಆಗಿರುವ ಹೆಸರುಗಳುಳ್ಳವನು.

೧೧೯. ಅಮೃತಃ—ಮರಣವಿಲ್ಲದವನು.

೧೨೦. ಶಾಶ್ವತಸ್ಥಾಣುಃ—ಶಾಶ್ವತನೂ ಸ್ಥಿರನೂ ಆಗಿರುವವನು.

೧೨೧. ವರಾರೋಹಃ—ಶ್ರೇಷ್ಠವಾದ ತೊಡೆಯುಳ್ಳವನು.

ಅಥವಾ ಭಗವಂತನಲ್ಲಿ ಆರೂಢವಾಗುವುದು ಶ್ರೇಷ್ಠವಾದುದಾದ್ದರಿಂದ ಭಗವಂತನಿಗೆ ವರಾರೋಹ ಎಂದು ಹೆಸರು. ಭಗವಂತನಲ್ಲಿ ಆರೂಢರಾದವರಿಗೆ ಪುನರಾವೃತ್ತಿಯು (ಎಂದರೆ ಸಂಸಾರವನ್ನು ಪುನಃ ಹೊಂದುವುದು) ಇರುವುದಿಲ್ಲ. ಆದುದರಿಂದ ಭಗವಂತನಲ್ಲಿ ಆರೂಢವಾಗುವುದು ಶ್ರೇಷ್ಠವಾದುದು.

'ಯದ್ ಗತ್ವಾ ನ ನಿವರ್ತಂತೇ ತದ್ ಧಾಮ ಪರಮಂ ಮಮ' 'ಯಾವುದನ್ನು ಹೊಂದಿ (ಭಕ್ತರು ಸಂಸಾರಕ್ಕೆ) ಹಿಂದಿರುಗುವುದಿಲ್ಲವೋ ಅದು ನನ್ನ ಶ್ರೇಷ್ಠವಾದ ನೆಲೆಯಾಗಿರುವುದು' (ಗೀತಾ ೧೫. ೬).

೧೨೨. ಮಹಾತಪಾಃ—ಮಹತ್ತಾದ ತಪಸ್ಸುಳ್ಳವನು.

ಸೃಷ್ಟಿವಿಷಯಕವಾದ ಭಗವಂತನ ತಪಸ್ಸು ಎಂದರೆ ಜ್ಞಾನವು ಮಹತ್ತಾದುದು. ಆದುದರಿಂದ ಭಗವಂತನಿಗೆ ಮಹಾತಪ ಎಂದು ಹೆಸರು. ಅಥವಾ

ಭಗವಂತನ ಐಶ್ವರ್ಯರೂಪವಾದ ಅಥವಾ ಪ್ರತಾಪರೂಪವಾದ ತಪಸ್ಸು ಮಹತ್ತಾದುದು. ಆದುದರಿಂದ ಭಗವಂತನಿಗೆ ಮಹಾತಪ ಎಂದು.

'ಯಸ್ಯ ಜ್ಞಾನಮಯಂ ತಪಃ' 'ಯಾವನ (ಭಗವಂತನ) ತಪಸ್ಸು ಜ್ಞಾನಮಯವಾದುದೊ' (ಮುಂ. ಉ. ೧. ೧. ೯).

೧೨೩. ಸರ್ವಗಃ—ಕಾರಣರೂಪದಿಂದ ಸರ್ವತ್ರವೂ ವ್ಯಾಪಿಸಿರುವವನು.

೧೨೪. ಸರ್ವವಿದ್ಭಾನುಃ—ಎಲ್ಲವನ್ನೂ ತಿಳಿದಿರುವವನು ಅಥವಾ ಹೊಂದಿರುವವನು ಮತ್ತು ಪ್ರಕಾಶಮಾನನಾಗಿರುವವನು.

'ತಮೇವ ಭಾಂತಮನುಭಾತಿ ಸರ್ವಮ್' 'ಅವನು (ಪರಮಾತ್ಮನು) ಪ್ರಕಾಶಿಸಲು (ಅವನಿಂದಲೇ) ಎಲ್ಲವೂ ಪ್ರಕಾಶಿಸುವುದು' (ಕ. ಉ. ೨. ೨. ೧೫). 'ಯದಾದಿತ್ಯಗತಂ ತೇಜೋ ಜಗದ್ಭಾಸಯತೇಽಖಿಲಮ್......ತತ್ತೇಜೋ ವಿದ್ಧಿ ಮಾಮಕಮ್' 'ಸೂರ್ಯನಲ್ಲಿರುವ ಯಾವ ತೇಜಸ್ಸು ಅಖಿಲ ಜಗತ್ತನ್ನು ಪ್ರಕಾಶಗೊಳಿಸುತ್ತದೋ...ಆ ತೇಜಸ್ಸು ನನ್ನದೆಂದು ತಿಳಿ' (ಗೀತಾ ೧೫. ೧೨).

೧೨೫. ವಿಷ್ವಕ್ಸೇನಃ—ವಿಷ್ವಕ್ಸೇನನು.

ಯುದ್ಧೋದ್ಯೋಗಮಾತ್ರದಿಂದಲೇ ದೈತ್ಯಸೈನ್ಯವೆಲ್ಲವನ್ನು ಸರ್ವದಿಕ್ಕುಗಳಲ್ಲೂ ಪಲಾಯನಗೈಯುವಂತೆ ಮಾಡುವವನಾದ್ದರಿಂದ ಭಗವಂತನಿಗೆ ವಿಷ್ವಕ್ಸೇನ ಎಂದು ಹೆಸರು.

೧೨೬. ಜನಾರ್ದನಃ—ದುರ್ಜನರನ್ನು ಸಂಹಾರಮಾಡುವವನು.

ಅಥವಾ ನರಕಾದಿಲೋಕಗಳಿಗೆ ಹೋಗುವಂತೆ ಮಾಡುವವನು ಅಥವಾ ಭಗವಂತನು ಅಭ್ಯುದಯನಿಃಶ್ರೇಯಸ್ಸುಗಳ ರೂಪವಾದ ಪುರುಷಾರ್ಥಕ್ಕೋಸ್ಕರ ಜನರಿಂದ ಯಾಚಿಸಲ್ಪಡುತ್ತಾನೆ; ಆದುದರಿಂದ ಅವನಿಗೆ ಜನಾರ್ದನ ಎಂದು ಹೆಸರು.

೧೨೭. ವೇದಃ—ವೇದರೂಪನು,

ಅಥವಾ ಜ್ಞಾನವನ್ನು ಹೊಂದುವಂತೆ ಮಾಡುವವನು.

'ತೇಷಾಮೇವಾನುಕಂಪಾರ್ಥಂ ... ಜ್ಞಾನದೀಪೇನ ಭಾಸ್ವತಾ' 'ನಿತ್ಯಯುಕ್ತರೂ ನನ್ನನ್ನು ಪ್ರೀತಿಯಿಂದ ಭಜಿಸುವವರೂ ಆದ ಭಕ್ತರಿಗೆ ಅನುಕಂಪೆಯನ್ನು ತೋರಿಸಲಿಕ್ಕಾಗಿ ನಾನು ಅವರ ಬುದ್ಧಿಯಲ್ಲಿ ಅವಸ್ಥಿತನಾಗಿ ಪ್ರಕಾಶಿಸುತ್ತಿರುವ ಜ್ಞಾನದೀಪದಿಂದ ಅಜ್ಞಾನದಿಂದ ಹುಟ್ಟಿದ ತಮಸ್ಸನ್ನು ನಾಶಮಾಡುತ್ತೇನೆ' (ಗೀತಾ. ೧೦. ೧೧).

೧೨೮. ವೇದವಿತ್—ವೇದವನ್ನೂ ವೇದಾರ್ಥವನ್ನೂ ಯಥಾವತ್ತಾಗಿ ತಿಳಿದಿರುವವನು.

'ವೇದಾಂತಕೃದ್ ವೇದವಿದೇವ ಚಾಹಮ್' 'ವೇದಾಂತವನ್ನು ಮಾಡಿದವನೂ ವೇದವನ್ನು ತಿಳಿದವನೂ ನಾನೇ' (ಗೀತಾ ೧೫. ೧೫).

೧೨೯. ಅವ್ಯಂಗಃ—ಜ್ಞಾನಾದಿಗಳಿಂದ ಪರಿಪೂರ್ಣನಾಗಿರುವವನು (ಎಂದರೆ ಯಾವ ದೋಷವೂ ಇಲ್ಲದವನು).

ಅಥವಾ ಭಗವಂತನು ವ್ಯಕ್ತಿ ಇಲ್ಲದವನು ಎಂದರೆ ಅವ್ಯಕ್ತನು; ಆದುದರಿಂದ ಅವ್ಯಂಗನು.

'ಅವ್ಯಕ್ತೋಽಯಮ್' 'ಈತನು (ಪರಮಾತ್ಮನು) ಅವ್ಯಕ್ತನು' (ಗೀತಾ ೨.೨೫)

೧೩೦. ವೇದಾಂಗಃ—ವೇದಗಳು ಅಂಗಗಳಾಗಿರುವವನು.

೧೩೧. ವೇದವಿತ್—ವೇದಗಳನ್ನು ಕುರಿತು ವಿಚಾರಮಾಡುವವನು.

೧೩೨. ಕವಿಃ—ಕ್ರಾಂತದರ್ಶಿ ಅಥವಾ ಸರ್ವದೃಕ್; ಎಂದರೆ ಎಲ್ಲವನ್ನೂ ನೋಡುವವನು.

'ನಾನ್ಯೋಽತೋಽಸ್ತಿ ದ್ರಷ್ಟಾ' '(ಪರಮಾತ್ಮನು ಹೊರತು) ಅನ್ಯ ದ್ರಷ್ಟೃವು ಯಾವನೂ ಇಲ್ಲ' (ಬೃ. ಉ. ೩. ೭. ೨೩). 'ಕವಿರ್ಮನೀಷಿ' (ಭಗವಂತನು) 'ಕವಿಯು ಮತ್ತು ಸರ್ವಜ್ಞನು' (ಈ. ಉ. ೮).

೧೩೩. ಲೋಕಾಧ್ಯಕ್ಷಃ—ಲೋಕಗಳಿಗೆಲ್ಲ ಅಧ್ಯಕ್ಷನಾಗಿರುವವನು. ಸಕಲ ಲೋಕಗಳನ್ನು ಪ್ರಧಾನವಾಗಿ ನೋಡಿಕೊಳ್ಳುತ್ತಿರುವವನು.

೧೩೪. ಸುರಾಧ್ಯಕ್ಷಃ—ಲೋಕಪಾಲಾದಿ ದೇವತೆಗಳಿಗೆಲ್ಲ ಅಧ್ಯಕ್ಷನಾಗಿರುವವನು (ಎಂದರೆ ಒಡೆಯನಾಗಿರುವವನು).

೧೩೫. ಧರ್ಮಾಧ್ಯಕ್ಷಃ—ಧರ್ಮಾಧರ್ಮಗಳನ್ನು ಸಾಕ್ಷಾತ್ತಾಗಿ ನೋಡುವವನು.

ಭಗವಂತನು ಉಚಿತವಾದ ಫಲಗಳನ್ನು ಕೊಡುವುದಕ್ಕಾಗಿ ಧರ್ಮಾಧರ್ಮಗಳನ್ನು ಸಾಕ್ಷಾತ್ತಾಗಿ ನೋಡುತ್ತಾನೆ. ಆದುದರಿಂದ ಅವನಿಗೆ ಧರ್ಮಾಧ್ಯಕ್ಷನೆಂದು ಹೆಸರು.

೧೩೬. ಕೃತಾಕೃತಃ—ಕಾರ್ಯನೂ ಕಾರಣನೂ ಆಗಿರುವವನು.

ಭಗವಂತನು ಕಾರ್ಯರೂಪದಿಂದ ಕೃತನೂ ಕಾರಣರೂಪದಿಂದ ಅಕೃತನೂ ಆಗಿರುವನಾದ್ದರಿಂದ ಅವನಿಗೆ ಕೃತಾಕೃತನೆಂದು ಹೆಸರು.

೧೩೭. ಚತುರಾತ್ಮಾ—ನಾಲ್ಕು ವಿಭೂತಿಗಳುಳ್ಳವನು.

ಜಗತ್ಸೃಷ್ಟಿ ಮೊದಲಾದುವುಗಳಿಗೋಸ್ಕರ ಭಗವಂತನಿಗೆ ನಾಲ್ಕು ಪ್ರತ್ಯೇಕ

ವಿಭೂತಿಗಳಿವೆ. ಈ ವಿಭೂತಿಗಳು ಅವನ ನಾಲ್ಕು ಮೂರ್ತಿಗಳು. ಆದುದರಿಂದ ಭಗವಂತನು ಚತುರಾತ್ಮನು.

'ಬ್ರಹ್ಮಾ ದಕ್ಷಾದಯಃ ಕಾಲಃ . . . ಜಗತಃ ಸೃಷ್ಟಿಹೇತವಃ' 'ಬ್ರಹ್ಮ' ದಕ್ಷ ಪ್ರಜಾಪತಿ ಮೊದಲಾದವರು, ಕಾಲ ಮತ್ತು ಸಮಸ್ತ ಜೀವಿಗಳು—ಇವು ಜಗತ್ಸೃಷ್ಟಿಗೆ ಹೇತುವಾಗುವ ಭಗವಂತನ ನಾಲ್ಕು ವಿಭೂತಿಗಳು' (ವಿಷ್ಣು ೧. ೨೨. ೩೧).

೧೩೮. ಚತುರ್ವ್ಯೂಹಃ— ನಾಲ್ಕು ವ್ಯೂಹಗಳುಳ್ಳವನು.

ವಿಷ್ಣುವು ವಾಸುದೇವ, ಸಂಕರ್ಷಣ, ಪ್ರದ್ಯುಮ್ನ ಮತ್ತು ಅನಿರುದ್ಧ ಎಂಬ ನಾಲ್ಕು ವ್ಯೂಹಗಳಾಗಿ (ಭಾಗಗಳಾಗಿ) ಜಗತ್ಸೃಷ್ಟಿ ಮೊದಲಾದುವುಗಳನ್ನು ಮಾಡುತ್ತಾನೆ; ಆದುದರಿಂದ ಚತುರ್ವ್ಯೂಹನು.

೧೩೯. ಚತುರ್ದಂಷ್ಟ್ರಃ—ನಾಲ್ಕು ಕೋರೆಹಲ್ಲುಗಳುಳ್ಳವನು.

ಭಗವಂತನು ನಾಲ್ಕು ಕೋರೆಹಲ್ಲುಗಳುಳ್ಳ ನೃಸಿಂಹರೂಪವನ್ನು ಧರಿಸಿದವನಾದ್ದರಿಂದ ಅವನಿಗೆ ಚತುರ್ದಂಷ್ಟ್ರನೆಂದು ಹೆಸರು.

ಅಥವಾ ಹಲ್ಲುಗಳಂತಿರುವ ನಾಲ್ಕು ಕೊಂಬುಗಳುಳ್ಳವನು.

'ಚತ್ವಾರಿಶೃಂಗಾಃ' '(ಭಗವಂತನಿಗೆ) ನಾಲ್ಕು ಕೊಂಬುಗಳು' (ಋಗ್ವೇದ).

೧೪೦. ಚತುರ್ಭುಜಃ—ನಾಲ್ಕು ಭುಜಗಳುಳ್ಳವನು.

೧೪೧. ಭ್ರಾಜಿಷ್ಣುಃ— ಪ್ರಕಾಶಮಯವಾದ ಸ್ವರೂಪವುಳ್ಳವನು.

೧೪೨. ಭೋಜನಮ್— ಪ್ರಕೃತಿರೂಪನು.

ಪ್ರಕೃತಿಯು ಅಥವಾ ಮಾಯೆಯು ಭೋಜ್ಯರೂಪಳಾದ್ದರಿಂದ ಭೋಜನ ಎಂದು ಕರೆಯಲ್ಪಡುತ್ತಾಳೆ. ಭಗವಂತನು ಪ್ರಕೃತಿರೂಪನಾದ್ದರಿಂದ ಅವನಿಗೂ ಭೋಜನ ಎಂದು ಹೆಸರು.

೧೪೩. ಭೋಕ್ತಾ— ಪುರುಷರೂಪದಿಂದ ಪ್ರಕೃತಿಯನ್ನು ಭೋಗಿಸುವವನು.

೧೪೪. ಸಹಿಷ್ಣುಃ— ಹಿರಣ್ಯಾಕ್ಷ ಮೊದಲಾದವರನ್ನು ಸೋಲಿಸಿದವನು.

೧೪೫. ಜಗದಾದಿಜಃ – ಜಗದಾದಿಯಲ್ಲಿ ಹಿರಣ್ಯಗರ್ಭರೂಪದಿಂದ ಸ್ವಯಂ ಹುಟ್ಟುವವನು.

೧೪೬. ಅನಘಃ —ಪಾಪರಹಿತನು.

೧೪೭. ವಿಜಯಃ—ಜ್ಞಾನ, ವೈರಾಗ್ಯ ಮತ್ತು ಐಶ್ವರ್ಯ ಮೊದಲಾದ ಗುಣಗಳಿಂದ ವಿಶ್ವವನ್ನು ಅತಿಶಯಿಸುವವನು.

೧೪೮. ಜೇತಾ—ಸ್ವಭಾವತಃ ಸಕಲಭೂತಗಳಿಂದ ಅಧಿಕನಾಗಿರುವವನು.

೧೪೯. ವಿಶ್ವಯೋನಿಃ— ವಿಶ್ವವು ತನ್ನ ಯೋನಿಯಾಗಿರುವವನು.

ಅಥವಾ ಭಗವಂತನೇ ವಿಶ್ವವೂ ಯೋನಿಯೂ ಆಗಿರುವನಾದ್ದರಿಂದ ಅವನಿಗೆ ವಿಶ್ವಯೋನಿ ಎಂದು ಹೆಸರು.

೧೫೦. ಪುನರ್ವಸುಃ—ಪುನಃ ಪುನಃ ಶರೀರಗಳಲ್ಲಿ ಕ್ಷೇತ್ರಜ್ಞರೂಪದಿಂದ ವಾಸಮಾಡುವವನು.

೧೫೧. ಉಪೇಂದ್ರಃ—ಇಂದ್ರನಿಗೆ ತಮ್ಮನಾಗಿ ಹುಟ್ಟಿದವನು.

ಅಥವಾ ಇಂದ್ರನು ವಿಷ್ಣುವಿಗಿಂತ ಮೇಲಿನವನಾದ್ದರಿಂದ (ಎಂದರೆ ಹಿರಿಯವನಾದ್ದರಿಂದ) ವಿಷ್ಣುವು ಉಪೇಂದ್ರನು.

೧೫೨. ವಾಮನಃ—ವಾಮನರೂಪದಿಂದ ಬಲಿಯನ್ನು ಯಾಚಿಸಿದವನು.

ಅಥವಾ ಭಗವಂತನು ವಿಶೇಷವಾಗಿ ಭಜಿಸಲ್ಪಡತಕ್ಕವನಾದ್ದರಿಂದ ಅವನಿಗೆ ವಾಮನ ಎಂದು ಹೆಸರು.

'ಮಧ್ಯೇ ವಾಮನಮಾಸೀನಂ ವಿಶ್ವೇದೇವಾ ಉಪಾಸತೇ' '(ಹೃದಯಕಮಲದ) ಮಧ್ಯದಲ್ಲಿ ಆಸೀನನಾಗಿರುವ ವಾಮನನನ್ನು ದೇವತೆಗಳೆಲ್ಲಾ ಉಪಾಸನೆ ಮಾಡುತ್ತಾರೆ' (ಕ. ಉ. ೨. ೩. ೫).

೧೫೩. ಪ್ರಾಂಶುಃ—ಉನ್ನತಾಕಾರವನ್ನು ತಾಳಿದವನು.

ವಾಮನರೂಪವನ್ನು ಧರಿಸಿದ ಭಗವಂತನು ಮೂರು ಲೋಕಗಳನ್ನು ಅಳೆಯುವಾಗ ಉನ್ನತಾಕಾರವನ್ನು ತಾಳಿದನು. ಆದುದರಿಂದ ಅವನಿಗೆ ಪ್ರಾಂಶು ಎಂದು ಹೆಸರು.

'ತೋಯೇ ತು ಪತಿತೇ ಹಸ್ತೇ. . .ಚಂದ್ರಾದಿತ್ಯೌ ಚ ಚಕ್ಷುಷೀ' 'ವಾಮನ ರೂಪವನ್ನು ಧರಿಸಿದ ಭಗವಂತನು ದಾನಜಲವು ಕೈಯಲ್ಲಿ ಬಿದ್ದೊಡನೆಯೇ ಅವಾಮನನಾಗಿ ಸರ್ವದೇವಮಯವಾದ ರೂಪವನ್ನು ತೋರಿಸಿದನು. ಭೂಮಿಯೇ ಅವನ ಚರಣಗಳು, ಆಕಾಶವೇ ಅವನ ಶಿರಸ್ಸು ಮತ್ತು ಸೂರ್ಯಚಂದ್ರರೇ ಅವನ ಕಣ್ಣುಗಳು ಆಗಿದ್ದುವು' (ಹರಿ. ೩. ೭೧. ೪೩-೪೪).

೧೫೪. ಅಮೋಘಃ—ವ್ಯರ್ಥವಾಗದ ಲೀಲೆಗಳುಳ್ಳವನು.

೧೫೫. ಶುಚಿಃ—ತನ್ನನ್ನು ಸ್ಮರಿಸುವವರನ್ನು, ಸ್ತುತಿಸುವವರನ್ನು ಮತ್ತು ಪೂಜಿಸುವವರನ್ನು ಪವಿತ್ರರನ್ನಾಗಿ ಮಾಡುವವನು.

'ಅಸ್ಯ ಸ್ಪರ್ಶಸ್ಯ ಮಹಾನ್ ಶುಚಿಃ' 'ಈತನ (ಭಗವಂತನ) ಸ್ಪರ್ಶವು ಬಹಳ ಪವಿತ್ರವಾದುದು' (ಎಂಬ ಮಂತ್ರವುಂಟು).

೧೫೬. ಊರ್ಜಿತಃ—ಪ್ರಕೃಷ್ಟವಾದ ಬಲವುಳ್ಳವನು.

೧೫೭. ಅತೀಂದ್ರಃ—ಸ್ವಭಾವಸಿದ್ಧವಾದುವುಗಳಾದ ಜ್ಞಾನೈಶ್ವರ್ಯಗಳೇ ಮೊದಲಾದುವುಗಳಿಂದ ಇಂದ್ರನನ್ನು ಮೀರಿದವನು.

೧೫೮. ಸಂಗ್ರಹಃ—ಪ್ರಲಯಕಾಲದಲ್ಲಿ ಎಲ್ಲರನ್ನೂ ಸಂಹಾರ ಮಾಡುವವನು.

೧೫೯. ಸ್ವರ್ಗಃ— ಜಗದ್ರೂಪನು.

ಅಥವಾ ಜಗತ್ತಿಗೆ ಕಾರಣನಾದ್ದರಿಂದ ಭಗವಂತನಿಗೆ ಸರ್ಗ ಎಂದು ಹೆಸರು.

೧೬೦. ಧೃತಾತ್ಮಾ— ಜನ್ಮಾದಿರಹಿತನಾದ್ದರಿಂದ ತನ್ನ ಆತ್ಮವನ್ನು ಏಕರೂಪವಾಗಿ ಧರಿಸಿರುವವನು.

೧೬೧. ನಿಯಮಃ—ಪ್ರಜೆಗಳನ್ನು ತಮ್ಮ ತಮ್ಮ ಅಧಿಕಾರಗಳಲ್ಲಿ ನಿಯಮಿಸುವವನು.

೧೬೨. ಯಮಃ—ಅಂತರ್ಯಾಮಿಯಾಗಿರುವವನು.

೧೬೩. ವೇದ್ಯಃ— ನಿಃಶ್ರೇಯಸ್ಸನ್ನು ಇಚ್ಛಿಸುವವರಿಂದ ತಿಳಿಯಲ್ಪಡಲು ಯೋಗ್ಯನಾಗಿರುವವನು.

೧೬೪. ವೈದ್ಯಃ—ಸಕಲ ವಿದ್ಯೆಗಳನ್ನು ಬಲ್ಲವನು.

೧೬೫. ಸದಾಯೋಗಿ — ಯಾವಾಗಲೂ ಆವಿರ್ಭೂತವಾದ (ಪ್ರತ್ಯಕ್ಷವಾದ) ಸ್ವರೂಪವುಳ್ಳವನು.

೧೬೬. ವೀರಹಾ— ಧರ್ಮವನ್ನು ರಕ್ಷಿಸುವುದಕ್ಕೋಸ್ಕರ ವೀರರಾದ ಅಸುರರನ್ನು ಕೊಲ್ಲುವವನು.

೧೬೭. ಮಾಧವಃ—ವಿದ್ಯೆಗೆ ಸ್ವಾಮಿಯಾಗಿರುವವನು.

'ಮಾ ವಿದ್ಯಾ ಚ ಹರೇಃ ಪ್ರೋಕ್ತಾ....ಧವಃ ಸ್ವಾಮಿತಿ ಶಬ್ದಿತಃ' 'ಭಗವದ್ ವಿದ್ಯೆಗೆ ಮಾ ಎಂದು ಹೇಳುತ್ತಾರೆ. ಧವ ಎಂದರೆ ಒಡೆಯ. ಎಲೈ ಭಗವಂತನೇ, ನೀನು ಭಗವದ್-ವಿದ್ಯೆಗೆ ಒಡೆಯನಾದ್ದರಿಂದ ನಿನಗೆ ಮಾಧವ ಎಂದು ಹೆಸರು.' (ಹರಿ. ೩. ೮೮. ೪೯).

೧೬೮. ಮಧುಃ— ಅತಿಶಯವಾದ ಪ್ರೇಮವನ್ನುಂಟುಮಾಡುವವನು.

ಹೇಗೆ ಜೇನು ಅಪಾರವಾದ ಪ್ರೀತಿಯನ್ನುಂಟುಮಾಡುವುದೋ ಹಾಗೆಯೇ ಭಗವಂತನು ಕೂಡ ಅತಿಶಯವಾದ ಪ್ರೇಮವನ್ನುಂಟುಮಾಡುವವನಾದ್ದರಿಂದ ಅವನಿಗೆ ಮಧು ಎಂದು ಹೆಸರು.

೧೬೯. ಅತೀಂದ್ರಿಯಃ—ಇಂದ್ರಿಯಗಳಿಗೆ ಅತೀತನಾಗಿರುವವನು.

ಭಗವಂತನು ಶಬ್ದಾದಿರಹಿತನಾದ್ದರಿಂದ ಇಂದ್ರಿಯಗಳಿಗೆ ವಿಷಯನಲ್ಲ; ಆದುದರಿಂದ ಅವನು ಅತೀಂದ್ರಿಯನು.

'ಅಶಬ್ದಮಸ್ಪರ್ಶಮ್' '(ಭಗವಂತನು) ಶಬ್ದರಹಿತನು ಸ್ಪರ್ಶರಹಿತನು' (ಕ. ಉ. ೧. ३. ೧೫).

೧೭೦. ಮಹಾಮಾಯಃ—ಮಾಯಾವಿಗಳನ್ನೂ ಮಾಯೆಗೆ ಒಳಪಡಿಸುವವನು.

'ಮಮ ಮಾಯಾ ದುರತ್ಯಯಾ' 'ನನ್ನ ಮಾಯೆಯನ್ನು ದಾಟಲು ಕಷ್ಟಸಾಧ್ಯವು' (ಗೀತಾ ೭. ೧೪).

೧೭೧. ಮಹೋತ್ಸಾಹಃ—ಜಗತ್ತಿನ ಸೃಷ್ಟಿ-ಸ್ಥಿತಿ-ಲಯ ಕಾರ್ಯಗಳಲ್ಲಿ ಉದ್ಯುಕ್ತನಾಗಿರುವವನು.

೧೭೨. ಮಹಾಬಲಃ—ಬಲಿಷ್ಠರಿಗಿಂತ ಅಧಿಕವಾದ ಬಲವುಳ್ಳವನು.

೧೭೩. ಮಹಾಬುದ್ಧಿಃ—ಬುದ್ಧಿವಂತರಿಗಿಂತಲೂ ಅಧಿಕವಾದ ಬುದ್ಧಿಯುಳ್ಳವನು.

೧೭೪. ಮಹಾವೀರ್ಯಃ—ಮಹತ್ತಿನ (ಸೃಷ್ಟಿಯ) ಉತ್ಪತ್ತಿಗೆ ಕಾರಣವಾದ ಅವಿದ್ಯಾರೂಪವಾದ ವೀರ್ಯವುಳ್ಳವನು.

೧೭೫. ಮಹಾಶಕ್ತಿಃ—ಅಪರಿಮಿತವಾದ ಸಾಮರ್ಥ್ಯವುಳ್ಳವನು.

೧೭೬. ಮಹಾದ್ಯುತಿಃ—ಒಳಗೂ ಹೊರಗೂ ಅತಿಶಯವಾದ ತೇಜಸ್ಸುಳ್ಳವನು.

'ಸ್ವಯಂ ಜ್ಯೋತಿಃ ಭವತಿ' '(ಭಗವಂತನು) ಸ್ವಯಂ ಜ್ಯೋತಿಯು ಆಗಿರುತ್ತಾನೆ' (ಬೃ. ಉ. ೪. ३. ೯). 'ಜ್ಯೋತಿಷಾಂ ಜ್ಯೋತಿಃ' '(ಭಗವಂತನು) ಜ್ಯೋತಿಗಳ ಜ್ಯೋತಿಯು' (ಬೃ. ಉ. ೪. ೪. ೧೬).

೧೭೭. ಅನಿರ್ದೇಶ್ಯವಪುಃ—ಅನಿರ್ದೇಶ್ಯವಾದ ಶರೀರವುಳ್ಳವನು.

ಬ್ರಹ್ಮವು ಸ್ವಸಂವೇದ್ಯವಾದ್ದರಿಂದ ಅದನ್ನು ಇದು ಅದು ಎಂದು ಬೇರೆಯವರಿಗೆ ನಿರ್ದೇಶಿಸಲು ಸಾಧ್ಯವಿಲ್ಲ. ಹೀಗೆ ನಿರ್ದೇಶಿಸಲು ಬಾರದ ಶರೀರವುಳ್ಳದ್ದಾದ್ದರಿಂದ ಬ್ರಹ್ಮವು ಅನಿರ್ದೇಶ್ಯವಪು ಎಂದು ಕರೆಯಲ್ಪಡುತ್ತದೆ.

೧೭೮. ಶ್ರೀಮಾನ್—ಸಕಲೈಶ್ವರ್ಯರೂಪವಾದ ಶ್ರೀಯಿಂದ ಒಡಗೂಡಿದವನು.

೧೭೯. ಅಮೇಯಾತ್ಮಾ—ಸಕಲಪ್ರಾಣಿಗಳಿಂದಲೂ ಅಳೆಯಲಾಗದ ಬುದ್ಧಿಯುಳ್ಳವನು.

೧೮೦. ಮಹಾದ್ರಿಧೃಕ್—ಗೋಸಂರಕ್ಷಣೆಗೋಸ್ಕರ ಗೋವರ್ಧನಪರ್ವತವನ್ನೂ ಅಮೃತಮಥನಕಾಲದಲ್ಲಿ ಮಂದರಮಹಾಪರ್ವತವನ್ನೂ ಎತ್ತಿಹಿಡಿದವನು.

೧೮೧. ಮಹೇಷ್ವಾಸಃ—ಬಹಳ ದೊಡ್ಡದಾದ ಧನುಸ್ಸುಳ್ಳವನು.

೧೮೨. ಮಹೀಭರ್ತಾ—ಪ್ರಳಯಕಾಲದಲ್ಲಿ ಜಲರಾಶಿಯೊಳಗೆ ಮುಳುಗಿಹೋದ ಭೂದೇವಿಯನ್ನು (ಪೃಥ್ವಿಯನ್ನು) ಎತ್ತಿಹಿಡಿದವನು.

೧೮೩. ಶ್ರೀನಿವಾಸಃ—ಶ್ರೀನಿವಾಸನು.

ಅನಪಾಯಿನಿಯಾದ ಲಕ್ಷ್ಮಿಯು ವಿಷ್ಣುವಿನ ವಕ್ಷಸ್ಥಳದಲ್ಲಿ ವಾಸಿಸುತ್ತಿರುವಳಾದ್ದರಿಂದ ವಿಷ್ಣುವಿಗೆ ಶ್ರೀನಿವಾಸ ಎಂದು ಹೆಸರು.

೧೮೪. ಸತಾಂ ಗತಿಃ—ವೈದಿಕರಾದ ಸತ್ಪುರುಷರಿಗೆ ಪುರುಷಾರ್ಥಗಳನ್ನು ಸಾಧಿಸಲು ಹೇತುವಾಗಿರುವವನು.

೧೮೫. ಅನಿರುದ್ಧಃ— ತನ್ನ ಅವತಾರಗಳಲ್ಲಿ ಯಾರಿಂದಲೂ ನಿರೋಧಿಸಲ್ಪಡದೆ ಇರುವವನು.

೧೮೬. ಸುರಾನಂದಃ—ದೇವತೆಗಳನ್ನು ಆನಂದಗೊಳಿಸುವವನು.

೧೮೭. ಗೋವಿಂದಃ— ಗೋವಿಂದನು.

'ನಷ್ಟಂ ವೈ ಧರಣೀಂ...ದೇವೈರ್ವಾಗ್ಭಿರಭಿಷ್ಟುತಃ' ಪೂರ್ವಕಾಲದಲ್ಲಿ ಗುಹೆಯನ್ನು ಸೇರಿ ನಷ್ಟಳಾದ ಭೂಮಿಯನ್ನು ನಾನು (ವಿಷ್ಣುವು) ಪಡೆದೆನು. ಆದುದರಿಂದ ನನ್ನನ್ನು ದೇವತೆಗಳೂ ವಾಕ್ಕುಗಳೂ ಗೋವಿಂದ ಎಂದು ಸ್ತುತಿಸಿದರು.' (ಮಹಾ. ಶಾಂತಿ. ೩೪೨. ೭೦). 'ಅಹಂ ಕಿಲೇಂದ್ರೋ ದೇವಾನಾಂ...ಸ್ತೋಷ್ಯಂತಿ ಭುವಿಶಾಶ್ವತಮ್' 'ನಾನು ದೇವತೆಗಳಿಗೆ ಇಂದ್ರನು, ನೀನು (ಕೃಷ್ಣನು) ಗೋವುಗಳಿಗೆ ಇಂದ್ರನು. ಆದುದರಿಂದ ಭೂಲೋಕದಲ್ಲಿ ಜನರೆಲ್ಲರೂ ನಿನ್ನನ್ನು ಯಾವಾಗಲೂ ಗೋವಿಂದ ಎಂದು ಸ್ತುತಿಸುವರು' (ಹರಿ. ೨. ೧೯. ೪೫). 'ಗೌರೇಷಾ ತು ಯತೋ ವಾಣೀ. . . ಮುನಿಭಿಃ ಕಥ್ಯತೇ ಭವಾನ್' 'ಗೋ' ಎಂದರೆ ವಾಣೀ ಎಲೈ ದೇವನೆ, ನೀನು ವಾಣಿಯನ್ನು ಪಡೆಯುವಂತೆ ಮಾಡುವವನಾದ್ದರಿಂದ ಮುನಿಗಳಿಂದ ಗೋವಿಂದ ಎಂದು ಕರೆಯಲ್ಪಡುತ್ತೀಯೆ.'

೧೮೮. ಗೋವಿಂದಾಂಪತಿಃ—ಗೋವಿಂದರಿಗೆ ಸ್ವಾಮಿಯಾಗಿರುವವನು.

ಗೋ ಎಂದರೆ ವಾಣೀ. ವಾಣಿಯನ್ನು ಅರಿತವನು ಗೋವಿಂದನು. ಭಗವಂತನು ಗೋವಿದರಲ್ಲಿ ವಿಶಿಷ್ಟನಾದುದರಿಂದ ಅವರಿಗೆ ಸ್ವಾಮಿಯಾಗಿರುವನು.

೧೮೯. ಮರೀಚಿಃ—ತೇಜಸ್ವಿಗಳಲ್ಲಿ ತೇಜಸ್ಸಾಗಿರುವನು.

'ತೇಜಸ್ತೇಜಸ್ವಿನಾಮಹಮ್' 'ನಾನು ತೇಜಸ್ವಿಗಳಲ್ಲಿ ತೇಜಸ್ಸಾಗಿದ್ದೇನೆ.' (ಗೀತಾ ೧೦. ೩೬).

೧೯೦. ದಮನಃ— ದಮನಮಾಡುವವನು.

ಭಗವಂತನು ತಮ್ಮ ತಮ್ಮ ಅಧಿಕಾರಗಳಿಂದ ಭ್ರಷ್ಟರಾಗುವ ಪ್ರಜೆಗಳನ್ನು ವೈವಸ್ವತ (ಯಮ) ಮೊದಲಾದವರ ರೂಪದಿಂದ ದಮನಮಾಡುತ್ತಾನೆ. ಆದುದರಿಂದ ಅವನಿಗೆ ದಮನ ಎಂದು ಹೆಸರು.

೧೯೧. ಹಂಸಃ—ಸಂಸಾರಭಯವನ್ನು ನಾಶಮಾಡುವವನು.

'ನಾನು ಅವನೇ ಆಗಿದ್ದೇನೆ' ಎಂಬ ತಾದಾತ್ಮ್ಯ ಭಾವನೆಯಿಂದ ತನ್ನನ್ನು ಧ್ಯಾನಿಸುವವರ ಸಂಸಾರಭಯವನ್ನು ಭಗವಂತನು ನಾಶಮಾಡುತ್ತಾನೆ, ಆದುದರಿಂದ ಭಗವಂತನಿಗೆ ಹಂಸ ಎಂದು ಹೆಸರು. ಅಥವಾ ಸಮಸ್ತಶರೀರಗಳಲ್ಲಿ ಹೋಗುವವನಾದ್ದರಿಂದ ಭಗವಂತನಿಗೆ ಹಂಸ ಎಂದು ಹೆಸರು.

೧೯೨. ಸುಪರ್ಣಃ—ಸುಂದರವಾದ ಧರ್ಮಾಧರ್ಮರೂಪವಾದ ರೆಕ್ಕೆಗಳುಳ್ಳವನು.

ಅಥವಾ ಸುಪರ್ಣ ಎಂದರೆ ಸುಂದರವಾದ ರೆಕ್ಕೆಗಳುಳ್ಳ ಗರುಡನು.

'ಸುಪರ್ಣಃ ಪತತಾಮಸ್ಮಿ' 'ಪಕ್ಷಿಗಳಲ್ಲಿ ನಾನು ಗರುಡನು' (ಭಗವದ್ವಚನ).

೧೯೩. ಭುಜಗೋತ್ತಮಃ—ಸರ್ಪಗಳಲ್ಲಿ ಉತ್ತಮನಾಗಿರುವವನು.

ಭುಜದಿಂದ ಚಲಿಸುವವರಲ್ಲಿ ಎಂದರೆ ಸರ್ಪಗಳಲ್ಲಿ ಉತ್ತಮನಾಗಿರುವವನು ಭುಜಗೋತ್ತಮನು. ಶೇಷ, ವಾಸುಕಿ ಮೊದಲಾದ ಉತ್ತಮವರ್ಗದ ಸರ್ಪಗಳು ಭಗವಂತನ ವಿಭೂತಿಗಳಾದ್ದರಿಂದ ಭಗವಂತನಿಗೂ ಭುಜಗೋತ್ತಮ ಎಂದು ಹೆಸರು.

೧೯೪. ಹಿರಣ್ಯನಾಭಃ—ಬಂಗಾರದಂತೆ ಕಲ್ಯಾಣಮಯಿಯಾದ ನಾಭಿಯುಳ್ಳವನು.

ಅಥವಾ ಕಲ್ಯಾಣವನ್ನುಂಟುಮಾಡುವ ರಮಣೀಯವಾದ ನಾಭಿಯುಳ್ಳವನು.

೧೯೫. ಸುತಪಾಃ—(ಬದರಿಕಾಶ್ರಮದಲ್ಲಿ ನರನಾರಾಯಣರೂಪದಿಂದ) ಮಂಗಳಕರವಾದ ತಪಸ್ಸನ್ನು ಆಚರಿಸುವವನು.

೧೯೬. ಪದ್ಮನಾಭಃ—ತಾವರೆಯಂತೆ ಸುಂದರವಾದ ವರ್ತುಲಾಕಾರದ ನಾಭಿಯುಳ್ಳವನು.

ಅಥವಾ ಹೃದಯಕಮಲದ ಮಧ್ಯದಲ್ಲಿ ಪ್ರಕಾಶಿಸುವನು.

೧೯೭. ಪ್ರಜಾಪತಿಃ—ಪ್ರಜೆಗಳೆಲ್ಲರಿಗೂ ಪಿತನಾಗಿರುವವನು.

೧೯೮. ಅಮೃತ್ಯುಃ—ವಿನಾಶವಾಗಲಿ ವಿನಾಶಹೊಂದಲು ಹೇತುವಾಗಲಿ ಇಲ್ಲದವನು.

೧೯೯. ಸರ್ವದೃಕ್—ತನ್ನ ಸ್ವಾಭಾವಿಕಜ್ಞಾನದಿಂದ ಪ್ರಾಣಿಗಳ ಕೃತಾಕೃತಕರ್ಮಗಳೆಲ್ಲವನ್ನೂ ನೋಡುವವನು.

೨೦೦. ಸಿಂಹಃ—ನಾಶಮಾಡುವವನು, ಕೊಲ್ಲುವವನು.

೨೦೧. ಸಂಧಾತಾ—ಪುರುಷರನ್ನು ಅವರವರ ಕರ್ಮಫಲಗಳೊಂದಿಗೆ ಕೂಡಿಸುವವನು.

೨೦೨. ಸಂಧಿಮಾನ್—ಫಲಗಳನ್ನು ಭೋಗಿಸುವವನು.

ಭಗವಂತನೇ ಫಲಗಳನ್ನು ಭೋಗಿಸುವವನಾದ್ದರಿಂದ ಅವನಿಗೆ ಸಂಧಿಮಾನ್ ಎಂದು ಹೆಸರು.

೨೦೩. ಸ್ಥಿರಃ—ಯಾವಾಗಲೂ ಏಕರೂಪವಾಗಿರುವವನು.

೨೦೪. ಅಜಃ—ಹೋಗುವವನು ಅಥವಾ ಬಿಸಾಡುವವನು.

ಭಗವಂತನು ಭಕ್ತರ ಹೃದಯಗಳಲ್ಲಿ ಹೋಗುತ್ತಾನೆ ಮತ್ತು ದುಷ್ಟರನ್ನು ಬಿಸಾಡುತ್ತಾನೆ (ನಾಶಮಾಡುತ್ತಾನೆ).

೨೦೫. ದುರ್ಮರ್ಷಣಃ—ಸೋಲಿಸಲು ಅಸಾಧ್ಯನಾಗಿರುವವನು.

ಭಗವಂತನನ್ನು ತಡೆದುಕೊಳ್ಳಲು ಅಥವಾ ಸೋಲಿಸಲು ದಾನವಾದಿಗಳಿಗೆ ಸಾಧ್ಯವಿಲ್ಲವಾದ್ದರಿಂದ ಭಗವಂತನು ದುರ್ಮರ್ಷಣನು.

೨೦೬. ಶಾಸ್ತಾ—ಶ್ರುತಿ, ಸ್ಮೃತಿ ಮೊದಲಾದುವುಗಳ ಮೂಲಕ ಎಲ್ಲರಿಗೂ ಉಪದೇಶಮಾಡುವವನು, ಅನುಶಾಸನಮಾಡುವವನು.

೨೦೭. ವಿಶ್ರುತಾತ್ಮಾ—ಆತ್ಮನನ್ನು ವಿಶೇಷವಾಗಿ ಅರಿತಿರುವವನು.

ಸತ್ಯಜ್ಞಾನಾದಿರೂಪನಾದ ಆತ್ಮನನ್ನು ಭಗವಂತನು ವಿಶೇಷವಾಗಿ ಅರಿತಿರುವನಾದ್ದರಿಂದ ಭಗವಂತನಿಗೆ ವಿಶ್ರುತಾತ್ಮಾ ಎಂದು ಹೆಸರು.

೨೦೮. ಸುರಾರಿಹಾ—ದೇವತೆಗಳ ಶತ್ರುಗಳನ್ನೆಲ್ಲ ಸಂಹಾರಮಾಡುವವನು.

೨೦೯. ಗುರುಃ—ಸಮಸ್ತ ವಿದ್ಯೆಗಳ ಉಪದೇಶಕನು.

ಅಥವಾ ಸರ್ವರಿಗೂ ಜನಕನಾದ್ದರಿಂದ ಭಗವಂತನು ಗುರುವು.

೨೧೦. ಗುರುತಮಃ—ಬ್ರಹ್ಮಾದಿಗಳಿಗೂ ಬ್ರಹ್ಮವಿದ್ಯೆಯನ್ನು ಪ್ರಧಾನಮಾಡಿದವನು.

'ಯೋ ಬ್ರಹ್ಮಾಣಂ ವಿದಧಾತಿ ಪೂರ್ವಂ ಯೋ ವೈ ವೇದಾಂಶ್ಚ ಪ್ರಹಿಣೋತಿ ತಸ್ಮೈ' 'ಯಾವನು ಮೊದಲು ಬ್ರಹ್ಮನನ್ನು ಸೃಷ್ಟಿಸಿದನೋ ಮತ್ತು ಅವನಿಗೆ ವೇದಗಳನ್ನು ಉಪದೇಶಿಸಿದನೋ' (ಶ್ವೇ. ಉ. ೬. ೧೮).

೨೧೧. ಧಾಮ—ಜ್ಯೋತಿಯಾಗಿರುವವನು.

ಅಥವಾ ಭಗವಂತನು ಸರ್ವಕಾಮಗಳಿಗೆ (ಆಶೆಗಳಿಗೆ) ಆಸ್ಪದವಾಗಿರುವನಾದ್ದರಿಂದ ಅವನಿಗೆ ಧಾಮ ಎಂದು ಹೆಸರು.

'ನಾರಾಯಣಃ ಪರೋ ಜ್ಯೋತಿಃ' 'ನಾರಾಯಣನು ಪರಮಶ್ರೇಷ್ಠ ಜ್ಯೋತಿಯು (ಆಗಿರುವನು)' (ನಾ. ಉ. ೧೩. ೧೧). 'ಪರಮಂ ಬ್ರಹ್ಮಧಾಮ' 'ಬ್ರಹ್ಮವು ಪರಮವಾದ ಧಾಮವು' (ಮುಂ. ಉ. ೩. ೨. ೧).

೨೧೨. ಸತ್ಯಃ—ಸತ್ಯವಚನರೂಪವಾದ ಧರ್ಮವಾಗಿರುವವನು.

ಅಥವಾ ಭಗವಂತನು ಸತ್ಯದ ಸತ್ಯವಾಗಿರುವನಾದ್ದರಿಂದ ಅವನಿಗೆ ಸತ್ಯ ಎಂದು ಹೆಸರು.

'ಪ್ರಾಣಾ ವೈ ಸತ್ಯಂ ತೇಷಾಮೇಷ ಸತ್ಯಮ್' 'ಪ್ರಾಣಗಳೇ ಸತ್ಯವಾಗಿರುವುವು. ಈತನು (ಪರಮಾತ್ಮನು) ಸತ್ಯವಾಗಿರುವ ಪ್ರಾಣಗಳ ಸತ್ಯವಾಗಿರುವನು.' (ಬೃ. ಉ. ೨. ೩. ೬).

೨೧೩. ಸತ್ಯಪರಾಕ್ರಮಃ—ಸತ್ಯವಾಗಿರುವ ಪರಾಕ್ರಮವುಳ್ಳವನು.

೨೧೪. ನಿಮಿಷಃ—ಮುಚ್ಚಿಕೊಂಡಿರುವ ಕಣ್ಣುಗಳುಳ್ಳವನು.

ಯೋಗನಿದ್ರಾರತನಾದ ಭಗವಂತನ ಕಣ್ಣುಗಳು ಮುಚ್ಚಿಕೊಂಡಿರುವುವಾದ್ದರಿಂದ ಅವನಿಗೆ ನಿಮಿಷ ಎಂದು ಹೆಸರು.

೨೧೫. ಅನಿಮಿಷಃ—ನಿತ್ಯಪ್ರಬುದ್ಧಸ್ವರೂಪನು.

ಅಥವಾ ಭಗವಂತನು ಮತ್ಸ್ಯರೂಪದಿಂದ ಅಥವಾ ಆತ್ಮರೂಪದಿಂದ ಯಾವಾಗಲೂ ಜಾಗ್ರತನಾಗಿರುವನಾದ್ದರಿಂದ ಅನಿಮಿಷನು.

೨೧೬. ಸ್ರಗ್ವೀ—ಪಂಚಭೂತತನ್ಮಾತ್ರಗಳಾದ ವೈಜಯಂತೀ ಎಂಬ ಹೆಸರು ಮಾಲೆಯನ್ನು ನಿತ್ಯವೂ ಧರಿಸಿರುವವನು.

೨೧೭. ವಾಚಸ್ಪತಿರುದಾರಧೀಃ—ವಾಚಸ್ಪತಿಯೂ ಉದಾರಧೀಯೂ ಆಗಿರುವವನು.

ಭಗವಂತನು ವಿದ್ಯೆಗೆ ಅಧಿಪತಿಯಾದ್ದರಿಂದ ವಾಚಸ್ಪತಿಯೂ, ಸರ್ವಪದಾರ್ಥಗಳನ್ನು ವಿಷಯೀಕರಿಸಿಕೊಳ್ಳುವ ಬುದ್ಧಿಯುಳ್ಳವನಾದ್ದರಿಂದ ಉದಾರಧೀಯೂ ಆಗಿರುವನು. ಆದುದರಿಂದ ಅವನಿಗೆ ವಾಚಸ್ಪತಿರುದಾರಧೀಃ ಎಂದು ಹೆಸರು.

೨೧೮. ಅಗ್ರಣೀಃ—ಮುಮುಕ್ಷುಗಳನ್ನು ಪ್ರಕೃಷ್ಟವಾದ ಪದವಿಗೆ (ಎಂದರೆ ಮೋಕ್ಷಕ್ಕೆ) ಒಯ್ಯುವವನು.

೨೧೯. ಗ್ರಾಮಣೀಃ—ಭೂತಸಮೂಹಕ್ಕೆಲ್ಲ ನಾಯಕನಾಗಿರುವವನು.

೨೨೦. ಶ್ರೀಮಾನ್—ಸರ್ವಾತಿಶಯವಾದ ಕಾಂತಿಯುಳ್ಳವನು.

೨೨೧. ನ್ಯಾಯಃ—ಪ್ರಮಾಣಗಳಿಗೆಲ್ಲ ಆಶ್ರಯನಾಗಿರುವವನು.

ಪ್ರಮಾಣಗಳನ್ನು ಅನುಗ್ರಹಿಸುವ, ಪ್ರಮಾಣಗಳಲ್ಲಿ ಅಭೇದವನ್ನುಂಟುಮಾಡುವ ತರ್ಕವೇ ನ್ಯಾಯ. ಭಗವಂತನು ಪ್ರಮಾಣಗಳಿಗೆಲ್ಲ ಆಶ್ರಯಭೂತನಾದ್ದರಿಂದ ಅವನಿಗೂ ನ್ಯಾಯ ಎಂದು ಹೆಸರು.

೨೨೨. ನೇತಾ—ಜಗದ್ರೂಪವಾದ ಯಂತ್ರವನ್ನು ನಡೆಸುವವನು.

೨೨೩. ಸಮೀರಣಃ—ವಾಯುರೂಪದಿಂದ ಭೂತಗಳನ್ನು ಕಾರ್ಯಶೀಲರನ್ನಾಗಿ ಮಾಡುವವನು.

೨೨೪. ಸಹಸ್ರಮೂರ್ಧಾ—ಸಹಸ್ರ ಶಿರಸ್ಸುಗಳುಳ್ಳವನು.

೨೨೫. ವಿಶ್ವಾತ್ಮಾ—ವಿಶ್ವದ ಆತ್ಮವಾಗಿರುವವನು.

೨೨೬. ಸಹಸ್ರಾಕ್ಷಃ—ಸಹಸ್ರ ಕಣ್ಣುಗಳುಳ್ಳವನು.

ಅಥವಾ ಸಹಸ್ರ ಇಂದ್ರಿಯಗಳುಳ್ಳವನು.

೨೨೭. ಸಹಸ್ರಪಾತ್—ಸಹಸ್ರಪಾದಗಳುಳ್ಳವನು.

'ಸಹಸ್ರಶೀರ್ಷಾ ಪುರುಷಃ ಸಹಸ್ರಾಕ್ಷಃ ಸಹಸ್ರಪಾತ್' 'ಪುರುಷನು ಸಹಸ್ರಶಿರಸ್ಸುಗಳುಳ್ಳವನು. ಸಹಸ್ರಪಾದಗಳುಳ್ಳವನು' (ಪು. ಸೂ. ೧).

೨೨೮. ಆವರ್ತನಃ- ಸಂಸಾರಚಕ್ರವನ್ನು ತಿರುಗಿಸುತ್ತಿರುವವನು.

ಸಂಸಾರಚಕ್ರವನ್ನು ತಿರುಗಿಸುತ್ತಿರುವುದು ಭಗವಂತನ ಸ್ವಭಾವವಾದ್ದರಿಂದ ಅವನಿಗೆ ಆವರ್ತನ ಎಂದು ಹೆಸರು.

೨೨೯. ನಿವೃತ್ತಾತ್ಮಾ- ಸಂಸಾರಸಂಬಂಧದಿಂದ ನಿವೃತ್ತಿಹೊಂದಿದ ಸ್ವರೂಪವುಳ್ಳವನು.

೨೩೦. ಸಂವೃತಃ- ಆಚ್ಛಾದಿಸುವ (ಮುಚ್ಚುವ) ಸ್ವಭಾವವುಳ್ಳ ಅವಿದ್ಯೆಯಿಂದ ಮುಚ್ಚಲ್ಪಟ್ಟಿರುವವನು.

೨೩೧. **ಸಂಪ್ರಮರ್ದನಃ**—ರುದ್ರ ಮತ್ತು ಕಾಲ ಮೊದಲಾದ ವಿಭೂತಿಗಳಿಂದ ಎಲ್ಲವನ್ನೂ ಸಂಪೂರ್ಣವಾಗಿ ನಾಶಮಾಡುವವನು.

೨೩೨. **ಅಹಃ ಸಂವರ್ತಕಃ**—ಸೂರ್ಯರೂಪದಿಂದ ಸಮ್ಯಕ್ ರೀತಿಯಲ್ಲಿ ದಿನವನ್ನು ಪ್ರವರ್ತಿಸುವವನು.

೨೩೩. **ವಹ್ನಿಃ**—ಹವಿಸ್ಸನ್ನು ವಹಿಸುವವನು, ಹವಿಸ್ಸನ್ನು ದೇವತೆಗಳಿಗೆ ಮುಟ್ಟಿಸುವವನು.

೨೩೪. **ಅನಿಲಃ**—ಒಂದು ನಿವಾಸಸ್ಥಾನವೆಂಬುದು ಇಲ್ಲದವನು,

ಅಥವಾ ಭಗವಂತನು ಅನಾದಿಯಾಗಿರುವನಾದ್ದರಿಂದ ಅನಿಲನು.

೨೩೫. **ಧರಣೀಧರಃ**—ಶೇಷದಿಗ್ಗಜಗಳು ಮೊದಲಾದವರ ರೂಪದಿಂದ ಮತ್ತು ವರಾಹರೂಪದಿಂದ ಪೃಥ್ವಿಯನ್ನು ಎತ್ತಿಹಿಡಿದಿರುವನು.

೨೩೬. **ಸುಪ್ರಸಾಧಃ**—ಉತ್ಕೃಷ್ಟವಾದ ಪ್ರಸಾದವುಳ್ಳವನು.

ತನಗೆ ಉಪಕಾರವನ್ನು ಮಾಡಿದ ಶಿಶುಪಾಲ ಮೊದಲಾದವರಿಗೂ ಮೋಕ್ಷವನ್ನು ಕೊಟ್ಟನಾದ್ದರಿಂದ ಭಗವಂತನು ಉತ್ಕೃಷ್ಟವಾದ ಪ್ರಸಾದವುಳ್ಳವನು. ಆದುದರಿಂದ ಅವನಿಗೆ ಸುಪ್ರಸಾದ ಎಂದು ಹೆಸರು.

೨೩೭. **ಪ್ರಸನ್ನಾತ್ಮಾ**—ರಜಸ್ತಮೋಗುಣಗಳಿಂದ ಕಲುಷಿತವಾಗದ ಅಂತಃಕರಣವುಳ್ಳವನು.

ಅಥವಾ ಕರುಣಾರ್ದ್ರಸ್ವಭಾವವುಳ್ಳವನು ಅಥವಾ ಸರ್ವಾಭೀಷ್ಟಗಳನ್ನು ಹೊಂದಿದವನು.

೨೩೮. **ವಿಶ್ವಧೃಕ್**—ವಿಶ್ವವನ್ನು ಎತ್ತಿಹಿಡಿದಿರುವವನು.

ಅಥವಾ ವಿಶ್ವಕ್ಕೆ ಆಧಾರವಾಗಿರುವವನು.

೨೩೯. **ವಿಶ್ವಭುಕ್**—ವಿಶ್ವವನ್ನು ಭೋಗಿಸುವವನು ಅಥವಾ ಪಾಲಿಸುವವನು.

೨೪೦. **ವಿಭುಃ**—ಹಿರಣ್ಯಗರ್ಭಾದಿರೂಪದಿಂದ ವಿವಿಧನಾಗುವವನು.

'ನಿತ್ಯಂ ವಿಭುಮ್' '(ಭಗವಂತನು) ನಿತ್ಯನು, ವಿಭುವು' (ಮುಂ. ಉ. ೧-೬).

೨೪೧. **ಸತ್ಕರ್ತಾ**—ಪೂಜ್ಯರನ್ನು ಸತ್ಕರಿಸುವವನು, ಪೂಜಿಸುವವನು.

೨೪೨. **ಸತ್ಕೃತಃ**—ಪೂಜಿತರಿಂದಲೂ ಪೂಜಿಸಲ್ಪಡುವವನು.

೨೪೩. **ಸಾಧುಃ**—ನ್ಯಾಯಪ್ರವೃತ್ತಿಯುಳ್ಳವನು.

೨೪೪. ಜಹ್ನುಃ—ಸಂಹಾರಸಮಯದಲ್ಲಿ ಜನರನ್ನೆಲ್ಲ ನಾಶ ಮಾಡುವವನು.

ಅಥವಾ ಅಜ್ಞಾನಿಗಳನ್ನು ತ್ಯಜಿಸಿ ಭಕ್ತರನ್ನು ಪರಮಪದಕ್ಕೆ (ಮೋಕ್ಷಕ್ಕೆ) ಒಯ್ಯುವವನು.

೨೪೫. ನಾರಾಯಣಃ—ನಾರಾಯಣನು.

ನರ ಎಂದರೆ ಆತ್ಮನು. ಅದರಿಂದ ಹುಟ್ಟಿದ ಆಕಾಶಾದಿಕಾರ್ಯಗಳಿಗೆ 'ನಾರ' ಎಂದು ಹೇಳುತ್ತಾರೆ. ಆತ್ಮನು ಅವುಗಳನ್ನು ಕಾರಣರೂಪದಿಂದ ವ್ಯಾಪಿಸಿರುವನಾದ್ದರಿಂದ ಅವು ಆತ್ಮನ ವಾಸಸ್ಥಾನವಾಗಿ ಇವೆ. ಆದುದರಿಂದ ಭಗವಂತನಿಗೆ ನಾರಾಯಣ ಎಂದು ಹೆಸರು. ಅಥವಾ ಭಗವಂತನು ಪ್ರಲಯ ಕಾಲದಲ್ಲಿ ಎಲ್ಲ 'ನಾರ'ಗಳ ಎಂದರೆ ಜೀವರುಗಳ ಆಶ್ರಯಸ್ಥಾನವಾಗುವನಾದ್ದರಿಂದ ನಾರಾಯಣ ಎಂದು ಅವನಿಗೆ ಹೆಸರು.

'ಯಚ್ಚ ಕಿಂಚಿಜ್ಜಗತ್ಸರ್ವಂ · · · ವ್ಯಾಪ್ಯ ನಾರಾಯಣಃ ಸ್ಥಿತಃ' 'ಇಡೀ ಜಗತ್ತನ್ನು—ಜಗತ್ತಿನಲ್ಲಿ ನಾವು ಏನೆಲ್ಲವನ್ನು ನೋಡುತ್ತೇವೋ ಮತ್ತು ಏನೆಲ್ಲವನ್ನು ಕೇಳುತ್ತೇವೋ ಅದೆಲ್ಲವನ್ನು—ಒಳಗೂ ಹೊರಗೂ ನಾರಾಯಣನು ವ್ಯಾಪಿಸಿರುತ್ತಾನೆ' (ನಾ. ಉ. ೧೩, ೫).

೨೪೬. ನರಃ—ಭಕ್ತರನ್ನು ಮೋಕ್ಷಕ್ಕೆ ಒಯ್ಯುವವನು.

'ನಯತೀತಿ ನರಃ ಪ್ರೋಕ್ತಃ ಪರಮಾತ್ಮಾ ಸನಾತನಃ' '(ಭಕ್ತರನ್ನು ಮೋಕ್ಷಕ್ಕೆ) ಒಯ್ಯುವವನಾದ್ದರಿಂದ ಸನಾತನನಾದ ಪರಮಾತ್ಮನು ನರ ಎಂದು ಕರೆಯಲ್ಪಡುತ್ತಾನೆ' (ವ್ಯಾಸವಚನ).

೨೪೭. ಅಸಂಖ್ಯೇಯಃ—ನಾಮರೂಪಭೇದಾದಾದಿಗಳಿಲ್ಲದವನು.

ಭಗವಂತನಲ್ಲಿ ಸಂಖ್ಯೆ ಎಂದರೆ ನಾಮರೂಪಭೇದಾದಿಗಳು ಇಲ್ಲವಾದ್ದರಿಂದ ಅವನು ಅಸಂಖ್ಯೇಯನು.

೨೪೮. ಅಪ್ರಮೇಯಾತ್ಮಾ—ಅಳೆಯಲಾಗದ ಸ್ವರೂಪವುಳ್ಳವನು.

೨೪೯. ವಿಶಿಷ್ಟಃ—ಸರ್ವಾತಿಶಯನಾಗಿರುವವನು.

೨೫೦. ಶಿಷ್ಟಕೃತ್—ಶಾಸನವನ್ನು ಮಾಡುವವನು ಅಥವಾ ಶಿಷ್ಟರನ್ನು (ಸತ್ಪುರುಷರನ್ನು) ಪಾಲಿಸುವವನು.

೨೫೧. ಶುಚಿಃ—ನಿರಂಜನನು.

೨೫೨. ಸಿದ್ಧಾರ್ಥಃ—ಇಷ್ಟಾರ್ಥಗಳನ್ನೆಲ್ಲ ಹೊಂದಿದವನು.

೨೫೩. ಸಿದ್ಧಸಂಕಲ್ಪಃ—ಈಡೇರಿದ ಸಂಕಲ್ಪಗಳುಳ್ಳವನು.

'ಸತ್ಯಸಂಕಲ್ಪಃ' '(ಆತ್ಮನು) ಸತ್ಯಸಂಕಲ್ಪನು' (ಛಾ.ಉ. ೮, ೭, ೧).

೨೫೪. ಸಿದ್ಧಿದಃ—ಕರ್ತೃಗಳಿಗೆ ಅವರವರ ಅಧಿಕಾರಾನುರೂಪವಾದ ಫಲಗಳನ್ನು ಕೊಡುವವನು.

೨೫೫. ಸಿದ್ಧಿಸಾಧನಃ—ಸಿದ್ಧಿಯನ್ನು (ಕ್ರಿಯೆಯನ್ನು) ಸಾಧಿಸುವವನು.

೨೫೬. ವೃಷಾಹೀ—ಧರ್ಮರೂಪವಾದ ಯಜ್ಞಕ್ಕೆ ನೆಲೆಯಾಗಿ ಇರುವವನು.

ವೃಷ ಎಂದರೆ ಧರ್ಮ ಅಥವಾ ಪುಣ್ಯ. ಅದು ಹಗಲಿನಂತೆ (ಅಹ) ಪ್ರಕಾಶಮಾನವಾಗಿರುವುದರಿಂದ ಅಹ ಎಂದು ಕರೆಯಲ್ಪಡುತ್ತದೆ (ವೃಷಾಹ). ದ್ವಾದಶಾಹ (ಹದಿನೆರಡು ದಿನಗಳವರೆಗೆ ನಡೆಯುವ ಯಜ್ಞ) ಮೊದಲಾದ ಯಜ್ಞಗಳನ್ನು ವೃಷಾಹ ಎಂದು ಹೇಳುತ್ತಾರೆ. ವೃಷಾಹವು ಭಗವಂತನಲ್ಲಿ ಅವಸ್ಥಿತವಾಗಿರುವುದರಿಂದ ಭಗವಂತನಿಗೆ ವೃಷಾಹೀ ಎಂದು ಹೆಸರು.

೨೫೭. ವೃಷಭಃ—ಭಕ್ತರಿಗೆ ಇಷ್ಟಾರ್ಥಗಳನ್ನು ವರ್ಷಿಸುವವನು (ಕೊಡುವವನು).

೨೫೮. ವಿಷ್ಣುಃ—ಇಡೀ ವಿಶ್ವವನ್ನು ವ್ಯಾಪಿಸಿರುವವನು.

'ವಿಷ್ಣುರ್ವಿಕ್ರಮಣಾತ್' (ಇಡೀ ವಿಶ್ವವನ್ನು) ಹೆಜ್ಜೆಗಳಿಂದ ಅಳೆದವನಾದ್ದರಿಂದ (ಭಗವಂತನು) ವಿಷ್ಣುವು (ಮಹಾ. ಉದ್ಯೋಗ. ೭೦. ೧೩).

೨೫೯. ವೃಷಪರ್ವಾ– ಧರ್ಮರೂಪವಾದ ಸೋಪಾನಪಂಕ್ತಿಗಳುಳ್ಳವನು.

ಭಗವಂತನ ಪರಂಧಾಮವನ್ನು ಸೇರಲಿಚ್ಛಿಸುವವರಿಗೆ ಧರ್ಮರೂಪವಾದ ಸೋಪಾನ ಪಂಕ್ತಿಗಳು ಹೇಳಲ್ಪಟ್ಟಿವೆ. ಆದುದರಿಂದ ಭಗವಂತನಿಗೆ ವೃಷಪರ್ವಾ ಎಂದು ಹೆಸರು.

೨೬೦. ವೃಷೋದರಃ—ಪ್ರಜೆಗಳನ್ನು ವರ್ಷಿಸುವಂತಿರುವ ಹೊಟ್ಟೆಯುಳ್ಳವನು.

೨೬೧. ವರ್ಧನಃ—ವೃದ್ಧಿಗೊಳಿಸುವವನು.

೨೬೨. ವರ್ಧಮಾನಃ—ಪ್ರಪಂಚರೂಪದಿಂದ ವೃದ್ಧಿಯಾಗುವವನು.

೨೬೩. ವಿವಿಕ್ತಃ—ಪ್ರಪಂಚದಿಂದ ಪ್ರತ್ಯೇಕವಾಗಿರುವವನು.

ಭಗವಂತನು ಈ ಪ್ರಕಾರ (ಎಂದರೆ ಪ್ರಪಂಚರೂಪದಿಂದ) ವೃದ್ಧಿಯಾಗುವವನಾದರೂ (ಪ್ರಪಂಚದಿಂದ) ಪ್ರತ್ಯೇಕವಾಗಿ ಇರುತ್ತಾನೆ. ಆದುದರಿಂದ ಅವನಿಗೆ ವಿವಿಕ್ತ ಎಂದು ಹೆಸರು.

೨೬೪. ಶ್ರುತಿಸಾಗರಃ—ಶ್ರುತಿಗಳಿಗೆ ಆಶ್ರಯಸ್ಥಾನವಾಗಿರುವವನು.

ನೀರು ಸಾಗರವನ್ನು ಆಶ್ರಯಿಸುವಂತೆ ಶ್ರುತಿಗಳೆಲ್ಲ ಭಗವಂತನನ್ನು ಆಶ್ರಯಿಸುತ್ತವೆ; ಆದುದರಿಂದ ಭಗವಂತನು ಶ್ರುತಿಸಾಗರನು.

೨೬೫. ಸುಭುಜಃ—ಜಗದ್ರಕ್ಷಣೆಯನ್ನು ಮಾಡುವ ಸುಂದರವಾದ ಬಾಹುಗಳುಳ್ಳವನು.

೨೬೬. ದುರ್ಧರಃ—ಇತರರಿಂದ ಧಾರಣಮಾಡಲ್ಪಡಲು ಅಸಾಧ್ಯನಾಗಿರುವವನು.

ಇತರರಿಂದ ಎತ್ತಿ ಹಿಡಿಯಲ್ಪಡಲು ಅವಶ್ಯಕವಾಗಿರುವ ಪೃಥಿವ್ಯಾದಿ ಲೋಕಧಾರಕ ವಸ್ತುಗಳಿಗೂ ಆಧಾರವಾಗಿರುವವನು ಮತ್ತು ಇತರ ಯಾರಿಂದಲೂ ಎತ್ತಿ ಹಿಡಿಯಲ್ಪಡಲು ಅಸಾಧ್ಯವಾಗಿರುವವನು. ಅಥವಾ ಧ್ಯಾನಸಮಯದಲ್ಲಿ ಮುಮುಕ್ಷುಗಳಿಂದ ತಮ್ಮ ಹೃದಯದಲ್ಲಿ ಬಹಳ ಕಷ್ಟದಿಂದ ಧಾರಣಮಾಡಲ್ಪಡುವವನು.

೨೬೭. ವಾಗ್ಮೀ—ವಾಗ್ಮಿಯು.

ಭಗವಂತನಿಂದ ಬ್ರಹ್ಮಮಯಿಯಾದ ವಾಕ್ (ವಾಣಿಯು) ಪ್ರಾದುರ್ಭವಿಸಿದಳು. ಆದುದರಿಂದ ಭಗವಂತನಿಗೆ ವಾಗ್ಮೀ ಎಂದು ಹೆಸರು.

೨೬೮. ಮಹೇಂದ್ರಃ—ಈಶ್ವರರಿಗೂ ಈಶ್ವರನಾಗಿರುವವನು.

೨೬೯. ವಸುದಃ—ಧನವನ್ನು ಕೊಡುವವನು.

'ಅನ್ನಾದೋ ವಸುದಾನಃ' (ಭಗವಂತನು) ಅನ್ನವನ್ನು ಭುಂಜಿಸುವವನು. ಮತ್ತು (ಕರ್ಮಫಲವೆಂಬ) ಧನವನ್ನು ಕೊಡುವವನು' (ಬೃ. ಉ. ೪. ೪. ೨೪).

೨೭೦. ವಸುಃ—ಧನವಾಗಿರುವವನು.

ಭಗವಂತನು ಕೊಡುವ ಧನವು ಭಗವಂತನೇ ಆಗಿರುವುದು. ಆದುದರಿಂದ ಭಗವಂತನಿಗೆ ವಸು ಎಂದು ಹೆಸರು. ಅಥವಾ ಭಗವಂತನು ತನ್ನ ಸ್ವರೂಪವನ್ನು ಮಾಯೆಯಿಂದ ಮುಚ್ಚಿಕೊಂಡಿರುವವನಾದ್ದರಿಂದ ಅವನಿಗೆ ವಸು ಎಂದು ಹೆಸರು.

೨೭೧. ನೈಕರೂಪಃ- ಒಂದೇ ರೂಪವಿಲ್ಲದವನು.

ಭಗವಂತನು ಅನೇಕರೂಪಗಳುಳ್ಳವನಾದ್ದರಿಂದ ನೈಕಸ್ವರೂಪನು.

'ಇಂದ್ರೋ ಮಾಯಾಭಿಃ ಪುರುರೂಪ ಈಯತೇ' 'ಇಂದ್ರನು (ಪರಮೇಶ್ವರನು) ಮಾಯೆಗಳ ದ್ವಾರಾ ಅನೇಕ ರೂಪಗಳಿಂದ ಕಾಣುತ್ತಾನೆ' (ಬೃ. ಉ. ೨. ೫. ೯).

೨೭೨. ಬೃಹದ್ರೂಪಃ—ವರಾಹ ಮೊದಲಾದ ಬೃಹದಾಕಾರದ ರೂಪಗಳುಳ್ಳವನು.

೨೭೩. ಶಿಪಿವಿಷ್ಟಃ—ಯಜ್ಞಮೂರ್ತಿಯಾಗಿರುವವನು.

ಭಗವಂತನು ಪಶುಗಳಲ್ಲಿ ಯಜ್ಞರೂಪದಿಂದಿರುವನಾದ್ದರಿಂದ ಶಿಪಿವಿಷ್ಟನು. ಎಂದರೆ ಯಜ್ಞಮೂರ್ತಿಯು. ಅಥವಾ ಶಿಪಿ ಎಂದರೆ ಕಿರಣಗಳು. ಭಗವಂತನು ಕಿರಣಗಳನ್ನು ಪ್ರವೇಶಿಸಿ ಅವುಗಳೊಳಗೆ ಅವಸ್ಥಿತನಾಗಿರುವನಾದ್ದರಿಂದ ಅವನಿಗೆ ಶಿಪಿವಿಷ್ಟ ಎಂದು ಹೆಸರು.

'ಯಜ್ಞೋ ವೈ ವಿಷ್ಣುಃ ಪಶವಃ ಶಿಪಿರ್ಯಜ್ಞ ಏವ ಪಶುಷು ಪ್ರತಿತಿಷ್ಠತಿ' 'ಯಜ್ಞವು ವಿಷ್ಣುವೇ. ಪಶುಗಳು ಶಿಪಿ. ಪಶುಗಳಲ್ಲಿ ಯಜ್ಞವೇ ಅವಸ್ಥಿತವಾಗಿದೆ' (ತೈ. ಸಂ. ೧. ೭. ೪).

೨೭೪. ಪ್ರಕಾಶನಃ—ಸಮಸ್ತ ವಸ್ತುಗಳನ್ನು ಪ್ರಕಾಶಪಡಿಸುವವನು.

೨೭೫. ಓಜಸ್ತೇಜೋದ್ಯುತಿಧರಃ—ಪ್ರಾಣಬಲ, ಶೌರ್ಯಾದಿ ಗುಣಗಳು ಮತ್ತು ಕಾಂತಿ—ಇವುಗಳನ್ನು ಧರಿಸಿರುವವನು.

ಓಜಸ್ಸು ಎಂದರೆ ಪ್ರಾಣಬಲ, ತೇಜಸ್ಸು ಎಂದರೆ ಶೌರ್ಯಾದಿಗುಣಗಳು, ದ್ಯುತಿ ಎಂದರೆ ಕಾಂತಿ. ಭಗವಂತನು ಪ್ರಾಣಬಲ, ಶೌರ್ಯಾದಿಗುಣಗಳು ಮತ್ತು ಕಾಂತಿ—ಇವುಗಳನ್ನು ಧರಿಸುವವನಾದ್ದರಿಂದ ಅವನಿಗೆ ಓಜಸ್ತೇಜೋದ್ಯುತಿಧರ ಎಂದು ಹೆಸರು. ಅಥವಾ ಭಗವಂತನು ಓಜಸ್ಸೂ (ಬಲವೂ) ತೇಜಸ್ಸೂ ಆಗಿರುವನಾದ್ದರಿಂದ ಓಜಸ್ತೇಜನು ಮತ್ತು ಭಗವಂತನು ಜ್ಞಾನರೂಪವಾದ ದ್ಯುತಿಯನ್ನು ಎಂದರೆ ಕಾಂತಿಯನ್ನು ಧರಿಸುವನಾದ್ದರಿಂದ ದ್ಯುತಿಧರನು.

'ಬಲಂ ಬಲವತಾಂ ಚಾಹಮ್' 'ನಾನು ಬಲವಂತರಲ್ಲಿರುವ ಬಲವೂ ಆಗಿದ್ದೇನೆ' (ಗೀತಾ. ೭. ೧೧.) 'ತೇಜಸ್ತೇಜಸ್ವಿನಾಮಹಮ್' 'ನಾನು ತೇಜಸ್ವಿಗಳಲ್ಲಿ ತೇಜಸ್ಸು (ಆಗಿದ್ದೇನೆ)' (ಗೀತಾ. ೭. ೧೦).

೨೭೬. ಪ್ರಕಾಶಾತ್ಮಾ—ಪ್ರಕಾಶರೂಪವಾದ ಆತ್ಮವುಳ್ಳವನು.

೨೭೭. ಪ್ರತಾಪನಃ—ಸೂರ್ಯ ಮೊದಲಾದ ವಿಭೂತಿಗಳಿಂದ ವಿಶ್ವವನ್ನು ತಪಿಸುವವನು.

೨೭೮. ಋದ್ಧಃ—ಧರ್ಮ, ಜ್ಞಾನ ಮತ್ತು ವೈರಾಗ್ಯ ಮೊದಲಾದುವುಗಳಿಂದ ಸಂಪನ್ನನಾಗಿರುವವನು.

೨೭೯. ಸ್ಪಷ್ಟಾಕ್ಷರಃ—ಉದಾತ್ತವಾದ ಓಂಕಾರರೂಪವಾದ ಅಕ್ಷರವುಳ್ಳವನು.

೨೮೦. ಮಂತ್ರಃ—ಋಗ್ಯಜುಸ್ಸಾಮರೂಪವಾದ ಮಂತ್ರವಾಗಿರುವವನು.

ಅಥವಾ ಭಗವಂತನು ಮಂತ್ರಗಳ ಮೂಲಕ ಅರಿಯಲ್ಪಡುವವನಾದ್ದರಿಂದ ಅವನಿಗೆ ಮಂತ್ರ ಎಂದು ಹೆಸರು.

೨೮೧. ಚಂದ್ರಾಂಶುಃ—ಸಂಸಾರತಾಪರೂಪವಾದ ಸೂರ್ಯತಾಪದಿಂದ ಸಂತಪ್ತಗೊಂಡ ಚಿತ್ತವುಳ್ಳವರನ್ನು ಚಂದ್ರನ ಶೀತಳವಾದ ಕಿರಣಗಳಂತೆ ಆಹ್ಲಾದಗೊಳಿಸುವವನು.

೨೮೨. ಭಾಸ್ಕರದ್ಯುತಿಃ—ಸೂರ್ಯನ ತೇಜಸ್ಸಿಗೆ ಸದೃಶನಾಗಿರುವವನು.

೨೮೩. ಅಮೃತಾಂಶೂದ್ಭವಃ— ಚಂದ್ರನ ಉದ್ಭವಸ್ಥಾನವಾಗಿರುವವನು.

ಸಮುದ್ರಮಂಥನಕಾಲದಲ್ಲಿ ಭಗವಂತನಿಂದ ಅಮೃತಾಂಶುವು ಎಂದರೆ ಚಂದ್ರನು ಹುಟ್ಟಿದನು. ಆದುದರಿಂದ ಭಗವಂತನಿಗೆ ಅಮೃತಾಂಶೂದ್ಭವ ಎಂದು ಹೆಸರು.

೨೮೪. ಭಾನುಃ— ಪ್ರಕಾಶಮಾನನಾಗಿರುವವನು.

'ತಮೇವ ಭಾಂತಮನುಭಾತಿ ಸರ್ವಮ್' 'ಪ್ರಕಾಶಿಸುತ್ತಿರುವ ಅವನನ್ನೇ (ಪರಮಾತ್ಮನನ್ನೇ) ಅನುಸರಿಸಿ ಎಲ್ಲವೂ ಪ್ರಕಾಶಿಸುತ್ತಿದೆ.' (ಕ. ಉ. ೨. ೫. ೧೫).

೨೮೫. ಶಶಿಬಿಂದುಃ—ಚಂದ್ರನಂತಿರುವವನು.

ಮೊಲದಂತಿರುವ ಚಿಹ್ನೆಯುಳ್ಳ ಚಂದ್ರನಿಗೆ ಶಶಬಿಂದು ಎಂದು ಹೇಳುತ್ತಾರೆ. ಭಗವಂತನು ಚಂದ್ರನ ಹಾಗೆ ಪ್ರಜೆಗಳನ್ನೆಲ್ಲ ಪೋಷಿಸುವವನಾದ್ದರಿಂದ ಅವನಿಗೂ ಶಶಬಿಂದು ಎಂದು ಹೆಸರು.

'ಪುಷ್ಣಾಮಿ ಚೌಷಧೀಃ ಸರ್ವಾಃ ಸೋಮೋ ಭೂತ್ವಾ ರಸಾತ್ಮಕಃ' 'ರಸಸ್ವರೂಪನಾದ ಚಂದ್ರನಾಗಿ ಎಲ್ಲಾ ವನಸ್ಪತಿಗಳನ್ನು ಪೋಷಿಸುತ್ತೇನೆ' (ಗೀತಾ. ೧೫. ೧೩).

೨೮೬. ಸುರೇಶ್ವರಃ - ದೇವತೆಗಳಿಗೂ ಶುಭದಾಯಕರಿಗೂ ಪ್ರಭುವಾಗಿರುವವನು.

೨೮೭. ಔಷಧಮ್—ಸಂಸಾರವೆಂಬ ರೋಗಕ್ಕೆ ಔಷಧವಾಗಿರುವವನು.

೨೮೮. ಜಗತಃ ಸೇತುಃ—ಸಂಸಾರವನ್ನು ದಾಟಲು ಸೇತುವೆಯಂತಿರುವವನು.

ಅಥವಾ ವರ್ಣಾಶ್ರಮಾದಿಗಳು ಒಂದಕ್ಕೊಂದು ಸೇರದೆ ಪ್ರತ್ಯೇಕವಾಗಿ ಇರಲು ಸೇತುವಿನ ಹಾಗೆ ಕಾರಣನಾಗಿರುವವನು.

೨೮೯. **ಸತ್ಯಧರ್ಮಪರಾಕ್ರಮಃ**—ಸತ್ಯವಾಗಿರುವ ಜ್ಞಾನಾದಿ ಗುಣಗಳೂ ಪರಾಕ್ರಮವೂ ಇರುವವನು.

೨೯೦. **ಭೂತಭವ್ಯಭವನ್ನಾಥಃ**—ಹಿಂದೆ ಹುಟ್ಟಿರುವ, ಇಂದು ಹುಟ್ಟುತ್ತಿರುವ ಮತ್ತು ಮುಂದೆ ಹುಟ್ಟಲಿರುವ ಸಮಸ್ತ ಪ್ರಾಣಿಗಳಿಗೆ ಸ್ವಾಮಿಯಾಗಿರುವವನು.

ಅಥವಾ ಅವುಗಳನ್ನು ಆಳುವವನು; ಅವುಗಳಿಂದ ಯಾಚಿಸಲ್ಪಡುವವನು.

೨೯೧. **ಪವನಃ**—ಪವಿತ್ರಗೊಳಿಸುವವನು.

'ಪವನಃ ಪವತಾಮಸ್ಮಿ' 'ಪವಿತ್ರಗೊಳಿಸುವವರಲ್ಲಿ ನಾನು ವಾಯುವು' (ಗೀತಾ. ೧೦. ೩೧).

೨೯೨. **ಪಾವನಃ**— ಚಲಿಸುವಂತೆ ಮಾಡುವವನು.

'ಭೀಷಾಽಸ್ಮಾದ್ವಾತಃ ಪವತೇ' 'ಈತನ (ಪರಮಾತ್ಮನ) ಭಯದಿಂದ ವಾಯುವು ಬೀಸುತ್ತಾನೆ' (ತೈ.ಉ.೨.೮).

೨೯೩. **ಅನಲಃ**—ಪರ್ಯಾಪ್ತವಿಲ್ಲದವನು.

ಅಥವಾ ಜೀವನು ಪ್ರಾಣಗಳನ್ನು ಅವು ತನ್ನ ಆತ್ಮ ಎಂಬ ಭಾವನೆಯಿಂದ ಸ್ವೀಕರಿಸುತ್ತಾನೆ. ಆದುದರಿಂದ ಜೀವನಿಗೆ ಅನಲ ಎಂದು ಹೆಸರು.

೨೯೪. **ಕಾಮಹಾ**—ಮುಮುಕ್ಷುಗಳಾದ ಭಕ್ತರ ಮತ್ತು ಹಿಂಸಕರ ಕಾಮಗಳನ್ನು (ಬಯಕೆಗಳನ್ನು) ನಾಶಮಾಡುವವನು.

೨೯೫. **ಕಾಮಕೃತ್**—ಸಾತ್ತ್ವಿಕಸ್ವಭಾವವುಳ್ಳವರ ಆಶೆಗಳನ್ನು ಈಡೇರಿಸುವವನು.

ಅಥವಾ ಭಗವಂತನು ಕಾಮನ ಎಂದರೆ ಪ್ರದ್ಯುಮ್ನನ ಜನಕನಾದ್ದರಿಂದ ಅವನಿಗೆ ಕಾಮಕೃತ್ ಎಂದು ಹೆಸರು.

೨೯೬. **ಕಾಂತಃ**—ಅತ್ಯಂತ ರೂಪವಂತನು.

೨೯೭. **ಕಾಮಃ**—ಪುರುಷಾರ್ಥಗಳನ್ನು ಕಾಂಕ್ಷಿಸುವವರಿಂದ ಬಯಸಲ್ಪಡುವವನು.

೨೯೮. **ಕಾಮಪ್ರದಃ**—ಭಕ್ತರಿಗೆ ಇಷ್ಟಾರ್ಥಗಳನ್ನು ಪ್ರಕೃಷ್ಟವಾಗಿ ಕೊಡುವವನು.

೨೯೯. ಪ್ರಭುಃ—ಪ್ರಕೃಷ್ಟಭಾವದಿಂದ (ನಿರತಿಶಯವಾಗಿ) ಇರುವವನು.

೩೦೦. ಯುಗಾದಿಕೃತ್—ಕಾಲಭೇದವನ್ನು ಉಂಟುಮಾಡುವವನು.

ಅಥವಾ ಯುಗಗಳ ಆರಂಭವನ್ನು ಮಾಡುವವನು.

೩೦೧. ಯುಗಾವರ್ತಃ—ಕಾಲರೂಪದಿಂದ ಕೃತ ಮೊದಲಾದ ಯುಗಗಳನ್ನು ತಿರುಗಿಸುತ್ತಿರುವವನು.

೩೦೨. ನೈಕಮಾಯಃ—ಅನೇಕ ಮಾಯೆಗಳನ್ನು ಧರಿಸುವವನು.

ಭಗವಂತನಿಗೆ ಒಂದೇ ಮಾಯೆಯಲ್ಲ; ಅವನು ಅನೇಕ ಮಾಯೆಗಳನ್ನು ಧರಿಸುತ್ತಾನೆ. ಆದುದರಿಂದ ಅವನಿಗೆ ನೈಕಮಾಯ ಎಂದು ಹೆಸರು.

೩೦೩. ಮಹಾಶನಃ—ಪುಷ್ಕಳವಾದ ಭೋಜನವುಳ್ಳವನು.

ಭಗವಂತನು ಕಲ್ಪಾಂತ್ಯದಲ್ಲಿ ಸರ್ವವನ್ನು ಭಕ್ಷಿಸುತ್ತಾನೆ. ಆದುದರಿಂದ ಅವನ ಭೋಜನವು (ಅಶನವು) ಪುಷ್ಕಳವಾದುದು. ಆದುದರಿಂದ ಅವನಿಗೆ ಮಹಾಶನ ಎಂದು ಹೆಸರು.

೩೦೪. ಅದೃಶ್ಯಃ—ಸಮಸ್ತಬುದ್ಧಿ-ಇಂದ್ರಿಯಗಳಿಗೂ ಅಗಮ್ಯನಾಗಿರುವವನು.

೩೦೫. ವ್ಯಕ್ತರೂಪಃ—ಸ್ಥೂಲರೂಪದಿಂದ ವ್ಯಕ್ತವಾದ ಸ್ವರೂಪವುಳ್ಳವನು.

ಅಥವಾ ಭಗವಂತನು ಸ್ವಯಂಪ್ರಕಾಶಮಾನನಾದ್ದರಿಂದ ಯೋಗಿಗಳಿಗೆ ವ್ಯಕ್ತವಾಗುವ ರೂಪವುಳ್ಳವನು. ಆದುದರಿಂದ ಭಗವಂತನಿಗೆ ವ್ಯಕ್ತರೂಪ ಎಂದು ಹೆಸರು.

೩೦೬. ಸಹಸ್ರಜಿತ್—ಯುದ್ಧದಲ್ಲಿ ಸಹಸ್ರಾರು ದೇವಶತ್ರುಗಳನ್ನು ಜಯಿಸುವವನು.

೩೦೭. ಅನಂತಜಿತ್—ಸರ್ವಭೂತಗಳನ್ನೂ ಜಯಿಸುವವನು.

ಭಗವಂತನು ಅನಂತಶಕ್ತಿಯುಳ್ಳವನಾದ್ದರಿಂದ ಯುದ್ಧಕ್ರೀಡಾದಿಗಳಲ್ಲಿ ಸರ್ವತ್ರವೂ ಸರ್ವಭೂತಗಳನ್ನೂ ಜಯಿಸುತ್ತಾನೆ. ಆದುದರಿಂದ ಅವನಿಗೆ ಅನಂತಜಿತ್ ಎಂದು ಹೆಸರು.

೩೦೮. ಇಷ್ಟಃ—ಪರಮಾನಂದಸ್ವರೂಪನಾದ್ದರಿಂದ ಪ್ರಿಯನಾಗಿರುವವನು.

ಅಥವಾ ಭಗವಂತನು ಯಜ್ಞದ ಮೂಲಕ ಪೂಜಿಸಲ್ಪಡುವವನಾದ್ದರಿಂದ ಅವನಿಗೆ ಇಷ್ಟ ಎಂದು ಹೆಸರು.

೩೦೯. ಅವಿಶಿಷ್ಟಃ—ಸರ್ವಾಂತರ್ಯಾಮಿಯಾಗಿರುವವನು.

೩೧೦. ಶಿಷ್ಟೇಷ್ಟಃ—ವಿದ್ವಜ್ಜನರಿಗೆ ಪ್ರಿಯನಾದವನು.

ಅಥವಾ ಶಿಷ್ಟಜನರು ಭಗವಂತನಿಗೆ ಪ್ರಿಯರಾದವರಾದ್ದರಿಂದ ಭಗವಂತನು ಶಿಷ್ಟೇಷ್ಟನು. ಅಥವಾ ಶಿಷ್ಟಪುರುಷರಿಂದ ಭಗವಂತನು ಪೂಜಿಸಲ್ಪಡುತ್ತಾನೆ; ಆದುದರಿಂದ ಅವನಿಗೆ ಶಿಷ್ಟೇಷ್ಟ ಎಂದು ಹೆಸರು.

'ಪ್ರಿಯೋ ಹಿ ಜ್ಞಾನಿನೋಽತ್ಯರ್ಥಮಹಂ ಸ ಚ ಮಮ ಪ್ರಿಯಃ' 'ನಾನು ಜ್ಞಾನಿಗೆ ಅತ್ಯಂತ ಪ್ರಿಯನಾಗಿದ್ದೇನೆ ಮತ್ತು ಅವನು ನನಗೆ ಪ್ರಿಯನಾಗಿದ್ದಾನೆ' (ಗೀತಾ. ೭. ೧೭).

೩೧೧. ಶಿಖಂಡೀ—ನವಿಲಿನ ಗರಿಯನ್ನು ಶಿರೋಭೂಷಣವಾಗಿ ಧರಿಸಿದವನು.

ಗೋಪವೇಷವನ್ನು ಧರಿಸಿ ಗೋಪಾಲನಾಗಿದ್ದಾಗ ಭಗವಂತನು ನವಿಲಿನ ಗರಿಯನ್ನು ಶಿರೋಭೂಷಣವಾಗಿ ಧರಿಸಿದ್ದನು. ಆದುದರಿಂದ ಅವನಿಗೆ ಶಿಖಂಡೀ ಎಂದು ಹೆಸರು.

೩೧೨. ನಹುಷಃ—ಭೂತಗಳನ್ನು ಮಾಯೆಯಿಂದ ಬಂಧಿಸುವವನು.

೩೧೩. ವೃಷಃ—ಧರ್ಮರೂಪನಾಗಿರುವವನು.

ಧರ್ಮವು ಕಾಮಗಳನ್ನು (ಬಯಕೆಗಳನ್ನು) ವರ್ಷಿಸುತ್ತದೆ. ಆದುದರಿಂದ ಅದು ವೃಷ ಎಂದು ಕರೆಯಲ್ಪಡುತ್ತದೆ. ಭಗವಂತನು ಧರ್ಮರೂಪನಾದ್ದರಿಂದ ಅವನಿಗೂ ವೃಷ ಎಂದು ಹೆಸರು.

೩೧೪. ಕ್ರೋಧಹಾ—ಸಾಧುಗಳ ಕೋಪವನ್ನು ನಾಶಮಾಡುವವನು.

೩೧೫. ಕ್ರೋಧಕೃತ್ಕರ್ತಾ—(ಅಸಾಧುಪುರುಷರ ಮೇಲೆ) ಕೋಪವನ್ನು ಮಾಡುವವನು ಮತ್ತು (ಜಗತ್ತನ್ನು) ಉಂಟುಮಾಡುವವನು.

ಅಸಾಧುಪುರುಷರ ಮೇಲೆ ಕೋಪವನ್ನು ಮಾಡುವವನಾದ್ದರಿಂದ ಭಗವಂತನು ಕ್ರೋಧಕೃತ್.

ಯಾವುದು ಮಾಡಲ್ಪಡುತ್ತದೋ ಅದು ಕರ್ಮ ಎಂದೆನಿಸುತ್ತದೆ. ಜಗತ್ತೆಲ್ಲವು ಕರ್ಮ. ಭಗವಂತನು ಅದರ ಕರ್ತೃವೂ; ಆದುದರಿಂದ ಭಗವಂತನು ಕರ್ತಾ.

೩೧೬. ವಿಶ್ವಬಾಹು—ವಿಶ್ವದಲ್ಲಿರುವ ವಸ್ತುಗಳಿಗೆಲ್ಲ ಆಲಂಬನವಾಗಿರುವವನು.

ಅಥವಾ ವಿಶ್ವದಲ್ಲಿರುವ ಬಾಹುಗಳೆಲ್ಲ ಭಗವಂತನವುಗಳಾದ್ದರಿಂದ ಭಗವಂತನು ವಿಶ್ವಬಾಹು ಅಥವಾ ಭಗವಂತನ ಬಾಹುಗಳು ವಿಶ್ವದಲ್ಲೆಲ್ಲ ವ್ಯಾಪಿಸಿವೆಯಾದ್ದರಿಂದ ಭಗವಂತನು ವಿಶ್ವಬಾಹು.

೩೧೭. ಮಹೀಧರಃ—ಪೃಥ್ವಿಯನ್ನು ಧಾರಣಮಾಡಿರುವವನು.

ಅಥವಾ ಪೂಜೆಯನ್ನು ಸ್ವೀಕರಿಸುವವನು.

೩೧೮. ಅಚ್ಯುತಃ—ಷಡ್ಭಾವರಹಿತನು.

'ಶಾಶ್ವತಂ ಶಿವಮಚ್ಯುತಮ್' '(ಭಗವಂತನು) ಶಾಶ್ವತನೂ ಮಂಗಳ ಸ್ವರೂಪನೂ ಅಚ್ಯುತನೂ (ಆಗಿರುವನು).'

೩೧೯. ಪ್ರಥಿತಃ—ಜಗದುತ್ಪತ್ತಿಯೇ ಮೊದಲಾದ ಕರ್ಮಗಳಿಂದ ಪ್ರಸಿದ್ಧನಾಗಿರುವವನು.

೩೨೦. ಪ್ರಾಣಃ—ಸೂತ್ರಾತ್ಮನಾಗಿ ಪ್ರಜೆಗಳನ್ನು ಜೀವಿಸುವಂತೆ ಮಾಡುವವನು.

೩೨೧. ಪ್ರಾಣದಃ—ಸುರಾಸುರರಿಗೆ ಪ್ರಾಣವನ್ನು ಮತ್ತು ಬಲವನ್ನು ಕೊಡುವವನು.

ಅಥವಾ ಸುರಾಸುರರ ಪ್ರಾಣವನ್ನು ಮತ್ತು ಬಲವನ್ನು ನಾಶಮಾಡುವವನು.

೩೨೨. ವಾಸವಾನುಜಃ—ಇಂದ್ರನಿಗೆ ತಮ್ಮನಾಗಿ ಹುಟ್ಟಿದವನು.

(ವಾಮನಾವತಾರದಲ್ಲಿ) ಭಗವಂತನು ಅದಿತಿಯಲ್ಲಿ ಕಶ್ಯಪನಿಂದ ಇಂದ್ರನಿಗೆ ತಮ್ಮನಾಗಿ ಹುಟ್ಟಿದನು. ಆದುದರಿಂದ ಅವನಿಗೆ ವಾಸವಾನುಜ ಎಂದು ಹೆಸರು.

೩೨೩. ಅಪಾಂ ನಿಧಿಃ—ನೀರುಗಳಿಗೆ ಆಶ್ರಯವಾದ ಸಾಗರವಾಗಿರುವವನು.

ಎಲ್ಲಿ ನೀರು ಒಟ್ಟುಗೂಡುವುದೋ ಆ ನೀರಿನ ಸಂಗ್ರಹಕ್ಕೆ (ಸಾಗರಕ್ಕೆ) ಅಪಾಂನಿಧಿ ಎಂದು ಹೇಳುತ್ತಾರೆ. ಸಾಗರವು ಭಗವಂತನ ಒಂದು ವಿಭೂತಿಯಾದ್ದರಿಂದ ಭಗವಂತನಿಗೂ ಅಪಾಂ ನಿಧಿ ಎಂದು ಹೆಸರು.

'ಸರಸಾಮಸ್ಮಿ ಸಾಗರಃ' 'ಸರೋವರಗಳಲ್ಲಿ ನಾನು ಸಾಗರನು' (ಗೀತಾ. ೧೦. ೨೪).

೩೨೪. ಅಧಿಷ್ಠಾನಮ್—ಸಕಲ ಭೂತಗಳಿಗೆ ನೆಲೆಯಾಗಿರುವವನು.

ಭಗವಂತನು ಜಗತ್ತಿನ ಉಪಾದಾನಕಾರಣನಾದ್ದರಿಂದ ಭೂತಗಳೆಲ್ಲ ಅವನಲ್ಲಿ ಅವಸ್ಥಿತವಾಗಿರುವುವು. ಆದುದರಿಂದ ಅವನಿಗೆ ಅಧಿಷ್ಠಾನ ಎಂದು ಹೆಸರು.

'ಮತ್ಸ್ಥಾನಿ ಸರ್ವಭೂತಾನಿ' 'ಸರ್ವಭೂತಗಳು ನನ್ನಲ್ಲಿ ಅವಸ್ಥಿತವಾಗಿರುವುವು' (ಗೀತಾ. ೯. ೪).

೩೨೫. ಅಪ್ರಮತ್ತಃ—ಪ್ರಮಾದವನ್ನು ಮಾಡದಿರುವವನು.

ಭಗವಂತನು ಅಧಿಕಾರಿಗಳಿಗೆ ಅವರವರ ಕರ್ಮಾನುರೂಪವಾದ ಫಲವನ್ನು ಕೊಡುವಾಗ ಪ್ರಮಾದವನ್ನು ಮಾಡುವುದಿಲ್ಲ; ಆದುದರಿಂದ ಅವನಿಗೆ ಅಪ್ರಮತ್ತನೆಂದು ಹೆಸರು.

೩೨೬. ಪ್ರತಿಷ್ಠಿತಃ—ತನ್ನ ಮಹಿಮೆಯಲ್ಲೇ ಪ್ರತಿಷ್ಠಿತನಾಗಿರುವವನು.

'ಸ ಭಗವಃ ಕಸ್ಮಿನ್ ಪ್ರತಿಷ್ಠಿತ ಇತಿ ಸ್ವೇ ಮಹಿಮ್ನಿ' 'ಭಗವಂತನು ಯಾವುದರಲ್ಲಿ ಪ್ರತಿಷ್ಠಿತನಾಗಿದ್ದಾನೆ? ತನ್ನ ಮಹಿಮೆಯಲ್ಲಿ (ಪ್ರತಿಷ್ಠಿತನಾಗಿದ್ದಾನೆ)' (ಛಾ. ಉ. ೭. ೨೪. ೧).

೩೨೭. ಸ್ಕಂಧಃ—ಅಮೃತರೂಪದಿಂದ ಹರಿಯುವವನು ಅಥವಾ ವಾಯುರೂಪದಿಂದ ಇಂಗಿಸುವವನು.

೩೨೮. ಸ್ಕಂದಧರಃ—ಧರ್ಮಪಥಕ್ಕೆ ಆಧಾರವಾಗಿರುವವನು.

೩೨೯. ಧುರ್ಯಃ—ಸಮಸ್ತಭೂತಗಳ ಜನ್ಮಾದಿರೂಪವಾದ ಹೊರೆಯನ್ನು ಹೊತ್ತಿರುವವನು.

೩೩೦. ವರದಃ—ಇಚ್ಛಿಸಿದ ವರಗಳನ್ನು ಕೊಡುವವನು.

ಅಥವಾ ಯಜಮಾನರೂಪದಿಂದ (ಯಜ್ಞಮಾಡುವವನ ರೂಪದಿಂದ) (ಗೋವನ್ನು ದಕ್ಷಿಣೆಯಾಗಿ ಕೊಡುವವನು.

೩೩೧. ವಾಯುವಾಹನಃ—ಆವಹ ಮೊದಲಾದ ಸಪ್ತವಾಯುಗಳನ್ನು ಬೀಸುವಂತೆ ಮಾಡುವವನು.

೩೩೨. ವಾಸುದೇವಃ—ವಾಸುದೇವನು.

ಭಗವಂತನು ಎಲ್ಲ ವಸ್ತುಗಳಲ್ಲಿ ವಾಸಮಾಡುತ್ತಾನೆ. ಎಲ್ಲ ವಸ್ತುಗಳನ್ನು ತನ್ನಲ್ಲಿ ವಾಸಿಸುವಂತೆ ಮಾಡುತ್ತಾನೆ ಮತ್ತು ಎಲ್ಲ ವಸ್ತುಗಳನ್ನು ಆಚ್ಛಾದಿಸುತ್ತಾನೆ. ಆದುದರಿಂದ ಅವನಿಗೆ ವಾಸು ಎಂದು ಹೇಳುತ್ತಾರೆ. ಭಗವಂತನು ಪ್ರಕಾಶಮಾನನಾದ್ದರಿಂದ ಮತ್ತು ಸ್ತುತಿಸಲ್ಪಡುವವನಾದ್ದರಿಂದ ಅವನಿಗೆ ದೇವ ಎಂದು ಹೇಳುತ್ತಾರೆ. ವಾಸುವೂ ದೇವನೂ ಆಗಿರುವನಾದ್ದರಿಂದ ಭಗವಂತನು ವಾಸುದೇವನು.

'ಛಾದಯಾಮಿ ಜಗತ್ ಸರ್ವಂ. . . .ವಾಸುದೇವಸ್ತತಃ ಸ್ಮೃತಃ' 'ನಾನು ಸೂರ್ಯನಂತೆ ಆಗಿ ಕಿರಣಗಳಿಂದ ಇಡೀ ಜಗತ್ತನ್ನು ಆಚ್ಛಾದಿಸುತ್ತೇನೆ ಮತ್ತು ನಾನು

ಸಕಲ ಭೂತಗಳಿಗೂ ವಾಸಸ್ಥಾನವಾಗಿದ್ದೇನೆ. ಆದುದರಿಂದ ನಾನು ವಾಸುದೇವ ನೆಂದು ಕರೆಯಲ್ಪಡುತ್ತೇನೆ' (ಮಹಾ. ಶಾಂತಿ. ೩೪೧. ೩೪).

೩೩೩. ಬೃಹದ್ಭಾನುಃ—ಮಹಾಕಿರಣಗಳುಳ್ಳವನು.

'ಬೃಹಂತೋ ಭಾಸವೋ ಯಸ್ಯ...ಸ ಬೃಹದ್ಭಾನುರುಚ್ಯತೇ' 'ಯಾವನಿಗೆ ಸೂರ್ಯಚಂದ್ರಾದಿಗಳನ್ನು ಪ್ರವೇಶಿಸುವಂತಹ ಮಹಾಕಿರಣಗಳಿವೆಯೋ ಮತ್ತು ಯಾವನು ಈ ಕಿರಣಗಳಿಂದ ಇಡೀ ವಿಶ್ವವನ್ನು ಬೆಳಗಿಸುತ್ತಾನೋ ಆ ಭಗವಂತನು ಬೃಹದ್ಭಾನು ಎಂದು ಹೇಳಲ್ಪಡುತ್ತಾನೆ.

೩೩೪. ಆದಿದೇವಃ—ಆದಿಯೂ ದೇವನೂ ಆಗಿರುವವನು.

ಭಗವಂತನು ಎಲ್ಲಕ್ಕೂ ಕಾರಣನಾಗಿರುವವನೂ ಮತ್ತು ಎಲ್ಲ ವಸ್ತುಗಳನ್ನು ಬೆಳಗಿಸುವದೇ ಮೊದಲಾದ ಗುಣಗಳುಳ್ಳವನೂ ಆಗಿರುವವನಾದ್ದರಿಂದ ಅವನಿಗೆ ಆದಿದೇವ ಎಂದು ಹೆಸರು.

೩೩೫. ಪುರಂದರಃ—ಸುರಶತ್ರುಗಳ ನಗರಗಳನ್ನು ಧ್ವಂಸಮಾಡು ವವನು.

೩೩೬. ಅಶೋಕಃ—ಶೋಕವೇ ಮೊದಲಾದ ಷಡೂರ್ಮಿಗಳಿಂದ (ಆರು ತರದ ಕ್ಲೇಶಗಳಿಂದ) ವರ್ಜಿತನಾಗಿರುವವನು.

೩೩೭. ತಾರಣಃ—ಸಂಸಾರಸಾಗರವನ್ನು ದಾಟಿಸುವವನು.

೩೩೮. ತಾರಃ—ಗರ್ಭವಾಸಃ ಜನ್ಮ ಮುಪ್ಪು ಮತ್ತು ಮರಣ ಇವುಗಳ ರೂಪದಿಂದಿರುವ ಭಯವನ್ನು ದಾಟಿಸುವವನು.

೩೩೯. ಶೂರಃ—ಪರಾಕ್ರಮಶಾಲಿಯಾಗಿರುವವನು.

೩೪೦. ಶೌರಿಃ—ಶೂರರಾಜನ ಕುಲದಲ್ಲಿ ವಸುದೇವನ ಪುತ್ರನಾಗಿ ಹುಟ್ಟಿದವನು.

೩೪೧. ಜನೇಶ್ವರಃ—ಸರ್ವಜಂತುಗಳಿಗೆ ಈಶ್ವರನಾಗಿರುವವನು.

೩೪೨. ಅನುಕೂಲಃ—ಎಲ್ಲರಿಗೂ ಅನುಕೂಲವಾಗಿರುವವನು.

ಭಗವಂತನು ಸರ್ವರ ಆತ್ಮನಾದ್ದರಿಂದ ಸರ್ವರಿಗೂ ಅನುಕೂಲನಾಗಿರುವನು; ಏಕೆಂದರೆ ಯಾರೂ ತಮಗೆ ತಾವೇ ಪ್ರತಿಕೂಲರಾಗುವುದಿಲ್ಲ. ಆದುದರಿಂದ ಭಗವಂತನಿಗೆ ಅನುಕೂಲ ಎಂದು ಹೆಸರು.

೩೪೩. ಶತಾವರ್ತಃ—ಧರ್ಮರಕ್ಷಣೆಗಾಗಿ ನೂರು ಅವತಾರಗಳನ್ನು ಧರಿಸಿದವನು.

ಅಥವಾ ದೇಹದಲ್ಲಿರುವ ನೂರು ನಾಡಿಗಳಲ್ಲಿ ಪ್ರಾಣರೂಪದಿಂದಿರುವವನು.

೩೪೪. ಪದ್ಮೀ—ಕೈಯಲ್ಲಿ ಪದ್ಮವನ್ನು ಹಿಡಿದಿರುವವನು.

೩೪೫. ಪದ್ಮನಿಭೇಕ್ಷಣಃ—ತಾವರೆಯಂತೆ ಕಣ್ಣುಗಳುಳ್ಳವನು.

೩೪೬. ಪದ್ಮನಾಭಃ—ತಾವರೆಯ ಮಧ್ಯದಲ್ಲಿ ಕರ್ಣಿಕೆಯಲ್ಲಿ ಅವಸ್ಥಿತನಾಗಿರುವವನು.

೩೪೭. ಅರವಿಂದಾಕ್ಷಃ—ಪದ್ಮದಂತೆ ಕಣ್ಣುಗಳುಳ್ಳವನು.

೩೪೮. ಪದ್ಮಗರ್ಭ—ಹೃದಯವೆಂಬ ಕಮಲದ ಮಧ್ಯದಲ್ಲಿ ಪೂಜಿಸಲ್ಪಡುವವನು.

೩೪೯. ಶರೀರಭೃತ್—ಶರೀರಗಳಿಗೆ ಆಧಾರವಾಗಿರುವವನು.

ದೇಹಧಾರಿಗಳ ದೇಹಗಳನ್ನು ಅನ್ನರೂಪದಿಂದ ಅಥವಾ ಪ್ರಾಣರೂಪದಿಂದ ಪೋಷಿಸುತ್ತ ಅವುಗಳಿಗೆ ಆಧಾರವಾಗಿರುವವನು.

ಅಥವಾ ತನ್ನ ಮಾಯೆಯಿಂದ ಧರಿಸುವವನು.

೩೫೦. ಮಹದ್ಧಿಃ—ಮಹಾವಿಭೂತಿಗಳುಳ್ಳವನು.

೩೫೧. ಋದ್ಧಃ—ಪ್ರಪಂಚರೂಪದಿಂದ ಇರುವವನು.

೩೫೨. ವೃದ್ಧಾತ್ಮ—ಪುರಾತನವಾದ ಆತ್ಮವುಳ್ಳವನು.

೩೫೩. ಮಹಾಕ್ಷಃ—ವಿಸ್ತಾರವಾದ ಉತ್ಕೃಷ್ಟವಾದ ಎರಡು ಅಥವಾ ಅನೇಕ ನೇತ್ರಗಳುಳ್ಳವನು.

೩೫೪. ಗರುಡಧ್ವಜಃ—ಗರುಡಾಂಕಿತವಾದ ಧ್ವಜವುಳ್ಳವನು.

೩೫೫. ಅತುಲಃ—ಅನುಪಮನು.

'ನ ತಸ್ಯ ಪ್ರತಿಮಾ ಅಸ್ತಿ ಯಸ್ಯ ನಾಮ ಮಹದ್ಯಶಃ' 'ಯಾವನ ಹೆಸರು ಮಹದ್ಯಶನೆಂದು ಇರುವುದೋ ಅವನಿಗೆ (ಆ ಭಗವಂತನಿಗೆ) ಸಮಾನವಾದುದು ಯಾವುದೂ ಇಲ್ಲ' (ಶ್ವೇ. ಉ. ೪. ೧೯). 'ನ ತ್ವತ್ಸಮೋಽಸ್ತ್ಯಭ್ಯಧಿಕಃ ಕುತೋಽನ್ಯಃ' 'ನಿನಗೆ ಸಮಾನನಾದವನು ಯಾವನೂ ಇಲ್ಲ. (ಹೀಗಿರುವಾಗ) ನಿನಗಿಂತ ಅಧಿಕನಾದವನು ಅನ್ಯನೆಲ್ಲಿರುವನು?' (ಗೀತಾ. ೧೧. ೪೩.)

೩೫೬. ಶರಭಃ—ನಾಶವುಳ್ಳವುಗಳಾದ ಶರೀರಗಳಲ್ಲಿ ಪ್ರತ್ಯಗಾತ್ಮನಾಗಿ ಶೋಭಿಸುವವನು.

೩೫೭. ಭೀಮಃ—ಎಲ್ಲರಿಗೂ ಭಯವನ್ನುಂಟುಮಾಡುವವನು (ಎಲ್ಲರಿಂದಲೂ ಹೆದರಲ್ಪಡುವವನು). ಅಥವಾ,

ಅಭೀಮಃ—ಸನ್ಮಾರ್ಗವರ್ತಿಗಳಿಗೆ ಅಭಯವನ್ನುಂಟುಮಾಡುವವನು.

೩೫೮. ಸಮಯಜ್ಞಃ—ಸೃಷ್ಟಿಸ್ಥಿತಿಸಂಹಾರಗಳ ಸಮಯವನ್ನು ತಿಳಿದವನು.

ಅಥವಾ ಸರ್ವಭೂತಗಳನ್ನು ಸಮತ್ವದೃಷ್ಟಿಯಿಂದ ಕಾಣುವುದೇ ಭಗವಂತನ ಶ್ರೇಷ್ಠವಾದ ಪೂಜೆಯಾದರಿಂದ ಭಗವಂತನಿಗೆ ಸಮಯಜ್ಞ ಎಂದು ಹೆಸರು.

'ಸಮತ್ವಮಾರಾಧನಮಚ್ಯುತಸ್ಯ' 'ಎಲ್ಲರಲ್ಲಿ ಸಮತ್ವಭಾವನೆಯನ್ನು (ಇಟ್ಟುಕೊಳ್ಳುವುದೇ) ಅಚ್ಯುತನ ಆರಾಧನೆ' (ವಿಷ್ಣು. ೧.೧೭.೯೦).

೩೫೯. ಹವಿರ್ಹರಿಃ—ಯಜ್ಞಗಳಲ್ಲಿ (ಕೊಡಲ್ಪಡುವ) ಹವಿರ್ಭಾಗವನ್ನು ಸ್ವೀಕರಿಸುವವನು.

'ಅಹಂ ಹಿ ಸರ್ವಯಜ್ಞಾನಾಂ ಭೋಕ್ತಾ ಚ ಪ್ರಭುರೇವ ಚ' 'ನಾನೇ ಸರ್ವ ಯಜ್ಞಗಳ ಭೋಕ್ತೃವು ಮತ್ತು ನಾನೇ ಸರ್ವಯಜ್ಞಗಳಿಗೆ ಪ್ರಭುವು' (ಗೀತಾ. ೯.೨೪).

ಅಥವಾ ಹವಿಸ್ಸಿನ ಮೂಲಕ ಪೂಜಿಸಲ್ಪಡುವನಾದ್ದರಿಂದ ಭಗವಂತನನು ಹವಿಸ್ಸು ಎಂದೆನಿಸುತ್ತಾನೆ ಮತ್ತು ಸ್ಮರಣಮಾತ್ರದಿಂದ ಮನುಷ್ಯರ ಪಾಪವನ್ನು ಅಥವಾ ಸಂಸಾರವನ್ನು ನಾಶಮಾಡುವವನಾದ್ದರಿಂದ ಹರಿಯೆಂದೆನಿಸುತ್ತಾನೆ.

ಅಥವಾ ಭಗವಂತನು ಹರಿದ್ವರ್ಣದವನಾದ್ದರಿಂದ ಹರಿಯು.

೩೬೦. ಸರ್ವಲಕ್ಷಣಲಕ್ಷಣ್ಯಃ—ಉತ್ಕೃಷ್ಟ ಜ್ಞಾನಸ್ವರೂಪನು.

ಸರ್ವಪ್ರಮಾಣಗಳಿಂದ ಯಾವ ಜ್ಞಾನವು ಉಂಟಾಗುವುದೋ ಅದಕ್ಕೆ ಸರ್ವ ಲಕ್ಷಣಲಕ್ಷಣ ಎಂದು ಹೇಳುತ್ತಾರೆ. ಈ ಜ್ಞಾನದಲ್ಲಿ ಅತ್ಯಂತ ಉತ್ಕೃಷ್ಟವಾದ ಜ್ಞಾನವೇ (ಅಂದರೆ ಪರಮಾತ್ಮನೇ) ಸರ್ವಲಕ್ಷಣಲಕ್ಷಣ್ಯವು; ಏಕೆಂದರೆ ಅದು ಪರಮಾರ್ಥಸ್ವರೂಪವಾದುದು. ಆದುದರಿಂದ ಭಗವಂತನಿಗೆ ಸರ್ವಲಕ್ಷಣಲಕ್ಷಣ್ಯ ಎಂದು ಹೆಸರು.

೩೬೧. ಲಕ್ಷ್ಮೀವಾನ್- ಲಕ್ಷ್ಮಿಯಿಂದೊಡಗೂಡಿದವನು.

ಲಕ್ಷ್ಮಿಯು ನಿತ್ಯವೂ ವಿಷ್ಣುವಿನ ವಕ್ಷಃಸ್ಥಳದಲ್ಲಿ ವಾಸಮಾಡುತ್ತಿರುವವಳಾದ್ದರಿಂದ ವಿಷ್ಣುವಿಗೆ ಲಕ್ಷ್ಮೀವಾನ್ ಎಂದು ಹೆಸರು.

೩೬೨. ಸಮಿತಿಂಜಯಃ—ಯುದ್ಧವನ್ನು ಜಯಿಸುವವನು.

೩೬೩. ವಿಕ್ಷರಃ—ನಾಶವಿಲ್ಲದವನು.

೩೬೪. ರೋಹಿತಃ—ಸ್ವೇಚ್ಛೆಯಿಂದ ರೋಹಿತವರ್ಣದ ರೂಪವನ್ನು ಧರಿಸಿದವನು.

ಅಥವಾ ರೋಹಿತ ಎಂಬ ಹೆಸರಿನ ಮತ್ಸ್ಯದ ರೂಪವನ್ನು ಧರಿಸಿದವನು.

೩೬೫. ಮಾರ್ಗಃ—ಮುಮುಕ್ಷುಗಳಿಂದ ಹುಡುಕಲ್ಪಡುವವನು.

ಅಥವಾ ಭಗವಂತನಿಂದ ಪರಮಾನಂದವು ಲಭಿಸುವುದಾದ್ದರಿಂದ ಅವನಿಗೆ ಮಾರ್ಗ ಎಂದು ಹೆಸರು.

೩೬೬. ಹೇತುಃ—ಜಗತ್ತಿನ ಉಪಾದಾನಕಾರಣವೂ ನಿಮಿತ್ತ ಕಾರಣವೂ ಆಗಿರುವವನು.

೩೬೭. ದಾಮೋದರಃ—ದಾಮೋದರನು.

ಇಂದ್ರಿಯನಿಗ್ರಹ ಮೊದಲಾದ ಸಾಧನೆಗಳಿಂದ ಯಾವ ಉತ್ಕೃಷ್ಟವಾದ ಬುದ್ಧಿಯು ಉಂಟಾಗುವುದೋ ಆ ಬುದ್ಧಿಯಿಂದ ಭಗವಂತನು ತಿಳಿಯಲ್ಪಡುತ್ತಾನೆ. ಆದುದರಿಂದ ಭಗವಂತನಿಗೆ ದಾಮೋದರ ಎಂದು ಹೆಸರು. ಅಥವಾ ಭಗವಂತನು ಯಶೋಧೆಯಿಂದ ಉದರಪ್ರದೇಶದಲ್ಲಿ ಹಗ್ಗದಿಂದ ಕಟ್ಟಲ್ಪಟ್ಟಿದ್ದನಾದ್ದರಿಂದ ಅವನಿಗೆ ದಾಮೋದರ ಎಂದು ಹೆಸರು.

'ದಾಮಾನಿ ಲೋಕನಾಮಾನಿ . . . . ಶ್ರೀಧರಃ ಶ್ರೀಸಮಾಶ್ರಿತಃ, 'ದಾಮ ಎಂದು ಲೋಕಗಳಿಗೆ ಹೇಳುತ್ತಾರೆ. ಲೋಕಗಳೆಲ್ಲ ಭಗವಂತನ ಹೊಟ್ಟೆಯಲ್ಲಿರುವುವಾದ್ದರಿಂದ ಶ್ರೀಧರನೂ ಶ್ರೀಸಮಾಶ್ರಿತನೂ ಆದ ಭಗವಂತನಿಗೆ ದಾಮೋದರ ಎಂದು ಹೆಸರು' (ವ್ಯಾಸವಚನ).

೩೬೮. ಸಹಃ—ಎಲ್ಲರನ್ನು ಸೋಲಿಸುವವನು ಅಥವಾ ಕ್ಷಮಿಸುವವನು.

೩೬೯. ಮಹೀಧರಃ—ಪರ್ವತಗಳ ರೂಪದಿಂದ ಪೃಥ್ವಿಗೆ ಆಧಾರವಾಗಿರುವವನು.

'ವನಾನಿ ವಿಷ್ಣುರ್ಗಿರಯೋ ದಿಶಶ್ಚ' 'ವಿಷ್ಣುವೇ ಅರಣ್ಯಗಳು, ಪರ್ವತಗಳು ಮತ್ತು ದಿಕ್ಕುಗಳು (ಆಗಿರುವವನು)' (ವಿಷ್ಣು.೨.೧೨.೩೮).

೩೭೦. ಮಹಾಭಾಗಃ—ಸ್ವೇಚ್ಛೆಯಿಂದ ದೇಹವನ್ನು ಧರಿಸಿ ಉತ್ಕೃಷ್ಟವಾದ ಭೋಜನಗಳನ್ನು (ಪರಮೈಶ್ವರ್ಯವನ್ನು) ಭೋಗಿಸುವವನು.

ಅಥವಾ ಅವತಾರಗಳಲ್ಲಿ ಮಹಾಭಾಗ್ಯಶಾಲಿಯಾಗಿರುವನಾದ್ದರಿಂದ ಭಗವಂತನಿಗೆ ಮಹಾಭಾಗ ಎಂದು ಹೆಸರು.

೩೭೧. ವೇಗವಾನ್—ತೀವ್ರವಾದ ಗತಿಯುಳ್ಳವನು.

'ಅನೇಜದೇಕಂ ಮನಸೋ ಜವೀಯಃ' '(ಆತ್ಮವು) ಅಚಲವು; (ಸರ್ವಭೂತಗಳಲ್ಲಿಯೂ) ಒಂದೇ; ಮನಸ್ಸಿಗಿಂತ ಅಧಿಕವೇಗವುಳ್ಳದ್ದು' (ಈ. ಉ. ೪).

೩೭೨. ಅಮಿತಾಶನಃ—ಸಂಹಾರಸಮಯದಲ್ಲಿ ಇಡೀ ವಿಶ್ವವನ್ನು ಭಕ್ಷಿಸುವವನು.

೩೭೩. ಉದ್ಭವಃ—ಪ್ರಪಂಚದ ಉತ್ಪತ್ತಿಗೆ ಉಪಾದಾನಕಾರಣನಾಗಿರುವವನು.

ಅಥವಾ ಸಂಸಾರವನ್ನು ಮೀರಿಹೋಗಿರುವವನು.

೩೭೪. ಕ್ಷೋಭಣಃ—ಜಗದುತ್ಪತ್ತಿಕಾಲದಲ್ಲಿ ಪ್ರಕೃತಿಯನ್ನೂ ಪುರುಷನನ್ನೂ ಪ್ರವೇಶಿಸಿ ಕ್ಷೋಭೆಯನ್ನುಂಟುಮಾಡಿದನು.

೩೭೫. ದೇವಃ—ದೇವನು.

ಭಗವಂತನು ಸೃಷ್ಟ್ಯಾದಿಗಳಿಂದ ಕ್ರೀಡಿಸುವವನೂ, ಅಸುರಾದಿಗಳನ್ನು ಜಯಿಸುವವನೂ, ಸರ್ವಭೂತಗಳಲ್ಲಿ ವ್ಯವಹರಿಸುವವನೂ, ಆತ್ಮಭಾವದಿಂದ ಪ್ರಕಾಶಿಸುವವನೂ, ಶ್ಲಾಘ್ಯಪುರುಷರಿಂದ ಸ್ತುತಿಸಲ್ಪಡುವವನೂ ಮತ್ತು ಸರ್ವತ್ರವೂ ಆಗಿರುವವನು. ಆದುದರಿಂದ ಅವನಿಗೆ ದೇವ ಎಂದು ಹೆಸರು.

೩೭೬. ಶ್ರೀಗರ್ಭಃ—ಜಗದ್ರೂಪವಾದ ಶ್ರೀಯನ್ನು ಎಂದರೆ ವಿಭೂತಿಯನ್ನು ತನ್ನ ಗರ್ಭದಲ್ಲಿ ಧರಿಸಿರುವವನು.

೩೭೭. ಪರಮೇಶ್ವರಃ–ಪರಮಶ್ರೇಷ್ಠನೂ ಜಗತ್ತಿಗೆ ಸ್ವಾಮಿಯೂ ಆಗಿರುವವನು.

೩೭೮. ಕಾರಣಮ್—ಜಗದುತ್ಪತ್ತಿಗೆ ಅತ್ಯಂತ ಶ್ರೇಷ್ಠವಾದ ಸಾಧನವಾಗಿರುವವನು.

೩೭೯. ಕಾರಣಮ್—ಜಗತ್ತಿನ ಉಪಾದಾನಕಾರಣವೂ, ನಿಮಿತ್ತಕಾರಣವೂ ಆಗಿರುವವನು.

೩೮೦. ಕರ್ತಾ—ಸ್ವತಂತ್ರನಾಗಿರುವವನು.

೩೮೧. ವಿಕರ್ತಾ–ವಿಚಿತ್ರವಾದ ಪ್ರಪಂಚವನ್ನು ಹುಟ್ಟಿಸುವವನು.

೩೮೨. ಗಹನಃ—ಗೂಢವಾಗಿರುವವನು.

ಭಗವಂತನ ಸ್ವರೂಪಸಾಮರ್ಥ್ಯಗಳನ್ನು ಮತ್ತು ಲೀಲೆಗಳನ್ನು ತಿಳಿಯಲು ಅಶಕ್ಯವಾದ್ದರಿಂದ ಅವನಿಗೆ ಗಹನ ಎಂದು ಹೆಸರು.

೩೮೩. ಗುಹಃ—ಮಾಯೆಯಿಂದ ತನ್ನ ಸ್ವರೂಪವನ್ನು ಮುಚ್ಚಿಕೊಳ್ಳುವವನು.

'ನಾಹಂ ಪ್ರಕಾಶಃ ಸರ್ವಸ್ಯ ಯೋಗಮಾಯಾಸಮಾವೃತಃ' 'ಯೋಗಮಾಯೆಯಿಂದ ಆವರಿಸಲ್ಪಟ್ಟ ನಾನು ಎಲ್ಲರಿಗೂ ಪ್ರತ್ಯಕ್ಷನಲ್ಲ' (ಗೀತಾ. ೭. ೨೫).

೩೮೪. ವ್ಯವಸಾಯಃ– ಜ್ಞಾನಮಾತ್ರಸ್ವರೂಪನಾಗಿರುವವನು.

೩೮೫. ವ್ಯವಸ್ಥಾನಃ—ಸಕಲವಸ್ತುಗಳಿಗೆ ನೆಲೆಯಾಗಿರುವನು.

ಸರ್ವವಸ್ತುಗಳು ಭಗವಂತನಲ್ಲಿ ವ್ಯವಸ್ಥಿತವಾಗಿರುವುವು. ಆದುದರಿಂದ ಭಗವಂತನಿಗೆ ವ್ಯವಸ್ಥಾನ ಎಂದು ಹೆಸರು. ಅಥವಾ ಭಗವಂತನು ಲೋಕಪಾಲಾದಿ ಅಧಿಕಾರಿಗಳನ್ನೂ, ಜರಾಯುಜ ಅಂಡಜ ಸ್ವೇದಜ ಮತ್ತು ಉದ್ಭಿಜ್ಜ ಪ್ರಾಣಿಗಳನ್ನೂ, ಬ್ರಾಹ್ಮಣಕ್ಷತ್ರಿಯ ವೈಶ್ಯಶೂದ್ರ ಮತ್ತು ಅವಾಂತರವರ್ಣಗಳನ್ನೂ, ಬ್ರಹ್ಮಚರ್ಯ ಗಾರ್ಹಸ್ಥ್ಯ ವಾನಪ್ರಸ್ಥ ಮತ್ತು ಸಂನ್ಯಾಸ ಆಶ್ರಮಗಳನ್ನೂ ಮತ್ತು ಅವುಗಳ ಧರ್ಮವೇ ಮೊದಲಾದುವುಗಳನ್ನೂ ವಿಂಗಡಿಸುವವನಾದ್ದರಿಂದ ಅವನಿಗೆ ವ್ಯವಸ್ಥಾನ ಎಂದು ಹೆಸರು.

೩೮೬. ಸಂಸ್ಥಾನಃ—ಪ್ರಲಯಕಾಲದಲ್ಲಿ ಸಕಲವಸ್ತುಗಳಿಗೆ ಆವಾಸಸ್ಥಾನವಾಗಿರುವವನು.

೩೮೭. ಸ್ಥಾನದಃ—ಧ್ರುವಾದಿಗಳಿಗೆ ಅವರವರ ಕರ್ಮಾನುರೂಪವಾದ ಸ್ಥಾನವನ್ನು ಕೊಡುವವನು.

೩೮೮. ಧ್ರುವಃ—ನಾಶವಿಲ್ಲದವನು.

೩೮೯. ಪರರ್ದ್ಧಿಃ—ಶ್ರೇಷ್ಠವಾದ ವಿಭೂತಿಯುಳ್ಳವನು.

೩೯೦. ಪರಮಸ್ಪಷ್ಟಃ—ಉತ್ಕೃಷ್ಟವಾದ ಶೋಭೆಯುಳ್ಳವನು ಮತ್ತು ಸಂವಿದ್ರೂಪನು.

ಭಗವಂತನು ಉತ್ಕೃಷ್ಟವಾದ ಶೋಭೆಯುಳ್ಳವನಾದ್ದರಿಂದ ಪರಮನು ಅಥವಾ ಅನನ್ಯಾಧೀನವಾದ ಸಿದ್ಧಿಯುಳ್ಳವನಾದ್ದರಿಂದ ಸರ್ವೋತ್ಕೃಷ್ಟನು; ಮತ್ತು ಸಂವಿದ್‌ರೂಪನಾದ್ದರಿಂದ ಸ್ಪಷ್ಟನು. ಹೀಗೆ ಪರಮನೂ ಸ್ಪಷ್ಟನೂ ಆಗಿರುವವನಾದ್ದರಿಂದ ಭಗವಂತನು ಪರಮಸ್ಪಷ್ಟನು.

೩೯೧. ತುಷ್ಟಃ—ಪರಮಾನಂದೈಕರೂಪನು.

೩೯೨. ಪುಷ್ಟಃ—ಸರ್ವತ್ರವೂ ಪರಿಪೂರ್ಣನಾಗಿರುವವನು.

೩೯೩. ಶುಭೇಕ್ಷಣಃ—ಶುಭವಾದ ದರ್ಶನವುಳ್ಳವನು.

ಭಗವದ್ದರ್ಶನವು ಶುಭಕರವೂ, ಮುಮುಕ್ಷುಗಳಿಗೆ ಮೋಕ್ಷವನ್ನು ಕೊಡುವಂತಹದೂ, ಭೋಗಾರ್ಥಿಗಳಿಗೆ ಭೋಗವನ್ನು ಕೊಡುವಂತಹದೂ, ಸರ್ವಸಂದೇಹಗಳನ್ನು ನಿವಾರಿಸುವಂತಹದೂ, ಪಾಪಿಗಳನ್ನು ಪವಿತ್ರರನ್ನಾಗಿ ಮಾಡುವಂತಹದೂ, ಹೃದಯ ಗ್ರಂಥಿಗಳನ್ನೆಲ್ಲ ಕತ್ತರಿಸುವಂತಹದೂ, ಸರ್ವಕರ್ಮಗಳನ್ನು ನಾಶಮಾಡುವಂತಹದೂ ಮತ್ತು ಅವಿದ್ಯೆಯ ನಿವೃತ್ತಿಯನ್ನು ಮಾಡುವಂತಹದೂ ಆಗಿರುವುದರಿಂದ ಭಗವಂತನಿಗೆ ಶುಭೇಕ್ಷಣ ಎಂದು ಹೆಸರು.

೩೯೪. ರಾಮಃ—ರಾಮನು.

ನಿತ್ಯಾನಂದಸ್ವರೂಪನಾದ ಭಗವಂತನಲ್ಲಿ ಯೋಗಿಗಳು ರಮಿಸುತ್ತಾರೆ. ಆದುದರಿಂದ ಭಗವಂತನಿಗೆ ರಾಮ ಎಂದು ಹೆಸರು. ಅಥವಾ ಸ್ವೇಚ್ಛೆಯಿಂದ ರಮಣೀಯವಾದ ದೇಹವನ್ನು ಧರಿಸಿ ದಶರಥನ ಮಗನಾಗಿ (ರಾಮನಾಗಿ) ಹುಟ್ಟಿದವನು.

'ರಮಂತೇ ಯೋಗಿನೋ ಯಸ್ಮಿನ್...ಪರಂ ಬ್ರಹ್ಮಾಭಿಧೀಯತೇ' 'ಯಾವ ನಿತ್ಯಾನಂದಸ್ವರೂಪವುಳ್ಳ ಚಿದಾತ್ಮದಲ್ಲಿ ಯೋಗಿಗಳು ರಮಿಸುತ್ತಾರೋ ಆ ಪರಬ್ರಹ್ಮವು ರಾಮ ಎಂಬ ಪದದಿಂದ ಕರೆಯಲ್ಪಡುತ್ತದೆ' (ಪದ್ಮಪುರಾಣ).

೩೯೫. ವಿರಾಮಃ— ಪ್ರಾಣಿಗಳಿಗೆಲ್ಲ ವಿರಾಮಸ್ಥಾನವಾಗಿರುವವನು.

ಪ್ರಾಣಿಗಳೆಲ್ಲ ಭಗವಂತನಲ್ಲಿ ಅವಸಾನಹೊಂದುತ್ತವೆ. ಆದುದರಿಂದ ಭಗವಂತನಿಗೆ ವಿರಾಮ ಎಂದು ಹೆಸರು.

೩೯೬. ವಿರತಃ—ವಿಷಯಸೇವನೆಯಲ್ಲಿ ಆಸಕ್ತಿಯಿಲ್ಲದವನು.

೩೯೭. ಮಾರ್ಗಃ—ಮೋಕ್ಷಕ್ಕೆ ಮಾರ್ಗವಾಗಿರುವವನು.

ಯಾವನನ್ನು ಅರಿತು ಮುಮುಕ್ಷುಗಳಾದ ಯೋಗಿಗಳು ಅಮೃತತ್ವವನ್ನು ಪಡೆಯುತ್ತಾರೋ ಆ ಭಗವಂತನೇ ಮೋಕ್ಷಕ್ಕೆ ಮಾರ್ಗವಾಗಿರುವನು.

'ನಾನ್ಯಃ ಪಂಥಾ ವಿದ್ಯತೇಽಯನಾಯ' '(ಪರಮಾತ್ಮನು ಹೊರತು) ಮೋಕ್ಷಕ್ಕೆ ಅನ್ಯ ದಾರಿ ಇಲ್ಲ' (ಶ್ವೇ. ಉ. ೬. ೧೫).

೩೯೮. ನೇಯಃ—ಸಮ್ಯಕ್ ಜ್ಞಾನದ ದ್ವಾರಾ ಜೀವನಿಂದ ಹೊಂದಲ್ಪಡುವವನು.

ಸಮ್ಯಕ್‌ಜ್ಞಾನದ ದ್ವಾರಾ ಜೀವನು ಪರಮಾತ್ಮಭಾವಕ್ಕೆ ಒಯ್ಯಲ್ಪಡುತ್ತಾನೆ. ಆದುದರಿಂದ ಪರಮಾತ್ಮನಿಗೆ ನೇಯ ಎಂದು ಹೆಸರು.

೩೯೯. ನಯಃ—ನೇತೃವು (ಜೀವರನ್ನು ಮೋಕ್ಷಕ್ಕೆ ಒಯ್ಯುವವನು).

೪೦೦. ಅನಯಃ—ತನಗೆ ಬೇರೆ ಯಾರೂ ನೇತೃವಿಲ್ಲದವನು.

೪೦೧. ವೀರಃ—ಪರಾಕ್ರಮಶಾಲಿಯಾಗಿರುವವನು.

೪೦೨. ಶಕ್ತಿಮತಾಂ ಶ್ರೇಷ್ಠಃ—ಬ್ರಹ್ಮನೇ ಮೊದಲಾದ ಶಕ್ತಿವಂತರಿಗಿಂತಲೂ ಅಧಿಕ ಶಕ್ತಿಶಾಲಿಯಾಗಿರುವವನು.

೪೦೩. ಧರ್ಮಃ—ಸಕಲಭೂತಗಳಿಗೆ ಆಧಾರವಾಗಿರುವವನು.

೪೦೪. ಧರ್ಮವಿದುತ್ತಮಃ— ಧರ್ಮವನ್ನು ತಿಳಿದವರಲ್ಲಿ ಉತ್ತಮನಾಗಿರುವವನು.

ಶ್ರುತಿಗಳೂ ಸ್ಮೃತಿಗಳೂ ಯಾವನ ಆಜ್ಞೆಗಳಾಗಿರುವುವೋ ಆ ಭಗವಂತನೇ ಧರ್ಮವನ್ನು ತಿಳಿದವರಲ್ಲಿ ಉತ್ತಮನಾಗಿರುವವನು; ಆದುದರಿಂದ ಅವನು ಧರ್ಮವಿದುತ್ತಮನು.

೪೦೫. ವೈಕುಂಠಃ—ವಿವಿಧ ಜಾತಿಗಳನ್ನು (ಪಥಗಳನ್ನು) ಹಿಡಿಯದಂತೆ ಪ್ರತಿಬಂಧಿಸುವವನು.

ಭಗವಂತನು ಜಗದಾರಂಭದಲ್ಲಿ ಬೇರೆಬೇರೆಯಾಗಿ ಹೋದ ಭೂತಗಳನ್ನು ಪರಸ್ಪರ ಒಟ್ಟುಗೂಡಿಸಿ ಅವುಗಳ ಗತಿಯನ್ನು ಪ್ರತಿಬಂಧಿಸುತ್ತಾನೆ. ಆದುದರಿಂದ ಅವನು ವೈಕುಂಠನು.

'ಮಯಾ ಸಂಶ್ಲೇಷಿತಾ ಭೂಮಿಃ . . . . ವೈಕುಂಠತ್ವಂ ತತೋ ಮಮ' 'ನಾನು ಪೃಥ್ವಿಯನ್ನು ಜಲದೊಂದಿಗೂ, ಆಕಾಶವನ್ನು ವಾಯುವಿನೊಂದಿಗೂ ಮತ್ತು ವಾಯುವನ್ನು ತೇಜಸ್ಸಿನೊಂದಿಗೂ ಒಟ್ಟುಗೂಡಿಸಿದೆನು. ಆದುದರಿಂದ ನಾನು ವೈಕುಂಠನು' (ಮಹಾ. ಶಾಂತಿ ೩೪೨. ೮೦).

೪೦೬. ಪುರುಷಃ—ಸಮಸ್ತವಸ್ತುಗಳಿಗಿಂತಲೂ ಮುಂಚೆನಿಂದಿರುವವನು.

ಅಥವಾ ಸರ್ವಪಾಪಗಳನ್ನು ನಾಶಮಾಡುವವನಾದ್ದರಿಂದ ಭಗವಂತನು ಪುರುಷನು; ಅಥವಾ ಶರೀರದಲ್ಲಿ ಶಯನಮಾಡುವವನಾದ್ದರಿಂದ ಪುರುಷನು.

'ಸ ಯತ್ಪೂರ್ವೋಽಸ್ಮಾತ್ ಸರ್ವಸ್ಮಾತ್ ಸರ್ವಾನ್ ಪಾಪ್ಮನ ಔಷತ್ ತಸ್ಮಾತ್ ಪುರುಷಃ' 'ಅವನು (ಆತ್ಮನು) (ಎಲ್ಲರಿಗಿಂತ) ಮೊದಲನೆಯವನಾಗಿದ್ದು, ಈ ಎಲ್ಲರಿಗಿಂತ (ಮೊದಲೇ) ಸರ್ವಪಾಪಗಳನ್ನು ದಹಿಸಿದ್ದರಿಂದ ಪುರುಷನು' (ಬೃ.ಉ. ೧.೪.೧).

'ಸ ವಾ ಅಯಂ ಪುರುಷಃ ಸರ್ವಾಸು ಪೂರ್ಷು ಪುರಿಶಯಃ' ಆ ಈ ಪುರುಷನು ಎಲ್ಲ ಪುರಗಳಲ್ಲಿ (ದೇಹಗಳಲ್ಲಿ) ವಾಸಮಾಡುತ್ತಾನೆ; (ಆದುದರಿಂದ ಅವನು ಪುರುಷ ಎಂದೆನಿಸುತ್ತಾನೆ.) (ಬೃ. ಉ. ೨.೫.೧೮).

೪೦೭. ಪ್ರಾಣಃ—ಕ್ಷೇತ್ರಜ್ಞರೂಪದಿಂದ ಜೀವಿಸುವವನು.

ಅಥವಾ ಪ್ರಾಣರೂಪದಿಂದ ಶರೀರದಲ್ಲಿ ಕೆಲಸಮಾಡುವವನು.

'ಚೇಷ್ಟಾಂ ಕರೋತಿ ಶ್ವಸನಸ್ವರೂಪೀ' 'ಪ್ರಾಣವಾಯುರೂಪದಿಂದ (ಭಗವಂತನು) ಕೆಲಸಮಾಡುತ್ತಾನೆ' (ವಿಷ್ಣು).

೪೦೮. ಪ್ರಾಣದಃ—ಪ್ರಲಯಾದಿಕಾಲಗಳಲ್ಲಿ ಪ್ರಾಣಿಗಳ ಪ್ರಾಣಗಳನ್ನು ನಾಶಮಾಡುವವನು.

೪೦೯. ಪ್ರಣವಃ—ಓಂಕಾರದ ದ್ವಾರಾ ಸ್ತುತಿಸಲ್ಪಡುವವನು.

ಅಥವಾ ಭಗವಂತನು ನಮಸ್ಕರಿಸಲ್ಪಡುವನಾದ್ದರಿಂದ ಪ್ರಣವನು.

'ಪ್ರಣಮಂತೀಹ ವೈ ವೇದಾಸ್ತಸ್ಮಾತ್ ಪ್ರಣವ ಉಚ್ಯತೇ' 'ಭಗವಂತನನ್ನು ವೇದಗಳು ನಮಸ್ಕರಿಸುತ್ತವೆ. ಆದುದರಿಂದ ಭಗವಂತನು ಪ್ರಣವ ಎಂದು ಕರೆಯಲ್ಪಡುತ್ತಾನೆ' (ಸನತ್ಕುಮಾರವಚನ).

೪೧೦. ಪೃಥುಃ—ಪ್ರಪಂಚರೂಪದಿಂದ ವಿಸ್ತರಿಸಿದವನು.

೪೧೧. ಹಿರಣ್ಯಗರ್ಭಃ—ಹಿರಣ್ಯಗರ್ಭನ (ಬ್ರಹ್ಮನ) ಗರ್ಭವಾಗಿರುವವನು.

ಹಿರಣ್ಯಗರ್ಭನ ಉತ್ಪತ್ತಿಗೆ ಕಾರಣವಾದ ಹಿರಣ್ಮಯವಾದ ಅಂಡವು ಯಾವನ ವೀರ್ಯದಿಂದ ಹುಟ್ಟಿತೋ ಆ ಭಗವಂತನು ಅವನ (ಹಿರಣ್ಯಗರ್ಭನ) ಗರ್ಭವಾಗಿರುವನಾದ್ದರಿಂದ ಭಗವಂತನಿಗೂ ಹಿರಣ್ಯಗರ್ಭ ಎಂದು ಹೆಸರು.

೪೧೨. ಶತ್ರುಘ್ನಃ—ದೇವಶತ್ರುಗಳನ್ನು ಸಂಹಾರಮಾಡುವವನು.

೪೧೩. ವ್ಯಾಪ್ತಃ—ಕಾರಣರೂಪದಿಂದ ಸರ್ವಕಾರ್ಯಗಳನ್ನು ವ್ಯಾಪಿಸಿರುವವನು.

೪೧೪. ವಾಯುಃ—ಗಂಧವನ್ನು ಉಂಟುಮಾಡುವವನು.

'ಪುಣ್ಯೋ ಗಂಧಃ ಪೃಥಿವ್ಯಾಂ ಚ' 'ನಾನು ಪೃಥ್ವಿಯಲ್ಲಿ ಪರಿಮಳಯುಕ್ತವಾದ ಗಂಧವಾಗಿದ್ದೇನೆ' (ಗೀತಾ. ೭.೯).

೪೧೫. ಅಧೋಕ್ಷಜಃ—ಸ್ವರ್ಗಲೋಕ ಮತ್ತು ಭೂಲೋಕ—ಇವುಗಳ ಮಧ್ಯದಲ್ಲಿ ಹುಟ್ಟಿದವನು.

ಅಥವಾ ಇಂದ್ರಿಯಗಳು ಅಂತರ್ಮುಖವಾಗಿ ಹರಿಯುವಾಗ ಪ್ರತ್ಯಕ್ಷನಾಗುವವನಾದ್ದರಿಂದ ಭಗವಂತನು ಅಧೋಕ್ಷಜನು.

೪೧೬. ಋತುಃ—ಋತು-ಶಬ್ದದಿಂದ ನಿರ್ದೇಶಿಸಲ್ಪಡುವವನು.

ಕಾಲರೂಪನಾದ ಭಗವಂತನು ಋತು-ಶಬ್ದದಿಂದ ನಿರ್ದೇಶಿಸಲ್ಪಡುತ್ತಾನೆ. ಆದುದರಿಂದ ಅವನಿಗೆ ಋತು ಎಂದು ಹೆಸರು.

೪೧೭. ಸುದರ್ಶನಃ—ಸುಂದರವಾದ ದರ್ಶನವುಳ್ಳವನು.

ಭಗವದ್ದರ್ಶನವು (ಎಂದರೆ ಭಗವದ್ಜ್ಞಾನವು) ಸುಂದರವಾದುದು; ನಿರ್ವಾಣ ರೂಪವಾದ ಫಲವುಳ್ಳದ್ದು. ಆದುದರಿಂದ ಅಥವಾ ಭಗವಂತನು

ಪದ್ಮದಲಗಳಂತೆ ವಿಶಾಲವಾದ ಮತ್ತು ಸುಂದರವಾದ ಕಣ್ಣುಗಳುಳ್ಳವನಾದ್ದರಿಂದ ಅಥವಾ ಭಗವಂತನು ಭಕ್ತರಿಗೆ ಸುಲಭವಾಗಿ ಪ್ರತ್ಯಕ್ಷನಾಗುವವನಾದ್ದರಿಂದ ಅವನಿಗೆ ಸುದರ್ಶನ ಎಂದು ಹೆಸರು.

೪೧೮. ಕಾಲಃ—ಸರ್ವವಸ್ತುಗಳನ್ನೂ ಗಣನೆಮಾಡುವವನು.

'ಕಾಲಃ ಕಲಯತಾಮಹಮ್' 'ಗಣನೆಮಾಡುವವರಲ್ಲಿ ನಾನು ಕಾಲನು' (ಗೀತಾ. ೧೦. ೩೦).

೪೧೯. ಪರಮೇಷ್ಠೀ—ತನ್ನ ಪ್ರಕೃಷ್ಟವಾದ ಮಹಿಮೆಯಿಂದ ಕೂಡಿ ಭಕ್ತರ ಹೃದಯಾಕಾಶದಲ್ಲಿ ಅವಸ್ಥಿತನಾಗಿರುವುದನ್ನೇ ತನ್ನ ಸ್ವಭಾವವಾಗಿ ಉಳ್ಳವನು.

೪೨೦. ಪರಿಗ್ರಹಃ—ಶರಣಾರ್ಥಿಗಳಿಂದ ಸರ್ವಕಡೆಗಳಿಂದಲೂ ಗ್ರಹಿಸಲ್ಪಡುವವನು.

ಭಗವಂತನು ಸರ್ವವ್ಯಾಪಿಯಾದ್ದರಿಂದ ಅವನನ್ನು ಶರಣಾರ್ಥಿಗಳು ಸರ್ವಕಡೆಗಳಿಂದಲೂ ಗ್ರಹಿಸುತ್ತಾರೆ ಅಥವಾ ಅರಿಯುತ್ತಾರೆ. ಅಥವಾ ಭಗವಂತನು ಭಕ್ತರಿಂದ ಸಮರ್ಪಿಸಲ್ಪಟ್ಟ ಪತ್ರಪುಷ್ಪಾದಿಗಳನ್ನು ಸ್ವೀಕರಿಸುತ್ತಾನೆ. ಅದುದರಿಂದ ಅವನಿಗೆ ಪರಿಗ್ರಹ ಎಂದು ಹೆಸರು.

೪೨೧. ಉಗ್ರಃ—ಸೂರ್ಯಾದಿಗಳಿಗೂ ಭಯವನ್ನು ಹುಟ್ಟಿಸುವವನು.

'ಭೀಷೋದೇತಿ ಸೂರ್ಯಃ' '(ಭಗವಂತನ) ಭಯದಿಂದ ಸೂರ್ಯನು ಉದಯಿಸುತ್ತಾನೆ' (ತೈ. ಉ. ೨. ೮).

೪೨೨. ಸಂವತ್ಸರಃ—ಸಕಲಭೂತಗಳ ವಾಸಸ್ಥಾನವಾಗಿರುವವನು.

೪೨೩. ದಕ್ಷಃ—ಜಗದ್ರೂಪದಿಂದ ಅಭಿವೃದ್ಧಿಹೊಂದುವವನು.

ಅಥವಾ ಸಮಸ್ತ ಕರ್ಮಗಳನ್ನು ಕ್ಷಿಪ್ರವಾಗಿ ಮಾಡುವವನು.

೪೨೪. ವಿಶ್ರಾಮಃ—ಮೋಕ್ಷರೂಪವಾದ ವಿಶ್ರಾಂತಿಯನ್ನು ಕೊಡುವವನು.

ಹಸಿವು ಮತ್ತು ಬಾಯಾರಿಕೆ ಮೊದಲಾದ ಷಡೂರ್ಮಿಗಳಿಂದ ತರಂಗಿತವಾದ ಸಂಸಾರಸಾಗರದಲ್ಲಿ, ಅವಿದ್ಯೆಯೇ ಮೊದಲಾದ ಮಹಾಕ್ಲೇಶಗಳಿಂದಲೂ ಮದಮಾತ್ಸರ್ಯಗಳೇ ಮೊದಲಾದ ಉಪಕ್ಲೇಶಗಳಿಂದಲೂ ವಶೀಕರಿಸಲ್ಪಟ್ಟು, ವಿಶ್ರಾಂತಿಯನ್ನು ಬಯಸುವವರಿಗೆ ಮೋಕ್ಷರೂಪವಾದ ವಿಶ್ರಾಂತಿಯನ್ನು ಕೊಡುವವನು.

೪೨೫. ವಿಶ್ವದಕ್ಷಿಣಃ—ಎಲ್ಲರಿಗಿಂತ ಅಧಿಕವಾದ ಸಾಮರ್ಥ್ಯವುಳ್ಳವನು.

ಅಥವಾ ಸರ್ವಕರ್ಮಗಳಲ್ಲಿ ಕೌಶಲವುಳ್ಳವನು. ಆದುದರಿಂದ ಅವನಿಗೆ ವಿಶ್ವದಕ್ಷಿಣ ಎಂದು ಹೆಸರು.

೪೨೬. ವಿಸ್ತಾರಃ—ಸಮಸ್ತಲೋಕಗಳಿಗೆ ವಿಸ್ತಾರವನ್ನುಂಟು ಮಾಡುವವನು.

ಸಮಸ್ತ ಲೋಕಗಳು ಭಗವಂತನಲ್ಲಿ ವಿಸ್ತಾರವನ್ನು (ಅಭಿವೃದ್ಧಿಯನ್ನು) ಹೊಂದುತ್ತವೆ. ಆದುದರಿಂದ ಭಗವಂತನಿಗೆ ವಿಸ್ತಾರ ಎಂದು ಹೆಸರು.

೪೨೭. ಸ್ಥಾವರಸ್ಥಾಣುಃ ಸ್ಥಿರವಾಗಿ ನಿಲ್ಲುವ ಸ್ವಭಾವವುಳ್ಳವನು ಮತ್ತು ಪೃಥಿವ್ಯಾದಿಗಳಿಗೆ ನೆಲೆಯಾಗಿರುವವನು.

ಭಗವಂತನು ಸ್ಥಿರವಾಗಿ ನಿಲ್ಲುವ ಸ್ವಭಾವವುಳ್ಳವನಾದುದರಿಂದ ಸ್ಥಾವರನು ಮತ್ತು ಸ್ಥಿರವಾಗಿ ನಿಲ್ಲುವ ಸ್ವಭಾವವುಳ್ಳ ಪೃಥಿವ್ಯಾದಿಗಳು ಅವನಲ್ಲಿ ಅವಸ್ಥಿತವಾಗಿರುವುದರಿಂದ ಭಗವಂತನು 'ಸ್ಥಾಣುವು.'

೪೨೮. ಪ್ರಮಾಣಮ್—ಜ್ಞಾನರೂಪದಿಂದ ಪ್ರಮಾಣವಾಗಿರುವವನು.

೪೨೯. ಬೀಜಮವ್ಯಯಮ್— ಜಗತ್ತಿಗೆ ನಾಶರಹಿತವಾದ ಕಾರಣನಾಗಿರುವವನು.

ಭಗವಂತನಿಗೆ ಅನ್ಯಥಾಭಾವವು (ಭಾವಾಂತರ) ಇಲ್ಲವಾದುದರಿಂದ ಅವನು ಜಗತ್ತಿಗೆ (ನಾಶರಹಿತವಾದ) ಕಾರಣವಾಗಿರುವನು.

೪೩೦. ಅರ್ಥಃ—ಎಲ್ಲರಿಂದಲೂ ಬಯಲಸಲ್ಪಡುವವನು.

ಭಗಗವಂತನು ಸುಖಸ್ವರೂಪನಾದುದರಿಂದ ಎಲ್ಲರಿಂದಲೂ ಬಯಸಲ್ಪಡುತ್ತಾನೆ. ಆದುದರಿಂದ ಅವನಿಗೆ ಅರ್ಥ ಎಂದು ಹೆಸರು.

೪೩೧. ಅನರ್ಥಃ – ಯಾವ ಪ್ರಯೋಜನವೂ ಇಲ್ಲದವನು.

ಭಗವಂತನು ಅಪ್ತಕಾಮನಾದುದರಿಂದ ಅವನು ಪಡೆಯಬೇಕಾಗಿರುವ ಪ್ರಯೋಜನವು ಯಾವುದೂ ಇಲ್ಲ. ಆದುದರಿಂದ ಅವನು ಅನರ್ಥನು.

೪೩೨. ಮಹಾಕೋಶಃ—ತನ್ನ ಸ್ವರೂಪವನ್ನು ಮುಚ್ಚುವ ಅನ್ನಮಯಾದಿ ಮಹಾಕೋಶಗಳುಳ್ಳವನು.

೪೩೩. ಮಹಾಭೋಗಃ—ಸುಖರೂಪವಾದ ಮಹಾಭೋಗವುಳ್ಳವನು.

೪೩೪. ಮಹಾಧನಃ—ಹೇರಳವಾದ ಭೋಗಸಾಧನರೂಪವಾದ ಧನವುಳ್ಳವನು.

೪೩೫. ಅನಿರ್ವಿಣ್ಣಃ— ದುಃಖವಿಲ್ಲದವನು.

ಭಗವಂತನು ಆಪ್ತಕಾಮನಾದುದರಿಂದ (ಸರ್ವಕಾಮಗಳನ್ನು ಹೊಂದಿ ಪರಿಪೂರ್ಣನಾಗಿರುವವನಾದುದರಿಂದ) ಅವನಿಗೆ ದುಃಖವಿಲ್ಲ. ಆದುದರಿಂದ ಅವನು ಅನಿರ್ವಿಣ್ಣನು.

೪೩೬. ಸ್ಥವಿಷ್ಠಃ—ವೈರಾಜರೂಪದಿಂದ ಇರುವವನು.

'ಅಗ್ನಿರ್ಮೂರ್ಧಾ ಚಕ್ಷುಷೀ ಚಂದ್ರಸೂರ್ಯೌ' 'ಅಗ್ನಿಯು (ಭಗವಂತನ) ಶಿರಸ್ಸು, ಚಂದ್ರಸೂರ್ಯರು ಕಣ್ಣುಗಳು' (ಮುಂ.ಉ. ೨.೧.೪).

೪೩೭. ಅಭೂಃ—ಜನ್ಮರಹಿತನು ಅಥವಾ **ಭೂಃ**—ಇರುವವನು.

೪೩೮. ಧರ್ಮಯೂಪಃ—ಧರ್ಮಗಳಿಗೆಲ್ಲ ಆಧಾರಸ್ತಂಭವಾಗಿರುವವನು.

ಯಜ್ಞಪಶುವು ಹೇಗೆ ಯೂಪಕ್ಕೆ ಕಟ್ಟಲ್ಪಡುತ್ತದೆಯೋ ಹಾಗೆಯೇ ಭಗವದಾರಾಧನಾರೂಪವಾದ ಧರ್ಮಗಳೆಲ್ಲ ಭಗವಂತನಿಗೆ ಕಟ್ಟಲ್ಪಟ್ಟಿವೆ; (ಎಂದರೆ ಭಗವಂತನು ಧರ್ಮಗಳಿಗೆಲ್ಲ ಆಧಾರಸ್ತಂಭವಾಗಿರುವನು). ಆದುದರಿಂದ ಅವನು ಧರ್ಮಯೂಪನು.

೪೩೯. ಮಹಾಮುಖಃ—ಯಜ್ಞಗಳನ್ನು ಮಹತ್ತಾಗಿ ಮಾಡುವವನು.

ಯಾವನಿಗೆ ಸಮರ್ಪಿಸಲ್ಪಟ್ಟ ಯಜ್ಞಗಳು ನಿರ್ವಾಣರೂಪವಾದ ಫಲವನ್ನು ಕೊಟ್ಟು ಮಹತ್ತಾದುವುಗಳು ಆಗುವುವೋ ಆ ಭಗವಂತನು ಮಹಾಮುಖನು.

೪೪೦. ನಕ್ಷತ್ರನೇಮಿಃ–ನಕ್ಷತ್ರಮಂಡಲದ ಪ್ರವರ್ತಕನಾದವನು.

ಇಡೀ ಜ್ಯೋತಿರ್ಮಂಡಲವನ್ನು ತಿರುಗಿಸುತ್ತ ಧ್ರುವನು ಶಿಶುಮಾರಾಕೃತಿಯುಳ್ಳ ನಕ್ಷತ್ರಮಂಡಲದ ಪುಚ್ಛಪ್ರದೇಶದಲ್ಲಿ ಅವಸ್ಥಿತನಾಗಿರುವನು. ವಿಷ್ಣುವು ಆ ಶಿಶುಮಾರಾಕೃತಿಯ ನಕ್ಷತ್ರಮಂಡಲದ ಮಧ್ಯದಲ್ಲಿ ಜ್ಯೋತಿರ್ಮಂಡಲದ ಕೇಂದ್ರದಂತೆ ಅದರ ಪ್ರವರ್ತಕನಾಗಿ ಇದ್ದಾನೆ. ಆದುದರಿಂದ ವಿಷ್ಣುವಿಗೆ ನಕ್ಷತ್ರನೇಮಿ ಎಂದು ಹೆಸರು.

ಸ್ವಾಧ್ಯಾಯಬ್ರಾಹ್ಮಣದಲ್ಲಿ ಶಿಶುಮಾರವರ್ಣನೆಯಲ್ಲಿ ವಿಷ್ಣುವು ಶಿಶುಮಾರದ ಹೃದಯನಾಗಿರುವನು ಎಂದು ಹೇಳಿದೆ.

೪೪೧. ನಕ್ಷತ್ರೀ—ಚಂದ್ರರೂಪನು.

ಭಗವಂತನು ಚಂದ್ರರೂಪದಿಂದ ನಕ್ಷತ್ರೀ ಎಂದು ಕರೆಯಲ್ಪಡುತ್ತಾನೆ.
'ನಕ್ಷತ್ರಾಣಾಮಹಂ ಶಶೀ' 'ನಕ್ಷತ್ರಗಳಲ್ಲಿ ಶಶಿಯು' (ಗೀತಾ. ೧೦.೨೧).

೪೪೨. ಕ್ಷಮಃ— ಸಮಸ್ತಕಾರ್ಯಗಳಲ್ಲಿ ಸಮರ್ಥನಾಗಿರುವವನು ; ಅಥವಾ ಸಹನೆಯುಳ್ಳವನು.

'ಕ್ಷಮಯಾ ಪೃಥಿವೀಸಮಃ' 'ಸಹನೆಯಲ್ಲಿ (ಶ್ರೀರಾಮನು) ಪೃಥ್ವಿಗೆ ಸಮಾನನು' (ವಾ. ರಾ. ೧.೧.೧೮).

೪೪೩. ಕ್ಷಾಮಃ—ಸರ್ವವಿಕಾರಗಳು ನಾಶವಾಗಿ ಹೋದಮೇಲೆ ಸ್ವಾತ್ಮಭಾವದಿಂದ ಅವಸ್ಥಿತನಾಗಿರುವವನು.

೪೪೪. ಸಮೀಹನಃ— ಸೃಷ್ಟ್ಯಾದಿಕಾರ್ಯಗಳಿಗೋಸ್ಕರ ಉಚಿತವಾಗಿ ಸಂಕಲ್ಪಿಸುವವನು.

೪೪೫. ಯಜ್ಞಃ—ಸರ್ವಜ್ಞಸ್ವರೂಪನಾಗಿರುವನು.

ಅಥವಾ ಸಮಸ್ತದೇವತೆಗಳನ್ನು ಸಂತೋಷಪಡಿಸಲು ಯಜ್ಞರೂಪದಿಂದ ಪ್ರವರ್ತಿಸುವವನು.

'ಯಜ್ಞೋ ವೈ ವಿಷ್ಣುಃ' 'ಯಜ್ಞವು ವಿಷ್ಣುವೇ' (ತೈ. ಸಂ. ೧.೭.೩)

೪೪೬. ಇಜ್ಯಃ—ಯಜ್ಞಗಳ ಮೂಲಕ ಪೂಜಿಸಲ್ಪಡತಕ್ಕವನು.

'ಯೇ ಯಜಂತಿ ಮುಖ್ಯೈಃ ಪುಣ್ಯೈಃ...ವಿಷ್ಣುಮೇವ ಜಯಂತಿ ತೇ' 'ಯಾರು ಪವಿತ್ರವಾದ ಯಜ್ಞಗಳ ಮೂಲಕ ದೇವತಾದಿಗಳನ್ನೂ ಪಿತೃಗಳನ್ನೂ ಪೂಜಿಸುತ್ತಾರೋ ಅವರು ಆತ್ಮದಿಂದ ಆತ್ಮನಾದ ವಿಷ್ಣುವನ್ನೇ ಪೂಜಿಸುತ್ತಾರೆ' (ಹರಿ. ೩.೪೦.೨೭).

೪೪೭. ಮಹೇಜ್ಯಃ— ಯಜ್ಞಗಳಮೂಲಕ (ಎಲ್ಲ ದೇವತೆಗಳಿಗಿಂತಲೂ) ಪ್ರಕೃಷ್ಟವಾಗಿ ಪೂಜಿಸಲ್ಪಡತಕ್ಕವನು.

ಯಜ್ಞಗಳ ಮೂಲಕ ಪೂಜಿಸಲ್ಪಡತಕ್ಕ ದೇವತೆಗಳೆಲ್ಲರಲ್ಲಿ ಭಗವಂತನೇ ಪ್ರಕೃಷ್ಟವಾಗಿ ಪೂಜಿಸಲ್ಪಡತಕ್ಕವನು; ಏಕೆಂದರೆ ಭಗವಂತನು ಮೋಕ್ಷರೂಪವಾದ ಫಲವನ್ನು ಕೊಡುವವನು. ಆದುದರಿಂದ ಭಗವಂತನಿಗೆ ಮಹೇಜ್ಯ ಎಂದು ಹೆಸರು.

೪೪೮— ಕ್ರತುಃ—ಯೂಪಸಹಿತವಾದ ಯಜ್ಞವಾಗಿರುವವನು.

ಯೂಪಸಹಿತವಾದ ಯಜ್ಞಕ್ಕೆ ಕ್ರತು ಎಂದು ಹೇಳುತ್ತಾರೆ. ಭಗವಂತನೇ ಆ ಯಜ್ಞವಾಗಿರುವವನಾದ್ದರಿಂದ ಅವನಿಗೂ ಕ್ರತು ಎಂದು ಹೆಸರು.

೪೪೯. ಸತ್ರಮ್—ಸತ್ಪುರುಷರನ್ನು ಕಾಪಾಡುವವನು.

೪೫೦. ಸತಾಂ ಗತಿಃ— ಮುಮುಕ್ಷುಗಳಿಗೆ ಗತಿಯಾಗಿರುವವನು.

ಮುಮುಕ್ಷುಗಳಿಗೆ ಭಗವಂತನು ಹೊರತು ಅನ್ಯ ಯಾವ ಗತಿಯೂ ಇಲ್ಲ. ಆದುದರಿಂದ ಭಗವಂತನಿಗೆ ಸತಾಂ ಗತಿ ಎಂದು ಹೇಳುತ್ತಾರೆ.

೪೫೧. ಸರ್ವದರ್ಶೀ—ಸರ್ವಪ್ರಾಣಿಗಳ ಕೃತಾಕೃತಕರ್ಮಗಳ ನ್ನೆಲ್ಲ ತನ್ನ ಸ್ವಾಭಾವಿಕಜ್ಞಾನದಿಂದ ನೋಡುವವನು.

೪೫೨. ವಿಮುಕ್ತಾತ್ಮಾ—ಸ್ವಭಾವತಃ ಮುಕ್ತವಾಗಿರುವ ಆತ್ಮವುಳ್ಳವನು.

ಅಥವಾ ವಿಮುಕ್ತನೂ ಆತ್ಮನೂ ಆಗಿರುವವನು.

೪೫೩. ಸರ್ವಜ್ಞಃ—ಎಲ್ಲವೂ ಜ್ಞಾತೃವೂ ಆಗಿರುವವನು.

'ಇದಂ ಸರ್ವಂ ಯದಯಮಾತ್ಮಾ' 'ಇದೆಲ್ಲವೂ ಈ ಆತ್ಮನೇ' (ಬೃ. ಉ- ೨. ೪. ೬).

೪೫೪. ಜ್ಞಾನಮುತ್ತಮಮ್— ಉತ್ತಮವಾದ ಜ್ಞಾನವಾಗಿರುವವನು.

ಪ್ರಕೃಷ್ಟವೂ ಅಜನ್ಯವೂ ಅನವಚ್ಛಿನ್ನವೂ ಮತ್ತು ಸರ್ವವನ್ನು ಸಾಧಿಸುವಂತಹ ಶ್ರೇಷ್ಠಸಾಧನವೂ ಆಗಿರುವ ಜ್ಞಾನವೇ ಉತ್ತಮವಾದ ಜ್ಞಾನವು. ಇದು ಬ್ರಹ್ಮವೇ ಆಗಿರುವುದು.

'ಸತ್ಯಂ ಜ್ಞಾನಮನಂತಂ ಬ್ರಹ್ಮ' 'ಬ್ರಹ್ಮವು ಸತ್ಯವೂ ಜ್ಞಾನವೂ ಅನಂತರವೂ (ಆಗಿದೆ)' (ತೈ. ಉ. ೨. ೧).

೪೫೫. ಸುವ್ರತಃ—ಶುಭವಾದ ವ್ರತವುಳ್ಳವನು.

'ಸಕೃದೇವ ಪ್ರಪನ್ನಾಯ...ದದಾಮ್ಯೇತದ್ ವ್ರತಂ ಮಮ' 'ಯಾವನು ಒಂದು ಬಾರಿಯಾದರೂ ನನ್ನನ್ನು ಶರಣುಹೋಗುತ್ತಾನೋ ಮತ್ತು 'ನಾನು ನಿನ್ನವನು' ಎಂದು ನನ್ನನ್ನು ಯಾಚಿಸುತ್ತಾನೋ ಅವನಿಗೆ ಸರ್ವಪ್ರಾಣಿಗಳಿಂದ ಅಭಯ ಕೊಡುತ್ತೇನೆ. ಇದು ನನ್ನ ವ್ರತವು' (ವಾ. ರಾ. ೬. ೧೮. ೩೩).

೪೫೬. ಸುಮುಖಃ—ಸುಂದರವಾದ ಮುಖವುಳ್ಳವನು.

ಅಥವಾ ಭಗವಂತನು ಸರ್ವವಿದ್ಯೆಗಳನ್ನು ಉಪದೇಶಿಸಿದವನಾದ್ದರಿಂದ ಸುಮುಖನು.

'ಪ್ರಸನ್ನವದನಂ ಚಾರುಪದ್ಮಪತ್ರಾಯತೇಕ್ಷಣಮ್' '(ವಿಷ್ಣುವು) ಪ್ರಸನ್ನವದನನೂ ಸುಂದರವಾದ ಪದ್ಮಪತ್ರಗಳಂತೆ ವಿಶಾಲವಾದ ಕಣ್ಣುಗಳುಳ್ಳವನೂ (ಆಗಿರುವನು)' (ವಿಷ್ಣು. ೬.೭.೮೦). 'ಯೋ ಬ್ರಹ್ಮಾಣಂ ವಿದಧಾತಿ ಪೂರ್ವಂ ಯೋ ವೈ ವೇದಾಂಶ್ಚ ಪ್ರಹಿಣೋತಿ ತಸ್ಮೈ' 'ಯಾವನು (ಭಗವಂತನು) ಮೊದಲು ಬ್ರಹ್ಮನನ್ನು ಹುಟ್ಟಿಸಿದನೋ ಮತ್ತು ಯಾವನು ವೇದಗಳನ್ನು ಉಪದೇಶಿಸಿದನೋ' (ಶ್ವೇ. ಉ. ೬.೧೮).

೪೫೭. ಸೂಕ್ಷ್ಮಃ—ಶಬ್ದಾದಿಸ್ಥೂಲಕಾರಣಗಳಿಲ್ಲದವನು.

'ಸರ್ವಗತಂ ಸುಸೂಕ್ಷ್ಮಂ' (ಬ್ರಹ್ಮವು) ಸರ್ವಗತವೂ (ಸರ್ವವ್ಯಾಪಿಯೂ) ಅತಿಸೂಕ್ಷ್ಮವೂ (ಆಗಿದೆ)' (ಮು. ಉ. ೧.೧೬.೬).

೪೫೮. ಸುಘೋಷಃ—ಪವಿತ್ರವಾದ ವೇದರೂಪವಾದ ಘೋಷವುಳ್ಳವನು.

ಅಥವಾ ಮೇಘದಂತೆ ಗಂಭಿರವಾದ ಘೋಷವುಳ್ಳವನಾದುದರಿಂದ ಭಗವಂತನು ಸುಘೋಷನು.

೪೫೯. ಸುಖದಃ—ಸದಾಚಾರಗಳಿಗೆ ಸುಖವನ್ನು ಕೊಡುವನು.

ಅಥವಾ ದುರಾಚಾರಿಗಳ ಸುಖವನ್ನು ನಾಶಮಾಡುವವನು. ಆದುದರಿಂದ ಭಗವಂತನಿಗೆ ಸುಖದ ಎಂದು ಹೆಸರು.

೪೬೦. ಸುಹೃತ್—ಪ್ರತ್ಯುಪಕಾರವನ್ನು ಅಪೇಕ್ಷಿಸದೆ ಉಪಕಾರವನ್ನು ಮಾಡುವವನು.

೪೬೧. ಮನೋಹರಃ—ನಿರತಿಶಯಾನಂದರೂಪನು.

'ಯೋ ವೈ ಭೂಮಾ ತತ್ ಸುಖಂ ನಾಲ್ಪೇ ಸುಖಮಸ್ತಿ' 'ಯಾವುದು ನಿರತಿಶಯವಾದುದೋ ಅದೇ ಸುಖವು; ಅಲ್ಪದಲ್ಲಿ ಸುಖವಿಲ್ಲ' (ಛಾ.ಉ. ೭.೭೩.೧).

೪೬೨. ಜಿತಕ್ರೋಧಃ—ಕ್ರೋಧವನ್ನು ಜಯಿಸಿದವನು.

ಭಗವಂತನು ವೇದಮರ್ಯಾದೆಯನ್ನು ಸ್ಥಾಪಿಸುವುದಕ್ಕೋಸ್ಕರ ದೇವಶತ್ರುಗಳನ್ನು ಕೊಲ್ಲುತ್ತಾನೆಯೇ ಹೊರತು ಕೋಪವಶದಿಂದ ಕೊಲ್ಲುವುದಿಲ್ಲ.

೪೬೩. ವೀರಬಾಹುಃ—ಪರಾಕ್ರಮಶಾಲಿಗಳಾದ ಬಾಹುಗಳುಳ್ಳವನು.

ಭಗವಂತನು ಅಸುರರನ್ನು ಸಂಹರಿಸಿ ವೇದಮರ್ಯಾದೆಯನ್ನು ಸ್ಥಾಪಿಸುವ ಪರಾಕ್ರಮಶಾಲಿಯಾದ ಬಾಹುಗಳುಳ್ಳವನು. ಆದುದರಿಂದ ಅವನು ವೀರಬಾಹು.

೪೬೪. ವಿದಾರಣಃ—ಅಧಾರ್ಮಿಕರನ್ನು ಸೀಳಿಬಿಡುವನು.

೪೬೫. ಸ್ವಾಪನಃ—ಪ್ರಾಣಿಗಳನ್ನು ನಿದ್ರಿಸುವಂತೆ ಮಾಡುವವನು.

ಅಂದರೆ ತನ್ನ ಮಾಯೆಯಿಂದ ಪ್ರಾಣಿಗಳನ್ನು ಆತ್ಮಜ್ಞಾನರಹಿತರನ್ನಾಗಿ ಮಾಡುವವನು.

೪೬೬. ಸ್ವವಶಃ—ಸ್ವತಂತ್ರನಾಗಿರುವವನು.

ಭಗವಂತನು ಜಗದುತ್ಪತ್ತಿಸ್ಥಿತಿಲಯಗಳಿಗೆ ಹೇತುವಾಗಿರುವನಾದುದರಿಂದ ಸ್ವತಂತ್ರನಾಗಿರುವನು. ಆದುದರಿಂದ ಅವನಿಗೆ ಸ್ವವಶ ಎಂದು ಹೆಸರು.

೪೬೭. ವ್ಯಾಪೀ—ಆಕಾಶದಂತೆ ಸರ್ವವ್ಯಾಪಿಯಾಗಿರುವವನು.

ಅಥವಾ ಕಾರಣ ರೂಪದಿಂದ ಸರ್ವ ಕಾರ್ಯಗಳನ್ನು ವ್ಯಾಪಿಸುವವನಾದ್ದರಿಂದ ಭಗವಂತನಿಗೆ ವ್ಯಾಪೀ ಎಂದು ಹೆಸರು.

೪೬೮. ನೈಕಾತ್ಮಾ—ಅನೇಕ ವಿಧವಾಗಿ ಇರುವವನು.

ಭಗವಂತನು ಜಗತ್ ಸೃಷ್ಟಿ ಮೊದಲಾದುವುಗಳಲ್ಲಿ ಆವಿರ್ಭೂತವಾಗಿರುವ ನಿಮಿತ್ತಶಕ್ತಿಗಳೆಂಬ ವಿಭೂತಿಗಳಿಂದ ಅನೇಕ ವಿಧವಾಗಿ ಇರುತ್ತಾನೆ.

೪೬೯. ನೈಕಕರ್ಮಕೃತ್—ಜಗತ್ತಿನ ಉತ್ಪತ್ತಿ ಅಭಿವೃದ್ಧಿ ಮತ್ತು ನಾಶ—ಇವೇ ಮೊದಲಾದ ಕರ್ಮಗಳನ್ನು ಮಾಡುವವನು.

೪೭೦. ವತ್ಸರಃ—ಸಕಲವಸ್ತುಗಳಿಗೆ ವಾಸಸ್ಥಾನನಾಗಿರುವವನು.

೪೭೧. ವತ್ಸಲಃ—ಭಕ್ತರಲ್ಲಿ ಸ್ನೇಹವುಳ್ಳವನು.

೪೭೨. ವತ್ಸೀ—(ಗೋಪಾಲನಾಗಿ) ಕರುಗಳನ್ನು ಪಾಲಿಸಿದವನು.

ಅಥವಾ ಭಗವಂತನು ಜಗತ್ತಿಗೆ ಪಿತನು; ಪ್ರಜೆಗಳೆಲ್ಲ ಅವನ ಮಕ್ಕಳು. ಆದುದರಿಂದ ಭಗವಂತನು ವತ್ಸೀ.

೪೭೩. ರತ್ನಗರ್ಭಃ—ರತ್ನರೂಪವಾದ ಗರ್ಭವಿರುವ ಸಮುದ್ರವಾಗಿರುವವನು.

ರತ್ನಗಳೆಲ್ಲ ಯಾವನ ಗರ್ಭವಾಗಿರುವುವೋ ಆ ಸಮುದ್ರವು ಭಗವಂತನ ಒಂದು ವಿಭೂತಿಯಾಗಿರುವುದು. ಆದುದರಿಂದ ಭಗವಂತನಿಗೆ ರತ್ನಗರ್ಭ ಎಂದುಹೆಸರು.

೪೭೪. ಧನೇಶ್ವರಃ—ಸರ್ವಸಂಪತ್ತುಗಳಿಗೆ ಒಡೆಯನಾಗಿರುವವನು.

೪೭೫. ಧರ್ಮಗುಪ್—ಧರ್ಮವನ್ನು ರಕ್ಷಿಸುವವನು.

'ಧರ್ಮಸಂಸ್ಥಾಪನಾರ್ಥಾಯ ಸಂಭವಾಮಿ ಯುಗೇ ಯುಗೇ' 'ಧರ್ಮಸ್ಥಾಪನೆಗೋಸ್ಕರ ಪ್ರತಿಯುಗದಲ್ಲೂ ಹುಟ್ಟುತ್ತೇನೆ' (ಗೀತಾ. ೪. ೮).

೪೭೬. ಧರ್ಮಕೃತ್—ಧರ್ಮವನ್ನು ಆಚರಿಸುವವನು.

ಭಗವಂತನು ಧರ್ಮಾಧರ್ಮಹೀನನಾದರೂ ಧರ್ಮದ ಮರ್ಯಾದೆಯನ್ನು ಸ್ಥಾಪಿಸುವುದಕ್ಕಾಗಿ ಧರ್ಮವನ್ನೇ ಆಚರಿಸುತ್ತಾನೆ. ಆದುದರಿಂದ ಅವನಿಗೆ ಧರ್ಮಕೃತ್ ಎಂದು ಹೆಸರು.

೪೭೭. ಧರ್ಮೀ—ಧರ್ಮಗಳಿಗೆಲ್ಲ ಆಧಾರವಾಗಿರುವವನು.

೪೭೮. ಸತ್—ಸತ್ಯವಾಗಿರುವ ಪರಬ್ರಹ್ಮವಾಗಿರುವವನು.

'ಸದೇವ ಸೋಮ್ಯೇದಮ್' 'ಎಲೈ ಸೋಮ್ಯನೆ, (ಸೃಷ್ಟಿಗೆ ಮೊದಲು) ಇದು (ಜಗತ್ತು) ಸತ್ ಸ್ವರೂಪವೇ' (ಛಾ. ಉ. ೬. ೨. ೧).

೪೭೯. ಅಸತ್—ಅಪರಬ್ರಹ್ಮವಾಗಿರುವವನು.

ಪ್ರಪಂಚರೂಪದಿಂದಿರುವ ಬ್ರಹ್ಮಕ್ಕೆ ಅಪರಬ್ರಹ್ಮ ಎಂದು ಹೇಳುತ್ತಾರೆ.

೪೮೦. ಕ್ಷರಮ್—ಸರ್ವಭೂತಗಳಾಗಿರುವವನು.

೪೮೧. ಅಕ್ಷರಮ್—ಕೂಟಸ್ಥನಾಗಿರುವವನು.

'ಕ್ಷರಃ ಸರ್ವಾಣಿ ಭೂತಾನಿ ಕೂಟಸ್ಥೋಽಕ್ಷರ ಉಚ್ಯತೇ' 'ಕ್ಷರ ಎಂದರೆ ಸರ್ವಭೂತಗಳು. ಕೂಟಸ್ಥನು ಅಕ್ಷರನು ಎಂದು ಹೇಳಲ್ಪಡುತ್ತಾನೆ' (ಗೀತಾ. ೧೫. ೧೬).

೪೮೨. ಅವಿಜ್ಞಾತಾ—ವಿಕಲ್ಪಜ್ಞಾನರಹಿತನಾಗಿರುವವನು.

ಆತ್ಮನಲ್ಲಿ ಕರ್ತೃತ್ವಾದಿ ವಿಕಲ್ಪಜ್ಞಾನವು ಕಲ್ಪಿತವಾದುದಾಗಿರುವುದು. ಆದುದರಿಂದ ಅದರ ವಾಸನೆಯಿಂದ ಅವಗುಂಠಿತನಾದ ಜೀವನು ವಿಜ್ಞಾತೃವೆಂದು ಹೇಳಲ್ಪಡುತ್ತಾನೆ. ವಿಷ್ಣುವು ವಿಕಲ್ಪಜ್ಞಾನರಹಿತನಾದುದರಿಂದ ಅವಿಜ್ಞಾತೃವು.

೪೮೩. ಸಹಸ್ರಾಂಶುಃ— ಸೂರ್ಯನಾಗಿರುವವನು.

ಸೂರ್ಯ ಮೊದಲಾದವರಲ್ಲಿ ಇರುವ ಕಿರಣಗಳೆಲ್ಲ ವಾಸ್ತವವಾಗಿ ಭಗವಂತನ ಕಿರಣಗಳಾದ್ದರಿಂದ ಭಗವಂತನೇ ಮುಖ್ಯನಾದ ಸಹಸ್ರಾಂಶುವು.

'ಯೇನ ಸೂರ್ಯಸ್ತಪತಿ ತೇಜಸೇದ್ಧಃ' '(ಭಗವಂತನ) ತೇಜಸ್ಸಿನಿಂದ ಪ್ರಜ್ವಲಿತನಾಗಿ ಸೂರ್ಯನು ತಪಿಸುತ್ತಾನೆ (ಪ್ರಕಾಶಿಸುತ್ತಾನೆ)' (ತೈ. ಬ್ರಾ' ೧೨. ೨೭. ೭). 'ಯದಾದಿತ್ಯಗತಂ ತೇಜಃ' 'ಸೂರ್ಯನಲ್ಲಿ ಯಾವ ತೇಜಸ್ಸು ಉಂಟೋ (ಅದು ನನ್ನದೆಂದು ತಿಳಿ)' (ಗೀತಾ. ೧೫. ೧೨).

೪೮೪. ವಿಧಾತಾ—ವಿಶೇಷವಾಗಿ ಆಧಾರವಾಗಿರುವವನು.

ಸಮಸ್ತ ಭೂತಗಳಿಗೆ ಆಧಾರವಾಗಿರುವ ಶೇಷದಿಗ್ಗಜಗಳು ಮತ್ತು ಪರ್ವತ ಗಳು ಇವುಗಳಿಗೆ ಭಗವಂತನು ವಿಶೇಷವಾಗಿ ಆಧಾರವಾಗಿರುವವನು.

೪೮೫. ಕೃತಲಕ್ಷಣಃ—ನಿತ್ಯಸಿದ್ಧ ಚೈತನ್ಯಸ್ವರೂಪನು.

ಅಥವಾ ಭಗವಂತನು ಶಾಸ್ತ್ರಗಳನ್ನು ರಚಿಸಿದವನಾದುದರಿಂದ ಅವನಿಗೆ ಕೃತಲಕ್ಷಣ ಎಂದು ಹೆಸರು.

'ವೇದಾಃ ಶಾಸ್ತ್ರಾಣಿ ವಿಜ್ಞಾನಮೇತತ್ ಸರ್ವಂ ಜನಾರ್ದನಾತ್', ವೇದ ಗಳು ಶಾಸ್ತ್ರಗಳು ಮತ್ತು ವಿಜ್ಞಾನ–ಇವೆಲ್ಲವೂ ಜನಾರ್ದನನಿಂದ ಉಂಟಾಗಿವೆ.' (ವಿಷ್ಣು. ಸ).

೪೮೬. ಗಭಸ್ತಿನೇಮಿಃ—ಕಿರಣಮಂಡಲದ ಮಧ್ಯದಲ್ಲಿ ಸೂರ್ಯ ರೂಪದಿಂದಿರುವನು.

೪೮೭. ಸತ್ತ್ವಸ್ಥಃ—ಪ್ರಕಾಶವನ್ನು ಬೀರುವ ಸತ್ತ್ವಗುಣವನ್ನು ಪ್ರಧಾನವಾಗಿ ಅವಲಂಬಿಸಿರುವವನು.

ಅಥವಾ ಸಮಸ್ತ ಪ್ರಾಣಿಗಳಲ್ಲಿ ಅವಸ್ಥಿತನಾಗಿರುವವನು.

೪೮೮. ಸಿಂಹಃ—ಸಿಂಹದಂತೆ ಪರಾಕ್ರಮಶಾಲಿಯಾಗಿರುವವನು.

೪೮೯. ಭೂತಮಹೇಶ್ವರಃ—ಭೂತಗಳಿಗೆ ಮಹಾನ್ ಈಶ್ವರನಾಗಿರುವವನು.

ಅಥವಾ ನಿಜವಾಗಿ ವಿಷ್ಣುವೇ ಅತ್ಯಂತ ಶ್ರೇಷ್ಠನಾದ ಈಶ್ವರನಾಗಿರುವನಾದುದರಿಂದ ಅವನಿಗೆ ಭೂತಮಹೇಶ್ವರ ಎಂದು ಹೆಸರು.

೪೯೦. ಆದಿದೇವಃ—ಸರ್ವಭೂತಗಳಿಗೆ ಆದಿಯೂ ದೇವನೂ ಆಗಿರುವವನು.

೪೯೧. ಮಹಾದೇವಃ—ಸಕಲಭಾವಗಳನ್ನು ತ್ಯಜಿಸಿ ಆತ್ಮಜ್ಞಾನಯೋಗೈಶ್ವರ್ಯದಿಂದ ಮಹಿಮಾನ್ವಿತನಾಗಿರುವವನು.

೪೯೨. ದೇವೇಶಃ—ದೇವತೆಗಳಿಗೆ ಸ್ವಾಮಿಯಾಗಿರುವವನು.

ಭಗವಂತನು ದೇವತೆಗಳಲ್ಲೆಲ್ಲ ಪ್ರಧಾನನಾದುದರಿಂದ ಅವರಿಗೆಲ್ಲ ಸ್ವಾಮಿಯಾಗಿರುವನು.

೪೯೩. ದೇವಭೃದ್ ಗುರುಃ–ದೇವತೆಗಳನ್ನೆಲ್ಲ ಪಾಲಿಸುವ ಇಂದ್ರನಿಗೂ ಗುರುವೆನಿಸಿದವನು.

ಅಥವಾ ಭಗವಂತನು ದೇವತೆಗಳನ್ನೆಲ್ಲ ಪೋಷಿಸುವವನೂ, ಸರ್ವವಿದ್ಯೆಗಳ ವ್ಯಕ್ತೃವೂ ಆಗಿರುವನಾದುದರಿಂದ ಅವರಿಗೆ ದೇವಭೃದ್‌ಗುರು ಎಂದು ಹೆಸರು.

೪೯೪. ಉತ್ತರಃ—ಸಂಸಾರಬಂಧನದಿಂದ ಪಾರುಮಾಡುವವನು.

ಅಥನಾ ಸರ್ವೋತ್ಕೃಷ್ಟನು.

'ವಿಶ್ವಸ್ಮಾದಿಂದ್ರ ಉತ್ತರಃ' 'ಇಂದ್ರನು (ಭಗವಂತನು) ಎಲ್ಲಕ್ಕಿಂತ ಶ್ರೇಷ್ಠನು' (ಶ್ರುತಿ).

೪೯೫. ಗೋಪತಿಃ—ಗೋವುಗಳನ್ನು ಪಾಲಿಸಿದವನು.

ಗೋಪವೇಷಧಾರಿಯಾಗಿ ಗೋವುಗಳನ್ನು ಪಾಲಿಸಿದವನಾದುದರಿಂದ ಶ್ರೀಕೃಷ್ಣನಿಗೆ ಗೋಪತಿ ಎಂದು ಹೆಸರು. ಅಥವಾ ಪೃಥ್ವಿಗೆ ಒಡೆಯನಾದುದರಿಂದ ಭಗವಂತನಿಗೆ ಗೋಪತಿ ಎಂದು ಹೆಸರು.

೪೯೬. ಗೋಪ್ತಾ—ಜಗದ್ರಕ್ಷಕನು.

ಭಗವಂತನು ಸಮಸ್ತಭೂತಗಳನ್ನು ಪಾಲಿಸುವ ಜಗದ್ರಕ್ಷಕನಾದುದರಿಂದ ಅವನಿಗೆ ಗೋಪ್ತಾ ಎಂದು ಹೆಸರು.

೪೯೭. ಜ್ಞಾನಗಮ್ಯಃ—ಜ್ಞಾನದಿಂದ ತಿಳಿಯಲ್ಪಡುವವನು.

ಭಗವಂತನು ಕರ್ಮದಿಂದಾಗಲಿ, ಜ್ಞಾನಕರ್ಮಗಳ ಸಮುಚ್ಚಯದಿಂದಾಗಲಿ ತಿಳಿಯಲ್ಪಡುವವನಲ್ಲ; ಕೇವಲ ಜ್ಞಾನವೊಂದರಿಂದಲೇ ತಿಳಿಯಲ್ಪಡುವವನು. ಆದುದರಿಂದ ಅವನು ಜ್ಞಾನಗಮ್ಯನು.

೪೯೮. ಪುರಾತನಃ—ಪುರಾತನಕಾಲದಿಂದಲೂ ಇರುವವನು.

ಕಾಲದಿಂದ ಅಪರಿಚ್ಛಿನ್ನನಾದುದರಿಂದ ಭಗವಂತನು ಪುರಾತನಕಾಲದಿಂದಲೂ ಇದ್ದಾನೆ. ಆದುದರಿಂದ ಅವನಿಗೆ ಪುರಾತನ ಎಂದು ಹೆಸರು.

೪೯೯. ಶರೀರಭೃತ್—ಶರೀರಕ್ಕೆ ಆಧಾರವಾಗಿರುವವನು.

ಶರೀರಾರಂಭಕ್ಕೆ ಕಾರಣವಾದ ಭೂತಗಳಿಗೆ ಆಧಾರವಾಗಿರುವವನಾದ್ದರಿಂದ ಪ್ರಾಣರೂಪಧರನಾದ ಭಗವಂತನಿಗೆ ಶರೀರಭೃತ್ ಎಂದು ಹೆಸರು.

೫೦೦. ಭೋಕ್ತಾ—ಜಗತ್ಪಾಲಕನಾಗಿರುವವನು.

ಅಥವಾ ಪರಮಾನಂದವನ್ನು ಸಮಗ್ರವಾಗಿ ಭೋಗಿಸುವವನು.

೫೦೧. ಕಪೀಂದ್ರ—ವರಾಹರೂಪವನ್ನು ಧರಿಸಿದವನು.

ಅಥವಾ ಕಪಿಗಳಿಗೆಲ್ಲ ಒಡೆಯನಾದ ಶ್ರೀರಾಘವನು.

೫೦೨. ಭೂರಿದಕ್ಷಿಣಃ—ಅನೇಕ ದಕ್ಷಿಣೆಗಳಿರುವವನು.

ಧರ್ಮಮರ್ಯಾದೆಯನ್ನು ತೋರಿಸುತ್ತ ಯಜ್ಞವನ್ನು ಮಾಡುತ್ತಿರುವ ಭಗವಂತನಿಗೆ ಅನೇಕ ಯಜ್ಞ ದಕ್ಷಿಣೆಗಳಿವೆ. ಆದುದರಿಂದ ಅವನಿಗೆ ಭೂರಿದಕ್ಷಿಣ ಎಂದು ಹೆಸರು.

೫೦೩. ಸೋಮಪಃ—ಸೋಮರಸವನ್ನು ಪಾನಮಾಡುವವನು.

ಭಗವಂತನು ಸಕಲಯಜ್ಞಗಳಲ್ಲಿ ಪೂಜಿಸಲ್ಪಡುವ ದೇವತಾರೂಪದಿಂದ ಸೋಮರಸವನ್ನು ಪಾನಮಾಡುತ್ತಾನೆ. ಆದುದರಿಂದ ಅವನಿಗೆ ಸೋಮಪ ಎಂದು ಹೆಸರು. ಅಥವಾ ಭಗವಂತನು ಯಜಮಾನರೂಪದಿಂದ (ಯಜ್ಞ ಮಾಡುವವನ ರೂಪದಿಂದ) ಧರ್ಮಮರ್ಯಾದೆಯನ್ನು ತೋರಿಸುತ್ತ ಸೋಮರಸವನ್ನು ಪಾನ ಮಾಡುತ್ತಾನೆ. ಆದುದರಿಂದ ಅವನಿಗೆ ಸೋಮಪ ಎಂದು ಹೆಸರು.

೫೦೪. ಅಮೃತಪಃ—ಆತ್ಮರೂಪವಾದ ಅಮೃತವನ್ನು ಪಾನ ಮಾಡುವವನು.

ಅಥವಾ ಭಗವಂತನು ಅಸುರರಿಂದ ವಶಪಡಿಸಿಕೊಂಡ ಅಮೃತವನ್ನು ರಕ್ಷಿಸಿ ಮತ್ತು ಅದನ್ನು ದೇವತೆಗಳಿಗೆಲ್ಲ ಕುಡಿಸಿ, ತಾನೂ ಕುಡಿದನು, ಆದುದರಿಂದ ಅವನಿಗೆ ಅಮೃತಪ ಎಂದು ಹೆಸರು.

೫೦೫. ಸೋಮಃ—ಚಂದ್ರರೂಪದಿಂದ ಔಷಧಿಗಳನ್ನು (ಸಸ್ಯಗಳನ್ನು) ಪೋಷಿಸುವವನು.

ಅಥವಾ ಉಮೆಯೊಂದಿಗೆ ಒಡಗೂಡಿ ಇರುವ ಶಿವನು.

೫೦೬. ಪುರುಜಿತ್—ಅನೇಕರನ್ನು ಜಯಿಸಿದವನು.

೫೦೭. ಪುರುಸತ್ತಮಃ— ವಿಶ್ವರೂಪವನ್ನು ಧರಿಸಿದವನೂ ಉತ್ಕೃಷ್ಟನೂ ಆಗಿರುವವನು.

ಭಗವಂತನು ವಿಶ್ವರೂಪವನ್ನು ಧರಿಸದವನಾದುದರಿಂದ ಪುರು ಆಗಿರುವನು ಮತ್ತು ಉತ್ಕೃಷ್ಟನಾದುದರಿಂದ ಸತ್ತಮನು. ಪುರುವೂ ಸತ್ತಮನೂ ಆದುದರಿಂದ ಭಗವಂತನು ಪುರುಸತ್ತಮನು.

೫೦೮. ವಿನಯಃ—ದುಷ್ಟರನ್ನು ಶಿಕ್ಷಿಸುವವನು.

೫೦೯. ಜಯಃ—ಸಮಸ್ತಭೂತಗಳನ್ನು ಜಯಿಸುವವನು.

೫೧೦. ಸತ್ಯಸಂಧಃ—ಸತ್ಯಸಂಕಲ್ಪನಾಗಿರುವವನು.

೫೧೧. ದಾಶಾರ್ಹಃ—ದಾನವನ್ನು ಸ್ವೀಕರಿಸಲು ಯೋಗ್ಯನಾಗಿರುವವನು.

ಅಥವಾ ದಶಾರ್ಹಕುಲದಲ್ಲಿ ಶ್ರೀಕೃಷ್ಣನಾಗಿ ಹುಟ್ಟಿದವನು.

೫೧೨. ಸಾತ್ವತಾಂ ಪತಿಃ— ಸಾತ್ವತವಂಶದ ಯಾದವರಿಗೆ ಅಥವಾ ವೈಷ್ಣವರಿಗೆ ಸ್ವಾಮಿಯಾಗಿರುವವನು.

ಅಥವಾ ಸಾತ್ವತ ಎಂಬ ಹೆಸರಿನ ತಂತ್ರಗಳನ್ನು ಅನುಸರಿಸುವ ಭಾಗವತರ ಯೋಗಕ್ಷೇಮವನ್ನು ನೋಡಿಕೊಳ್ಳುವವನು.

೫೧೩. ಜೀವಃ—ಕ್ಷೇತ್ರಜ್ಞರೂಪದಿಂದ ಪ್ರಾಣಗಳನ್ನು ಧರಿಸುವವನು.

೫೧೪. ವಿನಯಿತಾಸಾಕ್ಷೀ—ಪ್ರಜೆಗಳ ವಿನಯ ಭಾವವನ್ನು ಸಾಕ್ಷಾತ್ ನೋಡುವವನು.

ಅಥವಾ ತನಗೆ ಅತಿರಿಕ್ತವಾಗಿ ಏನನ್ನೂ ಕಾಣದವನು (ಅಂದರೆ ತನಗೆ ಅರಿತಿಕ್ತವಾದುದು ಏನೂ ಇಲ್ಲದವನು).

೫೧೫. ಮುಕುಂದಃ— ಮುಕ್ತಿಯನ್ನು ಕೊಡುವವನು.

೫೧೬. ಅಮಿತವಿಕ್ರಮಃ–ಅಪರಿಚ್ಛಿನ್ನಗಳಾದ ಹೆಜ್ಜೆಗಳುಳ್ಳವನು.

(ವಾಮನಾವತಾರದಲ್ಲಿ) ಭಗವಂತನ ಮೂರು ಹೆಜ್ಜೆಗಳು ಅಪರಿಚ್ಛಿನ್ನವಾದುವುಗಳಾಗಿದ್ದುವು. ಆದುದರಿಂದ ಅವನಿಗೆ ಅಮಿತವಿಕ್ರಮ ಎಂದು ಹೆಸರು.

ಅಥವಾ ಅಪರಿಮಿತವಾದ ಶೌರ್ಯವುಳ್ಳವನಾದುದರಿಂದ ಭಗವಂತನು ಅಮಿತ ವಿಕ್ರಮನು.

೫೧೭. ಅಂಭೋನಿಧಿಃ—ದೇವತೆಗಳು ಮನುಷ್ಯರು ಪಿತೃಗಳು ಮತ್ತು ಅಸುರರು—ಇವರಿಗೆ ನಿವಾಸಸ್ಥಾನವಾಗಿರುವವನು.

ಅಥವಾ ಅಂಭೋನಿಧಿ ಎಂದರೆ ಸಾಗರ. ಭಗವಂತನು ಸರೋವರಗಳಲ್ಲಿ ಸಾಗರವಾಗಿರುವವನಾದುದರಿಂದ ಅವನಿಗೆ ಅಂಭೋನಿಧಿ ಎಂದು ಹೆಸರು.

'ಸರಸಾಮಸ್ಮಿ ಸಾಗರಃ' 'ಸರೋವರಗಳಲ್ಲಿ ನಾನು ಸಾಗರನು' (ಗೀತಾ. ೧೦. ೨೪).

೫೧೮. ಅನಂತಾತ್ಮಾ– ದೇಶತಃ ಕಾಲತಃ ಮತ್ತು ವಸ್ತುತಃ ಅಪರಿಚ್ಛಿನ್ನನಾಗಿರುವವನು.

೫೧೯. ಮಹೋದಧಿಶಯಃ-ಮಹಾಸಾಗರದಲ್ಲಿ ಶಯನಮಾಡುವವನು.

ಭಗವಂತನು ಸರ್ವಭೂತಗಳನ್ನು ಸಂಹರಿಸಿ ಇಡೀ ಜಗತ್ತನ್ನು ಜಲಮಯವನ್ನಾಗಿ ಮಾಡಿ ಆ ಮಹಾಸಾಗರದಲ್ಲಿ ಶಯನಮಾಡುತ್ತಾನೆ.

೫೨೦. ಅಂತಕಃ—ಸಮಸ್ತಭೂತಗಳನ್ನು ಕೊನೆಗಾಣಿಸುವವನು.

೫೨೧. ಅಜಃ—ಹುಟ್ಟು ಇಲ್ಲದವನು.

೫೨೨. ಮಹಾರ್ಹಃ—ಪೂಜೆಗೆ ಯೋಗ್ಯನಾಗಿರುವವನು.

೫೨೩. ಸ್ವಾಭಾವ್ಯಃ—ಸ್ವಭಾವದಿಂದಲೇ ಹುಟ್ಟು ಇಲ್ಲದವನು.

ಭಗವಂತನು ನಿತ್ಯಸಿದ್ಧರೂಪನಾದುದರಿಂದ ಸ್ವಭಾವದಿಂದಲೇ ಹುಟ್ಟು ಇಲ್ಲದವನು. ಆದುದರಿಂದ ಅವನಿಗೆ ಸ್ವಾಭಾವ್ಯ ಎಂದು ಹೆಸರು.

೫೨೪ ಜಿತಾಮಿತ್ರಃ—ಆಂತರಿಕವೈರಿಗಳನ್ನೂ ಬಾಹ್ಯವೈರಿಗಳನ್ನೂ ಜಯಿಸಿದವನು.

ಭಗವಂತನು ರಾಗದ್ವೇಷಾದಿ ಅಂತರಿಕವೈರಿಗಳನ್ನೂ ರಾವಣ ಕುಂಭಕರ್ಣ ಶಿಶುಪಾಲ ಮೊದಲಾದ ಬಾಹ್ಯವೈರಿಗಳನ್ನೂ ಜಯಿಸಿರುವವನಾಗಿದ್ದಾನೆ.

೫೨೫. ಪ್ರಮೋದನಃ— ಸ್ವಾತ್ಮಾಮೃತವನ್ನು ಪಾನಮಾಡುತ್ತ ನಿತ್ಯವೂ ಆನಂದಪಡುವವನು.

ಅಥವಾ ಧ್ಯಾನಿಗಳಿಗೆ ಧ್ಯಾನಮಾತ್ರದಿಂದಲೇ ಆನಂದವನ್ನುಂಟುಮಾಡುವವನು.

೫೨೬. ಆನಂದಃ—ಆನಂದಸ್ವರೂಪನಾಗಿರುವವನು.

'ಏತಸ್ಯೈ ವಾನಂದಸ್ಯಾನ್ಯಾನಿ ಭೂತಾನಿ ಮಾತ್ರಾ ಮುಪಜೀವಂತಿ' 'ಈ ಆನಂದದ ಒಂದು ಅಂಶಮಾತ್ರವನ್ನು ಅವಲಂಬಿಸಿಯೇ ಅನ್ಯಭೂತಗಳೆಲ್ಲ ಜೀವಿಸುತ್ತವೆ' (ಬೃ. ಉ. ೪. ೩. ೩೨).

೫೨೭. ನಂದನಃ—ಆನಂದಪಡಿಸುವವನು.

೫೨೮. ನಂದಃ—ಸರ್ವೋಪಪತ್ತಿಗಳಿಂದ (ಸರ್ವಸಿದ್ಧಿಗಳಿಂದ) ಸಮೃದ್ಧನಾಗಿರುವವನು. ಅಥವಾ,

ಆನಂದಃ–ಭಗವಂತನಲ್ಲಿ ವೈಷಯಿಕವಾದ ಆನಂದವು ಇಲ್ಲವಾದುದರಿಂದ ಅವನಿಗೆ ಆನಂದ ಎಂದು ಹೆಸರು.

೫೨೯. ಸತ್ಯಧರ್ಮಾ— ಸತ್ಯವಾಗಿರುವ ಧರ್ಮಗಳುಳ್ಳವನು.

ಜ್ಞಾನವೇ ಮೊದಲಾದ ಭಗವಂತನ ಧರ್ಮಗಳು ಸತ್ಯವಾದವುಗಳು. ಅದುದರಿಂದ ಭಗವಂತನಿಗೆ ಸತ್ಯಧರ್ಮಾ ಎಂದು ಹೆಸರು.

೫೩೦. ತ್ರಿವಿಕ್ರಮಃ—ಮೂರು ಹೆಜ್ಜೆಗಳಿಂದ ಮೂರು ಲೋಕಗಳನ್ನು ವ್ಯಾಪಿಸಿದವನು.

ಭಗವಂತನು (ವಾಮನಾವತಾರದಲ್ಲಿ) ತನ್ನ ಮೂರು ಹೆಜ್ಜೆಗಳಿಂದ ಮೂರು ಲೋಕಗಳನ್ನು ವ್ಯಾಪಿಸಿದವನು. ಆದುದರಿಂದ ಅವನಿಗೆ ತ್ರಿವಿಕ್ರಮ ಎಂದು ಹೆಸರು.

೫೩೧. ಮಹರ್ಷಿ ಕಪಿಲಾಚಾರ್ಯಃ — ಸಿದ್ಧಪುರುಷರಲ್ಲಿ ಮಹರ್ಷಿಕಪಿಲಾಚಾರ್ಯನಾಗಿರುವವನು.

ಕಪಿಲಮುನಿಗಳು ಇಡೀ ವೇದವನ್ನು ನೋಡಿದವರಾದುದರಿಂದ (ತಿಳಿದವರಾದುದರಿಂದ) ಮಹರ್ಷಿಗಳು. ಇತರರಾದರೋ ವೇದದ ಒಂದು ಅಂಶವನ್ನು ಮಾತ್ರ ನೋಡಿದವರಾದುದರಿಂದ ಕೇವಲ ಋಷಿಗಳು. ಕಪಿಲಮುನಿಗಳು ಸಾಂಖ್ಯವೆಂಬ ಶುದ್ಧ ತತ್ತ್ವಜ್ಞಾನದ ಆಚಾರ್ಯರೂ ಆಗಿರುವರು. ಆದುದರಿಂದ ಅವರಿಗೆ ಮಹರ್ಷಿ ಕಪಿಲಾಚಾರ್ಯ ಎಂದು ಹೆಸರು. ಭಗವಂತನು ಸಿದ್ಧಪುರುಷರಲ್ಲಿ ಕಪಿಲಮುನಿಯಾಗಿರುವವನಾದುದರಿಂದ ಅವನಿಗೂ ಮಹರ್ಷಿ ಕಪಿಲಾಚಾರ್ಯ ಎಂದು ಹೆಸರು.

'ಸಿದ್ಧಾನಾಂ ಕಪಿಲೋ ಮುನಿಃ' 'ಸಿದ್ಧಪುರುಷರಲ್ಲಿ ನಾನು ಕಪಿಲಮುನಿಯು' (ಗೀತಾ. ೧೦. ೨೬).

೫೩೨. ಕೃತಜ್ಞಃ – ಜಗತ್ತೂ ಆತ್ಮನೂ ಆಗಿರುವವನು.

ಭಗವಂತನು ಕಾರ್ಯರೂಪವಾಗಿರುವ ಜಗತ್ತೂ (ಕೃತಂ) ಆತ್ಮನೂ (ಜ್ಞ) ಆಗಿರುವನಾದುದರಿಂದ ಅವನಿಗೆ ಕೃತಜ್ಞ ಎಂದು ಹೆಸರು.

೫೩೩. ಮೇದಿನೀಪತಿಃ—ಭೂಮಿಗೆ ಒಡೆಯನಾಗಿರುವವನು.

೫೩೪. ತ್ರಿಪದಃ—ಮೂರು ಹೆಜ್ಜೆಗಳನ್ನು ಇಟ್ಟವನು.

'ತ್ರೀಣಿ ಪದಾ ವಿಚಕ್ರಮೇ' '(ಭಗವಂತನು) ಮೂರು ಹೆಜ್ಜೆಗಳಿಂದ (ಜಗತ್ತನ್ನು) ಅಳೆದನು' (ಶ್ರುತಿ).

೫೩೫. ತ್ರಿದಶಾಧ್ಯಕ್ಷಃ— ಜಾಗ್ರತ್ ಸ್ವಪ್ನ ಮತ್ತು ಸುಷುಪ್ತಿ ಎಂಬ ಮೂರು ಅವಸ್ಥೆಗಳಿಗೆ ಸಾಕ್ಷಿಯಾಗಿರುವವನು.

ಗುಣಾವೇಶದಿಂದ ಜಾಗ್ರತ್ ಸ್ವಪ್ನ ಮತ್ತು ಸುಷುಪ್ತಿ ಎಂಬ ಮೂರು ಅವಸ್ಥೆಗಳು ಹುಟ್ಟಿರುವುವು. ಭಗವಂತನು ಈ ಅವಸ್ಥೆಗಳಿಗೆ ಸಾಕ್ಷಿಯಾಗಿರುವ ನಾದುದರಿಂದ ಅವನಿಗೆ ತ್ರಿದಶಾಧ್ಯಕ್ಷ ಎಂದು ಹೆಸರು.

೫೩೬. ಮಹಾಶೃಂಗಃ—ದೊಡ್ಡದಾದ ಕೊಂಬನ್ನು ಧರಿಸಿದವನು.

ಭಗವಂತನು ಮತ್ಸ್ಯರೂಪಿಯಾಗಿ ತನ್ನ ದೊಡ್ಡದಾದ ಕೊಂಬಿಗೆ ನಾವೆಯನ್ನು ಕಟ್ಟಿ ಪ್ರಲಯಸಮುದ್ರದಲ್ಲಿ ಕ್ರೀಡಿಸಿದನು. ಆದುದರಿಂದ ಅವನಿಗೆ ಮಹಾಶೃಂಗ ಎಂದು ಹೆಸರು.

೫೩೭. ಕೃತಾಂತಕೃತ್— ಕಾರ್ಯರೂಪವಾಗಿರುವ ಜಗತ್ತನ್ನು ನಾಶಮಾಡುವವನು.

ಅಥವಾ ಮೃತ್ಯುವನ್ನು ತುಂಡುಮಾಡುವವನು (ನಾಶಮಾಡುವವನು).

೫೩೮. ಮಹಾವರಾಹಃ–ಮಹಾವರಾಹರೂಪವನ್ನು ಧರಿಸಿದವನು.

೫೩೯. ಗೋವಿಂದಃ—ವೇದಾಂತವಾಕ್ಯಗಳ ಮೂಲಕ ತಿಳಿಯಲ್ಪಡುವವನು.

ಅಥವಾ ಮನುಷ್ಯನು ಭಗವಂತನನ್ನು ವಾಣಿಗಳ ಮೂಲಕವೇ ಹೊಂದುತ್ತಾನೆ. ಆದುದರಿಂದ ಭಗವಂತನು ಗೋವಿಂದ ಎನಿಸುತ್ತಾನೆ.

'ಗೋಭಿರೇವ ಯತೋ ವೇದ್ಯೋ ಗೋವಿಂದಃ ಸಮುದಾಹೃತಃ' 'ಭಗವಂತನು ವಾಣಿಗಳಿಂದಲೇ ವೇದ್ಯನಾದುದರಿಂದ ಗೋವಿಂದ ಎಂದು ಕರೆಯಲ್ಪಡುತ್ತಾನೆ.' (ವಿಷ್ಣುತಿಲಕ).

೫೪೦. ಸುಷೇಣಃ—ಸುಂದರವಾದ ಪಾರ್ಷದ ಸಮೂಹವುಳ್ಳವನು.

೫೪೧. ಕನಕಾಂಗದೀ–ಸುವರ್ಣಮಯವಾದ ಭುಜಬಂಧ (ಭುಜಾಭರಣ)ವುಳ್ಳವನು.

೫೪೨. ಗುಹ್ಯಃ—ರಹಸ್ಯವಾದ ಉಪನಿಷತ್ತುಗಳ ಮೂಲಕ ವೇದ್ಯನಾಗುವವನು.

ಅಥವಾ ಹೃದಯಾಕಾಶದಲ್ಲಿರುವವನು.

೫೪೩. ಗಂಭೀರಃ—ಜ್ಞಾನ ಐಶ್ವರ್ಯ ಬಲ ಮತ್ತು ವೀರ್ಯ ಮೊದಲಾದುವುಗಳಿಂದ ಗಂಭೀರನಾಗಿರುವವನು.

೫೪೪. ಗಹನಃ—ದುಃಸಾಧ್ಯವಾದ ಪ್ರವೇಶವುಳ್ಳವನು.

ಭಗವಂತನಲ್ಲಿ ಪ್ರವೇಶವು ದುಃಸಾಧ್ಯವಾದುದು. ಆದುದರಿಂದ ಭಗವಂತನಿಗೆ ಗಹನ ಎಂದು ಹೆಸರು. ಅಥವಾ ಭಗವಂತನು ಅವಸ್ಥಾತ್ರಯಗಳ ಭಾವ-ಅಭಾವಗಳಿಗೆ ಸಾಕ್ಷಿಯಾಗಿರುವನಾದುದರಿಂದ ಅವನಿಗೆ ಗಹನ ಎಂದು ಹೆಸರು.

೫೪೫. ಗುಪ್ತಃ—ವಾಙ್ಮನಗಳಿಗೆ ಅಗೋಚರನಾಗಿರುವವನು.

'ಏಷ ಸರ್ವೇಷು ಭೂತೇಷು ಗೂಢೋಽಽತ್ಮಾ ನ ಪ್ರಕಾಶತೇ' ಸರ್ವಭೂತಗಳಲ್ಲಿ ಗುಪ್ತನಾಗಿರುವ ಈ ಆತ್ಮನು ಪ್ರಕಾಶಿಸುವುದಿಲ್ಲ.' (ಕ.ಉ. ೧.೩.೧೨).

೫೪೬. ಚಕ್ರಗದಾಧರಃ—ಚಕ್ರವನ್ನೂ ಗದೆಯನ್ನೂ ಧರಿಸಿದವನು.

ಲೋಕಸಂರಕ್ಷಣೆಗೋಸ್ಕರ ಮನಸ್ತತ್ತ್ವವೆಂಬ ಚಕ್ರವನ್ನೂ ಬುದ್ಧಿತತ್ತ್ವವೆಂಬ ಗದೆಯನ್ನೂ ಧರಿಸಿದ್ದರಿಂದ ವಿಷ್ಣುವು ಚಕ್ರಗದಾಧರನೆಂದು ಹೇಳಲ್ಪಡುತ್ತಾನೆ.

೫೪೭. ವೇಧಾಃ—ಸೃಷ್ಟಿಕರ್ತೃವು.

೫೪೮. ಸ್ವಾಂಗಃ—ಕಾರ್ಯವನ್ನು ಮಾಡುವುದರಲ್ಲಿ ಸ್ವಯಮೇವ ಸಹಕಾರಿಯಾಗುವವನು.

೫೪೯. ಅಜಿತಃ—ತನ್ನ ಅವತಾರಗಳಲ್ಲಿ ಯಾರಿಂದಲೂ ಜಯಿಸಲ್ಪಡದೇ ಇರುವವನು.

೫೫೦. ಕೃಷ್ಣಃ—ಕೃಷ್ಣದ್ವೈಪಾಯನನು.

'ಕೃಷ್ಣದ್ವೈಪಾಯನಂ ವ್ಯಾಸಂ . . . . ಮಹಾಭಾರತಕೃದ್ ಭವೇತ್' 'ಕೃಷ್ಣದ್ವೈಪಾಯನನಾದ ವ್ಯಾಸನನ್ನು ಪ್ರಭುವಾದ ನಾರಾಯಣನೆಂದೇ ತಿಳಿ. ಪುಂಡರೀಕಾಕ್ಷನು ಹೊರತು ಮಹಾಭಾರತವನ್ನು ಯಾರು ರಚಿಸಬಲ್ಲರು?' (ವಿಷ್ಣು. ೩.೪.೫).

೫೫೧. ದೃಢಃ—ಸ್ವರೂಪಸಾಮರ್ಥ್ಯಗಳೇ ಮೊದಲಾದುವುಗಳಿಂದ ಚ್ಯುತಿಹೊಂದದವನು.

೫೫೨. ಸಂಕರ್ಷಣೋಽಚ್ಯುತಃ—ಸಂಕರ್ಷಣನೂ ಅಚ್ಯುತನೂ ಆಗಿರುವವನು.

ಭಗವಂತನು ಸಂಹಾರಸಮಯದಲ್ಲಿ ಸಮಸ್ತಪ್ರಜೆಗಳನ್ನು ಒಂದೇ ಸಲ ತನ್ನಲ್ಲಿ ಎಳೆದುಕೊಳ್ಳುತ್ತಾನೆ. ಆದುದರಿಂದ ಅವನು ಸಂಕರ್ಷಣನು; ತನ್ನ ಸ್ವರೂಪವೇ ಮೊದಲಾದುವುಗಳಿಂದ ಚ್ಯುತಿಹೊಂದುವುದಿಲ್ಲವಾದುದರಿಂದ ಭಗವಂತನು ಅಚ್ಯುತನು.

೫೫೩. ವರುಣಃ—ಸೂರ್ಯನು.

ಸೂರ್ಯನು ಸಾಯಂಕಾಲ ತನ್ನ ಕಿರಣಗಳನ್ನು ಸಂವರಣಮಾಡಿಕೊಳ್ಳುವುದರಿಂದ ಅವನಿಗೆ ವರುಣ ಎಂದು ಹೆಸರು. ಸೂರ್ಯನು ಭಗವಂತನ ಒಂದು ವಿಭೂತಿಯಾದುದರಿಂದ ಭಗವಂತನಿಗೂ ವರುಣ ಎಂದು ಹೆಸರು.

೫೫೪. ವಾರುಣಃ—ವರುಣನ ಪುತ್ರನಾದ ವಸಿಷ್ಠ ಅಥವಾ ಅಗಸ್ತ್ಯ ಆಗಿರುವವನು.

ವಸಿಷ್ಠ, ಅಗಸ್ತ್ಯ-ಇವರು ಭಗವಂತನ ವಿಭೂತಿಗಳಾದುದರಿಂದ ಭಗವಂತನಿಗೂ ವಾರುಣ ಎಂದು ಹೆಸರು.

೫೫೫. ವೃಕ್ಷಃ— ವೃಕ್ಷದಂತೆ ಅಚಲನಾಗಿರುವವನು.

'ವೃಕ್ಷ ಇವ ಸ್ತಬ್ಧೋ ದಿವಿ ತಿಷ್ಠತ್ಯೇಕಃ' 'ಏಕನಾದ (ಪರಮಾತ್ಮನು) ವೃಕ್ಷದಂತೆ ಸ್ಥಿರವಾಗಿ ದೇವಲೋಕದಲ್ಲಿ ಅವಸ್ಥಿತನಾಗಿರುವನು' (ಶ್ವೇ. ಉ. ೩. ೯).

೫೫೬. ಪುಷ್ಕರಾಕ್ಷಃ— ಹೃದಯಕಮಲದಲ್ಲಿ ಧ್ಯಾನಿಸಲ್ಪಡುವಾಗ ತನ್ನ ಸ್ವರೂಪದಿಂದ ಪ್ರಕಾಶಿಸುವವನು.

೫೫೭. ಮಹಾಮನಾಃ—ಸೃಷ್ಟಿ – ಸ್ಥಿತಿ – ಲಯ–ಕರ್ಮಗಳನ್ನು ಮನಸ್ಸಿನಿಂದಲೇ ಮಾಡುವವನು.

'ಮನಸೈವ ಜಗತ್ಸೃಷ್ಟಿಂ ಸಂಹಾರಂ ಚ ಕರೋತಿಯಃ' 'ಯಾವನು (ಭಗವಂತನು) ಮನಸ್ಸಿನಿಂದಲೇ ಜಗತ್ಸೃಷ್ಟಿಯನ್ನೂ ಸಂಹಾರವನ್ನೂ ಮಾಡುತ್ತಾನೋ' (ವಿಷ್ಣು).

೫೫೮. ಭಗವಾನ್—ಭಗವಂತನು.

'ಐಶ್ವರ್ಯಸ್ಯ ಸಮಗ್ರಸ್ಯ . . . . ಷಣ್ಣಾಂ ಭಗ ಇತೀರಣಾ' 'ಸಮಗ್ರವಾದ ಐಶ್ವರ್ಯ, ಧರ್ಮ, ಯಶಸ್ಸು, ಸಂಪತ್ತು, ಜ್ಞಾನ ಮತ್ತು ವೈರಾಗ್ಯ—ಈ ಆರಕ್ಕೆ ಭಗ ಎಂದು ಹೇಳುತ್ತಾರೆ' (ವಿಷ್ಣು. ೬.೫.೭೪); ಇವುಗಳುಳ್ಳವನು ಭಗವಂತನು. ಅಥವಾ 'ಉತ್ಪತ್ತಿಂ ಪ್ರಲಯಂ ಚೈವ . . . . ಸ ವಾಚ್ಯೋ ಭಗವಾನಿತಿ' 'ಉತ್ಪತ್ತಿಪ್ರಲಯಗಳನ್ನೂ, ಭೂತಗಳ ಬರುವಿಕೆ-ಹೋಗುವಿಕೆಗಳನ್ನೂ ಮತ್ತು ವಿದ್ಯೆ-ಅವಿದ್ಯೆಗಳನ್ನೂ ತಿಳಿದವನು ಭಗವಂತನೆಂದು ಹೇಳಲ್ಪಡುತ್ತಾನೆ' (ವಿಷ್ಣು. ೬.೫.೭೮).

೫೫೯. ಭಗಹಾ — ಪ್ರಲಯಕಾಲದಲ್ಲಿ ಐಶ್ವರ್ಯವೇ ಮೊದಲಾದುವುಗಳನ್ನು ನಾಶಮಾಡುವವನು.

೫೬೦. ಆನಂದೀ—ಸುಖಸ್ವರೂಪನಾಗಿರುವವನು.

ಅಥವಾ ಭಗವಂತನು ಸಂಪತ್ತುಗಳಿಂದ ಸಮೃದ್ಧನಾಗಿರುವವನಾದುದರಿಂದ ಅವನಿಗೆ ಆನಂದೀ ಎಂದು ಹೆಸರು.

೫೬೧. ವನಮಾಲೀ—ಭೂತತನ್ಮಾತ್ರವಾದ ವೈಜಯಂತೀ ಎಂಬ ವನಮಾಲೆಯನ್ನು ಧರಿಸಿದವನು.

೫೬೨. ಹಲಾಯುಧಃ—ಬಲಭದ್ರನಾಗಿ ನೇಗಿಲನ್ನು ಆಯುಧವಾಗಿ ಧರಿಸಿದವನು.

೫೬೩. ಆದಿತ್ಯಃ—ಅದಿತಿಯಲ್ಲಿ ಹುಟ್ಟಿದವನು.

ಭಗವಂತನು ಕಶ್ಯಪನಿಂದ ಅದಿತಿಯಲ್ಲಿ ವಾಮನರೂಪದಿಂದ ಹುಟ್ಟಿದನು. ಆದುದರಿಂದ ಅವನಿಗೆ ಆದಿತ್ಯ ಎಂದು ಹೆಸರು.

೫೬೪. ಜ್ಯೋತಿರಾದಿತ್ಯಃ — ಸೂರ್ಯಮಂಡಲದಲ್ಲಿ ಅವಸ್ಥಿತನಾಗಿರುವವನು.

೫೬೫. ಸಹಿಷ್ಣುಃ — ಶೀತೋಷ್ಣಾದಿದ್ವಂದ್ವಗಳನ್ನು ಸಹಿಸಿಕೊಳ್ಳುವವನು.

೫೬೬. ಗತಿಸತ್ತಮಃ— ಗತಿಯೂ ಸರ್ವಶ್ರೇಷ್ಠನೂ ಆಗಿರುವವನು.

೫೬೭. ಸುಧನ್ವಾ—ಇಂದ್ರಿಯಾದಿಮಯವಾದ ಶಾರ್ಙ್ಗ ಎಂಬ ಹೆಸರಿನ ಸುಂದರವಾದ ಧನುಸ್ಸುಳ್ಳವನು.

೫೬೮. ಖಂಡಪರಶುಃ—ಪರಶುರಾಮನು.

ಶತ್ರುಗಳನ್ನು ಖಂಡಿಸಿದವನೂ ಕೊಡಲಿಯನ್ನು ಧರಿಸಿದವನೂ ಆದುದರಿಂದ ಪರಶುರಾಮನಿಗೆ ಖಂಡಪರಶು ಎಂದು ಹೆಸರು. ಪರಶುರಾಮನು ಭಗವಂತನ ಅವತಾರವಾದುದರಿಂದ ಭಗವಂತನಿಗೂ ಖಂಡಪರಶು ಎಂದು ಹೆಸರು. ಅಥವಾ

ಅಖಂಡಪರಶುಃ—ಪರಶುರಾಮನ ಕೊಡಲಿಯು ಅಖಂಡಿತವಾದುದಾದ್ದರಿಂದ ಅವನಿಗೆ ಅಖಂಡಪರಶು ಎಂದು ಹೆಸರು. ಅವನು ಭಗವಂತನ ಅವತಾರವಾದುದರಿಂದ ಭಗವಂತನಿಗೂ ಅಖಂಡಪರಶು ಎಂದು ಹೆಸರು.

೫೬೯. ದಾರುಣಃ—ಸನ್ಮಾರ್ಗವಿರೋಧಿಗಳಿಗೆ ಕ್ರೂರವಾಗಿ ಇರುವವನು.

೫೭೦. ದ್ರವಿಣಪ್ರದಃ—ಭಕ್ತರಿಗೆ ಅವರು ಇಚ್ಛಿಸಿದ ಧನವನ್ನು ಕೊಡುವವನು.

೫೭೧. ದಿವಃಸ್ಪೃಕ್—ಸ್ವರ್ಗಲೋಕವನ್ನು ಸ್ಪರ್ಶಿಸುವವನು.

೫೭೨. ಸರ್ವದೃಗ್ವ್ಯಾಸಃ–ಸರ್ವಜ್ಞಾನಗಳನ್ನು ವಿಸ್ತರಿಸಿದವನು.

ಅಥವಾ ಭಗವಂತನು ಸರ್ವಾಕಾರಜ್ಞಾನಸ್ವರೂಪನಾದುದರಿಂದ ಅಥವಾ ಎಲ್ಲವರ ದೃಷ್ಟಿಯಾಗಿರುವವನಾದುದರಿಂದ ಸರ್ವದೃಕ್. ಬ್ರಹ್ಮನು ವೇದಗಳನ್ನು ಋಗ್ವೇದಾದಿ ವಿಭಾಗದಿಂದ ನಾಲ್ಕು ಭಾಗವಾಗಿ ವಿಭಾಗಿಸಿದನು. ಮೊದಲನೆಯ ವೇದವಾದ ಋಗ್ವೇದವನ್ನು ಇಪ್ಪತ್ತೊಂದು ಶಾಖೆಗಳಾಗಿಯೂ, ಎರಡನೆಯ ವೇದವಾದ ಯಜುರ್ವೇದವನ್ನು ನೂರೊಂದು ಶಾಖೆಗಳಾಗಿಯೂ, ಸಾಮವೇದವನ್ನು ಸಾವಿರ ಶಾಖೆಗಳಾಗಿಯೂ, ಅಥರ್ವವೇದವನ್ನು ಒಂಭತ್ತು ಶಾಖೆಗಳಾಗಿಯೂ ವಿಭಾಗಿಸಿದನು. ಹಾಗೆಯೇ ಅವನು ಪುರಾಣಗಳನ್ನು ವಿಭಾಗಿಸಿದನು. ಆದುದರಿಂದ ಬ್ರಹ್ಮನು ವ್ಯಾಸ ಎಂದೆನಿಸುತ್ತಾನೆ. ಬ್ರಹ್ಮನು ಭಗವಂತನ ವಿಭೂತಿಯಾದುದರಿಂದ ಭಗವಂತನೂ ವ್ಯಾಸ ಎಂದೆನಿಸುತ್ತಾನೆ.

೫೭೩. ವಾಚಸ್ಪತಿರಯೋನಿಜಃ — ವಿದ್ಯೆಗೆ ಒಡೆಯನಾಗಿರುವುದು ಮತ್ತು ಜನನಿಯಲ್ಲಿ ಹುಟ್ಟದೆ ಇರುವವನು.

೫೭೪. ತ್ರಿಸಾಮಾ—ದೇವವ್ರತ ಎಂಬ ಹೆಸರಿನ ಮೂರು ಸಾಮಗರಿಂದ ಸ್ತುತಿಸಲ್ಪಟ್ಟವನು.

೫೭೫. ಸಾಮಗಃ – ಸಾಮವನ್ನು ಹಾಡುವವನು.

೫೭೬. ಸಾಮ—ಸಾಮವೇದವಾಗಿರುವವವನು.

'ವೇದಾನಾಂ ಸಾಮವೇದೋಽಸ್ಮಿ' 'ವೇದಗಳಲ್ಲಿ ನಾನು ಸಾಮವೇದವಾಗಿದ್ದೇನೆ' (ಗೀತಾ. ೧೦.೨೨).

೫೭೭. ನಿರ್ವಾಣಮ್—ಸರ್ವದುಃಖರಹಿತವಾದ ಪರಮಾನಂದವಾಗಿರುವವನು.

೫೭೮. ಭೇಷಜಮ್—ಸಂಸಾರರೂಪವಾದ ರೋಗಕ್ಕೆ ಔಷಧವಾಗಿರುವವನು.

೫೭೯. ಭಿಷಕ್—ಸಂಸಾರವೆಂಬ ರೋಗದಿಂದ ಬಿಡುಗಡೆ ಮಾಡುವಂತಹ ಪರಾವಿದ್ಯೆಯನ್ನು ಗೀತೆಯಲ್ಲಿ ಉಪದೇಶಿಸಿದವನು.

'ಭಿಷಕ್ತಮಂ ತ್ವಾ ಭಿಷಜಾಂ ಶೃಣೋಮಿ' 'ನೀನು ವೈದ್ಯರೆಲ್ಲರಲ್ಲ ಅತ್ಯಂತ ಶ್ರೇಷ್ಠವೈದ್ಯನೆಂದು ಕೇಳಿದ್ದೆ' (ಶ್ರುತಿ).

೫೮೦. **ಸಂನ್ಯಾಸಕೃತ್**—ಮೋಕ್ಷಾರ್ಥವಾಗಿ ನಾಲ್ಕನೆಯದಾದ ಸಂನ್ಯಾಸಾಶ್ರಮವನ್ನು ರಚಿಸಿದವನು.

೫೮೧. **ಶಮಃ**—ಸಂನ್ಯಾಸಿಗಳಿಗೆ ಶಮವೇ ಮುಖ್ಯವಾದ ಜ್ಞಾನ ಸಾಧನೆ ಎಂದು ಹೇಳಿದವನು.

'ಯತೀನಾಂ ಪ್ರಶಮೋ ಧರ್ಮಃ.... ಶುಶ್ರೂಷಾ ಬ್ರಹ್ಮಚಾರಿಣಾಮ್' 'ಯತಿಗಳಿಗೆ ಶಮವೇ ಧರ್ಮವು; ವನವಾಸಿಗಳಿಗೆ ನಿಯಮವೇ ಧರ್ಮವು; ಗೃಹಸ್ಥರಿಗೆ ದಾನವೇ ಧರ್ಮವು; ಬ್ರಹ್ಮಚಾರಿಗಳಿಗೆ ಶುಶ್ರೂಷೆಯೇ ಧರ್ಮವು' (ಸ್ಮೃತಿ).

ಅಥವಾ ಭಗವಂತನು ಸರ್ವಭೂತಗಳನ್ನು ಶಮನಮಾಡುವವನಾದುದರಿಂದ ಅವನಿಗೆ ಶಮ ಎಂದು ಹೆಸರು.

೫೮೨. **ಶಾಂತಃ**—ವಿಷಯಸುಖಗಳಲ್ಲಿ ಆಸಕ್ತನಾಗಿರುವವನು.

೫೮೩. **ನಿಷ್ಠಾ**—ಪ್ರಲಯಕಾಲದಲ್ಲಿ ಯಾವಾಗಲೂ ಭೂತಗಳಿಗೆಲ್ಲ ಆಶ್ರಯವಾಗಿರುವವನು.

೫೮೪. **ಶಾಂತಿಃ**—ಶಾಂತಿಸ್ವರೂಪನಾಗಿರುವವನು.

ಸಮಸ್ತ ಅವಿದ್ಯೆಯಿಂದ ನಿವೃತ್ತಿಹೊಂದುವುದೇ ಶಾಂತಿಯು. ಈ ಶಾಂತಿಯು ಬ್ರಹ್ಮವೇ ಆಗಿರುವುದು.

೫೮೫. **ಪರಾಯಣಮ್**-ಉತ್ಕೃಷ್ಟವಾದ ಸ್ಥಾನವಾಗಿರುವವನು.

ಭಗವಂತನು ಪುನರಾವೃತ್ತಿಯ (ಸಂಸಾರಕ್ಕೆ ಹಿಂತಿರುಗುವುದರ) ಭಯವಿಲ್ಲದ ಉತ್ಕೃಷ್ಟವಾದ ಸ್ಥಾನವಾಗಿರುವನು. ಆದುದರಿಂದ ಅವನಿಗೆ ಪರಾಯಣಮ್ ಎಂದು ಹೆಸರು.

೫೮೬. **ಶುಭಾಂಗಃ**—ಸುಂದರವಾದ ಶರೀರವನ್ನು ಧರಿಸಿದವನು.

೫೮೭. **ಶಾಂತಿದಃ**—ರಾಗದ್ವೇಷಾದಿಗಳಿಂದ ಬಿಡುಗಡೆ ಹೊಂದುವಿಕೆಯ ರೂಪವಾದ ಶಾಂತಿಯನ್ನು ಕೊಡುವವನು.

೫೮೮. **ಸ್ರಷ್ಟಾ**—ಸೃಷ್ಟಿಯ ಆರಂಭದಲ್ಲಿ ಸಕಲ ಭೂತಗಳನ್ನು ಹುಟ್ಟಿಸಿದವನು

೫೮೯. **ಕುಮುದಃ**— ಪೃಥ್ವಿಯಲ್ಲಿ ಸಂತೋಷಪಡುವವನು.

೫೯೦. **ಕುವಲೇಶಯಃ**— ನೀರಿನಮೇಲೆ ಶಯನಮಾಡುವವನು.

ಅಥವಾ (ಒಬ್ಬ ಋಷಿಪುತ್ರನ ಶಾಪದ ಮೇರೆಗೆ ಪರೀಕ್ಷಿತರಾಜನನ್ನು ಕಚ್ಚಲು) ತಕ್ಷಕನು ಒಂದು ಬದರೀಫಲ (ಕುವಲ) ದೊಳಗೆ ಮಲಗಿದ್ದನಾದ್ದರಿಂದ

ಅವನಿಗೆ ಕುವಲೇಶಯ ಎಂದು ಹೆಸರು. ತಕ್ಷಕನು ಶ್ರೀಹರಿಯ ವಿಭೂತಿಯಾದುದರಿಂದ ಶ್ರೀಹರಿಯೂ ಕುವಲೇಶಯ ಎಂದು ಕರೆಯಲ್ಪಡುತ್ತಾನೆ. ಅಥವಾ ಭೂಮಿಯನ್ನು ಆಶ್ರಯಿಸುವುದರಿಂದ ಸರ್ಪಗಳ ಉದರಕ್ಕೆ ಕುವಲ ಎಂದು ಹೇಳುತ್ತಾರೆ. ಭಗವಂತನು ಶೇಷನ ಉದರದಲ್ಲಿ ಶಯನಮಾಡುವವನಾದುದರಿಂದ (ಶೇಷಶಾಯಿಯಾದುದರಿಂದ) ಅವನಿಗೆ ಕುವಲೇಶಯ ಎಂದು ಹೆಸರು.

೫೯೧. ಗೋಹಿತಃ— ಗೋವುಗಳಿಗೆ ಹಿತವನ್ನುಂಟುಮಾಡಿದವನು.

ಗೋವುಗಳ ಅಭಿವೃದ್ಧಿಗೋಸ್ಕರ ಗೋವರ್ಧನ ಪರ್ವತವನ್ನು ಎತ್ತಿಹಿಡಿದು ಗೋವುಗಳಿಗೆ ಹಿತವನ್ನುಂಟುಮಾಡಿದವನಾದುದರಿಂದ ಭಗವಂತನಿಗೆ ಗೋಹಿತ ಎಂದು ಹೆಸರು. ಅಥವಾ ಭೂಮಿಯ ಭಾರವನ್ನು ಇಳಿಸುವುದಕ್ಕೋಸ್ಕರ ಶರೀರವನ್ನು ಗ್ರಹಣಮಾಡಿದವನು.

೫೯೨. ಗೋಪತಿಃ— ಪೃಥ್ವಿಗೆ ಒಡೆಯನಾಗಿರುವವನು.

೫೯೩. ಗೋಪ್ತಾ—ಜಗದ್ರಕ್ಷಕನು.

ಅಥವಾ ಭಗವಂತನು ತನ್ನ ಮಾಯೆಯಿಂದ ತನ್ನ ಆತ್ಮವನ್ನು ಮುಚ್ಚಿಕೊಂಡಿರುವನಾದುದರಿಂದ ಅವನಿಗೆ ಗೋಪ್ತಾ ಎಂದು ಹೆಸರು.

೫೯೪. ವೃಷಭಾಕ್ಷಃ—ಸಕಲ ಇಷ್ಟಾರ್ಥಗಳನ್ನು ವರ್ಷಿಸುವ ಕಣ್ಣುಗಳುಳ್ಳವನು.

ಅಥವಾ ವೃಷಭ ಎಂದು ಧರ್ಮಕ್ಕೆ ಹೇಳುತ್ತಾರೆ; ಆದುದರಿಂದ ವೃಷಭಾಕ್ಷ ಎಂದರೆ ಧರ್ಮವೇ ದೃಷ್ಟಿಯಾಗಿರುವವನು.

೫೯೫. ವೃಷಪ್ರಿಯಃ—ಧರ್ಮವು ತನಗೆ ಪ್ರಿಯವಾಗಿ ಉಳ್ಳವನು.

ಅಥವಾ ಭಗವಂತನು ಧರ್ಮವೂ ಪ್ರಿಯನೂ ಆಗಿರುವನಾದುದರಿಂದ ವೃಷಪ್ರಿಯನು.

೫೯೬. ಅನಿವರ್ತೀ—ಸುರಾಸುರರ ಸಂಗ್ರಾಮದಿಂದ ಹಿಂದಿರುಗದೆ ಇರುವವನು.

ಅಥವಾ ಭಗವಂತನಿಗೆ ಧರ್ಮವು ಪ್ರಿಯವಾದುದಾದ್ದರಿಂದ ಅವನು ಧರ್ಮದಿಂದ ವಿಮುಖನಾಗುವುದಿಲ್ಲ. ಆದುದರಿಂದ ಅವನಿಗೆ ಅನಿವರ್ತೀ ಎಂದು ಹೆಸರು.

೫೯೭. ನಿವೃತ್ತಾತ್ಮಾ—ಸ್ವಭಾವತಃ ವಿಷಯಗಳಿಂದ ನಿವೃತ್ತವಾದ ಮನಸ್ಸುಳ್ಳವನು.

೫೯೮. ಸಂಕ್ಷೇಪ್ತಾ—ವಿಸ್ತಾರವಾದ ಜಗತ್ತನ್ನು ಸಂಹಾರಕಾಲದಲ್ಲಿ ಸೂಕ್ಷ್ಮರೂಪದಿಂದ ಸಂಕ್ಷೇಪಿಸುವವನು.

೫೯೯. ಕ್ಷೇಮಕೃತ್—ಪ್ರಾಪ್ತಿಮಾಡಿಕೊಂಡಿದ್ದನ್ನು ರಕ್ಷಿಸುವವನು.

೬೦೦. ಶಿವಃ—ತನ್ನ ನಾಮಸ್ಮರಣಮಾತ್ರದಿಂದ ಪವಿತ್ರಗೊಳಿಸುವವನು.

೬೦೧. ಶ್ರೀವತ್ಸವಕ್ಷಾಃ—ಶ್ರೀವತ್ಸವೆಂಬ ಚಿಹ್ನೆಯನ್ನು ತನ್ನ ವಕ್ಷಃ ಸ್ಥಳದಲ್ಲಿ ಧರಿಸಿರುವವನು.

೬೦೨. ಶ್ರೀವಾಸಃ—ಲಕ್ಷ್ಮಿಯು ವಾಸಸ್ಥಾನವಾಗಿರುವವನು.

ವಿಷ್ಣುವಿನ ವಕ್ಷಃಸ್ಥಳದಲ್ಲಿ ಅನಪಾಯಿನಿಯಾದ ಲಕ್ಷ್ಮಿಯು ವಾಸಮಾಡುತ್ತಾಳೆ. ಆದುದರಿಂದ ವಿಷ್ಣುವಿಗೆ ಶ್ರೀವಾಸ ಎಂದು ಹೆಸರು.

೬೦೩. ಶ್ರೀಪತಿಃ—ಲಕ್ಷ್ಮಿಯು ಪತಿ.

ಅಮೃತಮಂಥನಕಾಲದಲ್ಲಿ ಲಕ್ಷ್ಮಿಯು ಸುರಾಸುರರೇ ಮೊದಲಾದವರನ್ನೆಲ್ಲ ಬಿಟ್ಟು ವಿಷ್ಣುವನ್ನೇ ಪತಿಯಾಗಿ ವರಿಸಿದಳು. ಆದುದರಿಂದ ವಿಷ್ಣುವು ಶ್ರೀಪತಿಯು. ಅಥವಾ ಶ್ರೀ ಎಂದರೆ ಪರಾಶಕ್ತಿ; ವಿಷ್ಣುವು ಪರಾಶಕ್ತಿಯ ಪತಿಯಾದುದರಿಂದ ಶ್ರೀಪತಿಯು.

'ಪರಾಸ್ಯ ಶಕ್ತಿರ್ವಿವಿಧೈವ ಶ್ರೂಯತೇ' 'ಈತನ (ಭಗವಂತನ) ಪರಾಶಕ್ತಿಯು ವಿವಿಧವಾದುದು ಎಂದೇ (ಶ್ರುತಿಗಳಿಗೆ) ಕೇಳಿಬರುತ್ತದೆ' (ಶ್ವೇ.ಉ.೬.೮).

೬೦೪. ಶ್ರೀಮತಾಂ ವರಃ—ಶ್ರೀಸಂಪನ್ನರಲ್ಲಿ ಪ್ರಧಾನನಾಗಿರುವವನು.

ಋಗ್ ಯಜುಃ ಸಾಮರೂಪವಾದ ಶ್ರೀ (ಸಂಪತ್ತು) ಇರುವ ಬ್ರಹ್ಮನೇ ಮೊದಲಾದ ಶ್ರೀಸಂಪನ್ನರಲ್ಲೆಲ್ಲ ವಿಷ್ಣುವು ಪ್ರಧಾನಭೂತನು.

'ಋಚಃ ಸಾಮಾನಿ ಯಜೂಂಷಿ। ಸಾ ಹಿ ಶ್ರೀರಮೃತಾ ಸತಾಮ್' 'ಋಗ್ ಯಜುಃಸಾಮಗಳೇ ಸತ್ಪುರುಷರ ಅಮರವಾದ ಶ್ರೀ' (ಶ್ರುತಿ).

೬೦೫. ಶ್ರೀದಃ—ಭಕ್ತರಿಗೆ ಶ್ರೀಯನ್ನು ಕೊಡುವವನು.

೬೦೬. ಶ್ರೀಶಃ—ಶ್ರೀಗೆ ಒಡೆಯನಾಗಿರುವವನು.

೬೦೭. ಶ್ರೀನಿವಾಸಃ—ಶ್ರೀಮಂತರಲ್ಲಿ ನಿತ್ಯವೂ ವಾಸಮಾಡುವವನು.

೬೦೮. ಶ್ರೀನಿಧಿಃ—ಅಖಿಲಸಂಪತ್ತುಗಳಿಗೆ ನಿಧಿಯಾಗಿರುವವನು.

ಸರ್ವಶಕ್ತಿವಂತನಾದ ಭಗವಂತನು ಅಖಿಲಸಂಪತ್ತುಗಳಿಗೆ ನಿಧಿಯಾಗಿರುವವನಾದುದರಿಂದ ಅವನಿಗೆ ಶ್ರೀನಿಧಿ ಎಂದು ಹೆಸರು.

೬೦೯. ಶ್ರೀವಿಭಾವನಃ—ಸಮಸ್ತಭೂತಗಳಿಗೆ ಅವರವರ ಕರ್ಮಾನುಸಾರವಾಗಿ ವಿವಿಧ ಸಂಪತ್ತುಗಳನ್ನು ಕೊಡುವವನು.

೬೧೦. ಶ್ರೀಧರಃ—ಸರ್ವಭೂತಗಳಿಗೆ ಜನನಿಯಾದ ಶ್ರೀ (ಲಕ್ಷ್ಮಿ) ಯನ್ನು ವಕ್ಷಃಸ್ಥಳದಲ್ಲಿ ಧರಿಸಿರುವವನು.

೬೧೧. ಶ್ರೀಕರಃ—ತನ್ನನ್ನು ಸ್ಮರಿಸುವ, ಸ್ತುತಿಸುವ ಮತ್ತು ಪೂಜಿಸುವ ಭಕ್ತರನ್ನು ಶ್ರೀಸಂಪನ್ನರನ್ನಾಗಿ ಮಾಡುವವನು.

೬೧೨. ಶ್ರೇಯಃ—ಶ್ರೇಯೋರೂಪನು.

ಅನಪಾಯಿನಿಯಾದ (ಎಂದಿಗೂ ನಷ್ಟವಾಗದ) ಸುಖವನ್ನು ಹೊಂದುವುದೇ ಶ್ರೇಯಸ್ಸು. ಈ ಶ್ರೇಯಸ್ಸು ಪರಮಾತ್ಮನದೇ ರೂಪವಾದುದರಿಂದ ಅವನಿಗೂ ಶ್ರೇಯಸ್ಸು ಎಂದು ಹೆಸರು.

೬೧೩. ಶ್ರೀಮಾನ್—ಶ್ರೀಸಂಪನ್ನನು.

ಸಂಪತ್ತುಗಳೆಲ್ಲ ಭಗವಂತನಲ್ಲಿ ಇರುವುವಾದ್ದರಿಂದ ಭಗವಂತನು ಶ್ರೀಮಾನ್.

೬೧೪. ಲೋಕತ್ರಯಾಶ್ರಯಃ–ಲೋಕತ್ರಯಗಳಿಗೂ ಆಶ್ರಯವಾಗಿರುವವನು.

೬೧೫. ಸ್ವಕ್ಷಃ–ತಾವರೆಯಂತೆ ಮನೋಹರವಾದ ಕಣ್ಣುಗಳುಳ್ಳವನು.

೬೧೬. ಸ್ವಂಗಃ–ಸುಂದರವಾದ ಅವಯವಗಳುಳ್ಳವನು.

೬೧೭. ಶತಾನಂದಃ–ಶತಾನಂದನು.

ಒಬ್ಬನೇ ಒಬ್ಬನಾದ ಪರಮಾನಂದಸ್ವರೂಪನಾದ ಪರಮಾತ್ಮನು ಉಪಾಧಿಭೇದದಿಂದ ನೂರುವಿಧನಾಗುತ್ತಾನೆ. ಆದುದರಿಂದ ಅವನಿಗೆ ಶತಾನಂದ ಎಂದು ಹೆಸರು.

‘ಏತಸ್ಯೈವಾನಂದಸ್ಯಾನಿ ಭೂತಾನಿ ಮಾತ್ರಾಮುಪಜೀವಂತಿ’ ‘ಈ ಆನಂದದ ಒಂದಂಶವನ್ನು ಅವಲಂಬಿಸಿಯೇ ಅನ್ಯಭೂತಗಳೆಲ್ಲ ಜೀವಿಸುತ್ತವೆ’ (ಬೃ.ಉ.೪.೩.೩೨).

೬೧೮. ನಂದಿಃ—ಪರಮಾನಂದಮೂರ್ತಿಯಾಗಿರುವವನು.

೬೧೯. ಜ್ಯೋತಿರ್ಗಣೇಶ್ವರಃ — ನಕ್ಷತ್ರಗಣಗಳಿಗೆಲ್ಲ ಸ್ವಾಮಿಯಾಗಿರುವವನು.

‘ತಮೇವ ಭಾಂತಮನುಭಾತಿ ಸರ್ವಮ್’ ‘ಪ್ರಕಾಶಿಸುತ್ತಿರುವ ಅವನನ್ನೇ (ಪರಮಾತ್ಮನನ್ನೇ) ಅನುಸರಿಸಿ ಎಲ್ಲವೂ ಪ್ರಕಾಶಿಸುತ್ತದೆ’ (ಕ.ಉ. ೨.೫.೧೫).

೬೨೦. ವಿಜಿತಾತ್ಮಾ — ತನ್ನ ಮನಸ್ಸನ್ನು ಸ್ವಾಧೀನಪಡಿಸಿಕೊಂಡಿರುವವನು.

೬೨೧. ಅವಿಧೇಯಾತ್ಮಾ — ಯಾವನಿಂದಲೂ ವಿಧಿಸಲ್ಪಡದ ಸ್ವರೂಪವುಳ್ಳವನು.

೬೨೨. ಸತ್ಕೀರ್ತಿಃ—ಸತ್ಯವಾಗಿರುವ ಕೀರ್ತಿಯುಳ್ಳವನು.

೬೨೩. ಛಿನ್ನಸಂಶಯಃ— ಸಂಶಯಗಳಿಲ್ಲದವನು.

ಕರತಲಾಮಲಕದಂತೆ ಸರ್ವವನ್ನೂ ಸಾಕ್ಷಾತ್ಕರಿಸಿಕೊಂಡಿರುವ ಭಗವಂತನಿಗೆ ಯಾವ ಸಂಶಯವೂ ಇಲ್ಲ. ಆದುದರಿಂದ ಅವನು ಛಿನ್ನಸಂಶಯನು.

೬೨೪. ಉದೀರ್ಣಃ—ಸರ್ವಭೂತಗಳಿಗಿಂತ ಉತ್ಕೃಷ್ಟನಾಗಿರುವವನು.

೬೨೫. ಸರ್ವತಶ್ಚಕ್ಷುಃ— ಎಲ್ಲಾ ಕಡೆಗಳಲ್ಲಿ ಎಲ್ಲವನ್ನು ತನ್ನ ಚೈತ್ಯದಿಂದ ನೋಡುವವನು.

'ವಿಶ್ವತಶ್ಚಕ್ಷುಃ' '(ಭಗವಂತನು) ಎಲ್ಲಾ ಕಡೆಗಳಲ್ಲೂ ಕಣ್ಣುಗಳುಳ್ಳವನು' (ಶ್ವೇ. ಉ. ೩.೩).

೬೨೬. ಅನೀಶಃ—ತನಗೆ ಬೇರೆ ಯಾವನೂ ಒಡೆಯನಿಲ್ಲದವನು.

೬೨೭. ಶಾಶ್ವತಸ್ಥಿರಃ—ಶಾಶ್ವತನೂ ಸ್ಥಿರನೂ ಆಗಿರುವವನು.

ಭಗವಂತನು ಶಾಶ್ವತನಾಗಿ ಇರುವವನಾದರೂ ಎಂದಿಗೂ ವಿಕಾರವನ್ನು ಹೊಂದುವುದಿಲ್ಲ. ಆದುದರಿಂದ ಅವನಿಗೆ ಶಾಶ್ವತಸ್ಥಿರ ಎಂದು ಹೆಸರು.

೬೨೮. ಭೂಶಯಃ—ಭೂಮಿಯಮೇಲೆ ಶಯನಮಾಡಿದವನು.

ಭಗವಂತನು ಶ್ರೀರಾಮಾವತಾರದಲ್ಲಿ ಲಂಕೆಯ ಕಡೆಗೆ ಹೋಗುವ ಮಾರ್ಗವನ್ನು ಹುಡುಕುತ್ತಿರುವ ಸಮಯದಲ್ಲಿ ಸಾಗರದ ಹತ್ತಿರ ಭೂಮಿಯ ಮೇಲೆ ಶಯನಮಾಡಿದ್ದನು. ಆದುದರಿಂದ ಭಗವಂತನಿಗೆ ಭೂಶಯ ಎಂದು ಹೆಸರು.

೬೨೯. ಭೂಷಣಃ— ಸ್ವೇಚ್ಛೆಯಿಂದ ಧರಿಸಿದ ಅನೇಕ ಅವತಾರಗಳಿಂದ ಭೂಮಿಯನ್ನು ಅಲಂಕರಿಸಿದವನು.

೬೩೦. ಭೂತಿಃ—ಸತ್ತಾಮಾತ್ರನಾಗಿರುವವನು.

ಅಥವಾ ವಿಭೂತಿರೂಪದಿಂದಿರುವವನು; ಅಥವಾ ಸರ್ವವಿಭೂತಿಗಳಿಗೆ ಕಾರಣನಾಗಿರುವವನು.

೬೩೧. ವಿಶೋಕಃ—ಶೋಕರಹಿತನು.

ಭಗವಂತನು ಪರಮಾನಂದೈಕರೂಪನಾದುದರಿಂದ ಶೋಕರಹಿತನು. ಆದುದರಿಂದ ಅವನಿಗೆ ವಿಶೋಕ ಎಂದು ಹೆಸರು.

೬೩೨. **ಶೋಕನಾಶನಃ**—ಸ್ಮರಣಮಾತ್ರದಿಂದ ಭಕ್ತರ ಶೋಕವನ್ನು ನಾಶಮಾಡುವವನು.

೬೩೩. **ಅರ್ಚಿಷ್ಮಾನ್**—ಪ್ರಭಾವಂತನು.

ಯಾವನ ಪ್ರಭೆಯಿಂದ ಚಂದ್ರಸೂರ್ಯಾದಿಗಳು ಪ್ರಕಾಶಮಾನರಾಗಿರುವರೋ ಆ ಭಗವಂತನೇ ಶ್ರೇಷ್ಠನಾದ ಅರ್ಚಿಷ್ಮಾನ್.

೬೩೪. **ಅರ್ಚಿತಃ**–ಸರ್ವಲೋಕಗಳಿಂದ ಪೂಜಿಸಲ್ಪಡುವ ಬ್ರಹ್ಮಾದಿಗಳಿಂದಲೂ ಪೂಜಿಸಲ್ಪಡುವವನು.

೬೩೫. **ಕುಂಭಃ**—ಕೊಡದಂತೆ ಆಶ್ರಯವಾಗಿರುವವನು.

ಎಲ್ಲಾ ವಸ್ತುಗಳು ಭಗವಂತನಲ್ಲಿ ಪ್ರತಿಷ್ಠಿತವಾಗಿವೆ. ಕೊಡವು ನೀರಿಗೆ ಆಶ್ರಯವಾಗುವ ಹಾಗೆ ಭಗವಂತನು ಸಮಸ್ತ ವಸ್ತುಗಳಿಗೆ ಆಶ್ರಯವಾಗಿರುವವನು.

೬೩೬. **ವಿಶುದ್ಧಾತ್ಮಾ**—ವಿಶುದ್ಧನೂ ಆತ್ಮನೂ ಆಗಿರುವವನು.

ಭಗವಂತನು ಆತ್ಮನೂ ಆಗಿರುವವನು ಮತ್ತು ತ್ರಿಗುಣಗಳಿಗೆ ಅತೀತನಾದುದರಿಂದ ಪರಿಶುದ್ಧನೂ ಆಗಿರುವನು. ಆದುದರಿಂದ ಅವನು ವಿಶುದ್ಧಾತ್ಮನು.

೬೩೭. **ವಿಶೋಧನಃ**—ಸ್ಮರಣಮಾತ್ರದಿಂದ ಪಾಪಗಳನ್ನು ನಾಶಮಾಡುವವನು.

೬೩೮. **ಅನಿರುದ್ಧಃ**—ಅನಿರುದ್ಧನು.

ವಿಷ್ಣುವಿನ ಚತುರ್ವ್ಯೂಹಗಳಲ್ಲಿ ಅನಿರುದ್ಧ ಎಂಬವನು ನಾಲ್ಕನೆಯ ವ್ಯೂಹವಾಗಿರುವನಾದುದರಿಂದ ಅಥವಾ ಭಗವಂತನು ಎಂದಿಗೂ ಶತ್ರುಗಳಿಂದ ನಿರೋಧಿಸಲ್ಪಡುವುದಿಲ್ಲವಾದುದರಿಂದ ಅವನಿಗೆ ಅನಿರುದ್ಧ ಎಂದು ಹೆಸರು.

೬೩೯. **ಅಪ್ರತಿರಥಃ** ಪ್ರತಿಪಕ್ಷವಿಲ್ಲದವನು.

೬೪೦. **ಪ್ರದ್ಯುಮ್ನಃ**— ಪ್ರಕೃಷ್ಟವಾದ ಧನವುಳ್ಳವನು.

ಅಥವಾ ಪ್ರದ್ಯುಮ್ನನು ವಿಷ್ಣುವಿನ ಚತುರ್ವ್ಯೂಹಗಳಲ್ಲಿ ಒಬ್ಬನು. ಆದುದರಿಂದ ಭಗವಂತನಿಗೆ ಪ್ರದ್ಯುಮ್ನ ಎಂದು ಹೆಸರು.

೬೪೧. **ಅಮಿತವಿಕ್ರಮಃ**—ಅಪಾರವಾದ ಪರಾಕ್ರಮವುಳ್ಳವನು.

ಅಥವಾ ಅಪ್ರತಿಹತಪರಾಕ್ರಮವುಳ್ಳವನು.

೬೪೨. **ಕಾಲನೇಮಿನಿಹಾ**—ಕಾಲನೇಮಿ ಎಂಬ ಅಸುರನನ್ನು ಕೊಂದವನು.

೬೪೩. ವೀರಃ—ಶೌರ್ಯಶಾಲಿಯಾಗಿರುವವನು.

೬೫೪. ಶೌರಿಃ—ಶೂರಕುಲದಲ್ಲಿ (ಶ್ರೀಕೃಷ್ಣನಾಗಿ) ಹುಟ್ಟಿದವನು.

೬೪೫. ಶೂರಜನೇಶ್ವರಃ—ಶೌರ್ಯಶಾಲಿಗಳಾದ ಇಂದ್ರಾದಿಗಳಿಗೂ ಸ್ವಾಮಿಯಾಗಿರುವವನು.

ಭಗವಂತನು ತನ್ನ ಶೌರ್ಯಾತಿಶಯದಿಂದ ಶೌರ್ಯಶಾಲಿಗಳಾದ ಇಂದ್ರಾದಿಗಳಿಗೆ ಸ್ವಾಮಿಯಾಗಿರುವನು ಮತ್ತು ಪ್ರಿಯನಾಗಿರುವನು.

೬೪೬. ತ್ರಿಲೋಕಾತ್ಮಾ—ಮೂರು ಲೋಕಗಳಿಗೂ ಆತ್ಮನಾಗಿರುವವನು.

ಭಗವಂತನು ಮೂರು ಲೋಕಗಳಿಗೂ ಅಂತರ್ಯಾಮಿಯಾಗಿರುವನಾದುದರಿಂದ ಅವುಗಳ ಆತ್ಮನೆನಿಸುವನು; ಆದುದರಿಂದ ಅವನು ತ್ರಿಲೋಕಾತ್ಮಾ ಅಥವಾ ಮೂರು ಲೋಕಗಳೂ ವಾಸ್ತವವಾಗಿ ಭಗವಂತನಿಂದ ಭಿನ್ನವಾದವುಗಳಲ್ಲ; ಆದುದರಿಂದ ಭಗವಂತನಿಗೆ ತ್ರಿಲೋಕಾತ್ಮಾ ಎಂದು ಹೆಸರು.

೬೪೭. ತ್ರಿಲೋಕೇಶಃ—ಮೂರು ಲೋಕಗಳಿಗೂ ಈಶ್ವರನಾಗಿರುವವನು.

ಮೂರು ಲೋಕಗಳೂ ಭಗವಂತನ ಆಜ್ಞೆಯಿಂದ ತಮ್ಮ ತಮ್ಮ ಕಾರ್ಯಗಳಲ್ಲಿ ವರ್ತಿಸುತ್ತಿವೆ. ಆದುದರಿಂದ ಭಗವಂತನು ತ್ರಿಲೋಕೇಶನು.

೬೪೮. ಕೇಶವಃ—ಕಿರಣಗಳಿಂದ ಕೂಡಿದವನು.

ಸೂರ್ಯಾದಿಗಳನ್ನು ಪ್ರವೇಶಿಸುವ ಕಿರಣಗಳಿಗೆ ಕೇಶ ಎಂದು ಹೆಸರು. ಭಗವಂತನು ಕೇಶಗಳಿಂದ ಕೂಡಿದವನಾದುದರಿಂದ ಕೇಶವನು. ಅಥವಾ ಬ್ರಹ್ಮ ವಿಷ್ಣು ಮತ್ತು ಶಿವ ಎಂಬ ಹೆಸರಿನ ಶಕ್ತಿಗಳಿಗೆ ಕೇಶ ಎಂದು ಹೆಸರು. ಭಗವಂತನು ಅವುಗಳಿಂದ ಕೂಡಿದವನಾದುದರಿಂದ ಕೇಶವನು.

'ಅಂಶವೋ ಯೇ ಪ್ರಕಾಶಂತೇ...ಮಾಮಾಹುರ್ದ್ವಿಜಸತ್ತಮಾಃ' 'ನನ್ನ ಯಾವ ಕಿರಣಗಳು ಪ್ರಕಾಶಿಸುತ್ತವೋ ಅವುಗಳಿಗೆ ಕೇಶ ಎಂಬ ಹೆಸರು'. ಆದುದರಿಂದ ನನ್ನನ್ನು ಸರ್ವಜ್ಞರಾದ ದ್ವಿಜಶ್ರೇಷ್ಠರು ಕೇಶವ ಎಂದು ಕರೆಯುತ್ತಾರೆ (ಮಹಾ. ಶಾಂತಿ. ೩೮೧. ೪೮).

೬೪೯. ಕೇಶಿಹಾ—ಕೇಶಿ ಎಂಬ ಹೆಸರಿನ ಅಸುರನನ್ನು ಕೊಂದವನು.

೬೫೦. ಹರಿಃ—ಸಂಸಾರವನ್ನು ಕಾರಣಸಮೇತವಾಗಿ ನಾಶಮಾಡುವವನು.

೬೫೧. ಕಾಮದೇವಃ—ಕಾಮನೂ ದೇವನೂ ಆಗಿರುವವನು.

ಧರ್ಮವೇ ಮೊದಲಾದ ನಾಲ್ಕು ಪುರುಷಾರ್ಥಗಳನ್ನು ಇಚ್ಛಿಸುವವರಿಂದ ಭಗವಂತನು ಬಯಸಲ್ಪಡುತ್ತಾನೆ. ಆದುದರಿಂದ ಅವನಿಗೆ ಕಾಮ ಎಂದು ಹೆಸರು. ಕಾಮನೂ ದೇವನೂ ಆದುದರಿಂದ ಭಗವಂತನು ಕಾಮದೇವನು.

೬೫೨. ಕಾಮಪಾಲಃ – ಕಾಮಿಗಳ ಕಾಮಗಳನ್ನು ಅನುಗ್ರಹಿಸಿ ಪಾಲಿಸುವವನು.

೬೫೩. ಕಾಮೀ—ಸ್ವಭಾವತಃ ಪೂರ್ಣಕಾಮನಾಗಿರುವವನು.

೬೫೪. ಕಾಂತಃ—ರೂಪಾತಿಶಯವುಳ್ಳ ದೇಹವನ್ನು ಧರಿಸಿದವನು.

ಅಥವಾ ಬ್ರಹ್ಮನ (ಕ=ಬ್ರಹ್ಮ) ನೂರುವರ್ಷದ ಕೊನೆಯಲ್ಲಿ ಬ್ರಹ್ಮನನ್ನೂ ನಾಶಮಾಡುವವನು.

೬೫೫. ಕೃತಾಗಮಃ—ಶ್ರುತಿಸ್ಮೃತಿಗಳೇ ಮೊದಲಾದ ಆಗಮಗಳನ್ನು ರಚಿಸಿದವನು.

'ಶ್ರುತಿಸ್ಮೃತೀ ಮಮೈವಾಜ್ಞೇ' 'ಶ್ರುತಿಸ್ಮೃತಿಗಳು ನನ್ನವೇ ಆಜ್ಞೇಗಳು' (ಭಗವದ್ವಚನ). 'ವೇದಾಃ ಶಾಸ್ತ್ರಾಣಿ ವಿಜ್ಞಾನಮೇತತ್ ಸರ್ವಂ ಜನಾರ್ದನಾತ್' ವೇದಗಳು ಶಾಸ್ತ್ರಗಳು ಮತ್ತು ವಿಜ್ಞಾನ—ಇದೆಲ್ಲವೂ ಜನಾರ್ದನನಿಂದ ಹುಟ್ಟಿದೆ' (ವಿಷ್ಣು. ಸಂ. ೧೩೯).

೬೫೬. ಅನಿರ್ದೇಶ್ಯವಪುಃ—ನಿರ್ದೇಶಿಸಲು ಅಸಾಧ್ಯವಾದ ರೂಪವುಳ್ಳವನು.

ಭಗವಂತನ ರೂಪವು ತ್ರಿಗುಣಗಳಿಗೆ ಅತೀತವಾದುದು. ಆದುದರಿಂದ ಅದನ್ನು ಇದು ಅದು ಅಥವಾ ಇಂತಹುದು ಎಂದು ನಿರ್ದೇಶಿಸಲು ಸಾಧ್ಯವಿಲ್ಲ. ಆದುದರಿಂದ ಭಗವಂತನು ಅನಿರ್ದೇಶ್ಯವಪು.

೬೫೭. ವಿಷ್ಣುಃ—ತನ್ನ ಅತಿಶಯವಾದ ಕಾಂತಿಯಿಂದ ಭೂಮ್ಯಾಕಾಶಗಳನ್ನು ವ್ಯಾಪಿಸಿರುವವನು.

'ವ್ಯಾಪ್ಯ ಮೇ ರೋದಸಿ ಪಾರ್ಥ...ವಿಷ್ಣುರಿತ್ಯಭಿಸಂಜ್ಞಿತಃ' 'ಎಲೈ ಪಾರ್ಥನೆ. ನನ್ನ ಪ್ರಚುರವಾದ ಕಾಂತಿಯು ಭೂಮ್ಯಾಕಾಶಗಳನ್ನು ವ್ಯಾಪಿಸಿದೆಯಾದುದರಿಂದ ಅಥವಾ ನಾನು ಸರ್ವಗತನಾದುದರಿಂದ ನನ್ನನ್ನು ವಿಷ್ಣು ಎಂದು ಕರೆಯುತ್ತಾರೆ.' (ಮಹಾ. ಶಾಂತಿ. ೩೪೧. ४೨. ४३).

೬೫೮. ವೀರಃ— ಗತಿ ವ್ಯಾಪ್ತಿ ಪ್ರಜನ ಕಾಂತಿ ಅಸ್ತಿತ್ವ ಮತ್ತು ಪ್ರಳಯ—ಈ ಧರ್ಮಗಳುಳ್ಳವನು.

೬೫೯. ಅನಂತಃ—ದೇಶತಃ ಕಾಲತಃ ಮತ್ತು ವಸ್ತುತಃ ಅಪರಿಚ್ಛಿನ್ನನಾಗಿರುವವನು.

ಭಗವಂತನು ಸರ್ವವ್ಯಾಪಿಯೂ ನಿತ್ಯನೂ ಮತ್ತು ಸರ್ವಾತ್ಮನೂ ಆಗಿರುವುದರಿಂದ ದೇಶತಃ ಕಾಲತಃ ಮತ್ತು ವಸ್ತುತಃ ಅಪರಿಚ್ಛಿನ್ನನು. ಆದುದರಿಂದ ಅನಂತ ಎಂದು ಹೆಸರು.

'ಸತ್ಯಂ ಜ್ಞಾನಮನಂತಂ ಬ್ರಹ್ಮ' 'ಬ್ರಹ್ಮವು ಸತ್ಯವೂ ಜ್ಞಾನವೂ ಅನಂತವೂ (ಆಗಿರುವುದು)' (ತೈ.ಉ. ೨.೧). 'ಗಂಧರ್ವಾಪ್ಸರಸಃ ಸಿದ್ಧಾಃ...ತೇನಾನಂತೋಽಯಮವ್ಯಯಃ' 'ಗಂಧರ್ವರು ಅಪ್ಸರೆಯರು ಸಿದ್ಧರು ಕಿನ್ನರರು ಉರಗರು ಮತ್ತು ಚಾರಣರು-ಇವರು ಯಾರೂ ಭಗವಂತನ ಗುಣಗಳ ಕೊನೆಯನ್ನು ಮುಟ್ಟಲಾರರು. ಆದುದರಿಂದ ಈ ಅವ್ಯಯನಾದ ಭಗವಂತನು ಅನಂತನು' (ವಿಷ್ಣು. ೨.೫.೨೪).

೬೬೦. ಧನಂಜಯಃ— ಧನಂಜಯನು.

ದಿಗ್ವಿಜಯದಲ್ಲಿ ಹೇರಳವಾದ ಧನವನ್ನು ಜಯಿಸಿದ್ದರಿಂದ ಅರ್ಜುನನಿಗೆ ಧನಂಜಯ ಎಂದ ಹೆಸರು.

'ಪಾಂಡವಾನಾಂ ಧನಂಜಯಃ' 'ಪಾಂಡವರಲ್ಲಿ ನಾನು ಧನಂಜಯನು (ಗೀತಾ, ೧೦.೩೭) ಎಂದು ಭಗವಂತನು ಗೀತೆಯಲ್ಲಿ ಹೇಳಿರುವನಾದುದರಿಂದ ಅವನಿಗೂ ಧನಂಜಯ ಎಂದು ಹೆಸರು.

೬೬೧. ಬ್ರಹ್ಮಣ್ಯಃ—ತಪಸ್ಸು ವೇದಗಳು ಬ್ರಾಹ್ಮಣರು ಮತ್ತು ಜ್ಞಾನ—ಇವುಗಳಿಗೆ ಹಿತವಾಗಿರುವವನು.

ತಪಸ್ಸು ವೇದಗಳು ಬ್ರಾಹ್ಮಣರು ಮತ್ತು ಜ್ಞಾನ-ಇವುಗಳಿಗೆ ಬ್ರಹ್ಮ ಎಂದು ಹೇಳುತ್ತಾರೆ. ಭಗವಂತನು ಇವುಗಳಿಗೆ ಹಿತವಾಗಿರುವುದರಿಂದ ಅವನಿಗೆ ಬ್ರಹ್ಮಣ್ಯ ಎಂದು ಹೆಸರು.

೬೬೨. ಬ್ರಹ್ಮಕೃತ್—ತಪಸ್ಸು ಮೊದಲಾದುವುಗಳನ್ನು ಮಾಡುವವನು.

೬೬೩. ಬ್ರಹ್ಮಾ—ಬ್ರಹ್ಮನಾಗಿ ಎಲ್ಲವನ್ನೂ ಸೃಷ್ಟಿಸುವವನು.

೬೬೪. ಬ್ರಹ್ಮ—ಸತ್ಯಾದಿಲಕ್ಷಣವುಳ್ಳ ಬ್ರಹ್ಮವಾಗಿರುವವನು.

ಭಗವಂತನು ತಾನು ದೊಡ್ಡವನೂ ಇತರರನ್ನು ದೊಡ್ಡವರನ್ನಾಗಿ ಮಾಡುವವನೂ ಆಗಿರುವನಾದುದರಿಂದ ಅವನು ಸತ್ಯಾದಿಲಕ್ಷಣವುಳ್ಳ ಬ್ರಹ್ಮವಾಗಿರುವನು.

'ಸತ್ಯಂ ಜ್ಞಾನಮನಂತಂ ಬ್ರಹ್ಮ' 'ಬ್ರಹ್ಮವು ಸತ್ಯವೂ ಜ್ಞಾನವೂ ಅನಂತವೂ (ಆಗಿರುವುದು)' (ತೈ.ಉ. ೨.೧) 'ಪ್ರತ್ಯಸ್ತಮಿತಭೇದಂ ಯತ್...ತಜ್ಜ್ಞಾನಂ

ಬ್ರಹ್ಮಸಂಜ್ಞಿತವಮ್' 'ಸರ್ವಭೇದಗಳಿಂದ ರಹಿತವೂ ಸತ್ತಾಮಾತ್ರವೂ ವಾಕ್ಕುಗಳಿಗೆ ಅಗೋಚರವೂ ಮತ್ತು ಆತ್ಮಸಂವೇದ್ಯವೂ ಆಗಿರುವ ಯಾವ ಜ್ಞಾನವುಂಟೋ ಅದು ಬ್ರಹ್ಮ ಎಂದು ಕರೆಯಲ್ಪಡುತ್ತದೆ' (ವಿಷ್ಣು. ೬.೭.೫೩).

೬೭೫. ಬ್ರಹ್ಮವಿವರ್ಧನಃ— ತಪಸ್ಸು ಮೊದಲಾದುವುಗಳನ್ನು ವೃದ್ಧಿಗೊಳಿಸುವವನು.

೬೭೬. ಬ್ರಹ್ಮವಿತ್— ವೇದಗಳನ್ನೂ ವೇದಾರ್ಥಗಳನ್ನೂ ಯಥಾವತ್ತಾಗಿ ತಿಳಿದವನು.

೬೭೭. ಬ್ರಾಹ್ಮಣಃ—ಬ್ರಾಹ್ಮಣರೂಪದಿಂದ ಸಮಸ್ತ ಜನರಿಗೆ ವೇದವನ್ನು ಕಲಿಸುವವನು.

೬೭೮. ಬ್ರಹ್ಮೀ—ತನ್ನ ಶೇಷಭೂತಗಳನ್ನು ತನ್ನಲ್ಲಿಯೇ ಧರಿಸಿಕೊಂಡಿರುವವನು.

ಬ್ರಹ್ಮ ಎಂದು ಕರೆಯಲ್ಪಡುವ ತಪಸ್ಸು ವೇದಗಳೇ ಇತ್ಯಾದಿ ಭಗವಂತನ ಶೇಷಭೂತಗಳು ಭಗವಂತನಲ್ಲಿಯೇ ಇವೆ. ಆದುದರಿಂದ ಭಗವಂತನಿಗೆ ಬ್ರಹ್ಮೀ ಎಂದು ಹೆಸರು.

೬೭೯. ಬ್ರಹ್ಮಜ್ಞಃ—ಸ್ವಾತ್ಮಭೂತಗಳಾದ ವೇದಗಳನ್ನು ತಿಳಿದಿರುವವನು.

೬೮೦. ಬ್ರಾಹ್ಮಣಪ್ರಿಯಃ–ಬ್ರಾಹ್ಮಣರಿಗೆ ಪ್ರಿಯನಾಗಿರುವವನು. ಅಥವಾ ಬ್ರಾಹ್ಮಣರು ಭಗವಂತನಿಗೆ ಪ್ರಿಯರಾದವರು. ಆದುದರಿಂದ ಭಗವಂತನಿಗೆ ಬ್ರಾಹ್ಮಣಪ್ರಿಯ ಎಂದು ಹೆಸರು.

೬೮೧. ಮಹಾಕ್ರಮಃ—ದೊಡ್ಡದಾದ ಹೆಜ್ಜೆಗಳುಳ್ಳವನು.

'ಶಂ ನೋ ವಿಷ್ಣುರುರುಕ್ರಮಃ' ದೊಡ್ಡದಾದ ಹೆಜ್ಜೆಗಳುಳ್ಳ ವಿಷ್ಣುವು ನಮಗೆ ಶಾಂತಿಯನ್ನು ಕೊಡಲಿ.' (ಶುಕ್ಲ ಯಜು. ೪೬.೯).

೬೮೨. ಮಹಾಕರ್ಮಾ—ಜಗತ್‌ಸೃಷ್ಟಿಯೇ ಮೊದಲಾದ ಮಹತ್ತಾದ ಕರ್ಮಗಳುಳ್ಳವನು.

೬೮೩. ಮಹಾತೇಜಾಃ—ಮಹತ್ತಾದ ತೇಜಸ್ಸುಳ್ಳವನು.

ಯಾವನ ತೇಜಸ್ಸಿನಿಂದ ಸೂರ್ಯಾದಿಗಳು ತೇಜಸ್ವಿಗಳಾಗಿರುವರೋ ಆ ಭಗವಂತನ ತೇಜಸ್ಸು ಮಹತ್ತಾದದು. ಆದುದರಿಂದ ಭಗವಂತನಿಗೆ ಮಹಾತೇಜಾ ಎಂದು ಹೆಸರು. ಅಥವಾ ಭಗವಂತನು ಕ್ರೌರ್ಯ ಮತ್ತು ಶೌರ್ಯ ಮೊದಲಾದ ಮಹಾಗುಣಗಳಿಂದ ಸಮಲಂಕೃತನಾಗಿರುವವನಾದುದರಿಂದ ಆವನಿಗೆ ಮಹಾತೇಜಾ ಎಂದು ಹೆಸರು.

'ಯದಾದಿತ್ಯಗತಂ ತೇಜೋ...ತತ್ತೇಜೋ ವಿದ್ಧಿ ಮಾಮಕಮ್' 'ಸೂರ್ಯನಲ್ಲಿರುವ ಯಾವ ತೇಜಸ್ಸು ಅಖಿಲಜಗತ್ತನ್ನು ಪ್ರಕಾಶಪಡಿಸುತ್ತದೋ, ಚಂದ್ರನಲ್ಲಿ ಮತ್ತು ಅಗ್ನಿಯಲ್ಲಿ ಯಾವ ತೇಜಸ್ಸುಂಟೋ ಆ ತೇಜಸ್ಸು ನನ್ನದೆಂದು ತಿಳಿ' (ಗೀತಾ. ೧೫.೧೨).

೬೭೪. ಮಹೋರಗಃ—(ವಾಸುಕಿ ಎಂಬ) ಮಹಾಸರ್ಪವಾಗಿರುವವನು.

'ಸರ್ಪಾಣಾಮಸ್ಮಿ ವಾಸುಕಿಃ' 'ಸರ್ಪಗಳಲ್ಲಿ ನಾನು ವಾಸುಕಿಯಾಗಿದ್ದೇನೆ' (ಗೀತಾ. ೧೦.೨೮).

೬೭೫. ಮಹಾಕ್ರತುಃ— ಮಹಾಯಜ್ಞವಾಗಿರುವವನು.

ಯಜ್ಞಗಳಲ್ಲಿ ಅಶ್ವಮೇಧಯಜ್ಞವು ಶ್ರೇಷ್ಠವಾದುದು. ಭಗವಂತನೇ ಈ ಅಶ್ವಮೇಧಯಜ್ಞವಾಗಿರುವನಾದುದರಿಂದ ಭಗವಂತನನ್ನು ಮಹಾಕ್ರತು ಎಂದು ಸ್ತುತಿಸುತ್ತಾರೆ.

೬೭೬. ಮಹಾಯಜ್ವಾ—ಲೋಕಸಂಗ್ರಹಾರ್ಥವಾಗಿ ಯಜ್ಞಗಳನ್ನು ಮಾಡುವ ಮಹಾಪುರುಷನು.

೬೭೭. ಮಹಾಯಜ್ಞಃ—ಶ್ರೇಷ್ಠವಾದ ಯಜ್ಞವಾಗಿರುವವನು.

'ಯಜ್ಞಾನಾಂ ಜಪಯಜ್ಞೋಽಸ್ಮಿ' 'ಯಜ್ಞಗಳಲ್ಲಿ ನಾನು ಜಪಯಜ್ಞವಾಗಿದ್ದೇನೆ' (ಗೀತಾ. ೧೦. ೨೫).

೬೭೮. ಮಹಾಹವಿಃ— ಮಹತ್ತಾದ ಹವಿಸ್ಸಾಗಿರುವವನು.

ಬ್ರಹ್ಮಾತ್ಮದಲ್ಲಿ ಇಡೀ ಜಗತ್ತು ಬ್ರಹ್ಮಭಾವದಿಂದ ಹವಿಸ್ಸಾಗಿ ಅರ್ಪಿಸಲ್ಪಡುತ್ತದೆ. ಆದುದರಿಂದ ಭಗವಂತನಿಗೆ ಮಹಾಹವಿ ಎಂದು ಹೆಸರು.

೬೭೯. ಸ್ತವ್ಯಃ—ಎಲ್ಲರಿಂದ ಸ್ತುತಿಸಲ್ಪಡುವವನು.

ಭಗವಂತನು ಸರ್ವರಿಂದ ಸ್ತುತಿಸಲ್ಪಡುವವನು; ತಾನು ಯಾರನ್ನೂ ಸ್ತುತಿಸುವವನಲ್ಲ. ಆದುದರಿಂದ ಅವನಿಗೆ ಸ್ತವ್ಯ ಎಂದು ಹೆಸರು.

೬೮೦. ಸ್ತವಪ್ರಿಯಃ—ಸ್ತವಪ್ರಿಯನು

ಭಗವಂತನನ್ನು ಎಲ್ಲರೂ ಸ್ತುತಿಸುತ್ತಾರೆ. ಆದುದರಿಂದಲೇ ಭಗವಂತನು ಸ್ತವಪ್ರಿಯನು.

೬೮೧. ಸ್ತೋತ್ರಮ್—ಗುಣಸಂಕೀರ್ತನಾರೂಪವಾದ ಸ್ತೋತ್ರವಾಗಿರುವವನು.

ಭಗವಂತನು ಯಾವುದರ ಮೂಲಕ ಸ್ತುತಿಸಲ್ಪಡುತ್ತಾನೋ ಅದೇ ಸ್ತೋತ್ರವು. ಗುಣಸಂಕೀರ್ತನಾರೂಪವಾದ ಆ ಸ್ತೋತ್ರವೂ ಭಗವಂತನೇ ಆಗಿರುವನು. ಆದುದರಿಂದ ಅವನಿಗೆ ಸ್ತೋತ್ರ ಎಂದು ಹೆಸರು.

೬೮೨. ಸ್ತುತಿಃ—ಸ್ತವನಕ್ರಿಯೆಯಾಗಿರುವವನು.

ಸ್ತವನಕ್ರಿಯೆಯೂ ಭಗವಂತನೇ ಆಗಿರುವನು. ಆದುದರಿಂದ ಅವನಿಗೆ ಸ್ತುತಿ ಎಂದು ಹೆಸರು.

೬೮೩. ಸ್ತೋತಾ—ಸ್ತುತಿಸುವವನು.

ಸ್ತುತಿಸುವವನೂ ಭಗವಂತನೇ ಆಗಿರುವನು. ಆದುದರಿಂದ ಭಗವಂತನು ಸ್ತೋತೃವು.

೬೮೪. ರಣಪ್ರಿಯಃ—ಯುದ್ಧವು ತನಗೆ ಪ್ರಿಯವಾಗಿ ಉಳ್ಳವನು.

ಭಗವಂತನಿಗೆ ಯುದ್ಧವು ಪ್ರಿಯವಾದುದು. ಅವನು ಲೋಕರಕ್ಷಣಾರ್ಥವಾಗಿ ನಿತ್ಯವೂ ಪಂಚಮಹಾಯುಧಗಳನ್ನು ಧರಿಸುತ್ತಾನೆ. ಆದುಧರಿಂದ ಅವನಿಗೆ ರಣಪ್ರಿಯ ಎಂದು ಹೆಸರು.

೬೮೫. ಪೂರ್ಣಃ—ಸಕಲ ಬಯಕೆಗಳಿಂದಲೂ ಸಕಲ ಶಕ್ತಿಗಳಿಂದಲೂ ಸಂಪನ್ನನಾಗಿರುವವನು.

೬೮೬. ಪೂರಯಿತಾ—ಎಲ್ಲರನ್ನೂ ಪೂರ್ಣಮಾಡುವವನು.

ಭಗವಂತನು ಕೇವಲ ಪೂರ್ಣನು ಮಾತ್ರವಲ್ಲ; ಎಲ್ಲರನ್ನೂ ಸಂಪತ್ತುಗಳಿಂದ ಪೂರ್ಣಮಾಡುವವನೂ ಆಗಿರುವನು. ಆದುದರಿಂದ ಅವನಿಗೆ ಪೂರಯಿತಾ ಎಂದು ಹೆಸರು.

೬೮೭. ಪುಣ್ಯಃ—ಸ್ಮರಣಮಾತ್ರದಿಂದಲೇ ಕಲ್ಮಶಗಳನ್ನೆಲ್ಲ ನಾಶಮಾಡುವವನು.

೬೮೮. ಪುಣ್ಯಕೀರ್ತಿಃ—ಪವಿತ್ರವಾದ ಕೀರ್ತಿಯುಳ್ಳವನು.

ಭಗವಂತನ ಕೀರ್ತಿಯು ಪವಿತ್ರವಾದುದು. ಅದು ಮನುಷ್ಯರಿಗೆ ಪುಣ್ಯವನ್ನು ತರುತ್ತದೆ. ಆದುದರಿಂದ ಭಗವಂತನಿಗೆ ಪುಣ್ಯಕೀರ್ತಿಯೆಂದು ಹೆಸರು.

೬೮೯. ಅನಾಮಯಃ—ಕರ್ಮಗಳಿಂದ ಹುಟ್ಟಿದ ಆಂತರಿಕ ವ್ಯಾಧಿಗಳಿಂದ ಅಥವಾ ಬಾಹ್ಯವ್ಯಾಧಿಗಳಿಂದ ಪೀಡಿಸಲ್ಪಡದೇ ಇರುವವನು.

೬೯೦. ಮನೋಜವಃ—ಮನಸ್ಸಿನ ವೇಗಕ್ಕೆ ಸಮಾನವಾದ ವೇಗವುಳ್ಳವನು.

ಭಗವಂತನು ಸರ್ವವ್ಯಾಪಿಯಾದುದರಿಂದ ಮನಸ್ಸಿನ-ವೇಗಕ್ಕೆ ಸಮಾನವಾದ ವೇಗವುಳ್ಳವನಾಗಿರುವನು. ಆದುದರಿಂದ ಅವನು ಮನೋಜವನು.

೬೯೧. ತೀರ್ಥಕರಃ- ಎಲ್ಲ ವಿದ್ಯೆಗಳ ಕರ್ತೃವೂ ವಕ್ತೃವೂ ಆಗಿರುವವನು.

ಭಗವಂತನು ಹದಿನಾಲ್ಕು ವೈದಿಕವಿದ್ಯೆಗಳ ಮತ್ತು ವೇದಬಾಹ್ಯವಿದ್ಯೆಗಳ ಸಿದ್ಧಾಂತಗಳ ಕರ್ತೃವೂ ವಕ್ತೃವೂ ಆಗಿರುವನಾದುದರಿಂದ ಅವನಿಗೆ ತೀರ್ಥಕರ

ಎಂದು ಹೆಸರು. ಭಗವಂತನು ಹಯಗ್ರೀವರೂಪದಿಂದ ಮಧು ಮತ್ತು ಕೈಟಭ ಎಂಬ ಅಸುರರನ್ನು ಕೊಂದು ಬ್ರಹ್ಮನಿಗೆ ಸೃಷ್ಟ್ಯಾದಿಯಲ್ಲಿ ಸರ್ವಶ್ರುತಿಗಳನ್ನೂ ಅನ್ಯವಿದ್ಯೆಗಳನ್ನೂ ಉಪದೇಶಿಸಿ, ಸುರವೈರಿಗಳ ವಂಚನೆಗಾಗಿ ವೇದಬಾಹ್ಯವಾದ ವಿದ್ಯೆಗಳನ್ನು ಕೂಡ ಉಪದೇಶಿಸಿದನು ಎಂದು ಪೌರಾಣಿಕರು ಹೇಳುತ್ತಾರೆ.

೬೯೨. ವಸುರೇತಾಃ—ಸುವರ್ಣವು ತನ್ನ ರೇತಸ್ಸಾಗಿ ಉಳ್ಳವನು.

ಭಗವಂತನು ಮೊದಲು ಜಲವನ್ನು ಸೃಷ್ಟಿಸಿ ಅದರಲ್ಲಿ ವೀರ್ಯವನ್ನು ಬಿಟ್ಟನು. ಅದು ಬ್ರಹ್ಮನ ಉತ್ಪತ್ತಿಗೆ ಪರಮಶ್ರೇಷ್ಠಕಾರಣವಾದ ಅಂಡವಾಯಿತು (ವ್ಯಾಸವಚನ).

೬೯೩. ವಸುಪ್ರದಃ—ಧನವನ್ನು ಪ್ರಕೃಷ್ಟವಾಗಿ (ಅತಿಶತಯವಾಗಿ) ದಾನಮಾಡುವವನು.

ಭಗವಂತನು ಸಾಕ್ಷಾತ್ ಧನಾಧ್ಯಕ್ಷನು. ಕುಬೇರಾದಿ ಇತರರಾದರೊ ಆವನ ಅನುಗ್ರಹದಿಂದ ಮಾತ್ರವೇ ಧನಾಧ್ಯಕ್ಷರಾಗಿರುವರು.

೬೯೪. ವಸುಪ್ರದಃ—ಮೋಕ್ಷವೆಂಬ ಪ್ರಕೃಷ್ಟವಾದ ಫಲವನ್ನು ಭಕ್ತರಿಗೆ ಕೊಡುವವನು.

ಅಥವಾ ದೇವಶತ್ರುಗಳ ಧನಗಳನ್ನು ಅಧಿಕವಾಗಿ ನಾಶಮಾಡುವವನು.

೬೯೫. ವಾಸುದೇವಃ—ವಸುದೇವನ ಮಗನಾಗಿ ಹುಟ್ಟಿದವನು.

೬೯೬. ವಸುಃ—ಸರ್ವಭೂತಗಳಿಗೆ ವಾಸಸ್ಥಾನವಾಗಿರುವವನು.

ಅಥವಾ ಭಗವಂತನು ಸರ್ವಭೂತಗಳಲ್ಲಿ ವಾಸಮಾಡುವವನಾದುದರಿಂದ ವಸುವು.

೬೯೭. ವಸುಮನಾಃ–ಸರ್ವವಸ್ತುಗಳಲ್ಲಿ ಸಮಾನಭಾವದಿಂದ ವಾಸ ಮಾಡುವಂತಹ ಮನಸ್ಸುಳ್ಳವನು.

೬೯೮. ಹವಿಃ—ಹವಿಸ್ಸಾಗಿರುವವನು.

'ಬ್ರಹ್ಮಾರ್ಪಣಂ ಬ್ರಹ್ಮಹವಿಃ...' 'ಅರ್ಪಣವು ಬ್ರಹ್ಮ, ಹವಿಸ್ಸು ಬ್ರಹ್ಮ...' (ಗೀತಾ. ೪.೨೪).

೬೯೯. ಸದ್ಗತಿಃ—ಸಂತರಿಂದ ಹೊಂದಲ್ಪಡುವವನು.

ಯಾರು ಪರಮಾತ್ಮನು ಇದ್ದಾನೆಂದು ತಿಳಿಯುತ್ತಾರೋ ಅವರಿಗೆ ಸಂತರು ಎಂದು ಹೇಳುತ್ತಾರೆ. ಸಂತರು ಭಗವಂತನನ್ನು ಹೊಂದುತ್ತಾರೆ. ಆದುದರಿಂದ ಭಗವಂತನಿಗೆ ಸದ್ಗತಿ ಎಂದು ಹೆಸರು. ಅಥವಾ ಭಗವಂತನು ಉತ್ಕೃಷ್ಟವಾದ ಬುದ್ಧಿಯುಳ್ಳವನಾದುದರಿಂದ ಅವನಿಗೆ ಸದ್ಗತಿ ಎಂದು ಹೇಳುತ್ತಾರೆ.

೨೦೦. ಸತ್ಕೃತಿಃ— ಜಗದ್ರಕ್ಷಣಾರೂಪವಾದ ಶ್ರೇಷ್ಠವಾದ ಕೃತಿಯುಳ್ಳವನು.

೨೦೧. ಸತ್ತಾ—ಸತ್ತಾಸ್ವರೂಪನಾಗಿರುವವನು.

ಸಜಾತೀಯ ವಿಜಾತೀಯ ಮತ್ತು ಸ್ವಗತ ಭೇದಗಳಿಲ್ಲದ ಅನುಭೂತಿಯೇ ಸತ್ತಾ.

೨೦೨. ಸದ್ಭೂತಿಃ—ಸತ್ಸ್ವರೂಪನೂ ಚಿದಾತ್ಮಕನೂ ಆಗಿರುವವನು.

ಸತ್ಸ್ವರೂಪನೂ ಚಿದಾತ್ಮಕನೂ ಆಗಿರುವ ಪರಮಾತ್ಮನೇ (ಅವನು ಬಾಧಾರಹಿತನೂ ಭಾಸಮಾನನೂ ಆಗಿರುವುದರಿಂದ) ಸದ್ಭೂತಿಯಾಗಿರುವನು; ಅನ್ಯರು ಯಾರೂ ಅಲ್ಲ. ಜ್ಞಾನೇಂದ್ರಿಯಗಳಿಗೆ ಗೋಚರವಾಗುವ ಜಗತ್ತು ಬಾಧ್ಯಮಾನವಾಗಿರುವುದರಿಂದ ಅದು 'ಸತ್' ಅಲ್ಲ, 'ಅಸತ್' ಕೂಡ ಅಲ್ಲ.

೨೦೩. ಸತ್ಪರಾಯಣಃ— ತತ್ತ್ವವಿದರಿಗೆ ಪರಮಶ್ರೇಷ್ಠವಾದ ಗುರಿಯಾಗಿರುವವನು.

೨೦೪. ಶೂರಸೇನಃ—ಹನುಮಂತನೇ ಮೊದಲಾದ ಪ್ರಮುಖರಾದ ಶೌರ್ಯಶಾಲಿಗಳಾದ ಸೈನಿಕರಿರುವ ಸೇನೆಯುಳ್ಳವನು.

೨೦೫. ಯದುಶ್ರೇಷ್ಠಃ— ಯಾದವರಲ್ಲಿ ಅಗ್ರಗಣ್ಯನು.

೨೦೬. ಸನ್ನಿವಾಸಃ— ವಿದ್ವಾಂಸರಿಗೆ ಆಶ್ರಯವಾಗಿರುವವನು.

೨೦೭. ಸುಯಾಮುನಃ—ರೂಪವಂತರೂ ಯಮುನಾಸಂಬಂಧಿಗಳೂ ತನ್ನ ಪರಿವಾರದವರಾಗಿ ಇದ್ದವನು.

ರೂಪವಂತರಾದ ಯಮುನಾಸಂಬಂಧಿಗಳಾದ ದೇವಕೀ ವಸುದೇವ ನಂದ ಯಶೋದಾ ಬಲಭದ್ರ ಮತ್ತು ಸುಭದ್ರಾ ಮೊದಲಾದವರು ಭಗವಂತನಿಗೆ ಪರಿವಾರದವರಾಗಿ ಇದ್ದರು. ಆದುದರಿಂದ ಅವನಿಗೆ ಸುಯಾಮುನ ಎಂದು ಹೆಸರು. ಅಥವಾ ರೂಪವಂತರಾದ ಬ್ರಹ್ಮಾದಿಗಳು ಗೋಪವೇಷಧಾರಿಗಳೂ ಯಮುನಾಸಂಬಂಧಿಗಳೂ ಆಗಿ ಭಗವಂತನ ಪರಿವಾರದವರಾಗಿದ್ದರು. ಆದುದರಿಂದ ಭಗವಂತನಿಗೆ ಸುಯಾಮುನ ಎಂದು ಹೆಸರು.

೨೦೮. ಭೂತಾವಾಸಃ—ಭೂತಗಳಿಗೆಲ್ಲ ಮುಖ್ಯವಾದ ವಾಸಸ್ಥಾನವಾಗಿರುವವನು.

'ವಸಂತಿ ತ್ವಯಿ ಭೂತಾನಿ ಭೂತಾವಾಸಸ್ತತೋ ಭವಾನ್' 'ನಿನ್ನಲ್ಲಿ ಭೂತಗಳು ವಾಸಮಾಡುತ್ತವೆ. ಆದುದರಿಂದ ನೀನು ಭೂತಾವಾಸನು' (ಹರಿ).

೨೦೯. ವಾಸುದೇವಃ—ವಾಸುದೇವನು. (ಜಗತ್ತನ್ನು ತನ್ನ ಮಾಯೆಯಿಂದ ಮುಚ್ಚಿರುವವನೂ, ದೇವನೂ ಆಗಿರುವವನು.)

'ಛಾದಯಾಮಿಂ ಜಗದ್ ವಿಶ್ವಂ ಭೂತ್ವಾ ಸೂರ್ಯ ಇವಾಂಶುಭಿಃ' 'ಸೂರ್ಯನು ಕಿರಣಗಳಿಂದ ಹೇಗೋ ಹಾಗೇಯೇ ನಾನು ಇಡೀ ಜಗತ್ತನ್ನು ನನ್ನ ವಿಭೂತಿಯಿಂದ ಮುಚ್ಚುತ್ತೇನೆ' (ಮಹಾ. ಶಾಂತಿ. ೩೪೧. ೪೧).

೨೧೦. ಸರ್ವಾಸುನಿಲಯಃ— ಸರ್ವಪ್ರಾಣಿಗಳಿಗೆ ಆಶ್ರಯಸ್ಥಾನವಾಗಿರುವವನು.

ಸರ್ವಪ್ರಾಣಿಗಳು ಜೀವಾತ್ಮರೂಪವಾದ ಆಶ್ರಯಸ್ಥಾನದಲ್ಲಿ (ಎಂದರೆ ಭಗವಂತನಲ್ಲಿ) ಲೀನವಾಗುತ್ತವೆ. ಆದುದರಿಂದ ಭಗವಂತನಿಗೆ **ಸರ್ವಾಸುನಿಲಯ** ಎಂದು ಹೇಳುತ್ತಾರೆ.

೨೧೧. ಅನಲಃ—ತನ್ನ ಶಕ್ತಿಸಂಪತ್ತುಗಳಿಗೆ ಪರ್ಯಾಪ್ತಿಯಿಲ್ಲದವನು.

೨೧೨. ದರ್ಪಹಾ—ಧರ್ಮವಿರುದ್ಧವಾದ ಮಾರ್ಗದಲ್ಲಿ ಇರುವವರ ದರ್ಪವನ್ನು ನಾಶಮಾಡುವವನು.

೨೧೩. ದರ್ಪದಃ—ಧರ್ಮಮಾರ್ಗದಲ್ಲಿ ವರ್ತಿಸುವವರಿಗೆ ಸದಹಂಕಾರವನ್ನು ಕೊಡುವವನು.

೨೧೪. ದೃಪ್ತಃ— ನಿತ್ಯವೂ ಸಂತುಷ್ಟನಾಗಿರುವವನು.

ಸ್ವಾತ್ಮಾಮೃತರಸಾಸ್ವಾದನೆಯಿಂದ ಭಗವಂತನು ನಿತ್ಯವೂ ಸಂತುಷ್ಟನಾಗಿರುವನಾದುದರಿಂದ ಅವನಿಗೆ ದೃಪ್ತ ಎಂಬು ಹೆಸರು.

೨೧೫. ದುರ್ಧರಃ—(ಭಕ್ತರಿಂದ) ಬಹಳ ಕಷ್ಟದಿಂದ ಹೃದಯದಲ್ಲಿ ಧಾರಣಮಾಡಲ್ಪಡುವವನು.

ಭಗವಂತನು ಸರ್ವ ಉಪಾಧಿಗಳಿಂದ ರಹಿತನಾದುದರಿಂದ ಅವನನ್ನು ಪ್ರಣಿಧಾನಾದಿಗಳಲ್ಲಿ ಧಾರಣಮಾಡಲು ಅಸಾಧ್ಯವಾಗಿದ್ದರೂ, ಕೆಲವರು ಅವನ ಅನುಗ್ರಹದಿಂದ ಸಹಸ್ರಾರು ಜನ್ಮಗಳಲ್ಲಿ ಬಹಳ ಕಷ್ಟದಿಂದ ತಮ್ಮ ಹೃದಯದಲ್ಲಿ ಅವನನ್ನು ಧಾರಣಮಾಡುತ್ತಾರೆ. ಆದುದರಿಂದ ಅವನಿಗೆ ದುರ್ಧರ ಎಂದು ಹೆಸರು.

'ಕ್ಲೇಶೋಧಿಕತರಸ್ತೇಷಾಂ...ದೇಹವದ್ಭಿರವಾಪ್ಯತೇ' 'ಅವ್ಯಕ್ತದಲ್ಲಿ ಆಸಕ್ತವಾದ ಮನಸ್ಸುಳ್ಳವರ ಕ್ಲೇಶವು ಅಧಿಕತರವಾದುದು. ದೇಹಧಾರಿಗಳಿಂದ (ಅಕ್ಷರಾತ್ಮಿಕವಾದ) ಅವ್ಯಕ್ತಗತಿಯು ಬಹಳ ಕಷ್ಟದಿಂದ ಹೊಂದಲ್ಪಡುತ್ತದೆ' (ಗೀತಾ. ೧೨.೫).

೨೧೬. ಅಪರಾಜಿತಃ—ರಾಗಾದಿ ಆಂತರಿಕ ಶತ್ರುಗಳಿಂದಾಗಲೀ ಅಥವಾ ದಾನವಾದಿ ಬಾಹ್ಯಶತ್ರುಗಳಿಂದಾಗಲೀ ಎಂದೂ ಪರಾಜಿತನಾಗದೆ ಇರುವವನು.

೨೧೭. ವಿಶ್ವಮೂರ್ತಿಃ—ವಿಶ್ವವು ತನ್ನ ಮೂರ್ತಿಯಾಗಿ ಉಳ್ಳವನು.

ಭಗವಂತನು ಸರ್ವಾತ್ಮಕನಾದುದರಿಂದ ವಿಶ್ವವು ಅವನ ಮೂರ್ತಿ. ಆದುದರಿಂದ ಭಗವಂತನಿಗೆ ವಿಶ್ವಮೂರ್ತಿ ಎಂದು ಹೆಸರು.

೨೧೮. ಮಹಾಮೂರ್ತಿಃ—ಮಹತ್ತಾದ ಮೂರ್ತಿಯುಳ್ಳವನು.

ಶೇಷಪರ್ಯಂಕದ ಮೇಲೆ ಶಯನಮಾಡಿರುವ ಭಗವಂತನ ಮೂರ್ತಿಯು ಮಹತ್ತಾದುದು. ಆದುದರಿಂದ ಅವನು ಮಹಾಮೂರ್ತಿ.

೨೧೯. ದೀಪ್ತಮೂರ್ತಿಃ—ಜ್ಞಾನಮಯವಾದ ಮೂರ್ತಿಯುಳ್ಳವನು.

ಅಥವಾ ಭಗವಂತನು ಸ್ವೇಚ್ಛೆಯಿಂದ ಗ್ರಹಿಸಿದ ತೈಜಸೀಮೂರ್ತಿಯು ಕಾಂತಿಯುಕ್ತವಾದುದು. ಆದುದರಿಂದ ಭಗವಂತನಿಗೆ ದೀಪ್ತ ಮೂರ್ತಿ ಎಂದು ಹೆಸರು.

೨೨೦. ಅಮೂರ್ತಿಮಾನ್-ಕರ್ಮಬದ್ಧವಾದ ಶರೀರವಿಲ್ಲದವನು.

೨೨೧. ಅನೇಕಮೂರ್ತಿಃ—ಲೋಕೋಪಕಾರಕ್ಕಾಗಿ ಅವತಾರಗಳಲ್ಲಿ ಸ್ವೇಚ್ಛೆಯಿಂದ ಅನೇಕ ರೂಪಗಳನ್ನು ಧರಿಸಿದವನು.

೨೨೨. ಅವ್ಯಕ್ತಃ—ಇಂಥವನೇ ಎಂದು ನಿರೂಪಿಸಲ್ಪಡಲು ಅಸಾಧ್ಯನಾಗಿರುವವನು.

ಭಗವಂತನಿಗೆ ಅನೇಕ ರೂಪಗಳಿದ್ದರೂ, ಅವನು ಇಂಥವನೇ ಎಂದು ನಿರೂಪಿಸಲ್ಪಡಲು ಅಸಾಧ್ಯನಾಗಿರುವನು. ಆದುದರಿಂದ ಅವನು ಅವ್ಯಕ್ತನು.

೨೨೩. ಶತಮೂರ್ತಿಃ—ವಿವಿಧರೂಪಗಳಿರುವವನು.

ಜ್ಞಾನಮೂರ್ತಿಯಾದ ಭಗವಂತನಿಗೆ ವಿವಿಧ ವಿಕಲ್ಪ ಜನ್ಯರೂಪಗಳಿವೆಯಾದುದರಿಂದ ಅವನು ಶತಮೂರ್ತಿಯು.

೨೨೪. ಶತಾನನಃ—ನೂರು ಮುಖಗಳಿರುವವನು.

ಭಗವಂತನಿಗೆ ವಿಶ್ವವೇ ಮೊದಲಾದ ಅನೇಕ ರೂಪಗಳಿವೆಯಾದುದರಿಂದ ಅವನು ಶತಾನನನು ಎಂದರೆ ನೂರು ಮುಖಗಳುಳ್ಳವನು.

೨೨೫. ಏಕಃ—ಒಬ್ಬನೇ ಆಗಿರುವವನು.

ಪಾರಮಾರ್ಥಿಕವಾಗಿ ಸಜಾತೀಯ ವಿಜಾತೀಯ ಮತ್ತು ಸ್ವಗತ ಭೇದಗಳಿಂದ ರಹಿತನಾದುದರಿಂದ ಪರಮಾತ್ಮನು ಒಬ್ಬನೇ ಒಬ್ಬನಾಗಿರುವನು. ಆದುದರಿಂದ ಅವನಿಗೆ ಏಕ ಎಂದು ಹೆಸರು.

೭೨೬. ನೈಕಃ—ಅನೇಕವಾಗಿರುವವನು.

ಭಗವಂತನು ಮಾಯೆಯಿಂದ ಅನೇಕ ರೂಪಗಳನ್ನು ಧರಿಸುತ್ತಾನೆ. ಆದುದರಿಂದ ಅವನು ನೈಕನು ಅಂದರೆ ಏಕನಲ್ಲ.

'ಇಂದ್ರೋ ಮಾಯಾಭಿಃ ಪುರುರೂಪ ಈಯತೇ' 'ಇಂದ್ರನು (ಪರಮೇಶ್ವರನು) ಮಾಯೆಗಳ ದ್ವಾರಾ ಅನೇಕ ರೂಪಗಳಿಂದ ಕಾಣುತ್ತಾನೆ.' (ಬೃ.ಉ. ೨.೫.೧೯).

೭೨೭. ಸವಃ—ಯಜ್ಞರೂಪನು.

ಯಾವ ಯಜ್ಞದಲ್ಲಿ ಸೋಮರಸವು ಹಿಂಡಲ್ಪಡುತ್ತದೋ ಆ ಯಜ್ಞಕ್ಕೆ ಸವ ಎಂದು ಹೆಸರು. ಭಗವಂತನು ಯಜ್ಞರೂಪನಾದುದರಿಂದ ಅವನಿಗೂ ಸವ ಎಂದು ಹೆಸರು.

೭೨೮. ಕಃ—ಸುಖರೂಪನು.

ಕ ಎಂದರೆ ಸುಖ ಎಂದು ಅರ್ಥ. ಭಗವಂತನು ಸುಖರೂಪನೆಂದು ಸ್ತುತಿಸಲ್ಪಡುತ್ತಾನೆ. ಆದುದರಿಂದ ಅವನಿಗೆ ಕ ಎಂದು ಹೆಸರು.

'ಕಂ ಬ್ರಹ್ಮ' 'ಬ್ರಹ್ಮವು ಸುಖವು' (ಛಾ.ಉ. ೪.೧೦.೫).

೭೨೯. ಕಿಮ್—ವಿಚಾರಿಸಲ್ಪಡತಕ್ಕವನು.

ಪರಮಾತ್ಮನು ಸರ್ವಪುರುಷಾರ್ಥರೂಪನಾದುದರಿಂದ ಅವನೊಬ್ಬನೇ ವಿಚಾರಿಸಲ್ಪಡತಕ್ಕವನು. ಆದುದರಿಂದ ಪರಮಾತ್ಮನಿಗೆ ಕಿಂ ಎಂದು ಹೆಸರು.

೭೩೦. ಯತ್—ಯತ್ ಶಬ್ದದಿಂದ ನಿರ್ದೇಶಿಸಲ್ಪಡುವವನು.

ಸ್ವತಃಸಿದ್ಧವಾದ ವಸ್ತುವನ್ನು ಸೂಚಿಸುವ ಯತ್ (ಯಾವುದು) ಶಬ್ದವು ಬ್ರಹ್ಮವನ್ನು ನಿರ್ದೇಶಿಸುತ್ತದೆ. ಆದುದರಿಂದ ಬ್ರಹ್ಮಕ್ಕೆ ಯತ್ ಎಂದು ಹೇಳುತ್ತಾರೆ.

'ಯತೋ ವಾ ಇಮಾನಿ ಭೂತಾನಿ ಜಾಯಂತೇ' 'ಯಾವುದರಿಂದ (ಎಂದರೆ ಪರಮಾತ್ಮನಿಂದ) ಈ ಭೂತಗಳು ಹುಟ್ಟುತ್ತವೋ' (ತೈ.ಉ. ೩.೧)

೭೩೧. ತತ್—ಚಾಚಿಕೊಂಡಿರುವವನು, ವ್ಯಾಪಿಸಿರುವವನು.

(ಎಲ್ಲಾ ಕಡೆಗಳಲ್ಲಿ) ಚಾಚಿಕೊಂಡಿರುವುದರಿಂದ ಬ್ರಹ್ಮಕ್ಕೆ ತತ್ ಎಂದು ಹೇಳುತ್ತಾರೆ.

'ಓಂ ತತ್ಸದಿತಿ ನಿರ್ದೇಶೋ ಬ್ರಹ್ಮಣಸ್ತ್ರಿವಿಧಃ ಸ್ಮೃತಃ' 'ಓಂ ತತ್ ಸತ್ ಎಂದು ಬ್ರಹ್ಮವು ಮೂರು ವಿಧವಾಗಿ ನಿರ್ದೇಶಿಸಲ್ಪಡುತ್ತದೆ' (ಗೀತಾ ೧೭. ೨೩).

೨೩೨. ಪದಮನುತ್ತಮಮ್—ಮುಮುಕ್ಷುಗಳು ಹೊಂದುವ ಸರ್ವೋತ್ಕೃಷ್ಟವಾದ ಪದವಿಯಾಗಿರುವವನು.

೨೩೩. ಲೋಕಬಂಧುಃ—ಲೋಕಗಳಿಗೆಲ್ಲ ಬಂಧುವಾಗಿರುವವನು.

ಆಧಾರಭೂತನಾದ ಭಗವಂತನಲ್ಲಿ ಸಕಲ ಲೋಕಗಳೂ ಬಂಧಿಸಲ್ಪಟ್ಟಿವೆಯಾದುದರಿಂದ ಅವನು ಲೋಕಗಳಿಗೆಲ್ಲ ಬಂಧುವಾಗಿರುವನು. ಅಥವಾ ಭಗವಂತನು ಲೋಕಗಳಿಗೆಲ್ಲ ಜನಕನಾಗಿರುವನು. ಜನಕನಿಗೆ ಸಮಾನರಾದ ಬಂಧುಗಳಿಲ್ಲ. ಆದುದರಿಂದ ಭಗವಂತನು ಲೋಕಬಂಧುವು. ಅಥವಾ ಭಗವಂತನು ಲೋಕಗಳಿಗೆ ಬಂಧುವಿನಂತೆ ಶ್ರುತಿಸ್ಮೃತಿರೂಪವಾದ ಹಿತಾಹಿತೋಪದೇಶವನ್ನು ಮಾಡಿದುದರಿಂದ ಲೋಕಬಂಧುವು.

೨೩೪. ಲೋಕನಾಥಃ—ಲೋಕದ ಜನರಿಂದ ಯಾಚಿಸಲ್ಪಡುವವನು.

ಅಥವಾ ಲೋಕಗಳನ್ನು ಉಪತಪಿಸುವವನು, ಆಳುವವನು, ರಕ್ಷಿಸುವವನು.

೨೩೫. ಮಾಧವಃ—ಮಧುಕುಲದಲ್ಲಿ ಹುಟ್ಟಿದವನು.

೨೩೬. ಭಕ್ತವತ್ಸಲಃ—ಭಕ್ತರಲ್ಲಿ ಸ್ನೇಹವುಳ್ಳವನು.

೨೩೭. ಸುವರ್ಣವರ್ಣಃ—ಬಂಗಾರದಂತೆ ವರ್ಣವುಳ್ಳವನು.

೨೩೮. ಹೇಮಾಂಗಃ—ಚಿನ್ನದಂತೆ ಶರೀರವುಳ್ಳವನು.

೨೩೯. ವರಾಂಗಃ—ಸುಂದರವಾದ ಅವಯವಗಳುಳ್ಳವನು.

೨೪೦. ಚಂದನಾಂಗದೀ—ಆಹ್ಲಾದವನ್ನು ಉಂಟುಮಾಡುವ ಕೇಯೂರಗಳಿಂದ ಅಲಂಕೃತನಾಗಿರುವವನು.

೨೪೧. ವೀರಹಾ—ಧರ್ಮರಕ್ಷಣೆಗಾಗಿ ವೀರರಾದ ಅಸುರಪ್ರಮುಖರನ್ನು ಕೊಲ್ಲುವವನು.

೨೪೨. ವಿಷಮಃ—ತನಗೆ ಸಮಾನರಾದವರು ಯಾರೂ ಇಲ್ಲದವನು.

ಭಗವಂತನು ಸರ್ವವಿಲಕ್ಷಣನಾದುದರಿಂದ ಅವನಿಗೆ ಸಮಾನರಾದವರು ಯಾರೂ ಇಲ್ಲ. ಆದುದರಿಂದ ಅವನಿಗೆ ವಿಷಮ ಎಂದು ಹೆಸರು.

'ನ ತ್ವತ್ಸಮೋಽಸ್ತ್ಯಭ್ಯಧಿಕಃ ಕುತೋಽನ್ಯಃ' 'ನಿನಗೆ ಸಮಾನರಾದವರು ಯಾರೂ ಇಲ್ಲ. ಹೀಗಿರುವಾಗ, ನಿನಗಿಂತ ಅಧಿಕನಾದವನು ಎಲ್ಲಿರುವನು?' (ಗೀತಾ ೧೧. ೪೩).

೨೪೩. ಶೂನ್ಯಃ— ಸರ್ವವಿಶೇಷಗಳಿಂದ ರಹಿತನಾಗಿರುವವನು.

೭೪೪. ಘೃತಾಶೀಃ— ನಾಶವಾಗಿರುವ ಆಶೆಗಳುಳ್ಳವನು.

೭೪೫. ಅಚಲಃ—ಅಚಲನು.

ಭಗವಂತನು ತನ್ನ ಸ್ವರೂಪದಿಂದ ಸಾಮರ್ಥ್ಯದಿಂದ ಮತ್ತು ಜ್ಞಾನಾದಿಕ ಗುಣಗಳಿಂದ ಚಲಿಸದೇ ಇರುವವನಾದುದರಿಂದ ಅಚಲನು.

೭೪೬. ಚಲಃ—ವಾಯುರೂಪದಿಂದ ಚಲಿಸುವವನು.

೭೪೭. ಅಮಾನೀ—ಅನಾತ್ಮವಸ್ತುಗಳಲ್ಲಿ ಅತ್ಮಾಭಿಮಾನವಿಲ್ಲದವನು.

ಶುದ್ಧಜ್ಞಾನರೂಪನಾದ ಪರಮಾತ್ಮನಿಗೆ ಅನಾತ್ಮವಸ್ತುಗಳಲ್ಲಿ ಆತ್ಮಾಭಿಮಾನವು ಇಲ್ಲವಾದುದರಿಂದ ಅವನು ಅಮಾನೀ.

೭೪೮. ಮಾನದಃ—ತನ್ನ ಮಾಯೆಯಿಂದ ಎಲ್ಲರಿಗೂ ಅನಾತ್ಮವಸ್ತುಗಳಲ್ಲಿ ಆತ್ಮಾಭಿಮಾನವನ್ನು ಕೊಡುವವನು (ಉಂಟುಮಾಡುವವನು). ಅಥವಾ ಭಕ್ತರಿಗೆ ಗೌರವವನ್ನು ಕೊಡುವವನು ಅಥವಾ ತತ್ತ್ವವಿದರಿಗೆ ಅನಾತ್ಮವಸ್ತುಗಳಲ್ಲಿರುವ ಆತ್ಮಾಭಿಮಾನವನ್ನು ನಾಶಮಾಡುವವನು.

೭೪೯. ಮಾನ್ಯಃ—ಎಲ್ಲರಿಂದಲೂ ಪೂಜಿಸಲ್ಪಡತಕ್ಕವನು.

ಭಗವಂತನು ಸರ್ವೇಶ್ವರನಾದುದರಿಂದ ಎಲ್ಲರಿಂದಲೂ ಪೂಜಿಸಲ್ಪಡತಕ್ಕವನು.

೭೫೦. ಲೋಕಸ್ವಾಮೀ—ಹದಿನಾಲ್ಕು ಲೋಕಗಳಿಗೂ ಒಡೆಯನಾಗಿರುವವನು.

೭೫೧. ತ್ರಿಲೋಕಧೃಕ್— ಮೂರು ಲೋಕಗಳನ್ನೂ ಹೊತ್ತಿರುವವನು.

೭೫೨. ಸುಮೇಧಾಃ—ಉಜ್ಜ್ವಲವಾದ ಪ್ರಜ್ಞೆಯುಳ್ಳವನು.

೭೫೩. ಮೇಧಜಃ—ಯಜ್ಞದಲ್ಲಿ ಹುಟ್ಟುವವನು.

೭೫೪. ಧನ್ಯಃ—ಕೃತಾರ್ಥನಾಗಿರುವವನು.

೭೫೫. ಸತ್ಯಮೇಧಾಃ—ಎಂದಿಗೂ ವಿಫಲವಾಗದ ಮತ್ತು ಯಾವಾಗಲೂ ಸತ್ಯವಾಗಿರುವ ಮೇಧಸ್ಸುಳ್ಳವನು.

೭೫೬. ಧರಾಧರಃ—ಶೇಷನೇ ಮೊದಲಾದ ತನ್ನ ಎಲ್ಲಾ ಅಂಶಗಳಿಂದ ಇಡೀ ಪೃಥ್ವಿಯನ್ನು ಹೊತ್ತಿರುವವನು.

೭೫೭. ತೇಜೋವೃಷಃ— ಜಲವನ್ನು ವರ್ಷಿಸುವವನು.

ಭಗವಂತನು ಆದಿತ್ಯರೂಪದಿಂದ ಯಾವಾಗಲೂ ಜಲವನ್ನು ವರ್ಷಿಸುತ್ತಾನೆ. ಆದುದರಿಂದ ಅವನಿಗೆ ತೇಜೋವೃಷ ಎಂದು ಹೆಸರು.

೨೫೮. ದ್ಯುತಿಧರಃ—ದೇಹಕಾಂತಿಯನ್ನು ಧರಿಸಿರುವವನು.

೨೫೯. ಸರ್ವಶಸ್ತ್ರಭೃತಾಂ ವರಃ— ಸಮಸ್ತ ಶಸ್ತ್ರಧಾರಿಗಳಲ್ಲಿ ಶ್ರೇಷ್ಠನಾಗಿರುವವನು.

೨೬೦. ಪ್ರಗ್ರಹಃ—ಭಕ್ತರಿಂದ ಸಮರ್ಪಿಸಲ್ಪಟ್ಟ ಪತ್ರಪುಷ್ಪಾದಿಗಳನ್ನು ಗ್ರಹಣಮಾಡುವವನು.

ಅಥವಾ ವಿಷಯಗಳೆಂಬ ಅರಣ್ಯದಲ್ಲಿ ಓಡುತ್ತಿರುವ, ಪಳಗಿಸಲು ಕಷ್ಟಸಾಧ್ಯವಾದ, ಇಂದ್ರಿಯಗಳೆಂಬ ಕುದುರೆಗಳನ್ನು ಭಗವಂತನು ತನ್ನ ಅನುಗ್ರಹದಿಂದ ಲಗಾಮಿನಿಂದೆಂಬಂತೆ ಬಂಧಿಸುತ್ತಾನೆ. ಆದುದರಿಂದ ಅವನಿಗೆ ಪ್ರಗ್ರಹ ಎಂದು ಹೆಸರು.

೨೬೧. ನಿಗ್ರಹಃ—ಎಲ್ಲವನ್ನೂ ಸ್ವಾಧೀನಪಡಿಸಿ ನಿಗ್ರಹಿಸುವವನು.

೨೬೨. ವ್ಯಗ್ರಃ—ವಿನಾಶವಿಲ್ಲದವನು.

ಅಥವಾ ಭಕ್ತರ ಅಭೀಷ್ಟಗಳನ್ನು ಕೊಡುವುದರಲ್ಲಿ ಮಗ್ನನಾಗಿರುವವನು.

೨೬೩. ನೈಕಶೃಂಗಃ— ಅನೇಕ ಕೊಂಬುಗಳುಳ್ಳವನು.

'ಚತ್ವಾರಿ ಶೃಂಗಾ ತ್ರಯೋಽಸ್ಯ ಪಾದಾ...ಮಹಾದೇವೋ ಮರ್ತ್ಯಾನ್ ಆವಿವೇಶ' 'ಇವನಿಗೆ ನಾಲ್ಕು ಕೊಂಬುಗಳು, ಮೂರು ಕಾಲುಗಳು. ಎರಡು ಶಿರಸ್ಸುಗಳು, ಏಳು ಕೈಗಳು; ಮೂರು ಕಡೆಗಳಲ್ಲಿ ಬಂಧಿತನಾದ ವೃಷಭರೂಪನಾದ ಮಹಾದೇವನು ಶಬ್ದಮಾಡುತ್ತಾನೆ ಮತ್ತು ಮನುಷ್ಯರಲ್ಲಿ ಪ್ರವೇಶಿಸುತ್ತಾನೆ' (ತೈ. ಆ. ೧. ೧೦. ೧೭).

೨೬೪. ಗದಾಗ್ರಜಃ— ಎಲ್ಲರಿಗಿಂತ ಮೊದಲು ಮಂತ್ರದಿಂದ ಹುಟ್ಟಿದವನು.

ಅಥವಾ ಗದ ಎಂದು ಶ್ರೀಕೃಷ್ಣನ ತಮ್ಮನ ಹೆಸರು. ಗದನಿಗಿಂತ ಮೊದಲು ಹುಟ್ಟಿದವನಾದ್ದರಿಂದ ಭಗವಂತನಿಗೆ ಗದಾಗ್ರಜ ಎಂದು ಹೆಸರು.

೨೬೫. ಚತುರ್ಮೂರ್ತಿಃ— ನಾಲ್ಕು ಮೂರ್ತಿಗಳುಳ್ಳವನು.

ಭಗವಂತನಿಗೆ ವಿರಾಟ್ ಸೂತ್ರಾತ್ಮ ಅವ್ಯಾಕೃತ ಮತ್ತು ತುರೀಯ ಎಂಬ ನಾಲ್ಕು ಮೂರ್ತಿಗಳಿವೆ. ಆದುದರಿಂದ ಅವನು ಚತುರ್ಮೂರ್ತಿ. ಅಥವಾ ಭಗವಂತನಿಗೆ ಬಿಳಿ ಕೆಂಪು ಹಳದಿ ಮತ್ತು ಕೃಷ್ಣ—ಈ ನಾಲ್ಕು ವರ್ಣಗಳ ನಾಲ್ಕು ಮೂರ್ತಿಗಳಿವೆಯಾದುದರಿಂದ ಅವನು ಚತುರ್ಮೂರ್ತಿ.

೨೬೬. ಚತುರ್ಬಾಹುಃ—ನಾಲ್ಕು ಬಾಹುಗಳುಳ್ಳವನು.

೨೬೭. ಚತುರ್ವ್ಯೂಹಃ—ನಾಲ್ಕು ವ್ಯೂಹಗಳುಳ್ಳವನು.

ಭಗವಂತನಿಗೆ (ಬೃಹ್‌ವೃಚ್ ಉಪನಿಷತ್ತಿನಲ್ಲಿ ಹೇಳಿರುವ) ಶರೀರಪುರುಷ ಛಂದಃ ಪುರುಷ ವೇದಪುರುಷ ಮತ್ತು ಮಹಾಪುರುಷ ಎಂಬ ನಾಲ್ಕು ವ್ಯೂಹಗಳಿವೆ. ಆದುದರಿಂದ ಅವನು ಚತುರ್ವ್ಯೂಹನು.

೭೬೮. ಚತುರ್ಗತಿಃ—ಶಾಸ್ತ್ರದಲ್ಲಿ ಹೇಳಿರುವ ಹಾಗೆ ನಡೆಯುವ ನಾಲ್ಕು ಆಶ್ರಮದವರಿಗೂ ನಾಲ್ಕು ವರ್ಣದವರಿಗೂ ಗತಿಯಾಗಿರುವವನು.

೭೬೯. ಚತುರಾತ್ಮಾ—ಚತುರವಾದ ಮನಸ್ಸುಳ್ಳವನು.

ಭಗವಂತನ ಮನಸ್ಸು ರಾಗದ್ವೇಷಾದಿಗಳಿಂದ ರಹಿತವಾಗಿರುವುದರಿಂದ ಚತುರವಾಗಿರುವುದು. ಆದುದರಿಂದ ಭಗವಂತನಿಗೆ ಚತುರಾತ್ಮಾ ಎಂದು ಹೆಸರು. ಅಥವಾ ಭಗವಂತನು ಮನಸ್ಸು ಬುದ್ಧಿ ಅಹಂಕಾರ ಮತ್ತು ಚಿತ್ತ ಎಂಬ ನಾಲ್ಕು ಅಂತಃಕರಣಗಳುಳ್ಳವನಾದುದರಿಂದ ಅವನಿಗೆ ಚತುರಾತ್ಮಾ ಎಂದು ಹೆಸರು.

೭೭೦. ಚತುರ್ಭಾವಃ—ಧರ್ಮ ಅರ್ಥ ಕಾಮ ಮತ್ತು ಮೋಕ್ಷ ಎಂಬ ನಾಲ್ಕು ಪುರುಷಾರ್ಥಗಳನ್ನು ಉತ್ಪತ್ತಿಮಾಡಿದವನು.

೭೭೧. ಚತುರ್ವೇದವಿತ್—ನಾಲ್ಕು ವೇದಗಳ ಅರ್ಥವನ್ನು ಯಥಾವತ್ತಾಗಿ ತಿಳಿದಿರುವವನು.

೭೭೨. ಏಕಪಾತ್—ಒಂದೇ ಪಾದವುಳ್ಳವನು.

'ಪಾದೋಽಸ್ಯ ವಿಶ್ವಾ ಭೂತಾನಿ' 'ಸರ್ವಭೂತಗಳು ಭಗವಂತನ ಒಂದು ಪಾದವಾಗಿವೆ' (ಪು.ಸೂ.೩). 'ವಿಷ್ಟಭ್ಯಾಹಮಿದಂ ಕೃತ್ಸ್ನ ಮೇಕಾಂಶೇನ ಸ್ಥಿತೋ ಜಗತ್' ನಾನು ಇಡೀ 'ಜಗತ್ತನ್ನು ಒಂದೇ ಅಂಶದಿಂದ ಧರಿಸಿಕೊಂಡಿದ್ದೇನೆ' (ಗೀತಾ. ೧೦.೪೨).

೭೭೩. ಸಮಾವರ್ತಃ—ಸಂಸಾರಚಕ್ರವನ್ನು ಯೋಗ್ಯವಾದ ರೀತಿ ಯಲ್ಲಿ ತಿರುಗಿಸುವವನು.

೭೭೪. ಅನಿವೃತ್ತಾತ್ಮಾ—ಭಗವಂತನು ಸರ್ವತ್ರವೂ ಇರುವವ ನಾದುದರಿಂದ ಎಲ್ಲಿಂದಲೂ ನಿವೃತ್ತವಾಗದ ಆತ್ಮವುಳ್ಳವನು. ಅಥವಾ,

ನಿವೃತ್ತಾತ್ಮಾ—ವಿಷಯುಗಳಿಂದ ನಿವೃತ್ತವಾದ ಮನಸ್ಸುಳ್ಳವನು.

೭೭೫. ದುರ್ಜಯಃ—ಜಯಿಸಲು ಅಸಾಧ್ಯನಾಗಿರುವವನು.

೭೭೬. ದುರತಿಕ್ರಮಃ—ಅತಿಕ್ರಮಿಸಲ್ಪಡದೆ ಇರುವವನು.

ಭಯದ ಕಾರಣದಿಂದ ಸೂರ್ಯಾದಿಗಳು ಭಗವಂತನ ಆಜ್ಞೆಯನ್ನು ಉಲ್ಲಂಘಿಸುವುದಿಲ್ಲ. ಆದುದರಿಂದ ಭಗವಂತನಿಗೆ ದುರತಿಕ್ರಮ ಎಂದು ಹೆಸರು.

'ಭಯಾದಸ್ಯಾಗ್ನಿಸ್ತಪತಿ... ಮೃತ್ಯುರ್ಧಾವತಿ ಪಂಚಮಃ' 'ಇದರ (ಬ್ರಹ್ಮದ) ಭಯದಿಂದ ಅಗ್ನಿಯು ಸುಡುತ್ತಾನೆ. (ಇದರ) ಭಯದಿಂದ ಸೂರ್ಯನು ಪ್ರಕಾಶಿಸುತ್ತಾನೆ, (ಇದರ) ಭಯದಿಂದ ಇಂದ್ರನೂ ವಾಯುವೂ ಮತ್ತು ಪಂಚಮನಾದ ಮೃತ್ಯುವೂ ಓಡುತ್ತಾರೆ' (ಕ.ಉ. ೨.೩.೩).

೭೭೭. ದುರ್ಲಭಃ—ದುರ್ಲಭವಾದ ಭಕ್ತಿಯಿಂದ ಲಭ್ಯನಾಗುವವನು.

'ಜನ್ಮಾಂತರಸಹಸ್ರೇಷು ... ಕೃಷ್ಣೇ ಭಕ್ತಿಃ ಪ್ರಜಾಯತೇ' 'ಸಹಸ್ರಾರು ಜನ್ಮಗಳಲ್ಲಿ ಮಾಡಿದ ತಪಸ್ಸು ಜ್ಞಾನ ಮತ್ತು ಸಮಾಧಿಗಳಿಂದ ತಮ್ಮ ಪಾಪಗಳನ್ನೆಲ್ಲ ನಾಶಮಾಡಿಕೊಂಡ ಮನುಷ್ಯರಿಗೆ ಕೃಷ್ಣನಲ್ಲಿ ಭಕ್ತಿಯು ಹುಟ್ಟುತ್ತದೆ. (ವ್ಯಾಸ). 'ಭಕ್ತ್ಯಾ ಲಭ್ಯಸ್ತ್ವನನ್ಯಯಾ' 'ಅನನ್ಯವಾದ ಭಕ್ತಿಯಿಂದ ನಾನು ಲಭ್ಯನು' (ಗೀತಾ ೮. ೨೨).

೭೭೮. ದುರ್ಗಮಃ— ಬಹಳ ಕಷ್ಟದಿಂದ ಅರಿಯಲ್ಪಡುವವನು.

೭೭೯. ದುರ್ಗಃ—ನಾನಾ ವಿಘ್ನಗಳಿಂದ ಪ್ರತಿಹತರಾದುದರಿಂದ ಬಹಳ ಕಷ್ಟದಿಂದ ಹೊಂದಲ್ಪಡುವವನು.

೭೮೦. ದುರಾವಾಸಃ—ಬಹಳ ಕಷ್ಟದಿಂದ ಸ್ಥಾಪಿಸಲ್ಪಡುವವನು.

ಭಗವಂತನು ಯೋಗಿಗಳಿಂದ ಸಮಾಧಿಸ್ಥಿತಿಯಲ್ಲಿ ಬಹಳ ಕಷ್ಟದಿಂದ ತಮ್ಮ ಚಿತ್ತದಲ್ಲಿ ಸ್ಥಾಪಿಸಲ್ಪಡುತ್ತಾನೆ. ಆದುದರಿಂದ ಅವನಿಗೆ ದುರಾವಾಸ ಎಂದು ಹೆಸರು.

೭೮೧. ದುರಾರಿಹಾ—ದುಷ್ಟಶತ್ರುಗಳಾದ ದಾನವಾದಿಗಳನ್ನು ಕೊಲ್ಲುವವನು.

೭೮೨. ಶುಭಾಂಗಃ—ಸುಂದರವಾದ ಅಂಗಗಳುಳ್ಳವನು.

ಭಗವಂತನು ಸುಂದರವಾದ ಅಂಗಗಳುಳ್ಳವನಾಗಿ ಧ್ಯಾನಿಸಲ್ಪಡತಕ್ಕವನು.

೭೮೩. ಲೋಕಸಾರಂಗಃ—ಲೋಕಗಳ ಸಾರವನ್ನು ಭ್ರಮರದಂತೆ ಗ್ರಹಣಮಾಡುವವನು.

ಅಥವಾ ಪ್ರಣವವು ಲೋಕಸಾರವು. ಭಗವಂತನು ಪ್ರಣವದಿಂದ ತಿಳಿಯಲ್ಪಡತಕ್ಕವನು. ಆದುದರಿಂದ ಅವನಿಗೆ ಲೋಕಸಾರಂಗ ಎಂದು ಹೆಸರು.

೭೮೪. ಸುತಂತುಃ— ಸುಂದರವಾದ ತಂತುವುಳ್ಳವನು.

ಭಗವಂತನ ತಂತುವು ಎಂದರೆ ಈ ವಿಸ್ತಾರವಾದ ಜಗತ್ತು ಸುಂದರವಾಗಿದೆ. ಆದುದರಿಂದ ಭಗವಂತನಿಗೆ ಸುತಂತು ಎಂದು ಹೆಸರು.

೭೮೫—ತಂತುವರ್ಧನಃ— ತಂತುವನ್ನು ಅಂದರೆ ಜಗತ್ತನ್ನು ಅಭಿವೃದ್ಧಿಗೊಳಿಸುವವನು.

ಅಥವಾ ಜಗತ್ತನ್ನು ನಾಶಮಾಡುವವನು.

೭೮೬. ಇಂದ್ರಕರ್ಮಾ—ಇಂದ್ರನ ಕರ್ಮಕ್ಕೆ ಸಮಾನವಾದ ಕರ್ಮವುಳ್ಳವನು.

ಎಂದರೆ ಐಶ್ವರ್ಯಕರ್ಮವುಳ್ಳವನು.

೭೮೭. ಮಹಾಕರ್ಮಾ—ಮಹಾತ್ತಾದ ಕರ್ಮಗಳುಳ್ಳವನು.

ಭಗವಂತನ ಕರ್ಮಗಳು ಎಂದರೆ ಕಾರ್ಯಗಳಾದ ಆಕಾಶವೇ ಮೊದಲಾದ ಭೂತಗಳು ಮಹತ್ತಾದುವುಗಳು. ಆದುದರಿಂದ ಭಗವಂತನು ಮಹಾಕರ್ಮಾ.

೭೮೮. ಕೃತಕರ್ಮಾ—ಕೃತಾರ್ಥನು.

ಭಗವಂತನು ಕೃತಾರ್ಥನಾದುದರಿಂದ ಅವನಿಂದ ಎಲ್ಲವೂ ಮಾಡಲ್ಪಟ್ಟಿದೆ. ಅವನು ಇನ್ನೂ ಮಾಡಬೇಕಾದ ಕರ್ಮವು ಯಾವುದೂ ಇಲ್ಲ; ಆದುದರಿಂದ ಭಗವಂತನು ಕೃತಕರ್ಮನು; ಅಥವಾ ಧರ್ಮಾತ್ಮಕವಾದ ಕರ್ಮವನ್ನು ಮಾಡಿದವನಾದುದರಿಂದ ಭಗವಂತನು ಕೃತಕರ್ಮನು.

೭೮೯. ಕೃತಾಗಮಃ—ವೇದರೂಪವಾದ ಆಗಮವನ್ನು ರಚಿಸಿದವನು.

'ಅಸ್ಯ ಮಹತೋ ಭೂತಸ್ಯ ನಿಃಶ್ವಸಿತಮೇತದ್ ಯದೃಗ್ವೇದಃ' 'ಈ ಯಾವ ಋಗ್ವೇದವೋ ಅದು ಈ ಮಹಾಭೂತನ (ಭಗವಂತನ) ನಿಃಶ್ವಾಸವು (ಬೃ. ಉ. ೨. ೪. ೧).

೭೯೦. ಉದ್ಭವಃ—ಸ್ವೇಚ್ಛೆಯಿಂದ ಉತ್ಕೃಷ್ಟವಾದ ಜನ್ಮವನ್ನು ಹೊಂದುವವನು.

ಅಥವಾ ಭಗವಂತನು ಸರ್ವಕಾರಣನಾದುದರಿಂದ ಅವನಿಗೆ ಜನ್ಮವಿಲ್ಲ. ಆದುದರಿಂದ ಅವನಿಗೆ ಉದ್ಭವ ಎಂದು ಹೆಸರು.

೭೯೧. ಸುಂದರಃ—ವಿಶ್ವಕ್ಕಿಂತಲೂ ಅತಿಶಯವಾದ ಸೌಭಾಗ್ಯದಿಂದ ಕೂಡಿರುವವನು.

೭೯೨. ಸುಂದಃ—ವಿಶೇಷ ಕರುಣೆಯನ್ನು ತೋರಿಸುವವನು.

೭೯೩. ರತ್ನನಾಭಃ—ರತ್ನದಂತೆ ಮನೋಹರವಾದ ನಾಭಿಯುಳ್ಳವನು.

೭೯೪. ಸುಲೋಚನಃ—ಸುಂದರವಾದ ಕಣ್ಣುಗಳುಳ್ಳವನು. ಅಥವಾ ಉತ್ಕೃಷ್ಟವಾದ ಜ್ಞಾನವುಳ್ಳವನು.

೭೯೫. ಅರ್ಕಃ—ಪೂಜ್ಯತಮರಾದ ಬ್ರಹ್ಮಾದಿಗಳಿಂದಲೂ ಅರ್ಚಿಸಲ್ಪಡತಕ್ಕವನು.

೭೯೬. ವಾಜಸನಃ— ಯಾಜಕರಿಗೆ ಅನ್ನವನ್ನು ಕೊಡುವವನು.

೭೯೭. ಶೃಂಗೀ—ಪ್ರಲಯಸಾಗರದಲ್ಲಿ ಕೊಂಬುಳ್ಳ ಮತ್ಸ್ಯವಿಶೇಷ ರೂಪವನ್ನು ಧರಿಸಿದವನು.

೭೯೮. ಜಯಂತಃ–ಶತ್ರುವನ್ನು ಅತಿಶಯವಾಗಿ ಜಯಿಸುವವನು. ಅಥವಾ ಜಯಕ್ಕೆ ಕಾರಣನಾಗಿರುವವನು.

೭೯೯. ಸರ್ವವಿಜ್ಜಯೀ—ಸರ್ವವಿದನೂ ಜಯಿಯೂ ಆಗಿರುವವನು.

ಭಗವಂತನು ಸರ್ವವಿಷಯಗಳ ಜ್ಞಾನವುಳ್ಳವನಾದುದರಿಂದ ಸರ್ವವಿತ್ ಮತ್ತು ಆಂತರಿಕಶತ್ರುಗಳಾದ ರಾಗಾದಿಗಳನ್ನೂ ಬಾಹ್ಯಶತ್ರುಗಳಾದ ದುರ್ಜಯರಾದ ಹಿರಣ್ಯಾಕ್ಷಾದಿಗಳನ್ನೂ ಜಯಿಸುವಂತಹ ಶೀಲವುಳ್ಳವನಾದುದರಿಂದ ಜಯಿ.

೮೦೦. ಸುವರ್ಣಬಿಂದುಃ — ಚಿನ್ನಸದೃಶವಾದ ಅವಯವಗಳುಳ್ಳವನು.

ಅಥವಾ ಯಾವ ಮಂತ್ರದಲ್ಲಿ ಸುಂದರವಾದ ಅಕ್ಷರವೂ ಬಿಂದುವೂ ಇರುವುವೋ, ಭಗವಂತನು ಆ ಓಂಕಾರಮಂತ್ರರೂಪನಾಗಿರುವವನು. ಆದುದರಿಂದ ಅವನಿಗೆ ಸುವರ್ಣಬಿಂದು ಎಂದು ಹೆಸರು.

'ಅಪ್ರಣಖಾತ್ ಸರ್ವ ಏವ ಸುವರ್ಣಃ' '(ಶಿರಸ್ಸಿನಿಂದ) ಉಗುರಿನವರೆಗೆ ಎಲ್ಲವೂ ಸುವರ್ಣವೇ' (ಛಾ.ಉ. ೧.೬.೬).

೮೦೧. ಅಕ್ಷೋಭ್ಯಃ—ಕ್ಷೋಭೆಯನ್ನು ಹೊಂದದೆ ಇರುವವನು.

ಭಗವಂತನು ರಾಗದ್ವೇಷಗಳಿಂದಾಗಲಿ ಶಬ್ದಾದಿ ವಿಷಯಗಳಿಂದಾಗಲಿ ಅಥವಾ ದೇವಶತ್ರುಗಳಿಂದಾಗಲಿ ಕ್ಷೋಭೆಯನ್ನು ಹೊಂದುವುದಿಲ್ಲ. ಆದುದರಿಂದ ಅವನು ಅಕ್ಷೋಭ್ಯನು.

೮೦೨. ಸರ್ವವಾಗೀಶ್ವರೇಶ್ವರಃ—ಬ್ರಹ್ಮಾದಿ ಸಮಸ್ತವಾಗೀಶ್ವರರಿಗೂ ಈಶ್ವರನಾಗಿರುವವನು.

೮೦೩. ಮಹಾಹ್ರದಃ—ದೊಡ್ಡ ಸರೋವರದಂತಿರುವವನು.

ಯೋಗಿಗಳು ಬ್ರಹ್ಮಾನಂದದಲ್ಲಿ ಮುಳುಗಿ ವಿಶ್ರಮಿಸಿ ಸುಖದಿಂದ ಇರುತ್ತಾರೆ. ಆದುದರಿಂದ ಪರಮಾತ್ಮನು ದೊಡ್ಡ ಸರೋವರ (ಮಹಾಹ್ರದ) ದಂತಿರುವನು.

೮೦೪. ಮಹಾಗರ್ತಃ—ದೊಡ್ಡದಾದ ಹಳ್ಳದಂತೆ ದಾಟಲು ಕಷ್ಟಸಾಧ್ಯವಾದ ಮಾಯೆಯುಳ್ಳವನು.

'ಮಮ ಮಾಯಾ ದುರತ್ಯಯಾ' 'ನನ್ನ ಮಾಯೆಯನ್ನು ದಾಟುವುದು ಕಷ್ಟ ಸಾಧ್ಯವು' (ಗೀತಾ. ೭.೧೪).

ಅಥವಾ ಗರ್ತ ಎಂದು ರಥಕ್ಕೆ ಹೇಳುತ್ತಾರೆ. ಭಗವಂತನು ಮಹಾರಥ ವುಳ್ಳವನೆಂದು ಮಹಾಭಾರತ ಮೊದಲಾದುವುಗಳಲ್ಲಿ ಪ್ರಸಿದ್ಧನಾಗಿದ್ದಾನೆ. ಆದುದ ರಿಂದ ಅವನಿಗೆ ಮಹಾಗರ್ತ ಎಂದು ಹೆಸರು.

೮೦೫. ಮಹಾಭೂತಃ — ಕಾಲತ್ರಯದಿಂದಲೂ ಅನವಚ್ಛಿನ್ನ ವಾಗಿರುವ ಸ್ವರೂಪವುಳ್ಳವನು.

೮೦೬. ಮಹಾನಿಧಿಃ—ಮಹಾಂತನೂ ಸರ್ವಭೂತಗಳಿಗೆ ಆಶ್ರಯ ಸ್ಥಾನನೂ ಆಗಿರುವವನು.

೮೦೭. ಕುಮುದಃ—ಪೃಥ್ವಿಯ ಭಾರವನ್ನು ಇಳಿಸಿ ಪೃಥ್ವಿ ಯನ್ನು ಸಂತೋಷಪಡಿಸುವವನು.

೮೦೮. ಕುಂದರಃ— ಕುಂದಪುಷ್ಪಗಳಂತೆ ಶುದ್ಧವಾದ ಫಲಗಳನ್ನು ಕೊಡುವವನು ಅಥವಾ ಗ್ರಹಣಮಾಡುವವನು.

ಅಥವಾ ಹಿರಣ್ಯಾಕ್ಷನನ್ನು ಕೊಲ್ಲುವ ಇಚ್ಛೆಯಿಂದ ವರಾಹರೂಪವನ್ನು ಧರಿಸಿ ಧರಣಿಯನ್ನು ಸೀಳಿದವನು.

೮೦೯. ಕುಂದಃ—ಕುಂದಪುಷ್ಪದಂತೆ ಸುಂದರವಾದ ಅವಯವ ಗಳುಳ್ಳವನಾದುದರಿಂದ ಸ್ವಚ್ಛವಾಗಿರುವವನು, ಸ್ಫಟಿಕಮಣಿಯಂತೆ ನಿರ್ಮಲ ವಾಗಿರುವವನು.

ಅಥವಾ ಕಶ್ಯಪನಿಗೆ ಪೃಥ್ವಿಯನ್ನು ದಾನವಾಗಿ ಕೊಟ್ಟವನಾದುದರಿಂದ ಭಗವಂತನಿಗೆ ಕುಂದ ಎಂದು ಹೆಸರು.

'ಸರ್ವಪಾಪವಿಶುದ್ಧ್ಯರ್ಥಂ......ಮಾರೀಚಾಯ ದದೌ ಪ್ರೀತಃ ಕಶ್ಯಪಾಯ ವಸುಂಧರಾಮ್' 'ಭಗವಂತನು ಪರಶುರಾಮನಾಗಿ ಅವತರಿಸಿದ್ದಾಗ, ತನ್ನ ಸರ್ವ ಪಾಪಗಳ ನಿವೃತ್ತಿಗೋಸ್ಕರ ಅಶ್ವಮೇಧಯಜ್ಞವನ್ನು ಮಾಡಿದನು. ಮತ್ತು ಮಹಾ ದಾನಗಳನ್ನು ಮಾಡಬೇಕಾದ ಆ ಯಜ್ಞದಲ್ಲಿ ಕಶ್ಯಪನಿಗೆ ದಕ್ಷಿಣೆಯಾಗಿ ಪೃಥ್ವಿ ಯನ್ನು ಪ್ರೀತಿಪೂರ್ವಕವಾಗಿ ಕೊಟ್ಟನು' (ಹರಿ. ೧.೪೧.೧೬–೧೭).

ಅಥವಾ (ಪರಶುರಾಮನಾಗಿ) ಪೃಥ್ವೀಶ್ವರನು ಅಂದರೆ ಕ್ಷತ್ರಿಯರಾಜರನ್ನು ನಾಶಮಾಡಿದವನು.

೮೧೦. ಪರ್ಜನ್ಯಃ—ಮಳೆಯಂತೆ ಆಧ್ಯಾತ್ಮಿಕವೇ ಮೊದಲಾದ ತಾಪತ್ರಯವನ್ನು ಶಾಂತಗೊಳಿಸುವವನು.

ಅಥವಾ ಸರ್ವಾಭೀಷ್ಟಗಳನ್ನು ವರ್ಷಿಸುವವನು.

೮೧೧. ಪಾವನಃ— ಸ್ಮರಣಮಾತ್ರದಿಂದ ಪವಿತ್ರಗೊಳಿಸುವವನು.

೮೧೨. ಅನಿಲಃ—ಯಾವ ವಿಧವಾದ ಪ್ರೇರಣೆಯನ್ನೂ ಮಾಡದಿರುವವನು.

ಅಥವಾ ಇಲ ಎಂಬ ಧಾತುವಿಗೆ ಮಲಗುವುದು ಎಂದು ಅರ್ಥ. ಆದುದರಿಂದ ಇಲ ಎಂದು ಅಜ್ಞಾನಿಗಳಿಗೆ ಹೇಳುತ್ತಾರೆ. ಭಗವಂತನು ನಿತ್ಯಪ್ರಬುದ್ಧಸ್ವರೂಪನಾದ್ದರಿಂದ ಇಲನಲ್ಲ (ಅಜ್ಞಾನಿಯಲ್ಲ), ಅನಿಲನು. ಅಥವಾ ಅನಿಲ ಎಂದರೆ ಭಕ್ತರಿಗೆ ಸುಲಭನಾಗಿರುವವನು.

೮೧೩. ಅಮೃತಾಶಃ— ಸ್ವಾತ್ಮಾಮೃತವನ್ನು ಕುಡಿಯುವವನು.

ಅಥವಾ ಸಮುದ್ರಮಂಥನ ಸಮಯದಲ್ಲಿ ಸಮುದ್ರದಿಂದ ಹೊರಗೆ ಬಂದ ಅಮೃತವನ್ನು ದೇವತೆಗಳಿಗೆಲ್ಲ ಕುಡಿಸಿ ತಾನೂ ಕುಡಿದವನು. ಅಥವಾ ಭಗವಂತನ ಆಶೆಗಳು ಶಾಶ್ವತವಾದ ಫಲವುಳ್ಳವುಗಳು. ಆದುದರಿಂದ ಅವನಿಗೆ ಅಮೃತಾಶ ಎಂದು ಹೆಸರು.

೮೧೪. ಅಮೃತವಪುಃ—ಮರಣವಿಲ್ಲದ ಶರೀರವುಳ್ಳವನು.

೮೧೫. ಸರ್ವಜ್ಞಃ—ಎಲ್ಲವನ್ನೂ ತಿಳಿದವನು.

೮೧೬. ಸರ್ವತೋಮುಖಃ—ಎಲ್ಲಾ ಕಡೆಗಳಲ್ಲೂ ಮುಖಗಳುಳ್ಳವನು.

'ಸರ್ವತೋಽಕ್ಷಿಶಿರೋಮುಖಮ್' '(ಭಗವಂತನು) ಎಲ್ಲಾ ಕಡೆಗಳಲ್ಲೂ ಕಣ್ಣುಗಳು ಶಿರಸ್ಸುಗಳು ಮತ್ತು ಮುಖಗಳು ಉಳ್ಳವನು' (ಗೀತಾ. ೧೩.೧೩).

೮೧೭. ಸುಲಭಃ— ಭಕ್ತಿಮಾತ್ರದಿಂದ ಸಮರ್ಪಿಸಲ್ಪಟ್ಟ ಪತ್ರ ಪುಷ್ಪ ಫಲ–ಇವೇ ಮೊದಲಾದುವುಗಳಿಂದ ಸುಲಭವಾಗಿ ಲಭ್ಯನಾಗುವವನು.

೮೧೮. ಸುವ್ರತಃ—ಚೆನ್ನಾಗಿ ಊಟಮಾಡುವವನು ಅಥವಾ ಭೋಜನವನ್ನು ಮಾಡದೇ ಇರುವವನು.

೮೧೯. ಸಿದ್ಧಃ—ಅನನ್ಯಾಧೀನಸಿದ್ಧಿಯುಳ್ಳವನು.

೮೨೦. ಶತ್ರುಜಿತ್—ಶತ್ರುಗಳನ್ನು ಜಯಿಸುವವನು.

ದೇವತೆಗಳ ಶತ್ರುಗಳೇ ಭಗವಂತನ ಶತ್ರುಗಳು. ಅವರನ್ನು ಜಯಿಸುವವನಾದುದರಿಂದ ಭಗವಂತನು ಶತ್ರುಜಿತ್.

೮೨೧. ಶತ್ರುತಾಪನಃ— ಸುರಶತ್ರುಗಳನ್ನು ಸುಡುವವನು.

೮೨೨. ನ್ಯಗ್ರೋಧಃ—ಎಲ್ಲರಿಗಿಂತ ಮೇಲಿರುವವನು. ಅಥವಾ ಸರ್ವಭೂತಗಳನ್ನು ಅತಿಶಯಿಸಿ ತನ್ನ ಮಾಯೆಯನ್ನು ನಿರೋಧಿಸುವವನು.

೮೨೩. ಉದುಂಬರಃ—ಆಕಾಶಕ್ಕಿಂತ ಮೇಲಿನವನು, ಆಕಾಶವನ್ನು ಅತಿಶಯಿಸಿರುವವನು.

ಭಗವಂತನು ಆಕಾಶದ ಉತ್ಪತ್ತಿಗೆ ಕಾರಣನಾದುದರಿಂದ ಆಕಾಶಕ್ಕಿಂತ ಮೇಲಿನವನು. ಅಥವಾ ಅನ್ನ ಮೊದಲಾದುವುಗಳ ರೂಪದಿಂದ ವಿಶ್ವವನ್ನು ಪೋಷಿಸುವವನು.

೮೨೪. ಅಶ್ವತ್ಥಃ– ಸಂಸಾರವನ್ನು ಹುಟ್ಟಿಸಿದವನು.

ನಾಳೆಯುವರೆಗೆ ನಿಲ್ಲದೆ ಇರುವುದು ಅಶ್ವತ್ಥ. ಸಂಸಾರವು ನಾಳೆಯುವರೆಗೆ ಕೂಡ ನಿಲ್ಲುವುದಿಲ್ಲವಾದುದರಿಂದ ಅದಕ್ಕೆ ಅಶ್ವತ್ಥವೆಂದು ಹೇಳುತ್ತಾರೆ. ಈ ಸಂಸಾರವು ಭಗವಂತನಿಂದ ಹುಟ್ಟಿದೆಯಾದುದರಿಂದ ಭಗವಂತನಿಗೂ ಅಶ್ವತ್ಥ ಎಂದು ಹೆಸರು.

'ಊರ್ಧ್ವಮೂಲೋಽವಾಕ್ಶಾಖ ಏಷೋಽಶ್ವತ್ಥಃ ಸನಾತನಃ' 'ಮೇಲೆ ಬುಡವುಳ್ಳ ಕೆಳಗೆ ಶಾಖೆಗಳುಳ್ಳ ಈ ಅಶ್ವತ್ಥವು ಸನಾತನವಾದುದು' (ಕ. ಉ. ೨. ೩. ೧). 'ಊರ್ಧ್ವಮೂಲಮಧಃ ಶಾಖಮಶ್ವತ್ಥಂ ಪ್ರಾಹುರವ್ಯಯಮ್' 'ಮೇಲೆ ಬುಡವುಳ್ಳ ಕೆಳಗೆ ಶಾಖೆಗಳುಳ್ಳ ಅಶ್ವತ್ಥವು ಅವ್ಯಯವಾದುದೆಂದು ಹೇಳುತ್ತಾರೆ' (ಗೀತಾ ೧೫. ೧).

೮೨೫. ಚಾಣೂರಾಂಧ್ರನಿಷೂದನಃ—ಚಾಣೂರ ಎಂಬ ಹೆಸರಿನ ಆಂಧ್ರನನ್ನು ಕೊಂದವನು.

೮೨೬. ಸಹಸ್ರಾರ್ಚಿಃ— ಅನಂತಕಿರಣಗಳುಳ್ಳವನು.

'ದಿವಿ ಸೂರ್ಯಸಹಸ್ರಸ್ಯ . . . . ಭಾಸಸ್ತಸ್ಯ ಮಹಾತ್ಮನಃ' 'ಸಹಸ್ರ ಸೂರ್ಯರ ಪ್ರಕಾಶವು ಒಂದೇ ಸಲ ಆಕಾಶದಲ್ಲಿ ಉಂಟಾದರೆ, ಅದು ಆ ಮಹಾತ್ಮನ (ಭಗವಂತನ) ಪ್ರಕಾಶಕ್ಕೆ ಸಮಾನವಾದೀತು' (ಗೀತಾ ೧೧. ೧೨).

೮೨೭. ಸಪ್ತಜಿಹ್ವಃ—ಏಳು ನಾಲಗೆಗಳುಳ್ಳವನು.

(ಅಗ್ನಿರೂಪನಾದ) ಭಗವಂತನಿಗೆ ಏಳು ನಾಲಗೆಗಳಿವೆಯಾದುದರಿಂದ ಅವನಿಗೆ ಸಪ್ತಜಿಹ್ವ ಎಂದು ಹೆಸರು.

'ಕಾಲೀ ಕರಾಲೀ ಚ ಮನೋಜವಾ ಚ...ಲೇಲಾಯಮಾನಾ ಇತಿ ಸಪ್ತ ಜಿಹ್ವಾ' 'ಅಗ್ನಿಗೆ ಕಾಲೀ ಕರಾಲೀ ಮನೋಜವಾ ಸುಲೋಹಿತಾ ಸುಧೂಮ್ರವರ್ಣಾ ಸ್ಫುಲಿಂಗಿನೀ ಮತ್ತು ದೇವೀಶ್ವರುಚೀ ಎಂಬ ಏಳು ಅಲುಗಾಡುವ ನಾಲಗೆಗಳಿವೆ' (ಮುಂ.ಉ. ೧.೨.೪)

೮೨೮. ಸಪ್ತೈಧಾಃ—ಏಳು ಜ್ವಾಲೆಗಳುಳ್ಳವನು.

(ಅಗ್ನಿರೂಪನಾದ) ಭಗವಂತನಿಗೆ ಏಳು ಜ್ವಾಲೆಗಳಿವೆ. ಆದುದರಿಂದ ಅವನು ಸಪ್ತೈಧಾ.

೮೨೯. ಸಪ್ತವಾಹನಃ—ಏಳು ವಾಹನಗಳುಳ್ಳವನು.

(ಸೂರ್ಯರೂಪನಾದ) ಭಗವಂತನಿಗೆ ಏಳು ಕುದುರೆಗಳು ವಾಹನಗಳಾಗಿವೆಯಾದುದರಿಂದ ಸಪ್ತವಾಹನ ಎಂದು ಹೆಸರು. ಅಥವಾ ಭಗವಂತನು ಸಪ್ತನಾಮ ಎಂಬ ಕುದುರೆಯು ವಾಹನವಾಗಿ ಇರುವವನಾದುದರಿಂದ ಅವನಿಗೆ ಸಪ್ತವಾಹನ ಎಂದು ಹೆಸರು.

೮೩೦. ಅಮೂರ್ತಿಃ—ಮೂರ್ತಿರಹಿತನು.

ಮೂರ್ತಿಯು ಘನರೂಪವಾದುದು, ಧಾರಣಶಕ್ತಿಯುಳ್ಳದ್ದು ಮತ್ತು ಚರಾಚರರೂಪವಾದುದು. ಭಗವಂತನು ಮೂರ್ತಿರಹಿತನಾದುದರಿಂದ ಅಮೂರ್ತಿ. ಅಥವಾ ಅವಯವಗಳಿಂದ ತುಂಬಿದ ದೇಹವೇ ಮೂರ್ತಿ. ಭಗವಂತನು ದೇಹವಿಲ್ಲದವನಾದುದರಿಂದ ಅಮೂರ್ತಿ.

೮೩೧. ಅನಘಃ—ದುಃಖಪಾಪಗಳಿಲ್ಲದವನು.

೮೩೨. ಅಚಿಂತ್ಯಃ—ಸರ್ವಪ್ರಮಾಣಗಳಿಗೂ ಅಗೋಚರನಾಗಿ ಇರುವವನು.

ಭಗವಂತನು ಜ್ಞಾತ್ರಾದಿಗಳಿಗೂ ಸಾಕ್ಷಿಯಾದುದರಿಂದ ಸರ್ವಪ್ರಮಾಣಗಳಿಗೆ ಅಗೋಚರನು; ಮತ್ತೆ ಅಚಿಂತ್ಯನು. ಅಥವಾ ಭಗವಂತನು ಪ್ರಪಂಚದಿಂದ ವಿಲಕ್ಷಣನಾದುದರಿಂದ ಅವನನ್ನು ಇಂಥವನೇ ಎಂದು ಚಿಂತಿಸಲು ಅಶಕ್ಯವು. ಆದುದರಿಂದ ಅವನು ಅಚಿಂತ್ಯನು.

೮೩೩. ಭಯಕೃತ್—ದುರ್ಮಾರ್ಗವರ್ತಿಗಳಿಗೆ ಭಯವನ್ನುಂಟು ಮಾಡುವವನು.

ಅಥವಾ ಭಕ್ತರ ಭಯವನ್ನು ನಾಶಗೊಳಿಸುವವನು.

೮೩೪. ಭಯನಾಶನಃ—ವರ್ಣಾಶ್ರಮಧರ್ಮಗಳನ್ನು ಪಾಲಿಸುವವರ ಭಯವನ್ನು ನಾಶಮಾಡುವವನು.

ವರ್ಣಾಶ್ರಮಾಚಾರವತಾ ಪುರುಷೇಣ ಪರಃ ಪುಮಾನ್ ।
ವಿಷ್ಣುರಾರಾಧ್ಯತೇ ಪಂಥಾ ನಾನ್ಯಸ್ತತ್ತೋಷಕಾರಕಃ' ॥

ವರ್ಣಾಶ್ರಮಧರ್ಮಗಳನ್ನು ಪಾಲಿಸುವ ಪುರುಷನು ಪರಮಪುರುಷನಾದ ವಿಷ್ಣುವನ್ನು ಆರಾಧಿಸುತ್ತಾನೆ. ವಿಷ್ಣುವನ್ನು ಸಂತೋಷಪಡಿಸುವ ಬೇರೆ ಯಾವ ಮಾರ್ಗವೂ ಇಲ್ಲ' (ವಿಷ್ಣು. ೩.೮.೯).

೮೩೫. ಅಣುಃ—ಅತ್ಯಂತ ಸೂಕ್ಷ್ಮನಾಗಿರುವವನು.

ಏಷೋಽಣುರಾತ್ಮಾ ಚೇತಸಾ ವೇದಿತವ್ಯಃ' 'ಈ ಅಣುವಾಗಿರುವ (ಸೂಕ್ಷ್ಮನಾಗಿರುವ) ಆತ್ಮನು ಮನಸ್ಸಿನಿಂದ ತಿಳಿಯಲ್ಪಡತಕ್ಕವನು' (ಮುಂ. ಉ. ೩.೧.೯).

೮೩೬. ಬೃಹತ್—ಭಗವಂತನು ದೊಡ್ಡವನೂ, ಇತರರನ್ನು ಪೋಷಿಸಿ ದೊಡ್ಡವರನ್ನಾಗಿ ಮಾಡುವವನೂ ಆಗಿರುವನಾದುದರಿಂದ ಅವನಿಗೆ ಬೃಹತ್ ಎಂದು ಹೆಸರು.

'ಮಹತೋ ಮಹೀಯಾನ್' '(ಆತ್ಮನು) ಮಹತ್ತಿಗಿಂತ ಮಹತ್ತಾದವನು' (ಕ.ಉ. ೧.೨.೨೦).

೮೩೭. ಕೃಶಃ—ದ್ರವ್ಯತ್ವವಿಲ್ಲದವನು.

'ಅಸ್ಥೂಲಮ್' '(ಪರಮಾತ್ಮನು) ಅಸ್ಥೂಲನು' (ಬೃ.ಉ. ೩.೮.೮). ಇತ್ಯಾದಿ ವಾಕ್ಯಗಳಿಂದ ಶ್ರುತಿಯು ಪರಮಾತ್ಮನಿಗೆ ದ್ರವ್ಯತ್ವವಿಲ್ಲವೆಂದು ಹೇಳುತ್ತದೆ. ಆದುದರಿಂದ ಭಗವಂತನಿಗೆ ಕೃಶ ಎಂದು ಹೆಸರು.

೮೩೮. ಸ್ಥೂಲಃ—ಸ್ಥೂಲನಾಗಿರುವವನು.

ಪರಮಾತ್ಮನು ಸರ್ವಾತ್ಮನಾದುದರಿಂದ ಸ್ಥೂಲವೆಂದು ಔಪಚಾರಿಕವಾಗಿ ಹೇಳಲ್ಪಡುತ್ತಾನೆ.

೮೩೯. ಗುಣಭೃತ್—ಗುಣಗಳನ್ನು ಆಶ್ರಯಿಸುವವನು.

ಸೃಷ್ಟಿಸ್ಥಿತಿಲಯ ಕರ್ಮಗಳಲ್ಲಿ ಭಗವಂತನು ಸತ್ತ್ವರಜಸ್ತಮೋಗುಣಗಳನ್ನು ಆಶ್ರಯಿಸುತ್ತಾನೆ; ಆದುದರಿಂದ ಅವನು ಗುಣಭೃತ್.

೮೪೦. ನಿರ್ಗುಣಃ—ನಿರ್ಗುಣನು.

ಪರಮಾತ್ಮನು ವಸ್ತುತಃ ಗುಣಗಳಿಂದ ರಹಿತನಾದುದರಿಂದ ನಿರ್ಗುಣನು.

'ಕೇವಲೋ ನಿರ್ಗುಣಶ್ಚ' '(ಪರಮಾತ್ಮನು) ಕೇವಲನೂ ನಿರ್ಗುಣನೂ (ಆಗಿರುವನು) (ಶ್ವೇ. ಉ. ೬.೧೧).

೮೪೧. ಮಹಾನ್—ಮಹಾನ್ ಆಗಿರುವವನು.

ಶಬ್ದಾದಿರಹಿತನಾದುದರಿಂದಲೂ ನಿರತಿಶಯಸೂಕ್ಷ್ಮನಾದುದರಿಂದಲೂ ಮತ್ತು ನಿತ್ಯನೂ ಶುದ್ಧನೂ ಸರ್ವಗತನೂ ಆಗಿರುವುದರಿಂದಲೂ ಪರಮಾತ್ಮನು ಮಹಾನ್ ಆಗಿರುವನು.

'ಅನಂಗೋಽಶಬ್ದೋಽಸ್ಪರ್ಶಶ್ಚ ಮಹಾನ್ ಶುಚಿಃ' 'ಪರಮಾತ್ಮನು ಅಂಗಗಳಿಲ್ಲದವನೂ ಶಬ್ದರಹಿತನೂ ಶರೀರವಿಲ್ಲದವನೂ ಸ್ಪರ್ಶರಹಿತನೂ ಶುಚಿಯೂ ಮತ್ತು ಮಹಾನ್ ಆಗಿರುವನು' (ಅಪಸ್ತಂಬ).

೮೪೨. ಅಧೃತಃ—ತನಗೆ ಇತರರು ಯಾರೂ ಆಧಾರವಿಲ್ಲದವನು.

ಭಗವಂತನು ಇತರ ವಸ್ತುಗಳನ್ನು ಧಾರಣಮಾಡುವ ಪೃಥಿವಿ ಮೊದಲಾದುವುಗಳಿಗೂ ಆಧಾರವಾಗಿರುವನಾದರೂ ತಾನು ಬೇರೆ ಯಾರಿಂದಲೂ ಎತ್ತಿ ಹಿಡಿಯಲ್ಪಡದೆ ಇರುವನು ಆದುದರಿಂದ ಅಧೃತ ಎಂದು ಹೆಸರು.

೮೪೩. ಸ್ವಧೃತಃ—ತನಗೆ ತಾನೇ ಆಧಾರವಾಗಿರುವವನು.

'ಸ ಭಗವಃ ಕಸ್ಮಿನ್ ಪ್ರತಿಷ್ಠಿತ ಇತಿ ಸ್ವೇ ಮಹಿಮ್ನಿ' 'ಆ ಭಗವಂತನು ಯಾವುದರಲ್ಲಿ ಪ್ರತಿಷ್ಠಿತನಾಗಿದ್ದಾನೆ? ತನ್ನ ಮಹಿಮೆಯಲ್ಲೇ' (ಪ್ರತಿಷ್ಠಿತನಾಗಿದ್ದಾನೆ) (ಛಾ.ಉ. ೭.೨೪.೧).

೮೪೪. ಸ್ವಾಸ್ಯಃ—ಕೆಂದಾವರೆಯಂತೆ ಅತ್ಯಂತ ಸುಂದರವಾದ ಮುಖವುಳ್ಳವನು.

ಅಥವಾ ಪುರುಷಾರ್ಥಗಳನ್ನು ಉಪದೇಶಿಸುವುದಕ್ಕಾಗಿ ವೇದರೂಪವಾದ ಮಹಾನ್ ಶಬ್ದರಾಶಿಯು ಭಗವಂತನ ಮುಖದಿಂದ ಹೊರಗೆ ಬಂದು ಆದುದರಿಂದ ಭಗವಂತನಿಗೆ ಸ್ವಾಸ್ಯ ಎಂದು ಹೆಸರು.

೮೪೫. ಪ್ರಾಗ್ವಂಶಃ—ಎಲ್ಲ ವಂಶಗಳಿಗಿಂತ ಮೊದಲೇ ಪ್ರಪಂಚವೆಂಬ ವಂಶವನ್ನುಂಟುಮಾಡಿದವನು.

ಅನ್ಯ ವಂಶಸ್ಥರ ವಂಶಗಳೆಲ್ಲ ಅನಂತರದವುಗಳು. ಭಗವಂತನ ವಂಶವು (ಎಂದರೆ ಪ್ರಪಂಚವು) ಮೊದಲನೆಯದು, ಅನಂತರದ್ದಲ್ಲ. ಆದುದರಿಂದ ಭಗವಂತನಿಗೆ ಪ್ರಾಗ್ವಂಶ ಎಂದು ಹೆಸರು.

೮೪೬. ವಂಶವರ್ಧನಃ—ವಂಶವನ್ನು ಎಂದರೆ ಪ್ರಪಂಚವನ್ನು ವೃದ್ಧಿಗೊಳಿಸುವವನು ಅಥವಾ ನಾಶಮಾಡುವವನು.

೮೪೭. ಭಾರಭೃತ್—ಅನಂತಾದಿರೂಪದಿಂದ ಭೂಮಿಯ ಭಾರವನ್ನು ಹೊತ್ತಿರುವವನು.

೮೪೮. ಕಥಿತಃ—ವೇದಾದಿಗಳಿಂದ ಪರನೆಂದು ಸಾರಲ್ಪಟ್ಟಿರುವವನು.

ಅಥವಾ ಸರ್ವವೇದಗಳು ಭಗವಂತನನ್ನೇ ಸಾರುತ್ತವೆ. ಆದುದರಿಂದ ಅವನಿಗೆ ಕಥಿತ ಎಂದು ಹೆಸರು.

'ವೇದೈಶ್ಚ ಸರ್ವೈರಹಮೇವ ವೇದ್ಯಃ' 'ಸರ್ವವೇದಗಳಿಂದ ನಾನೇ ತಿಳಿಯಲ್ಪಡತಕ್ಕವನು' (ಗೀತಾ.೧೫.೧೫) 'ವೇದೇ ರಾಮಾಯಣೇ ಪುಣ್ಯೇ ಭಾರತೇ ಭರತರ್ಷಭ। ಆದೌ ಮಧ್ಯೇ ತಥಾ ಚಾಂತೇ ವಿಷ್ಣುಃ ಸರ್ವತ್ರ ಗೀಯತೇ' 'ಎಲೈ ಭರತಶ್ರೇಷ್ಠನೇ, ವೇದದಲ್ಲಿ ರಾಮಾಯಣದಲ್ಲಿ ಪುಣ್ಯ ಮಹಾಭಾರತದಲ್ಲಿ, ಆದಿಯಲ್ಲಿ ಮಧ್ಯದಲ್ಲಿ ಮತ್ತು ಹಾಗೆಯೇ ಅಂತ್ಯದಲ್ಲಿ, ಸರ್ವತ್ರವೂ ವಿಷ್ಣುವೇ ಹಾಡಲ್ಪಡುತ್ತಾನೆ' (ಮಹಾ). 'ಸರ್ವೇವೇದಾ ಯತ್ ಪದಮಾಮನಂತಿ' 'ಸಮಸ್ತವೇದಗಳು ಯಾವ ಪದವನ್ನು (ಬ್ರಹ್ಮವನ್ನು) ಸಾರುತ್ತವೋ' (ಕ. ಉ. ೧. ೨. ೧೫).

೮೪೯. ಯೋಗೀ--ಜ್ಞಾನದಿಂದಲೇ ಪ್ರಾಪ್ಯನಾಗುವವನು.

ಯೋಗವೆಂದರೆ ಜ್ಞಾನ. ಭಗವಂತನು ಜ್ಞಾನದಿಂದಲೇ ಪ್ರಾಪ್ಯನಾಗುವವನಾದುದರಿಂದ ಅವನಿಗೆ ಯೋಗಿ ಎಂದು ಹೆಸರು. ಅಥವಾ ಯೋಗ ಎಂದರೆ ಸಮಾಧಿ. ಭಗವಂತನು ಯಾವಾಗಲೂ ತನ್ನ ಆತ್ಮವನ್ನು ತನ್ನ ಆತ್ಮದಲ್ಲಿಯೇ ಸಮಾಹಿತಗೊಳಿಸುತ್ತಾನೆ. ಆದುದರಿಂದ ಅವನು ಯೋಗಿಯು.

೮೫೦. ಯೋಗೀಶಃ—ಯೋಗಿಗಳಿಗೆಲ್ಲ ಈಶ್ವರನಾಗಿರುವವನು.

ಅನ್ಯ ಯೋಗಿಗಳು ಯೋಗದ ವಿಘ್ನಗಳಿಂದ ಪೀಡಿಸಲ್ಪಟ್ಟು ತಮ್ಮ ಸ್ವರೂಪದಿಂದ ಚ್ಯುತರಾಗುತ್ತಾರೆ. ಭಗವಂತನಾದರೊ ವಿಘ್ನಗಳಿಲ್ಲದವನಾದುದರಿಂದ ಯೋಗಿಗಳಿಗೆಲ್ಲ ಈಶ್ವರನು.

೮೫೧. ಸರ್ವಕಾಮದಃ—ಸರ್ವಾಭೀಷ್ಟಗಳನ್ನು ಯಾವಾಗಲೂ ಕೊಡುವವನು.

೮೫೨. ಆಶ್ರಮಃ—ವಿಶ್ರಾಂತಿಸ್ಥಳವಾಗಿರುವವನು.

ಭಗವಂತನು ಸಂಸಾರಾರಣ್ಯದಲ್ಲಿ ತಿರುಗುತ್ತಿರುವವರೆಲ್ಲರಿಗೂ ಆಶ್ರಮದಂತೆ ವಿಶ್ರಾಂತಿಸ್ಥಳವಾಗಿರುವನು. ಆದುದರಿಂದ ಅವನಿಗೆ ಆಶ್ರಮ ಎಂದು ಹೆಸರು.

೮೫೩. ಶ್ರಮಣಃ–ಅವಿವೇಕಿಗಳೆಲ್ಲರನ್ನು ಸಂತಾಪಗೊಳಿಸುವವನು.

೮೫೪. ಕ್ಷಾಮಃ—(ಪ್ರಳಯಕಾಲದಲ್ಲಿ) ಸರ್ವಪ್ರಜೆಗಳನ್ನು ಕ್ಷಯಿಸಿ ಹೋಗುವಂತೆ ಮಾಡುವವನು.

೮೫೫. ಸುಪರ್ಣಃ– ಸುಂದರವಾದ ಎಲೆಗಳಿರುವವನು.

ಸಂಸಾರವೃಕ್ಷರೂಪಿಯಾದ ಭಗವಂತನಿಗೆ ಛಂದೋರೂಪವಾದ ಸುಂದರವಾದ ಎಲೆಗಳಿವೆ. ಆದುದರಿಂದ ಭಗವಂತನು ಸುಪರ್ಣನು.

'ಛಂದಾಂಸಿ ಯಸ್ಯ ಪರ್ಣಾನಿ' 'ಛಂದಸ್ಸುಗಳು ಯಾವನ (ಸಂಸಾರವೃಕ್ಷರೂಪರೂಪಿಯಾದ ಭಗವಂತನ) ಎಲೆಗಳೋ' (ಗೀತಾ ೧೫. ೧).

೮೫೬. ವಾಯುವಾಹನಃ- ವಾಯುವು ಸರ್ವಭೂತಗಳನ್ನು ಧಾರಣಮಾಡುವಂತೆ ಮಾಡುವವನು.

ಭಗವಂತನ ಭಯದಿಂದ ವಾಯುವು ಸರ್ವಭೂತಗಳನ್ನು ಧಾರಣಮಾಡುತ್ತದೆ. ಆದುದರಿಂದ ಭಗವಂತನಿಗೆ ವಾಯುವಾಹನ ಎಂದು ಹೆಸರು.

'ಭೀಷಾಽಸ್ಮಾದ್ ವಾತಃ ಪವತೇ' 'ಈತನ (ಬ್ರಹ್ಮದ) ಭಯದಿಂದ ವಾಯುವು ಬೀಸುತ್ತಾನೆ' (ತೈ. ಉ. ೨. ೮).

೮೫೭. ಧನುರ್ಧರಃ—ಧನುಸ್ಸನ್ನು ಧರಿಸಿದವನು.

ಭಗವಂತನು ಶ್ರೀರಾಮನಾಗಿ ಮಹಾಧನುಸ್ಸನ್ನು ಧರಿಸಿದನು; ಆದುದರಿಂದ ಅವನು ಧನುರ್ಧರನು.

೮೫೮. ಧನುರ್ವೇದಃ—ಧನುರ್ವೇದವನ್ನು ತಿಳಿದವನು.

ಅದೇ ದಾಶರಥಿಯಾದ ಶ್ರೀರಾಮನು ಧನುರ್ವೇದವನ್ನು ತಿಳಿದವನಾದುದ ಭಗವಂತನಿಗೆ ಧನುರ್ವೇದ ಎಂದು ಹೆಸರು.

೮೫೯. ದಂಡಃ — ದಮನಮಾಡುವವರ ದಮನಕರ್ಮವಾಗಿರುವವನು.

'ದಂಡೋ ದಮಯತಾಮಸ್ಮಿ' 'ನಾನು ದಮನಮಾಡುವವರ ದಂಡವಾಗಿದ್ದೇನೆ; (ಗೀತಾ ೧೦. ೩೮).

೮೬೦. ದಮಯಿತಾ—ಯಮ, ರಾಜ ಮೊದಲಾದವರ ರೂಪದಿಂದ ಪ್ರಜೆಗಳನ್ನು ದಂಡಿಸುವವನು.

೮೬೧. ದಮಃ—ದಂಡಕಾರ್ಯವಾಗಿರುವವನು.

ದಂಡಿಸಲ್ಪಡತಕ್ಕವರ ಮೇಲೆ ಹೊರಿಸಲ್ಪಟ್ಟ ಶಿಕ್ಷೆಯು ಕೂಡ ಭಗವಂತನೇ ಆಗಿರುವವನು, ಆದುದರಿಂದ ಅವನಿಗೆ ದಮ ಎಂದು ಹೆಸರು.

೮೬೨. ಅಪರಾಜಿತಃ—ಶತ್ರುಗಳಿಂದ ಪರಾಜಿತನಾಗದಿರುವನು.

೮೬೩. ಸರ್ವಸಹಃ—ಸರ್ವಕರ್ಮಗಳಲ್ಲಿ ಸಮರ್ಥನಾಗಿರುವವನು.

ಅಥವಾ ಸರ್ವ ಶತ್ರುಗಳನ್ನೂ ಸಹಿಸಬಲ್ಲವನು.

೮೬೪. ನಿಯಂತಾ—ಎಲ್ಲರನ್ನೂ ಅವರವರ ಕರ್ಮಗಳಲ್ಲಿ ವ್ಯವಸ್ಥಾಪಿಸುವವನು (ನಿಯಮಿಸುವವನು).

೮೬೫. ಅನಿಯಮಃ—ಯಾವ ಒಂದು ನಿಯಮವಾಗಲಿ ಇಲ್ಲದವನು.

ಏಕೆಂದರೆ ಸರ್ವನಿಯಾಮಕನಾದ ಭಗವಂತನಿಗೆ ಬೇರೆ ನಿಯಾಮಕರು ಯಾರೂ ಇಲ್ಲ.

೮೬೬. ಅಯಮಃ—ಮರಣವಿಲ್ಲದವನು.

ಅಥವಾ ಈ ಎರಡು ನಾಮಗಳು ನಿಯಮ ಮತ್ತು ಯಮ ಎಂದೂ ಆಗಬಹುದು. ಯಮನಿಯಮಗಳೆಂಬ ಎರಡು ಯೋಗಾಂಗಗಳಿಂದ ಹೊಂದಲ್ಪಡತಕ್ಕವನಾದುದರಿಂದ ಭಗವಂತನೇ ಯಮನಾಗಿರುತ್ತಾನೆ ಮತ್ತು ನಿಯಮನಾಗಿರುತ್ತಾನೆ.

೮೬೭. ಸತ್ತ್ವವಾನ್—ಸತ್ತ್ವವುಳ್ಳವನು.

ಶೌರ್ಯವೀರ್ಯಾದಿಗಳು ಭಗವಂತನ ಸತ್ತ್ವವಾಗಿರುವುವು. ಆದುದರಿಂದ ಭಗವಂತನು ಸತ್ತ್ವವಾನ್.

೮೬೮. ಸಾತ್ತ್ವಿಕಃ—ಸತ್ತ್ವಗುಣದಲ್ಲಿ ಪ್ರಧಾನವಾಗಿ ಅವಸ್ಥಿತನಾಗಿರುವವನು (ನೆಲೆಗೊಂಡಿರುವವನು).

೮೬೯. ಸತ್ಯಃ—ಸತ್ಪುರುಷರಲ್ಲಿ ಸಾಧುತ್ವವಾಗಿರುವವನು.

೮೭೦. ಸತ್ಯಧರ್ಮಪರಾಯಣಃ—ಸತ್ಯಧರ್ಮಗಳಲ್ಲಿ ಯಾವಾಗಲೂ ನಿರತನಾಗಿರುವವನು.

ಯಥಾರ್ಥವಾದುದನ್ನು ಹೇಳುವುದರಲ್ಲೂ ವಿಧಿರೂಪವಾದ ಧರ್ಮದಲ್ಲೂ ನಿಯತನಾಗಿರುವವನು.

೮೭೧. ಅಭಿಪ್ರಾಯಃ—ಪುರುಷಾರ್ಥಗಳನ್ನು ಅಪೇಕ್ಷಿಸುವವರಿಂದ ಬಯಸಲ್ಪಡುವವನು.

ಅಥವಾ ಪ್ರಳಯಕಾಲದಲ್ಲಿ ಜಗತ್ತು ನೇರವಾಗಿ ಭಗವಂತನನ್ನು ಸೇರುವುದರಿಂದ ಅವನಿಗೆ ಅಭಿಪ್ರಾಯ ಎಂದು ಹೆಸರು.

೮೭೨. ಪ್ರಿಯಾರ್ಹಃ—ಪ್ರಿಯವಾದ ವಸ್ತುಗಳನ್ನು ಅರ್ಪಿಸಲು ಯೋಗ್ಯವಾಗಿರುವವನು.

ಯದ್ಯದಿಷ್ಟ ತಮಂ ಲೋಕೇ ಯಚ್ಚಾಸ್ಯ ದಯಿತಂ ಗೃಹೇ ।
ತತ್ತದ್ ಗುಣವತೇ ದೇಯಂ ತದೇವಾಕ್ಷಯಮಿಚ್ಛತಾ ॥

'(ಮನುಷ್ಯನಿಗೆ) ಲೋಕದಲ್ಲಿ ಯಾವಯಾವುದು ಇಷ್ಟತಮವೋ ಮತ್ತು ಮನೆಯಲ್ಲಿ ಯಾವುದು ಅವನಿಗೆ ಎಲ್ಲಕ್ಕಿಂತ ಹೆಚ್ಚು ಪ್ರಿಯವಾದುದೋ, ಅದನ್ನು ಅಕ್ಷಯವಾಗಿ ಮಾಡಲಿಚ್ಛಿಸುವವನು, ಅದನ್ನು ಗುಣವಂತನಿಗೆ (ಭಗವಂತನಿಗೆ) ಅರ್ಪಿಸಬೇಕು'. (ಸ್ಮೃತಿ).

೮೭೩. ಅರ್ಹಃ—ಪೂಜಿಸಲ್ಪಡತಕ್ಕವನು.

ಸ್ವಾಗತ, ಆಸನ, ಪ್ರಶಂಸೆ, ಅರ್ಘ್ಯ, ಪಾದ್ಯ, ಸ್ತುತಿ, ಮತ್ತು ನಮಸ್ಕಾರ. ಇವೇ ಮೊದಲಾದ ಪೂಜಾಸಾಧನಗಳಿಂದ ಭಗವಂತನು ಪೂಜಿಸಲ್ಪಡತಕ್ಕವನು; ಆದುದರಿಂದ ಅವನಿಗೆ ಅರ್ಹ ಎಂದು ಹೆಸರು.

೮೭೪. ಪ್ರಿಯಕೃತ್—ಪ್ರಿಯವನ್ನುಂಟುಮಾಡುವವನು.

ಭಗವಂತನು ಪ್ರಿಯಾರ್ಹನು ಮಾತ್ರವಲ್ಲ, ಅವನನ್ನು ಸ್ತುತಿ ಮೊದಲಾದುವುಗಳ ಮೂಲಕ ಭಜಿಸುವವರಿಗೆ ಪ್ರಿಯವನ್ನುಂಟುಮಾಡುತ್ತಾನೆ; ಆದುದರಿಂದ ಅವನು ಪ್ರಿಯಕೃತ್.

೮೭೫. ಪ್ರೀತಿವರ್ಧನಃ—ತನ್ನನ್ನು ಭಜಿಸುವವರ ಪ್ರೀತಿಯನ್ನು ಅಭಿವೃದ್ಧಿಗೊಳಿಸುವವನು.

೮೭೬. ವಿಹಾಯಸಗತಿಃ—ಆಕಾಶವು ತನ್ನ ಆಶ್ರಯಸ್ಥಾನವಾಗಿರುವವನು.

ಅಥವಾ ಆಕಾಶದಲ್ಲಿ ಆದಿತ್ಯನ ರೂಪದಿಂದ ಚಲಿಸುವವನು. ಅಥವಾ ಆದಿತ್ಯನು ಭಗವಂತನ ಒಂದು ವಿಭೂತಿ; ಆಕಾಶವು ಆದಿತ್ಯನ ಆಶ್ರಯಸ್ಥಾನ; ಆದುದರಿಂದ ಭಗವಂತನಿಗೆ ವಿಹಾಯಸಗತಿ ಎಂದು ಹೆಸರು.

೮೭೭. ಜ್ಯೋತಿಃ—ಸ್ವತಃ ಪ್ರಕಾಶಿಸುವವನು.

'ನಾರಾಯಣಃ ಪರೋ ಜ್ಯೋತಿಃ' 'ನಾರಾಯಣನು ಪರಮ ಜ್ಯೋತಿಯು' (ನಾ.ಉ. ೧೩.೧).

೮೭೮. ಸುರುಚಿಃ—ಸುಂದರವಾದ ಕಾಂತಿಯುಳ್ಳವನು ಅಥವಾ ಇಚ್ಛೆಯುಳ್ಳವನು.

೮೭೯. ಹುತಭುಕ್—ಹವಿಸ್ಸನ್ನು ಭೋಗಿಸುವವನು.

ಭಕ್ತರು ಸಮಸ್ತ ದೇವತೆಗಳನ್ನು ಉದ್ದೇಶಿಸಿ ಮಾಡುವ ಯಜ್ಞ ಕರ್ಮಗಳಲ್ಲಿಯೂ ಭಗವಂತನೇ ಹವಿಸ್ಸನ್ನು ಭೋಗಿಸುತ್ತಾನೆ. ಆದುದರಿಂದ ಭಗವಂತನು ಹುತಭುಕ್.

೮೮೦. ವಿಭುಃ – ಸರ್ವವ್ಯಾಪಿಯಾಗಿರುವವನು.

ಅಥವಾ ಮೂರು ಲೋಕಗಳಿಗೂ ಪ್ರಭುವಾಗಿರುವವನು.

೮೮೧. ರವಿಃ—ಆದಿತ್ಯರೂಪದಿಂದ ರಸವನ್ನು ಗ್ರಹಣಮಾಡುವವನು (ಎಳೆದುಕೊಳ್ಳುವವನು).

೮೮೨. ವಿರೋಚನಃ—ವಿವಿಧವಾಗಿ ಶೋಭಿಸುವವನು.

೮೮೩. ಸೂರ್ಯಃ—ಶ್ರೀಯನ್ನುಂಟುಮಾಡುವವನು.

೮೮೪. ಸವಿತಾ—ಇಡೀ ಜಗತ್ತನ್ನು ಉತ್ಪತ್ತಿಮಾಡುವವನು.

'ಪ್ರಜಾನಾಂ ತು ಪ್ರಸವನಾತ್ ಸವಿತೇತಿ ನಿಗದ್ಯತೇ' 'ಪ್ರಜೆಗಳನ್ನು ಉತ್ಪತ್ತಿ ಮಾಡುವುದರಿಂದ ಭಗವಂತನು ಸವಿತಾ ಎಂದು ಕರೆಯಲ್ಪಡುತ್ತಾನೆ' (ವಿಷ್ಣು-ಧರ್ಮೋತ್ತರ ಪುರಾಣ ೧.೩೦.೧೫).

೮೮೫. ರವಿಲೋಚನಃ—ಸೂರ್ಯನು ತನ್ನ ಕಣ್ಣಾಗಿರುವವನು.

'ಅಗ್ನಿರ್ಮೂರ್ಧಾ ಚಕ್ಷುಷೀ ಚಂದ್ರಸೂರ್ಯೌ' 'ಅಗ್ನಿಯು (ಪುರುಷನ) ಶಿರಸ್ಸು, ಚಂದ್ರಸೂರ್ಯರು ಕಣ್ಣುಗಳು' (ಮುಂ.ಉ. ೨.೧.೪).

೮೮೬. ಅನಂತಃ—ನಿತ್ಯನೂ ಸರ್ವಗತನೂ ದೇಶಕಾಲಗಳಿಂದ ಅಪರಿಚ್ಛಿನ್ನನೂ ಆಗಿರುವವನು.

ಅಥವಾ ಭಗವಂತನು ಶೇಷರೂಪನಾದುದರಿಂದ ಅನಂತನು.

೮೮೭. ಹುತಭುಕ್—ಹವಿಸ್ಸನ್ನು ಭೋಗಿಸುವವನು.

೮೮೮. ಭೋಕ್ತಾ—ಯೋಗ್ಯಳಾದ ಅಚೇತನಳಾದ ಪ್ರಕೃತಿಯನ್ನು ಭೋಗಿಸುವವನು.

ಅಥವಾ ಜಗತ್ತನ್ನು ಪಾಲಿಸುವವನು.

೮೮೯. ಸುಖದಃ—ಭಕ್ತರಿಗೆ ಮೋಕ್ಷರೂಪವಾದ ಸುಖವನ್ನು ಕೊಡುವವನು. ಅಥವಾ,

ಅಸುಖದಃ—ಭಕ್ತರ ಅಸುಖವನ್ನು ಎಂದರೆ ದುಃಖವನ್ನು ನಾಶಮಾಡುವವನು.

೮೯೦. ನೈಕಜಃ—ಧರ್ಮರಕ್ಷಣೆಗಾಗಿ ಅನೇಕಬಾರಿ ಹುಟ್ಟುವವನು.

೮೯೧. ಅಗ್ರಜಃ—ಹಿರಣ್ಯಗರ್ಭನ ರೂಪದಿಂದ ಎಲ್ಲರಿಗಿಂತ ಮೊದಲು ಹುಟ್ಟಿದವನು.

'ಹಿರಣ್ಯಗರ್ಭಃ ಸಮವರ್ತತಾಗ್ರೇ' 'ಹಿರಣ್ಯಗರ್ಭನು ಮೊದಲೇ ಇದ್ದನು' (ಋಗ್ವೇದಸಂಹಿತಾ ೧೦, ೧೨೧. ೧).

೮೯೨. ಅನಿರ್ವಿಣ್ಣಃ—ನಿರ್ವೇದರಹಿತನು, ವಿಷಣ್ಣತೆಯಿಲ್ಲದವನು.

ತನ್ನ ಎಲ್ಲ ಅಭೀಷ್ಟಗಳನ್ನು ಹೊಂದಿದವನಾದುದರಿಂದಲೂ ಮತ್ತು ಅಭೀಷ್ಟಗಳನ್ನು ಹೊಂದದೆ ಇರುವ ಪಕ್ಷಕ್ಕೆ ಯಾವ ಹೇತುವಾದರೂ ಇಲ್ಲದವನಾದುದರಿಂದಲೂ ಭಗವಂತನು ನಿರ್ವೇದರಹಿತನು. ಆದುದರಿಂದ ಅವನಿಗೆ ಅನಿರ್ವಿಣ್ಣ ಎಂದು ಹೆಸರು.

೮೯೩. ಸದಾಮರ್ಷೀ—ಸತ್ಪುರುಷರನ್ನು ವಿಶೇಷವಾಗಿ ಕ್ಷಮಿಸುವವನು.

೮೯೪. ಲೋಕಾಧಿಷ್ಠಾನಮ್—ಲೋಕಗಳಿಗೆ ಆಶ್ರಯವಾಗಿರುವವನು.

ನಿರಾಧಾರನಾದ ಭಗವಂತನನ್ನು ಆಶ್ರಯಿಸಿ ಮೂರು ಲೋಕಗಳೂ ನಿಂತಿರುವುವು. ಆದುದರಿಂದ ಭಗವಂತನು ಅಧಿಷ್ಠಾನನು.

೮೯೫. ಅದ್ಭುತಃ—ಅದ್ಭುತನಾಗಿರುವವನು.

'ಶ್ರವಣಾಯಾಪಿ ಬಹುಭಿರ್ಯೋ ನ ಲಭ್ಯಃ . . . ಆಶ್ಚರ್ಯೋ ಜ್ಞಾತಾ ಕುಶಲಾನುಶಿಷ್ಟಃ' 'ಆತ್ಮನು ಅನೇಕರಿಗೆ ಕೇಳಲು ಕೂಡ ಸಿಗುವವನಲ್ಲ. ಅನೇಕರು ಅವನನ್ನು ಕೇಳುತ್ತಿದ್ದರೂ ತಿಳಿಯಲಾರರು. ಆತ್ಮನನ್ನು ಕುರಿತು ಮಾತನಾಡು

ವವನು ಆಶ್ಚರ್ಯವಂತನು. ಆತ್ಮನನ್ನು ಹೊಂದಿದವನು ನಿಪುಣನು. ನಿಪುಣನಾದ ಗುರುವಿನಿಂದ ಉಪದೇಶವನ್ನು ಪಡೆದು ಆತ್ಮನನ್ನು ಅರಿತವನು ಆಶ್ಚರ್ಯವಂತನು' (ಕ. ಉ. ೧. ೨. ೭). 'ಆಶ್ಚರ್ಯವತ್ ಪಶ್ಯತಿ ಕಶ್ಚಿದೇನಮ್' 'ಒಬ್ಬನು ಈ ಆತ್ಮನನ್ನು ಆಶ್ಚರ್ಯದಂತೆ ನೋಡುತ್ತಾನೆ' (ಗೀತಾ ೨. ೨೯).

ಅಥವಾ ಭಗವಂತನು ತನ್ನ ಸ್ವರೂಪಶಕ್ತಿ ವ್ಯವಹಾರ ಮತ್ತು ಕಾರ್ಯ— ಇವುಗಳಿಂದ ಅದ್ಭುತನಾಗಿರುವವನಾದುದರಿಂದ ಅವನಿಗೆ ಅದ್ಭುತ ಎಂದು ಹೆಸರು.

೮೯೬. ಸನಾತ್—ಕಾಲಸ್ವರೂಪನು.

ಸನಾತ್ ಎಂದರೆ ಚಿರಕಾಲ ಎಂದು ಅರ್ಥ. ಕಾಲವು ಕೂಡ ಭಗವಂತನ ಒಂದು ರೂಪವಾದುದರಿಂದ ಭಗವಂತನಿಗೆ ಸನಾತ್ ಎಂದು ಹೆಸರು.

'ಪರಸ್ಯ ಬ್ರಹ್ಮಣೋ ರೂಪಂ ರೂಪೇ ಕಾಲಸ್ತಥಾಪರಮ್' 'ಎಲೈ ದ್ವಿಜನೇ, ಪುರುಷನು ಪರಬ್ರಹ್ಮನ ಪ್ರಥಮರೂಪ; ವ್ಯಕ್ತ-ಅವ್ಯಕ್ತಗಳು ಪರ ಬ್ರಹ್ಮನ ಇತರ ರೂಪಗಳು; ಹಾಗೆಯೇ ಕಾಲವು ಪರಬ್ರಹ್ಮನ ಇನ್ನೊಂದು ರೂಪ' (ವಿಷ್ಣು ೧. ೨. ೧೫).

೮೯೭. ಸನಾತನತಮಃ — ಸರ್ವಕಾರಣನೂ, ಸನಾತನರಾದ ಬ್ರಹ್ಮಾದಿಗಳಿಗಿಂತಲೂ ಅತಿಶಯವಾಗಿ ಸನಾತನನೂ ಆಗಿರುವವನು.

೮೯೮. ಕಪಿಲಃ—ಬಡಬಾನಲದಂತೆ ಕಪಿಲವರ್ಣವುಳ್ಳವನು.

೮೯೯. ಕಪಿಃ—ವರಾಹರೂಪಧಾರಿ.

ಅಥವಾ ತನ್ನ ಕಿರಣಗಳಿಂದ ನೀರನ್ನು (ಕ) ಕುಡಿಯುವ (ಪಿ) ಸೂರ್ಯನು.

೯೦೦. ಅಪ್ಯಯಃ—ಪ್ರಲಯಕಾಲದಲ್ಲಿ ಸರ್ವಜಗತ್ತುಗಳಿಗೆ ಲಯ ಸ್ಥಾನವಾಗುವವನು.

೯೦೧. ಸ್ವಸ್ತಿದಃ—ಭಕ್ತರಿಗೆ ಮಂಗಳವಾದುದನ್ನು ಕೊಡುವವನು.

೯೦೨. ಸ್ವಸ್ತಿಕೃತ್— ಭಕ್ತರಿಗೆ ಮಂಗಳವನ್ನು ಉಂಟುಮಾಡು ವವನು.

೯೦೩. ಸ್ವಸ್ತಿಃ—ಪರಮಾನಂದಲಕ್ಷಣವುಳ್ಳ ಮಂಗಲಸ್ವರೂಪವುಳ್ಳ ವನು.

೯೦೪. ಸ್ವಸ್ತಿಭುಕ್— ತನ್ನ (ಪರಮಾನಂದಲಕ್ಷಣವುಳ್ಳ) ಮಂಗಲ ಸ್ವರೂಪವನ್ನು ಭೋಗಿಸುವವನು.

ಅಥವಾ ಭಕ್ತರು ತನ್ನ ಮಂಗಲಸ್ವರೂಪವನ್ನು ಭೋಗಿಸುವಂತೆ ಮಾಡು ವವನು.

೯೦೫. ಸ್ವಸ್ತಿದಕ್ಷಿಣಃ—ಮಂಗಳವಾದ ರೂಪದಿಂದ ಅಭಿವೃದ್ಧಿಯಾಗುವವನು.

ಅಥವಾ ಮಂಗಲವಾದುದನ್ನು ಕೊಡುವುದರಲ್ಲಿ ಸಮರ್ಥನಾಗಿರುವವನು. ಶೀಘ್ರವಾಗಿ ಕಲ್ಯಾಣವನ್ನುಂಟುಮಾಡುವುದರಲ್ಲಿ ಭಗವಂತನೇ ಸಮರ್ಥನು. ಏಕೆಂದರೆ ಭಗವಂತನ ಸ್ಮರಣಮಾತ್ರದಿಂದ ಸರ್ವಸಿದ್ಧಿಗಳೂ ಸಿದ್ಧಿಸುವುವು. ಆದುದರಿಂದ ಭಗವಂತನಿಗೆ ಸ್ವಸ್ತಿ ದಕ್ಷಿಣ ಎಂದು ಹೆಸರು.

೯೦೬. ಅರೌದ್ರಃ—ರಾಗದ್ವೇಷಾದಿರಹಿತನು.

ಕರ್ಮರಾಗ ಮತ್ತು ಕೋಪ–ಇವನ್ನು ರೌದ್ರ ಎಂದು ಹೇಳುತ್ತಾರೆ. ಭಗವಂತನು ಸರ್ವಾಭಿಷ್ಟಗಳನ್ನು ಹೊಂದಿದವನಾದುದರಿಂದ ಅವನಲ್ಲಿ ರಾಗ ದ್ವೇಷಾದಿಗಳು ಇಲ್ಲವಾದಕಾರಣ ಅವನು ರೌದ್ರತ್ರಯರಹಿತನು. ಆದುದರಿಂದ ಅವನು ಅರೌದ್ರನು.

೯೦೭. ಕುಂಡಲೀ—ಶೇಷರೂಪಧಾರಿ.

ಅಥವಾ ಸೂರ್ಯಮಂಡಲಕ್ಕೆ ಸಮಾನವಾದ ಕುಂಡಲವನ್ನು ಧರಿಸಿದವನಾದುದರಿಂದ ಭಗವಂತನಿಗೆ ಕುಂಡಲೀ ಎಂದು ಹೆಸರು.

೯೦೮. ಚಕ್ರೀ—ಸಮಸ್ತಲೋಕಗಳ ರಕ್ಷಣೆಗಾಗಿ ಮನಸ್ತತ್ತ್ವಾತ್ಮಕವಾದ ಸುದರ್ಶನವೆಂಬ ಚಕ್ರವನ್ನು ಧರಿಸಿದವನು.

'ಚಲಸ್ವರೂಪಮತ್ಯಂತ ..ದತ್ತೇ ವಿಷ್ಣುಃ ಕರೇ ಸ್ಥಿತಮ್' 'ಚಂಚಲಸ್ವರೂಪವುಳ್ಳ, ಅತ್ಯಂತ ವೇಗದಿಂದ ವಾಯುವನ್ನೂ ಮೀರಿರುವ, ಚಕ್ರಸ್ವರೂಪವಾದ ಮನಸ್ಸನ್ನು ವಿಷ್ಣುವು ಕೈಯಲ್ಲಿ ಹಿಡಿದಿರುತ್ತಾನೆ' (ವಿಷ್ಣು. ೧. ೨೨. ೭೧).

೯೦೯. ವಿಕ್ರಮೀ–ಶೌರ್ಯಶಾಲಿ ಅಥವಾ ಪಾದವಿಕ್ಷೇಪವುಳ್ಳವನು.

ವಿಕ್ರಮ ಎಂದರೆ ಹೆಜ್ಜೆ ಅಥವಾ ಶೌರ್ಯ. ಭಗವಂತನು ಸಮಸ್ತಪುರುಷರಿಗಿಂತಲೂ ವಿಲಕ್ಷಣವಾದ ಶೌರ್ಯ ಮತ್ತು ಹೆಜ್ಜೆಗಳುಳ್ಳವನಾದುದರಿಂದ ಅವನಿಗೆ ವಿಕ್ರಮೀ ಎಂದು ಹೆಸರು.

೯೧೦. ಊರ್ಜಿತ ಶಾಸನಃ—ಊರ್ಜಿತವಾದ (ಪ್ರಬಲವಾದ) ಶಾಸನಗಳುಳ್ಳವನು.

ಭಗವಂತನ ಶ್ರುತಿಸ್ಮೃತಿರೂಪವಾದ ಶಾಸನಗಳು ಪ್ರಬಲವಾದುವುಗಳು. ಆದುದರಿಂದ ಅವನಿಗೆ ಊರ್ಜಿತಶಾಸನ ಎಂದು ಹೆಸರು.

'ಶ್ರುತಿಸ್ಮೃತೀ ಮಮೈವಾಜ್ಞೇ ಯಸ್ತೇ ಉಲ್ಲಂಘ್ಯ ವರ್ತತೇ ।
ಅಜ್ಞಾಚ್ಛೇದೀ ಮಮ ದ್ವೇಷೀ ಮದ್ಭಕ್ತೋಽಪಿ ನ ವೈಷ್ಣವಃ ॥'

'ಶ್ರುತಿಸ್ಮೃತಿಗಳು ನನ್ನವೇ ಆಜ್ಞೆಗಳು. ಯಾವನು ಅವುಗಳನ್ನು ಉಲ್ಲಂಘಿಸಿ ವರ್ತಿಸುತ್ತಾನೋ, ನನ್ನ ಆಜ್ಞೆಗಳನ್ನು ಮುರಿದವನಾದ ಅವನು ನನ್ನ ದ್ವೇಷಿಯು. ಅವನು ನನ್ನ ಭಕ್ತನಾಗಿದ್ದರೂ ವೈಷ್ಣವನಲ್ಲ' (ಭಗವದ್ವಚನ).

೯೧೧. ಶಬ್ದಾತಿಗಃ— ಶಬ್ದಕ್ಕೆ ಅಗೋಚರನಾಗಿರುವವನು.

ಶಬ್ದಪ್ರವೃತ್ತಿಗೆ ಹೇತುವಾಗಿರುವ ಜಾತಿಯೇ ಮೊದಲಾದುವುಗಳು ಭಗವಂತನಿಗೆ ಇಲ್ಲವಾದ್ದರಿಂದ ಅವನನ್ನು ಶಬ್ದದಿಂದ ವರ್ಣಿಸಲು ಅಶಕ್ಯವು. ಆದುದರಿಂದ ಅವನಿಗೆ ಶಬ್ದಾತಿಗ ಎಂದು ಹೆಸರು.

'ಯತೋ ವಾಚೊ ನಿವರ್ತಂತೇ ಅಪ್ರಾಪ್ಯ ಮನಸಾ ಸಹ' ಯಾವುದರಿಂದ (ಅದನ್ನು) ಹೊಂದದೆ ವಾಕ್ಕುಗಳು ಮನಸ್ಸಿನೊಡನೆ ಹಿಂತಿರುಗುವುವೋ' (ತೈ.ಉ. ೨.೪). 'ನ ಶಬ್ದಗೋಚರಂ ಯಸ್ಯ ಯೋಗಿಧ್ಯೇಯಂ ಪರಂ ಪದಮ್' 'ಯೋಗಿಗಳಿಂದ ಧ್ಯಾನಿಸಲ್ಪಡುವ ಯಾವನ (ಭಗವಂತನ) ಪರಮಪದವು ಶಬ್ದಗೋಚರವಲ್ಲವೋ' (ವಿಷ್ಣು. ೧.೧೭.೩೨).

೯೧೨. ಶಬ್ದಸಹಃ—ಸರ್ವವೇದಗಳ ತಾತ್ಪರ್ಯವಾಗಿರುವವನು.

ಸಮಸ್ತ ವೇದಗಳು ಭಗವಂತನನ್ನೇ ತಾತ್ಪರ್ಯವಾಗಿ ಹೇಳುತ್ತವೆ. ಆದುದರಿಂದ ಭಗವಂತನಿಗೆ ಶಬ್ದಸಹ ಎಂದು ಹೆಸರು.

'ಸರ್ವೇ ವೇದಾ ಯತ್ಪದಮಾಮನಂತಿ' 'ಸರ್ವವೇದಗಳು ಯಾವ ಪದವನ್ನು (ಪರಮಾತ್ಮನನ್ನು) ಪ್ರತಿಪಾದಿಸುತ್ತವೋ' (ಕ.ಉ. ೧.೨.೧೫). 'ವೇದೈಶ್ಚ ಸರ್ವೈರಹಮೇವ ವೇದ್ಯಃ' 'ಸಕಲವೇದಗಳಿಂದ ನಾನೇ ತಿಳಿಯಲ್ಪಡತಕ್ಕವನು' (ಗೀತಾ. ೧೫. ೧೫).

೯೧೩. ಶಿಶಿರಃ ತಾಪತ್ರಯದಿಂದ ಸಂತಪ್ತರಾದವರಿಗೆ ವಿಶ್ರಾಂತಿಯನ್ನು ಹೊಂದುವ ಸ್ಥಾನವಾಗಿರುವವನು.

೯೧೪. ಶರ್ವರೀಕರಃ—ರಾತ್ರಿಯನುಂಟುಮಾಡುವವನು.

ಸಂಸಾರಿಗಳಿಗೆ ಆತ್ಮವು ರಾತ್ರಿಯಂತಿರುವುದು. ಮತ್ತು ಜ್ಞಾನಿಗಳಿಗೆ ಸಂಸಾರವು ರಾತ್ರಿಯಂತಿರುವುದು. ಸಂಸಾರಿಗಳಿಗೂ ಜ್ಞಾನಿಗಳಿಗೂ ರಾತ್ರಿಯನ್ನುಂಟುಮಾಡುವವನಾದುದರಿಂದ ಭಗವಂತನು ಶರ್ವರೀಕರನು.

'ಯಾ ನಿಶಾ ಸರ್ವಭೂತಾನಾಂ...ಸಾ ನಿಶಾ ಪಶ್ಯತೋ ಮುನೇಃ' ಯಾವುದು ಸರ್ವಪ್ರಾಣಿಗಳಿಗೆ ರಾತ್ರಿಯೋ, ಅದರಲ್ಲಿ ಸಂಯಮಿಯು, (ಯೋಗಿಯು) ಎಚ್ಚತ್ತಿರುವುವೋ ಅದು (ಪರಮಾತ್ಮನನ್ನು) ನೋಡುವ ಮುನಿಗೆ ರಾತ್ರಿಯು' (ಗೀತಾ. ೨.೬೯).

೯೧೫. ಅಕ್ರೂರಃ—ಕ್ರೌರ್ಯವಿಲ್ಲದವನು.

ಕ್ರೌರ್ಯವೆಂಬುದು ಪ್ರಬಲವಾದ ಕೋಪದಿಂದ ಹುಟ್ಟುವ ಒಂದು ಮನೋಧರ್ಮ. ಭಗವಂತನು ಸಮಸ್ತ ಕಾಮಗಳನ್ನು ಹೊಂದಿದವನಾದುದರಿಂದ ಅವನಲ್ಲಿ ಕೋಪವೂ ಇಲ್ಲ. ಕೋಪವಿಲ್ಲವಾದ ಕಾರಣ ಅವನಲ್ಲಿ ಕ್ರೌರ್ಯವೂ ಇಲ್ಲ, ಆದುದರಿಂದ ಭಗವಂತನು ಅಕ್ರೂರನು.

೯೧೬. ಪೇಶಲಃ—ಸುಂದರನಾಗಿರುವವನು.

ಭಗವಂತನು ಕರ್ಮದಿದಲೂ ಮನಸ್ಸಿನಿಂದಲೂ ವಾಕ್ಕಿನಿಂದಲೂ ಮತ್ತು ದೇಹದಿಂದಲೂ ಸುಂದರನಾಗಿರುವನು. ಆದುದರಿಂದ ಅವನಿಗೆ ಪೇಶಲ ಎಂದು ಹೆಸರು.

೯೧೭. ದಕ್ಷಃ—ದಕ್ಷತೆಯುಳ್ಳವನು.

ಪರಿಪೂರ್ಣವಾದ ಬೆಳವಣಿಗೆ, ಸಾಮರ್ಥ್ಯ ಮತ್ತು ಕಾರ್ಯನಿರ್ವಹಣೆಯಲ್ಲಿ ಶೀಘ್ರತೆ—ಈ ಮೂರು ಭಗಂತನಲ್ಲಿ ಯಾವಾಗಲೂ ನಿಶ್ಚಯವಾಗಿ ಇರುವುವು. ಅದುದರಿಂದ ಭಗವಂತನು ದಕ್ಷನು.

೯೧೮. ದಕ್ಷಿಣಃ—ದಕ್ಷನು.

ದಕ್ಷಿಣ ಎಂಬ ಶಬ್ದಕ್ಕೆ ದಕ್ಷ ಎಂಬ ಶಬ್ದದ ಅರ್ಥವೇ ಬರುತ್ತದೆ. ಆದರೆ ಇಲ್ಲಿ ಶಬ್ದಭೇದದಿಂದ ಪುನರುಕ್ತಿದೋಷವಿಲ್ಲ. ಅಥವಾ ದಕ್ಷಿಣ ಎಂಬ ಶಬ್ದಕ್ಕೆ ಗತಿಯುಳ್ಳವನೆಂಬ ಮತ್ತು ಸಂಹಾರಮಾಡುವವನೆಂಬ ಅರ್ಥವೂ ಉಂಟು.

೯೧೯. ಕ್ಷಮಿಣಾಂ ವರಃ- ಕ್ಷಮಾವಂತರಲ್ಲಿ ಶ್ರೇಷ್ಠನಾಗಿರುವವನು.

ಭಗವಂತನು ಕ್ಷಮಾವಂತರಾದ ಯೋಗಿಗಳಲ್ಲಿಯೂ ಮತ್ತು ಭಾರವನ್ನು ಹೊರುವ ಪೃಥಿವೀ ಮೊದಲಾದವರಲ್ಲಿಯೂ ಶ್ರೇಷ್ಠನಾಗಿರುವವನು. ಭಗವಂತನು ಅಖಿಲಬ್ರಹ್ಮಾಂಡವನ್ನು ಹೊತ್ತಿರುವನಾದರೂ ಪೃಥ್ವಿಯಂತೆ ಭಾರದಿಂದ ಪೀಡಿಸಲ್ಪಡುವುದಿಲ್ಲವಾದಕಾರಣ ಅವನು ಪೃಥ್ವಿಗಿಂತಲೂ ಶ್ರೇಷ್ಠನು. ಆದುದರಿಂದ ಅವನಿಗೆ ಕ್ಷಮಿಣಾಂವರ ಎಂದು ಹೆಸರು. ಅಥವಾ ಭಗವಂತನು ಸರ್ವಶಕ್ತಿವಂತನಾದುದರಿಂದ ಸಕಲಕರ್ಮಗಳನ್ನೂ ಮಾಡಲು ಸಮರ್ಥನಾಗಿರುವನು. ಆದುದರಿಂದ ಅವನು ಶಕ್ತಿವಂತರಲ್ಲೆಲ್ಲ ಶ್ರೇಷ್ಠನು. ಈ ಕಾರಣದಿಂದಲೂ ಅವನಿಗೆ ಕ್ಷಮಿಣಾಂ ವರ ಎಂದು ಹೆಸರು.

೯೨೦. ವಿದ್ವತ್ತಮಃ—ವಿದ್ವಾಂಸರಲ್ಲಿ ಶ್ರೇಷ್ಠನಾಗಿರುವವನು.

ಭಗವಂತನು ಯಾವಾಗಲೂ ಸರ್ವವಸ್ತುಗಳೂ ಗೋಚರವಾಗುವಂತಹ ನಿರತಿಶಯಜ್ಞಾನವುಳ್ಳವನು. ಇಂತಹ ಜ್ಞಾನವು ಇತರರಿಗೆ ಯಾರಿಗೂ ಇಲ್ಲ. ಆದುದರಿಂದ ಭಗವಂತನಿಗೆ ವಿದ್ವತ್ತಮನು ಎಂದು ಹೆಸರು.

೯೨೧. ವೀತಭಯಃ—ಭಯರಹಿತನು.

ಭಗವಂತನು ಸರ್ವೇಶ್ವರನೂ ನಿತ್ಯಮುಕ್ತನೂ ಆಗಿರುವನಾದುದರಿಂದ ಅವನಿಗೆ ಸಂಸಾರಿಕವಾದ ಅಥವಾ ಸಂಸಾರರೂಪವಾದ ಭಯವಿಲ್ಲ. ಆದುದರಿಂದ ಅವನಿಗೆ ವೀತಭಯ ಎಂದು ಹೆಸರು.

೯೨೨. ಪುಣ್ಯಶ್ರವಣಕೀರ್ತನಃ—ತನ್ನ ಲೀಲೆಗಳನ್ನು ಶ್ರವಣ ಮಾಡುವವರಿಗೂ, ತನ್ನ ನಾಮಸಂಕೀರ್ತನೆಯನ್ನು ಮಾಡುವವರಿಗೂ ಪುಣ್ಯವನ್ನುಂಟುಮಾಡುವವನು.

೯೨೩. ಉತ್ತಾರಣಃ-ಸಂಸಾರಸಾಗರದಿಂದ ಪಾರುಮಾಡುವವನು.

೯೨೪. ದುಷ್ಕೃತಿಹಾ—ಪಾಪಗಳೆಂಬ ದುಷ್ಕೃತಿಗಳನ್ನು ನಾಶ ಮಾಡುವವನು.

ಅಥವಾ ಪಾಪಗಳನ್ನು ಮಾಡುವವರನ್ನು ಸಂಹಾರಮಾಡುವವನು.

೯೨೫. ಪುಣ್ಯಃ—ತನ್ನ ಸ್ಮರಣೆಯೇ ಮೊದಲಾದುವುಗಳನ್ನು ಮಾಡುವವರಿಗೆ ಪುಣ್ಯವನ್ನುಂಟುಮಾಡುವವನು.

ಅಥವಾ ಶ್ರುತಿಸ್ಮೃತಿರೂಪವಾದ ವಾಕ್ಕಿನಿಂದ ಎಲ್ಲರಿಗೆ ಪುಣ್ಯೋಪದೇಶವನ್ನು ಮಾಡಿದವನು.

೯೨೬. ದುಸ್ಸ್ವಪ್ನನಾಶನಃ—ದುಸ್ಸ್ವಪ್ನಗಳನ್ನು ನಾಶಮಾಡುವವನು;

ಭಗವಂತನನ್ನು ಧ್ಯಾನಿಸಿದರೆ ಸ್ತುತಿಸಿದರೆ ಪೂಜಿಸಿದರೆ ಮತ್ತು ಅವನ ಸಂಕೀರ್ತನೆಯನ್ನ ಮಾಡಿದರೆ, ಅವನು ಮುಂದೆ ಸಂಭವಿಸುವ ಅನರ್ಥಗಳನ್ನು ಸೂಚಿಸುವ ದುಸ್ಸ್ವಪ್ನಗಳನ್ನು ನಾಶಮಾಡುತ್ತಾನೆ. ಆದುದರಿಂದ ಅವನಿಗೆ ದುಸ್ಸ್ವಪ್ನನಾಶನ ಎಂದು ಹೆಸರು.

೯೨೭. ವೀರಹಾ—ಸಂಸಾರಿಗಳಿಗೆ ಮುಕ್ತಿಯನ್ನು ಕೊಟ್ಟು, ಅವರ ವಿವಿಧಗತಿಗಳನ್ನು ನಾಶಮಾಡುವವನು.

೯೨೮. ರಕ್ಷಣಃ—ಸತ್ತ್ವಗುಣವನ್ನು ಅವಲಂಬಿಸಿ ಮೂರು ಲೋಕಗಳನ್ನೂ ರಕ್ಷಿಸುವವನು.

೯೨೯. ಸಂತಃ—ಸಂತರ ರೂಪದಿಂದ ಇರುವವನು.

ಸನ್ಮಾರ್ಗವರ್ತಿಗಳಿಗೆ ಸಂತರೆಂದು ಹೇಳುತ್ತಾರೆ. ವಿದ್ಯೆ ಮತ್ತು ವಿನಯ ಇವುಗಳ ಅಭಿವೃದ್ಧಿಗೋಸ್ಕರ ಭಗವಂತನೇ ಸಂತರ ರೂಪದಿಂದ ಇರುತ್ತಾನೆ.

೯೩೦. ಜೀವನಃ—ಜೀವನಾಧಾರವಾಗಿರುವವನು.

ಭಗವಂತನು ಪ್ರಾಣರೂಪದಿಂದ ಸರ್ವಪ್ರಜೆಗಳನ್ನು ಜೀವಿಸಿರುವಂತೆ ಮಾಡುತ್ತಾನೆ.

೯೩೧. ಪರ್ಯವಸ್ಥಿತಃ—ಎಲ್ಲಾ ಕಡೆಗಳಿಂದಲೂ ಜಗತ್ತನ್ನು ವ್ಯಾಪಿಸಿರುವವನು.

೯೩೨. ಅನಂತರೂಪಃ—ಅನಂತರೂಪಗಳುಳ್ಳವನು.

ವಿಶ್ವರೂಪದಿಂದಿರುವ ಭಗವಂತನಿಗೆ ಅನಂತರೂಪಗಳಿವೆ. ಆದುದರಿಂದ ಅವನಿಗೆ ಅನಂತರೂಪ ಎಂದು ಹೆಸರು.

೯೩೩. ಅನಂತಶ್ರೀಃ—ಅನಂತವಾದ ಪರಾಶಕ್ತಿಯುಳ್ಳವನು.

'ಪರಾಸ್ಯ ಶಕ್ತಿರ್ವಿವಿಧೈವ ಶ್ರೂಯತೇ' '(ಭಗವಂತನ) ಪರಾಶಕ್ತಿಯು ವಿವಿಧವಾಗಿಯೇ ಇರುವುದೆಂದು (ಶ್ರುತಿಗಳಿಂದ) ಕೇಳಿಬರುತ್ತದೆ' (ಶ್ವೇ.ಉ.೬.೮).

೯೩೪. ಜಿತಮನ್ಯುಃ—ಕ್ರೋಧವನ್ನು ಜಯಿಸಿದವನು.

೯೩೫. ಭಯಾಪಹಃ—ಮನುಷ್ಯರ ಸಂಸಾರಜನ್ಯ ಭಯವನ್ನು ನಾಶಮಾಡುವವನು.

೯೩೬. ಚತುರಶ್ರಃ—ನ್ಯಾಯನಿಷ್ಠೆಯುಳ್ಳವನು.

ಭಗವಂತನು ಮನುಷ್ಯರಿಗೆ ಅವರವರ ಕರ್ಮಾನುರೂಪವಾದ ಫಲವನ್ನು ಕೊಡುವವನಾದುದರಿಂದ ನ್ಯಾಯದಿಂದ ಕೂಡಿದವನು. ಆದುದರಿಂದ ಅವನಿಗೆ ಚತುರಶ್ರ ಎಂದು ಹೆಸರು.

೯೩೭. ಗಭೀರಾತ್ಮಾ— ಅಳೆಯಲು ಅಶಕ್ಯವಾದ ಸ್ವರೂಪವುಳ್ಳವನು.

೯೩೮. ವಿದಿಶಃ— ಅಧಿಕಾರಿಗಳಿಗೆ ವಿವಿಧ ಫಲಗಳನ್ನು ವಿಶೇಷವಾಗಿ ಕೊಡುವವವನು.

೯೩೯. ವ್ಯಾದಿಶಃ—ಇಂದ್ರಾದಿಗಳಿಗೆ ವಿವಿಧ ಆಜ್ಞೆಗಳನ್ನು ಮಾಡುವವನು.

೯೪೦. ದಿಶಃ— ವೇದರೂಪದಿಂದ ಸಮಸ್ತ ಕರ್ಮಗಳಿಗೆ ಫಲಗಳನ್ನು ಕೊಡುವವನು.

೯೪೧. ಅನಾದಿಃ—ಆದಿಯಿಲ್ಲದವನು.

ಭಗವಂತನು ಸರ್ವಕಾರಣನಾದುದರಿಂದ ಅವನಿಗೆ ಕಾರಣವಾದುದು ಬೇರೆ ಯಾವುದೂ ಇಲ್ಲ. ಆದುದರಿಂದ ಅವನು ಅನಾದಿಯು.

೯೪೨. ಭೂರ್ಭುವಃ– ಸಮಸ್ತಭೂತಗಳಿಗೆ ಆಶ್ರಯಸ್ಥಾನವೆಂದು ಪ್ರಸಿದ್ಧಗೊಂಡಿರುವ ಭೂಮಿಗೂ ಆಧಾರವಾಗಿರುವವನು.

೯೪೩. ಲಕ್ಷ್ಮೀಃ—ಭೂಮಿಯ ಶೋಭೆಯಾಗಿರುವವನು.

ಭಗವಂತನು ಭೂಮಿಗೆ ಆಧಾರನು ಮಾತ್ರವಲ್ಲ; ಭೂಮಿಯ ಶೋಭೆಯೂ ಆಗಿರುವನು. ಆದುದರಿಂದ ಅವನಿಗೆ ಲಕ್ಷ್ಮೀ ಎಂದು ಹೆಸರು.

ಅಥವಾ ಭಗವಂತನು ಭೂಮಿಯ ಮತ್ತು ಅಂತರಿಕ್ಷದ ಶೋಭೆಯಾಗಿರುವನಾದುದರಿಂದ ಅವನಿಗೆ ಭೂರ್ಭುವೋ ಲಕ್ಷ್ಮೀ ಎಂದು ಹೆಸರು.

೯೪೪. ಸುವೀರಃ—ಸುಂದರವಾದ ವಿವಿಧ ಗತಿಗಳುಳ್ಳವನು.

೯೪೫. ರುಚಿರಾಂಗದಃ—ಸುಂದರವಾದ ತೋಳ್ಬಂದಿಗಳುಳ್ಳವನು.

೯೪೬. ಜನನ—ಜಂತುಗಳನ್ನು ಹುಟ್ಟಿಸುವವನು.

೯೪೭. ಜನಜನ್ಮಾದಿಃ—ಜೀವಿಗಳ ಉತ್ಪತ್ತಿಗೆ ಮೂಲಕಾರಣನಾಗಿರುವವನು.

೯೪೮. ಭೀಮಃ—ಭಯವನ್ನುಂಟುಮಾಡುವವನು.

೯೪೯. ಭೀಮಪರಾಕ್ರಮಃ—ಅಸುರರಿಗೆ ಭಯವನ್ನು ಹುಟ್ಟಿಸುವಂತಹ ಪರಾಕ್ರಮವುಳ್ಳವನು.

ಅವತಾರಗಳಲ್ಲಿ ಭಗವಂತನ ಪರಾಕ್ರಮವು ಅಸುರಾದಿಗಳ ಭಯಕ್ಕೆ ಕಾರಣವಾಗುವುದು. ಆದುದರಿಂದ ಅವನಿಗೆ ಭೀಮಪರಾಕ್ರಮ ಎಂದು ಹೆಸರು.

೯೫೦. ಆಧಾರನಿಲಯಃ—ಆಧಾರವಸ್ತುಗಳಾದ ಪೃಥಿವೀ ಮೊದಲಾದ ಪಂಚಭೂತಗಳಿಗೂ ಆಧಾರವಾಗಿರುವವನು.

೯೫೧. ಅಧಾತಾ—ತನಗೆ ಅನ್ಯ ಯಾವ ಆಧಾರವೂ ಇಲ್ಲದವನು.

ತನಗೆ ತಾನೇ ಆಧಾರನಾಗಿರುವ ಭಗವಂತನಿಗೆ ಬೇರೆ ಆಧಾರವು ಯಾವುದೂ ಇಲ್ಲವಾದುದರಿಂದ ಅವನು ಅಧಾತಾ ಅಥವಾ,

ಧಾತಾ—ಸಂಹಾರಸಮಯದಲ್ಲಿ ಸರ್ವಪ್ರಜೆಗಳನ್ನು ಪಾನಮಾಡುವವನು.

೯೫೨. ಪುಷ್ಪಹಾಸಃ– ಮೊಗ್ಗುಗಳು, ಹೂವುಗಳಾಗಿ ಅರಳುವಂತೆ ಪ್ರಪಂಚರೂಪದಿಂದ ವಿಕಾಸವನ್ನು ಹೊಂದುವವನು.

೯೫೩. ಪ್ರಜಾಗರಃ—ಯಾವಾಗಲೂ ಎಚ್ಚತ್ತಿರುವವನು.

ಭಗವಂತನು ನಿತ್ಯಪ್ರಬುದ್ಧಸ್ವರೂಪನಾದುದರಿಂದ ಯಾವಾಗಲೂ ಪ್ರಕೃಷ್ಟವಾಗಿ ಎಚ್ಚತ್ತಿರುತ್ತಾನೆ. ಆದುದರಿಂದ ಅವನಿಗೆ ಪ್ರಜಾಗರ ಎಂದು ಹೆಸರು.

೯೫೪. ಊರ್ಧ್ವಗಃ—ಎಲ್ಲರಿಗಿಂತಲೂ ಮೇಲೆ ನಿಂತಿರುವವನು.

೯೫೫. **ಸತ್ಪಥಾಚಾರಃ**—ಸತ್ಪುರುಷರು ಮಾಡುವ ಕರ್ಮಗಳನ್ನು ಆಚರಿಸುವವನು.

೯೫೬. **ಪ್ರಾಣದಃ**—ಮರಣವನ್ನು ಹೊಂದಿದ ಪರೀಕ್ಷಿತನೇ ಮೊದಲಾದವರಿಗೆ ಪ್ರಾಣದಾನವನ್ನು ಮಾಡಿದವನು.

೯೫೭. **ಪ್ರಣವಃ**—ಪ್ರಣವಸ್ವರೂಪನು.

ಪರಮಾತ್ಮನನ್ನು ಸೂಚಿಸುವ ಓಂಕಾರವೇ ಪ್ರಣವವು. ಪರಮಾತ್ಮನಿಗೂ ಓಂಕಾರಕ್ಕೂ ಭೇದವಿಲ್ಲವಾದುದರಿಂದ ಪರಮಾತ್ಮನು ಪ್ರಣವ ಎಂದು ಕರೆಯಲ್ಪಡುತ್ತಾನೆ.

೯೫೮. **ಪಣಃ**—ವ್ಯವಹಾರವನ್ನು ನಿರ್ವಹಿಸುವವನು.

'ಸರ್ವಾಣಿ ರೂಪಾಣಿ ವಿಚಿತ್ಯ ಧೀರೋ ನಾಮಾನಿ ಕೃತ್ವಾಭಿವದನ್ ಯದಾಸ್ತೇ' (ತೈ. ಆ. ೧.೨.೭). 'ಧೀರನು (ಭಗವಂತನು) ಎಲ್ಲ ರೂಪಗಳನ್ನು ಸೃಸಿಷ್ಟಿ ಅವುಗಳಿಗೆ ಹೆಸರುಗಳನ್ನು ಕೊಡುತ್ತ ಇರುತ್ತಾನೆ.'

ಅಥವಾ ಸಮಸ್ತ ಪುಣ್ಯಕರ್ಮಗಳನ್ನು ಸಂಗ್ರಹಿಸಿ ಕರ್ಮಾಧಿಕಾರಿಗಳಿಗೆ ಅವುಗಳ ಫಲವನ್ನು ಕೊಡುವವನು.

೯೫೯. **ಪ್ರಮಾಣಮ್**—ಸ್ವಯಂಪ್ರಮಾಸ್ವರೂಪನು.

ಪ್ರಮಾಣ ಎಂದರೆ ಜ್ಞಾನ, ಸ್ವಯಂಪ್ರಮಾ. ಭಗವಂತನು ಸ್ವಯಂಪ್ರಮಾಸ್ವರೂಪನಾದುದರಿಂದ ಅವನಿಗೆ ಪ್ರಮಾಣ ಎಂದು ಹೆಸರು.

'ಪ್ರಜ್ಞಾನಂ ಬ್ರಹ್ಮ' 'ಬ್ರಹ್ಮವು ಪ್ರಜ್ಞಾನವು' (ಐ.ಉ. ೩.೧.೩).

೯೬೦. **ಪ್ರಾಣನಿಲಯಃ**— ಜೀವರಿಗೆ ಆಶ್ರಯವಾಗಿರುವವನು.

ಜೀವಿಸುವವನಾದುದರಿಂದ ಜೀವನಿಗೆ ಪ್ರಾಣ ಎಂದು ಹೆಸರು. ಜೀವನು ಪರಮಪುರುಷನಾದ ಭಗವಂತನಲ್ಲಿ ಲೀನನಾಗುತ್ತಾನೆ. ಆದುದರಿಂದ ಭಗವಂತನಿಗೆ ಪ್ರಾಣನಿಲಯ ಎಂದು ಹೆಸರು. ಅಥವಾ ಭಗವಂತನು ಪ್ರಾಣಗಳನ್ನೂ ಜೀವರನ್ನೂ ಸಂಹರಿಸುವವನಾದುದರಿಂದ ಅವನಿಗೆ ಪ್ರಾಣನಿಲಯ ಎಂದು ಹೆಸರು.

೯೬೧. **ಪ್ರಾಣಭೃತ್**— ಪ್ರಾಣಗಳನ್ನು ಅನ್ನರೂಪದಿಂದ ಪೋಷಿಸುವವನು.

೯೬೨. **ಪ್ರಾಣಜೀವನಃ**—ಪ್ರಾಣಗಳೆಂಬ ವಾಯುಗಳಿಂದ ಪ್ರಾಣಿಗಳನ್ನು ಜೀವಿಸುವಂತೆ ಮಾಡುವವನು.

'ನ ಪ್ರಾಣೇನ ನಾಪಾನೇನ ... ಯಸ್ಮಿನ್ನೇತಾವುಪಾಶ್ರಿತೌ' ಯಾವ ಮನುಷ್ಯನೂ ಪ್ರಾಣದಿಂದಾಗಲಿ ಅಪಾನದಿಂದಾಗಲಿ ಜೀವಿಸುವುದಿಲ್ಲ. ಯಾವನಲ್ಲಿ

ಈ ಪ್ರಾಣ-ಅಪಾನಗಳು ಆಶ್ರಿತವಾಗಿರುವುವೋ ಆ ಇನ್ನೊಬ್ಬನಿಂದಲೇ (ಆತ್ಮನಿಂದಲೆ) ಮನುಷ್ಯರು ಜೀವಿಸುತ್ತಾರೆ' (ಕ. ಉ. ೨. ೨. ೫).

೯೬೩. ತತ್ತ್ವಮ್—ಸತ್‌ಸ್ವರೂಪನು.

ತತ್ತ್ವ ತಥ್ಯ ಅಮೃತ ಸತ್ಯ ಮತ್ತು ಪರಮಾರ್ಥಃ ಸತತ್ತ್ವ—ಎಂಬ ಈ ಏಕಾರ್ಥವುಳ್ಳ ಪದಗಳೆಲ್ಲ ವಾಸ್ತವಿಕವಾಗಿ ಸತ್ ಆಗಿರುವ ಬ್ರಹ್ಮದ ವಾಚಕಗಳು. ಆದುದರಿಂದ ಭಗವಂತನಿಗೆ ತತ್ತ್ವ ಎಂದು ಹೆಸರು.

೯೬೪. ತತ್ತ್ವವಿತ್—ತನ್ನ ಸ್ವರೂಪವನ್ನು ಯಥಾವತ್ತಾಗಿ ತಿಳಿದವನು.

೯೬೫. ಏಕಾತ್ಮಾ— ಏಕನೂ ಆತ್ಮನೂ ಆಗಿರುವವನು.

'ಆತ್ಮಾ ವಾ ಇದಮೇಕ ಏವಾಗ್ರ ಆಸೀತ್' 'ಮೊದಲು ಈ ಆತ್ಮ ಒಬ್ಬನೇ ಇದ್ದನು' (ಐ. ಉ. ೧. ೧). 'ಯಚ್ಚಾಪ್ನೋತಿ ಯದಾದತ್ತೇ...ತಸ್ಮಾದಾತ್ಮೇತಿ ಗೀಯತೇ' 'ಯಾವುದು ಇಲ್ಲಿ ವಿಷಯಗಳನ್ನು ಹೊಂದುತ್ತದೋ ಗ್ರಹಣಮಾಡುತ್ತದೋ ಮತ್ತು ತಿನ್ನುತ್ತದೋ ಮತ್ತು ಯಾವುದು ಸತತವಾಗಿ ಇರುತ್ತದೋ ಅದು ಆತ್ಮವೆಂದು ಕರೆಯಲ್ಪಡುತ್ತದೆ.' (ಸ್ಮೃತಿ).

೯೬೬. ಜನ್ಮಮೃತ್ಯುಜರಾತಿಗಃ–ಜನ್ಮಮೃತ್ಯುಜರೆಗಳಿಗೆ ಅತೀತನಾಗಿರುವವನು.

ಹುಟ್ಟುವುದು ಇರುವುದು ಬೆಳೆಯುವುದು ಬದಲಾವಣೆ ಹೊಂದುವುದು ಕ್ಷೀಣವಾಗುವುದು ಮತ್ತು ನಾಶಹೊಂದುವುದು—ಈ ಷಡ್ಭಾವವಿಕಾರಗಳಿಗೆ ಭಗವಂತನು ಅತೀತನಾಗಿರುವನು. ಆದುದರಿಂದ ಅವನಿಗೆ ಜನ್ಮಮೃತ್ಯುಜರಾತಿಗ ಎಂದು ಹೆಸರು.

'ನ ಜಾಯತೇ ಮ್ರಿಯತೇ ವಾ ವಿಪಶ್ಚಿತ್' 'ಮೇಧಾವಿಯು (ಆತ್ಮನು) ಹುಟ್ಟುವುದಿಲ್ಲ, ಸಾಯುವುದೂ ಇಲ್ಲ' (ಕ. ಉ. ೧. ೨. ೧೮).

೯೬೭. ಭೂರ್ಭುವಸ್ಸ್ವಸ್ತರುಃ— ಭೂರ್ಭುವಸ್ಸ್ವಃ ಎಂಬ ಲೋಕತ್ರಯವನ್ನು ವೃಕ್ಷದಂತೆ ವ್ಯಾಪಿಸಿ ನಿಂತಿರುವವನು.

೬೬೮. ತಾರಃ —ಸಂಸಾರಸಾಗರವನ್ನು ದಾಟಿಸುವವನು.

೯೬೯. ಸವಿತಾ—ಇಡೀ ಲೋಕಕ್ಕೆ ಜನಕನಾಗಿರುವವನು.

೯೭೦. ಪ್ರಪಿತಾಮಹಃ—ಪಿತಾಮಹನಾದ ಬ್ರಹ್ಮನಿಗೂ ಪಿತನಾಗಿರುವವನು.

೯೭೧. ಯಜ್ಞಃ—ಯಜ್ಞರೂಪನು.

೯೭೨. ಯಜ್ಞಪತಿಃ—ಯಜ್ಞಗಳ ಪಾಲಕ ಅಥವಾ ಸ್ವಾಮಿ.

'ಅಹಂ ಹಿ ಸರ್ವಯಜ್ಞಾನಾಂ ಭೋಕ್ತಾ ಚ ಪ್ರಭುರೇವ ಚ' 'ಸರ್ವ ಯಜ್ಞಗಳ ಭೋಕ್ತೃವೂ ಪ್ರಭೂವೂ ನಾನೇ' (ಗೀತಾ. ೯.೨೪).

೯೭೩. ಯಜ್ವಾ—ಯಜ್ಞಗಳನ್ನು ಮಾಡುವ ಯಜಮಾನನು.

ಯಜ್ಞಗಳನ್ನು ಮಾಡುವ ಯಜಮಾನನು ಕೂಡ ಭಗವಂತನೇ ಆಗಿರುವ ನಾದುದರಿಂದ ಭಗವಂತನಿಗೆ ಯಜ್ವಾ ಎಂದು ಹೆಸರು.

೯೭೪. ಯಜ್ಞಾಂಗಃ—ಯಜ್ಞಗಳು ತನ್ನ ಅಂಗಗಳಾಗಿರುವವನು.

ಯಜ್ಞಗಳು ವರಾಹಮೂರ್ತಿಯಾದ ಭಗವಂತನ ಅಂಗಗಳು. ಆದುದರಿಂದ ಭಗವಂತನಿಗೆ ಯಜ್ಞಾಂಗ ಎಂದು ಹೆಸರು.

೯೭೫. ಯಜ್ಞವಾಹನಃ–ಫಲೋತ್ಪತ್ತಿಗೆ ಕಾರಣವಾಗುವ ಯಜ್ಞಗಳನ್ನು ನೆರವೇರಿಸುವವನು.

೯೭೬. ಯಜ್ಞಭೃತ್—ಯಜ್ಞವನ್ನು ಧಾರಣಮಾಡುವವನು.

ಅಥವಾ ಯಜ್ಞವನ್ನು ಪಾಲಿಸುವವನು.

೯೭೭. ಯಜ್ಞಕೃತ್–ಜಗದಾದಿಯಲ್ಲಿಯೂ ಜಗದಂತ್ಯದಲ್ಲಿಯೂ ಯಜ್ಞವನ್ನು ಮಾಡುವವನು.

ಅಥವಾ ಯಜ್ಞವನ್ನು ನಾಶಮಾಡುವವನು.

೯೭೮. ಯಜ್ಞೀ—ಯಜ್ಞಗಳ ಶೇಷಿಯಾಗಿರುವವನು.

ಭಗವಂತನ ಆರಾಧನಾರೂಪವಾದ ಯಜ್ಞಗಳು ಅವನ ಶೇಷಗಳಾಗಿರುವುವು. ಅಂದರೆ ಅಂಶಗಳಾಗಿರುವುವು. ಆದುದರಿಂದ ಭಗವಂತನು ಅವುಗಳ ಶೇಷಿಯಾಗಿರುವನು.

೯೭೯. ಯಜ್ಞಭುಕ್—ಯಜ್ಞಗಳನ್ನು ಭೋಗಿಸುವವನು.

೯೮೦. ಯಜ್ಞಸಾಧನಃ—ತನ್ನ ಪ್ರಾಪ್ತಿಗೆ ಯಜ್ಞಗಳು ಸಾಧನವಾಗಿರುವವನು.

ಭಗವತ್ಪ್ರಾಪ್ತಿಗೆ ಯಜ್ಞಗಳು ಸಾಧನವಾಗಿರುವುವು. ಆದುದರಿಂದ ಭಗವಂತನಿಗೆ ಯಜ್ಞಸಾಧನ ಎಂದು ಹೆಸರು.

೯೮೧. ಯಜ್ಞಾಂತಕೃತ್ — ಯಜ್ಞಗಳ ಫಲಪ್ರಾಪ್ತಿಯನ್ನುಂಟುಮಾಡುವವನು.

೯೮೨. ಯಜ್ಞಗುಹ್ಯಮ್— ಯಜ್ಞಗಳ ರಹಸ್ಯವಾಗಿರುವವನು.

ಜ್ಞಾನಯಜ್ಞವೇ ಅಥವಾ ಫಲಾಭಿಸಂಧಿರಹಿತವಾದ ಯಜ್ಞವೇ ಯಜ್ಞಗಳ ಗುಹ್ಯವು ಎಂದರೆ ಯಜ್ಞಗಳ ರಹಸ್ಯವು, ಇಂತಹ ಯಜ್ಞಗಳ ರಹಸ್ಯಕ್ಕೂ ಬ್ರಹ್ಮಕ್ಕೂ ಭೇದವಿಲ್ಲವಾದುದರಿಂದ ಬ್ರಹ್ಮಕ್ಕೆ ಯಜ್ಞಗುಹ್ಯ ಎಂದು ಹೆಸರು.

೯೮೩. ಅನ್ನಮ್—ಭೂತಗಳಿಂದ (ಆಹಾರರೂಪದಲ್ಲಿ) ಭಕ್ಷಿಸಲ್ಪಡುವವನು ಮತ್ತು ಭೂತಗಳನ್ನು ಭಕ್ಷಿಸುವವನು.

೯೮೪. ಅನ್ನಾದಃ— ಅನ್ನವನ್ನು ತಿನ್ನುವವನು.

ಇಡೀ ಜಗತ್ತು ಭಗವಂತನ ಅನ್ನರೂಪವಾಗಿದೆ.

೯೮೫. ಆತ್ಮಯೋನಿಃ—ತಾನೇ ಜಗತ್ತಿನ ಉಪಾದಾನಕಾರಣವಾಗಿರುವವನು.

ಆತ್ಮನೇ (ಜಗತ್ತಿನ) ಯೋನಿಯು ಎಂದರೆ ಉಪಾದಾನಕಾರಣವು. ಬೇರೆ ಯಾರೂ ಅಲ್ಲ. ಆದುದರಿಂದ ಭಗವಂತನಿಗೆ ಆತ್ಮಯೋನಿ ಎಂದು ಹೆಸರು.

೯೮೬. ಸ್ವಯಂಜಾತಃ—ತಾನೇ ಜಗತ್ತಿನ ನಿಮಿತ್ತಕಾರಣವೂ ಆಗಿರುವವನು.

೯೮೭. ವೈಖಾನಃ—ವಿಶೇಷವಾಗಿ (ಭೂಮಿಯನ್ನು) ಅಗೆದವನು.

ಭಗವಂತನು ವರಾಹರೂಪವನ್ನು ಧರಿಸಿ ಭೂಮಿಯನ್ನು ವಿಶೇಷವಾಗಿ ಅಗೆದು ಪಾತಾಲವಾಸಿಯಾದ ಹಿರಣ್ಯಾಕ್ಷನನ್ನು ಕೊಂದನೆಂದು ಪುರಾಣದಲ್ಲಿ ಪ್ರಸಿದ್ಧವಾಗಿದೆ.

೯೮೮. ಸಾಮಗಾಯನಃ—ಸಾಮಗಳನ್ನು ಹಾಡುವವನು.

೯೮೯. ದೇವಕೀನಂದನಃ—ದೇವಕಿಯ ಮಗನಾಗಿ ಹುಟ್ಟಿದವನು.

'ಜಗತ್ತಿನಲ್ಲಿರುವ ಶುಭ್ರವಾದ ಎಲ್ಲ ಜ್ಯೋತಿಗಳು, ಮೂರು ಲೋಕಗಳು ಮೂವರು ಲೋಕಪಾಲಕರು, ಮೂರು ಅಗ್ನಿಗಳು, ಪಂಚ ಆಹುತಿಗಳು ಮತ್ತು ಸಮಸ್ತ ದೇವತೆಗಳು—ಇವೆಲ್ಲವೂ ದೇವಕೀಪುತ್ರನೇ ಆಗಿರುವನು' (ಮಹಾ).

೯೯೦. ಸ್ರಷ್ಟಾ—ಸಕಲ ಲೋಕಗಳನ್ನು ಸೃಷ್ಟಿಸಿದನು.

೯೯೧. ಕ್ಷಿತೀಶಃ— ದಶರಥಾತ್ಮಜನಾದ ಶ್ರೀರಾಮನಾಗಿ ಭೂಮಿಗೆ ಸ್ವಾಮಿಯಾದವನು.

೯೯೨. ಪಾಪನಾಶನಃ— ಪಾಪಗಳನ್ನು ನಾಶಮಾಡುವವನು.

ಭಗವಂತನನ್ನು ಸ್ತುತಿಸಿದರೆ ಪೂಜಿಸಿದರೆ ಧ್ಯಾನಿಸಿದರೆ ಮತ್ತು ಸ್ಮರಿಸಿದರೆ ಅವನು ಪಾಪರಾಶಿಯನ್ನು ನಾಶಮಾಡುತ್ತಾನೆ. ಆದುದರಿಂದ ಅವನಿಗೆ ಪಾಪನಾಶನ ಎಂದು ಹೆಸರು.

'ಪ್ರಾಣಾಯಾಮಸಹಸ್ರೇಣ ಯತ್ ಪಾಪಂ ನಶ್ಯತೇ ನೃಣಾಮ್ ।
ಕ್ಷಣಮಾತ್ರೇಣ ತತ್ ಪಾಪಂ ಹರೇರ್ಧ್ಯಾನಾತ್ ಪ್ರಣಶ್ಯತಿ ॥'

'ಸಹಸ್ರ ಪ್ರಾಣಾಯಾಮಗಳಿಂದ ಮನುಷ್ಯರ ಯಾವ ಪಾಪವು ನಾಶವಾಗುತ್ತದೋ, ಆ ಪಾಪವು ಶ್ರೀಹರಿಯ ಧ್ಯಾನದಿಂದ ಕ್ಷಣಮಾತ್ರದಲ್ಲಿಯೇ ನಾಶವಾಗುತ್ತದೆ' (ವೃದ್ಧ ಶಾತಾತಪ).

೯೯೩. ಶಂಖಭೃತ್—ಭೂತಾಹಂಕಾರಾತ್ಮಕವಾದ ಪಾಂಚಜನ್ಯವೆಂಬ ಹೆಸರಿನ ಶಂಖವನ್ನು ಹಿಡಿದಿರುವವನು.

೯೯೪. ನಂದಕೀ— ವಿದ್ಯಾಮಯವಾದ ನಂದಕ ಎಂಬ ಖಡ್ಗವುಳ್ಳವನು.

೯೯೫. ಚಕ್ರೀ—ಚಕ್ರವನ್ನು ಧರಿಸಿದವನು.

ಭಗವಂತನು ಮನಸ್ತತ್ತ್ವಾತ್ಮಕವಾದ ಸುದರ್ಶನ ಎಂಬ ಚಕ್ರವನ್ನು ಧರಿಸಿದವನಾದುದರಿಂದ ಚಕ್ರಿ. ಅಥವಾ ಸಂಸಾರಚಕ್ರವು ಭಗವಂತನ ಆಜ್ಞೆಯಿಂದ ತಿರುಗುತ್ತಿರುವುದಾದುದರಿಂದ ಭಗವಂತನಿಗೆ ಚಕ್ರಿ ಎಂದು ಹೆಸರು.

೯೯೬. ಶಾರ್ಂಗಧನ್ವಾ— ಇಂದ್ರಿಯಾದಿ ಅಹಂಕಾರಾತ್ಮಕವಾದ ಶಾರ್ಂಗ ಎಂಬ ಹೆಸರಿನ ಧನುಸ್ಸುಳ್ಳವನು.

೯೯೭. ಗದಾಧರಃ—ಬುದ್ಧಿತತ್ತ್ವಾತ್ಮಕವಾದ ಕೌಮೋದಕೀ ಎಂಬ ಹೆಸರಿನ ಗದೆಯನ್ನು ಧರಿಸಿದವನು.

೯೯೮. ರಥಾಂಗಪಾಣಿಃ—ರಥಾಂಗವಾದ ಚಕ್ರವನ್ನು ಕೈಯಲ್ಲಿ ಧರಿಸಿದವನು.

೯೯೯. ಅಕ್ಷೋಭ್ಯಃ—ಕ್ಷೋಭೆಯನ್ನು ಹೊಂದದೆ ಇರುವವನು.

ಹೀಗೆ ಭಗವಂತನು ಅನೇಕ ಶಸ್ತ್ರಗಳನ್ನು ಧರಿಸಿರುವವನಾದುದರಿಂದ ಅವನಲ್ಲಿ ಕ್ಷೋಭೆಯನ್ನುಂಟುಮಾಡುವುದು ಅವಶ್ಯಕವು; ಆದುದರಿಂದ ಅವನು ಅಕ್ಷೋಭ್ಯನು.

೧೦೦೦. ಸರ್ವಪ್ರಹರಣಾಯುಧಃ–ಪ್ರಹಾರಮಾಡಲು ಯೋಗ್ಯವಾಗಿರುವ ಸಮಸ್ತ ಆಯುಧಗಳೂ ಇರುವವನು.

ಕೇವಲ ಮೇಲೆ ಹೇಳಿರುವವುಗಳು ಮಾತ್ರ ಭಗವಂತನಿಗೆ ಇರುವ ಆಯುಧಗಳು ಎಂಬ ನಿಯಮವಿಲ್ಲ. ಪ್ರಹಾರಮಾಡುವ ಸಮಸ್ತ ಆಯುಧಗಳೂ ಭಗವಂತನಿಗೆ ಇವೆ. ಆದುದರಿಂದ ಭಗವಂತನು ಸರ್ವಪ್ರಹರಣಾಯುಧನು. ಆಯುಧಗಳೆಂದು ಪ್ರಸಿದ್ಧವಾಗದೇ ಇರುವ ಕೈಬೆರಳುಗಳ ಉಗುರುಗಳು ಕೂಡ ಭಗವಂತನಿಗೆ ಆಯುಧಗಳಾಗುತ್ತವೆ.

ಭಗವಂತನು ಸತ್ಯಸಂಕಲ್ಪನಾದುದರಿಂದ ಸರ್ವೇಶ್ವರನು ಎಂಬುದನ್ನು ತೋರಿಸುವುದಕ್ಕಾಗಿ ಅಂತ್ಯದಲ್ಲಿ ಸರ್ವಪ್ರಹರಣಾಯುಧ ಎಂದು ಹೇಳಿದೆ.

ಫಲಶ್ರುತಿಃ

ಭೀಷ್ಮನು ಹೇಳಿದನು—

ಇತೀದಂ ಕೀರ್ತನೀಯಸ್ಯ ಕೇಶವಸ್ಯ ಮಹಾತ್ಮನಃ ।
ನಾಮ್ನಾಂ ಸಹಸ್ರಂ ದಿವ್ಯನಾಮಶೇಷೇಣ ಪ್ರಕೀರ್ತಿತಮ್ ॥೧॥

ಹೀಗೆ ಮಹಾತ್ಮನಾದ ಮತ್ತು ಕೀರ್ತನೀಯನಾದ ಕೇಶವನ ದಿವ್ಯ ಸಹಸ್ರನಾಮವು ಅನತಿರಿಕ್ತವಾಗಿ ಮತ್ತು ಅಶೇಷವಾಗಿ ಹಾಡಲ್ಪಟ್ಟದೆ.

ಯ ಇದಂ ಶೃಣುಯಾನ್ನಿತ್ಯಂ ಯಶ್ಚಾಪಿ ಪರಿಕೀರ್ತಯೇತ್ ।
ನಾಶುಭಂ ಪ್ರಾಪ್ನುಯಾತ್ ಕಿಂಚಿತ್ ಸೋಽಮುತ್ರೇಹ ಚ ಮಾನವಃ ॥೨॥

ಯಾವನು ಈ ವಿಷ್ಣುಸಹಸ್ರನಾಮವನ್ನು ನಿತ್ಯವೂ ಕೇಳುತ್ತಾನೋ ಮತ್ತು ಯಾವನು ಕೂಡ ಇದನ್ನು ಪಠನಮಾಡುತ್ತಾನೋ, ಆ ಮಾನವನು ಇಹದಲ್ಲಿಯೂ ಪರದಲ್ಲಿಯೂ (ಪರಲೋಕವನ್ನು ಹೊಂದಿದ ಮೇಲೂ ಅಶುಭವನ್ನು ಪಡೆದ ಯಯಾತಿ ನಹುಷ ಮೊದಲಾದವರ ಹಾಗೆ) ಅಶುಭವನ್ನು ಹೊಂದುವುದಿಲ್ಲ.

ವೇದಾಂತಗೋ ಬ್ರಾಹ್ಮಣಃ ಸ್ಯಾತ್ ಕ್ಷತ್ರಿಯೋ ವಿಜಯೀ ಭವೇತ್ ।
ವೈಶ್ಯೋ ಧನಸಮೃದ್ಧಃ ಸ್ಯಾಚ್ಛೂದ್ರಃ ಸುಖಮವಾಪ್ನುಯಾತ್ ॥೩॥

(ಈ ವಿಷ್ಣುಸಹಸ್ರನಾಮವನ್ನು ನಿತ್ಯವು ಪಠನಮಾಡುವ) ಬ್ರಾಹ್ಮಣನು ಉಪನಿಷತ್ತುಗಳ ಅರ್ಥವನ್ನು ಎಂದರೆ ಬ್ರಹ್ಮವನ್ನು ತಿಳಿಯುತ್ತಾನೆ, ಕ್ಷತ್ರಿಯನು ವಿಜಯಿಯಾಗುತ್ತಾನೆ, ವೈಶ್ಯನು ಧನಸಮೃದ್ಧನಾಗುತ್ತಾನೆ ಮತ್ತು (ಈ ವಿಷ್ಣುಸಹಸ್ರನಾಮವನ್ನು ನಿತ್ಯವೂ ಶ್ರವಣಮಾಡುವ) ಶೂದ್ರನು ಸುಖವನ್ನು ಹೊಂದುತ್ತಾನೆ.

ಧರ್ಮಾರ್ಥೀ ಪ್ರಾಪ್ನುಯಾದ್ ಧರ್ಮಮರ್ಥಾರ್ಥೀ ಚಾರ್ಥಮಾಪ್ನುಯಾತ್ ।
ಕಾಮಾನವಾಪ್ನುಯಾತ್ ಕಾಮೀ ಪ್ರಜಾರ್ಥೀ ಚಾಪ್ನುಯಾತ್ ಪ್ರಜಾಮ್ ॥೪॥

(ಈ ವಿಷ್ಣುಸಹಸ್ರನಾಮವನ್ನು ನಿತ್ಯವೂ ಪಠನಮಾಡಿ) ಧರ್ಮಾರ್ಥಿಯು (ಧರ್ಮವನ್ನು ಬಯಸುವವನು) ಧರ್ಮವನ್ನು ಹೊಂದುತ್ತಾನೆ; ಅರ್ಥಾರ್ಥಿಯು (ಧನವನ್ನು ಇಚ್ಛಿಸುವವನು) ಧನವನ್ನು ಹೊಂದುತ್ತಾನೆ; ಕಾಮಿಯು ತನ್ನ ಕಾಮಗಳನ್ನು ಹೊಂದುತ್ತಾನೆ ಮತ್ತು ಪ್ರಜಾರ್ಥಿಯು (ಸಂತತಿಯನ್ನು ಬಯಸುವವನು) ಸಂತತಿಯನ್ನು ಹೊಂದುತ್ತಾನೆ.

ಭಕ್ತಿಮಾನ್ ಯಃ ಸದೋತ್ಥಾಯ ಶುಚಿಸ್ತದ್ಗತಮಾನಸಃ ।
ಸಹಸ್ರಂ ವಾಸುದೇವಸ್ಯ ನಾಮ್ನಾಮೇತತ್ ಪ್ರಕೀರ್ತಯೇತ್ ॥೫॥

ಯಶಃ ಪ್ರಾಪ್ನೋತಿ ವಿಪುಲಂ ಜ್ಞಾತಿಪ್ರಾಧಾನ್ಯಮೇವ ಚ ।
ಅಚಲಾಂ ಶ್ರಿಯಮಾಪ್ನೋತಿ ಶ್ರೇಯಃ ಪ್ರಾಪ್ನೋತ್ಯನುತ್ತಮಮ್ ॥೬॥

ನ ಭಯಂ ಕ್ವಚಿದಾಪ್ನೋತಿ ವೀರ್ಯಂ ತೇಜಶ್ಚ ವಿಂದತಿ ।
ಭವತ್ಯರೋಗೋ ದ್ಯುತಿಮಾನ್ ಬಲರೂಪಗುಣಾನ್ವಿತಃ ॥೭॥

ಭಕ್ತಿವಂತನೂ ಪರಿಶುದ್ಧನೂ ಆದ ಯಾವನು ಯಾವಾಗಲೂ ಎದ್ದು ವಾಸುದೇವನಲ್ಲಿ ನೆಲೆಗೊಂಡ ಮನಸ್ಸುಳ್ಳವನಾಗಿ ವಾಸುದೇವನ ಈ ಸಹಸ್ರನಾಮವನ್ನು ಪಠನಮಾಡುತ್ತಾನೋ, ಅವನು ವಿಪುಲವಾದ ಯಶಸ್ಸನ್ನೂ ತನ್ನ ಬಂಧುಗಳಲ್ಲಿ ಪ್ರಾಧಾನ್ಯವನ್ನೂ ಹೊಂದುತ್ತಾನೆ; ಅಚಲವಾದ ಸಂಪತ್ತನ್ನು (ಶ್ರೀಯನ್ನು) ಹೊಂದುತ್ತಾನೆ; ಸರ್ವೋತ್ತಮವಾದ ಶ್ರೇಯಸ್ಸನ್ನು ಪಡೆಯುತ್ತಾನೆ; ಎಲ್ಲಿಯೂ ಭಯವನ್ನು ಹೊಂದುವುದಿಲ್ಲ; ವೀರ್ಯವನ್ನೂ ತೇಜಸ್ಸನ್ನೂ ಪಡೆಯುತ್ತಾನೆ; ರೋಗರಹಿತನೂ ಕಾಂತಿಯುಳ್ಳವನೂ ಮತ್ತು ಬಲರೂಪಗುಣಗಳಿಂದ ಕೂಡಿದವನೂ ಆಗುತ್ತಾನೆ.

ರೋಗಾರ್ತೋ ಮುಚ್ಯತೇ ರೋಗಾತ್ ಬದ್ಧೋ ಮುಚ್ಯೇತ ಬಂಧನಾತ್ ।
ಭಯಾನ್ಮುಚ್ಯೇತ ಭೀತಸ್ತು ಮುಚ್ಯೇತಾಪನ್ನ ಆಪದಃ ॥೮॥

ರೋಗಿಯು ರೋಗದಿಂದ ಮುಕ್ತನಾಗುತ್ತಾನೆ: ಬದ್ಧನು ಬಂಧನದಿಂದ ಮುಕ್ತನಾಗುವನು; ಭಯಗ್ರಸ್ತನು ಭಯದಿಂದ ಮುಕ್ತನಾಗುವನು; ಆಪತ್ತಿನಲ್ಲಿರುವವನು ಆಪತ್ತಿನಿಂದ ಮುಕ್ತನಾಗುವನು.

ದುರ್ಗಾಣ್ಯತಿತರತ್ಯಾಶು ಪುರುಷಃ ಪುರುಷೋತ್ತಮಮ್ ।
ಸ್ತುವನ್ನಾಮಸಹಸ್ರೇಣ ನಿತ್ಯಂ ಭಕ್ತಿಸಮನ್ವಿತಃ ॥೯॥

ಭಕ್ತಿಯಿಂದ ಕೂಡಿ ನಿತ್ಯವೂ ಪುರುಷೋತ್ತಮನನ್ನು ಸಹಸ್ರನಾಮದಿಂದ ಸ್ತುತಿಸಿದರೆ ಮನುಷ್ಯನು ಬಹುಬೇಗನೆ ಕಷ್ಟಗಳನ್ನು ದಾಟಿಹೋಗುತ್ತಾನೆ.

ವಾಸುದೇವಾಶ್ರಯೋ ಮರ್ತ್ಯೋ ವಾಸುದೇವಪರಾಯಣಃ ।
ಸರ್ವಪಾಪವಿಶುದ್ಧಾತ್ಮಾ ಯಾತಿ ಬ್ರಹ್ಮ ಸನಾತನಮ್ ॥೧೦॥

ವಾಸುದೇವನಲ್ಲಿಯೇ ಆಶ್ರಯವನ್ನು ಹೊಂದಿದವನೂ ವಾಸುದೇವ ಪರಾಯಣನೂ ಆದ ಮನುಷ್ಯನು ಸರ್ವಪಾಪಗಳಿಂದ ಮುಕ್ತವಾದ ಮನಸ್ಸುಳ್ಳವನಾಗಿ ಸನಾತನಬ್ರಹ್ಮವನ್ನು ಹೊಂದುತ್ತಾನೆ.

ನ ವಾಸುದೇವಭಕ್ತಾನಾಮಶುಭಂ ವಿದ್ಯತೇ ಕ್ವಚಿತ್ ।
ಜನ್ಮಮೃತ್ಯುಜರಾವ್ಯಾಧಿಭಯಂ ನೈವೋಪಜಾಯತೇ ॥೧೧॥

ವಾಸುದೇವನ ಭಕ್ತರಿಗೆ ಎಲ್ಲಿಂದಲೂ ಅಶುಭವಿಲ್ಲ; ಜನ್ಮಮೃತ್ಯು ಜರಾವ್ಯಾಧಿಗಳ ಭಯವೂ ಹುಟ್ಟುವುದಿಲ್ಲ.

ಇಮಂ ಸ್ತವಮಧೀಯಾನಃ ಶ್ರದ್ಧಾಭಕ್ತಿಸಮನ್ವಿತಃ ।
ಯುಜ್ಯೇತಾತ್ಮಸುಖಕ್ಷಾಂತಿಶ್ರೀಧೃತಿಸ್ಮೃತಿಕೀರ್ತಿಭಿಃ ॥೧೨॥

ಈ ಸ್ತೋತ್ರವನ್ನು ಶ್ರದ್ಧಾಭಕ್ತಿಗಳಿಂದ ಕೂಡಿ ಪಠನಮಾಡುವವನು ಆತ್ಮಸುಖ ಕ್ಷಮೆ ಶ್ರೀ (ಸಂಪತ್ತು) ಧೈರ್ಯ ಸ್ಮೃತಿ ಮತ್ತು ಕೀರ್ತಿ—ಇವುಗಳಿಂದ ಯುಕ್ತನಾಗುತ್ತಾನೆ.

ನ ಕ್ರೋಧೋ ನ ಚ ಮಾತ್ಸರ್ಯಂ ನ ಲೋಭೋ ನಾಶುಭಾ ಮತಿಃ ।
ಭವಂತಿ ಕೃತಪುಣ್ಯಾನಾಂ ಭಕ್ತಾನಾಂ ಪುರುಷೋತ್ತಮೇ ॥೧೩॥

ಕೃತಪುಣ್ಯರಾದ (ಪುಣ್ಯಕರ್ಮಗಳನ್ನು ಮಾಡಿದವರಾದ) ಪುರುಷೋತ್ತಮನ ಭಕ್ತರಿಗೆ ಕ್ರೋಧ ಮಾತ್ಸರ್ಯ ಲೋಭ ಮತ್ತು ಅಶುಭವಾದ ಬುದ್ಧಿ—ಇವುಗಳು ಇರುವುದಿಲ್ಲ.

ದ್ಯೌಃ ಸಚಂದ್ರಾರ್ಕನಕ್ಷತ್ರಾ ಖಂ ದಿಶೋ ಭೂರ್ಮಹೋದಧಿಃ ।
ವಾಸುದೇವಸ್ಯ ವೀರ್ಯೇಣ ವಿಧೃತಾನಿ ಮಹಾತ್ಮನಃ ॥೧೪॥

ಚಂದ್ರಸೂರ್ಯನಕ್ಷತ್ರಗಳ ಸಮೇತವಾಗಿ ಸ್ವರ್ಗಲೋಕ ಆಕಾಶ ದಿಕ್ಕುಗಳು ಭೂಮಿ ಮತ್ತು ಸಮುದ್ರ—ಇವುಗಳು ಮಹಾತ್ಮನಾದ ವಾಸುದೇವನ ವೀರ್ಯದಿಂದ ಧಾರಣಮಾಡಲ್ಪಟ್ಟಿವೆ.

ಸಸುರಾಸುರಗಂಧರ್ವಂ ಸಯಕ್ಷೋರಗರಾಕ್ಷಸಮ್ ।
ಜಗದ್ ವಶೇ ವರ್ತತೇದಂ ಕೃಷ್ಣಸ್ಯ ಸಚರಾಚರಮ್ ॥೧೫॥

ಸುರರು ಅಸುರರು ಗಂಧರ್ವರು ಯಕ್ಷರು ಉರಗರು ಮತ್ತು ರಾಕ್ಷಸರು —ಇವರ ಸಮೇತವಾಗಿ ಈ ಚರಾಚರ ಜಗತ್ತು ಕೃಷ್ಣನ ವಶದಲ್ಲಿದೆ.

ಇಂದ್ರಿಯಾಣಿ ಮನೋ ಬುದ್ಧಿಃ ಸತ್ತ್ವಂ ತೇಜೋ ಬಲಂ ಧೃತಿಃ ।
ವಾಸುದೇವಾತ್ಮಕಾನ್ಯಾಹುಃ ಕ್ಷೇತ್ರಂ ಕ್ಷೇತ್ರಜ್ಞ ಏವ ಚ ॥೧೬॥

ಇಂದ್ರಿಯಗಳು ಮನಸ್ಸು ಬುದ್ಧಿ ಸತ್ತ್ವ ತೇಜಸ್ಸು ಬಲ ಧೃತಿ ಕ್ಷೇತ್ರ ಮತ್ತು ಕ್ಷೇತ್ರಜ್ಞ — ಇವೆಲ್ಲವೂ ವಾಸುದೇವಾತ್ಮಕವಾದುವುಗಳೆಂದು ಹೇಳುತ್ತಾರೆ.

ಸರ್ವಾಗಮಾನಾಮಾಚಾರಃ ಪ್ರಥಮಃ ಪರಿಕಲ್ಪತೇ ।
ಆಚಾರಪ್ರಭವೋ ಧರ್ಮೋ ಧರ್ಮಸ್ಯ ಪ್ರಭುರಚ್ಯುತಃ ॥೧೭॥

ಸಮಸ್ತ ಶಾಸ್ತ್ರಗಳಲ್ಲಿ ಆಚಾರವೇ ಎಲ್ಲಕ್ಕಿಂತ ಮೊದಲಾಗಿ ಪರಿಗಣಿಸಲ್ಪಡುತ್ತದೆ. ಆಚಾರವೇ ಧರ್ಮಕ್ಕೆ ಮೂಲವು. ಶ್ರೀ ಅಚ್ಯುತನೇ ಧರ್ಮಕ್ಕೆ ಪ್ರಭುವು.

ಋಷಯಃ ಪಿತರೋ ದೇವಾ ಮಹಾಭೂತಾನಿ ಧಾತವಃ ।
ಜಂಗಮಾಜಂಗಮಂ ಚೇದಂ ಜಗನ್ನಾರಾಯಣೋದ್ಭವಮ್ ॥೧೮॥

ಋಷಿಗಳು ಪಿತೃಗಳು ದೇವತೆಗಳು ಮಹಾಭೂತಗಳು ಧಾತುಗಳು ಮತ್ತು ಈ ಚರಾಚರ ಜಗತ್ತು–ಇವೆಲ್ಲವೂ ನಾರಾಯಣನಿಂದ ಹುಟ್ಟಿರುವುವು.

ಯೋಗೋ ಜ್ಞಾನಂ ತಥಾ ಸಾಂಖ್ಯಂ ವಿದ್ಯಾಃ ಶಿಲ್ಪಾದಿ ಕರ್ಮ ಚ।
ವೇದಾಃ ಶಾಸ್ತ್ರಾಣಿ ವಿಜ್ಞಾನಮೇತತ್ ಸರ್ವಂ ಜನಾರ್ದನಾತ್ ॥೧೯॥

ಯೋಗ ಜ್ಞಾನ ಮತ್ತು ಸಾಂಖ್ಯ, ವಿದ್ಯೆಗಳು ಮತ್ತು ಶಿಲ್ಪಾದಿ ಕರ್ಮಗಳು, ವೇದಗಳು ಶಾಸ್ತ್ರಗಳು ಮತ್ತು ವಿಜ್ಞಾನ—ಇವೆಲ್ಲವೂ ಜನಾರ್ದನನಿಂದ ಹುಟ್ಟಿರುವುವು.

ಏಕೋ ವಿಷ್ಣುರ್ಮಹದ್ಭೂತಂ ಪೃಥಗ್ಭೂತಾನ್ಯನೇಕಶಃ ।
ತ್ರೀಂಲ್ಲೋಕಾನ್ವ್ಯಾಪ್ಯ ಭೂತಾತ್ಮಾ ಭುಂಕ್ತೇ ವಿಶ್ವಭುಗವ್ಯಯಃ ॥೨೦॥

ಏಕಮಾತ್ರನೂ ಮಹದ್ಭೂತನೂ ಭೂತಾತ್ಮನೂ ವಿಶ್ವಭೋಕ್ತೃವೂ ಮತ್ತು ಅವ್ಯಯನೂ ಆಗಿರುವ ವಿಷ್ಣುವು ಮೂರು ಲೋಕಗಳನ್ನೂ ವ್ಯಾಪಿಸಿ ಭೂತಗಳನ್ನು ಪ್ರತ್ಯೇಕ-ಪ್ರತ್ಯೇಕವಾಗಿ ಅನೇಕ ವಿಧವಾಗಿ ಭೋಗಿಸುತ್ತಾನೆ.

ಇಮಂ ಸ್ತವಂ ಭಗವತೋ ವಿಷ್ಣೋರ್ವ್ಯಾಸೇನ ಕೀರ್ತಿತಮ್ ।
ಪಠೇದ್ಯ ಇಚ್ಛೇತ್ ಪುರುಷಃ ಶ್ರೇಯಃ ಪ್ರಾಪ್ತುಂ ಸುಖಾನಿ ಚ ॥೨೧॥

ಯಾವ ಮನುಷ್ಯನು ಶ್ರೇಯಸ್ಸನ್ನೂ ಸುಖಗಳನ್ನೂ ಹೊಂದಲು ಇಚ್ಛಿಸುತ್ತಾನೋ, ಅವನು ವ್ಯಾಸನಿಂದ ಹೇಳಲ್ಪಟ್ಟ ಭಗವಾನ್ ವಿಷ್ಣುವಿನ ಈ ಸ್ತವವನ್ನು ಪಠನಮಾಡಬೇಕು.

ವಿಶ್ವೇಶ್ವರಮಜಂ ದೇವಂ ಜಗತಃ ಪ್ರಭವಾಪ್ಯಯಮ್ ।
ಭಜಂತಿ ಯೇ ಪುಷ್ಕರಾಕ್ಷಂ ನ ತೇ ಯಾಂತಿ ಪರಾಭವಮ್ ॥೨೨॥

ವಿಶ್ವೇಶ್ವರನೂ ಅಜನೂ, ದೇವನೂ, ಜಗತ್ತಿನ ಉತ್ಪತ್ತಿಲಯಗಳ ಸ್ಥಾನವೂ, ತಾವರೆಯಂತೆ ಕಣ್ಣುಗಳುಳ್ಳವನೂ ಆದ ವಿಷ್ಣುವನ್ನು ಯಾರು ಭಜಿಸುತ್ತಾರೋ, ಅವರು ಪರಾಭವವನ್ನು (ಸೋಲನ್ನು) ಹೊಂದುವುದಿಲ್ಲ.

ಶ್ರೀವಿಷ್ಣುಸಹಸ್ರನಾಮಾವಲಿಃ

ಓಂ ವಿಶ್ವಸ್ಮೈ ನಮಃ
ವಿಷ್ಣವೇ ನಮಃ
ವಷಟ್ಕಾರಾಯ ನಮಃ
ಭೂತಭವ್ಯಭವತ್ಪ್ರಭವೇ ನಮಃ
ಭೂತಕೃತೇ ನಮಃ
ಭೂತಭೃತೇ ನಮಃ
ಭಾವಾಯ ನಮಃ
ಭೂತಾತ್ಮನೇ ನಮಃ
ಭೂತಭಾವಾಯ ನಮಃ
ಪೂತಾತ್ಮನೇ ನಮಃ ೧೦
ಪರಮಾತ್ಮನೇ ನಮಃ
ಮುಕ್ತಾನಾಂ ಪರಮಾಗತಯೇ ನಮಃ
ಅವ್ಯಯಾಯ ನಮಃ
ಪುರುಷಾಯ ನಮಃ
ಸಾಕ್ಷಿಣೇ ನಮಃ
ಕ್ಷೇತ್ರಜ್ಞಾಯ ನಮಃ
ಅಕ್ಷರಾಯ ನಮಃ
ಯೋಗಾಯ ನಮಃ
ಯೋಗವಿದಾಂ ನೇತ್ರೇ ನಮಃ
ಪ್ರಧಾನಪುರುಷೇಶ್ವರಾಯ ನಮಃ ೨೦
ನಾರಸಿಂಹವಪುಷೇ ನಮಃ
ಶ್ರೀಮತೇ ನಮಃ
ಕೇಶವಾಯ ನಮಃ
ಪುರುಷೋತ್ತಮಾಯ ನಮಃ
ಸರ್ವಾಯ ನಮಃ
ಶರ್ವಾಯ ನಮಃ
ಶಿವಾಯ ನಮಃ

ಸ್ಥಾಣವೇ ನಮಃ
ಭೂತಾದಯೇ ನಮಃ
ನಿಧಯೇ ಅವ್ಯಯಾಯ ನಮಃ ೩೦
ಸಂಭವಾಯ ನಮಃ
ಭಾವನಾಯ ನಮಃ
ಭರ್ತ್ರೇ ನಮಃ
ಪ್ರಭವಾಯ ನಮಃ
ಪ್ರಭವೇ ನಮಃ
ಈಶ್ವರಾಯ ನಮಃ
ಸ್ವಯಂಭುವೇ ನಮಃ
ಶಂಭವೇ ನಮಃ
ಆದಿತ್ಯಾಯ ನಮಃ
ಪುಷ್ಕರಾಕ್ಷಾಯ ನಮಃ ೪೦
ಮಹಾಸ್ವನಾಯ ನಮಃ
ಅನಾದಿನಿಧನಾಯ ನಮಃ
ಧಾತ್ರೇ ನಮಃ
ವಿಧಾತ್ರೇ ನಮಃ
ಧಾತುರುತ್ತಮಾಯ ನಮಃ
ಅಪ್ರಮೇಯಾಯ ನಮಃ
ಹೃಷೀಕೇಶಾಯ ನಮಃ
ಪದ್ಮನಾಭಾಯ ನಮಃ
ಅಮರಪ್ರಭವೇ ನಮಃ
ವಿಶ್ವಕರ್ಮಣೇ ನಮಃ ೫೦
ಮನವೇ ನಮಃ
ತ್ವಷ್ಟ್ರೇ ನಮಃ
ಸ್ಥವಿಷ್ಠಾಯ ನಮಃ
ಸ್ಥವಿರಾಯ ಧ್ರುವಾಯ ನಮಃ

ಅಗ್ರಾಹ್ಯಾಯ ನಮಃ
ಶಾಶ್ವತಾಯ ನಮಃ
ಕೃಷ್ಣಾಯ ನಮಃ
ಲೋಹಿತಾಕ್ಷಾಯ ನಮಃ
ಪ್ರತರ್ದನಾಯ ನಮಃ
ಪ್ರಭೂತಾಯ ನಮಃ ೬೦
ತ್ರಿಕಕುಬ್ಧಾಮ್ನೇ ನಮಃ
ಪವಿತ್ರಾಯ ನಮಃ
ಮಂಗಲಾಯ ಪರಸ್ಮೈ ನಮಃ
ಈಶಾನಾಯ ನಮಃ
ಪ್ರಾಣದಾಯ ನಮಃ
ಪ್ರಾಣಾಯ ನಮಃ
ಜ್ಯೇಷ್ಠಾಯ ನಮಃ
ಶ್ರೇಷ್ಠಾಯ ನಮಃ
ಪ್ರಜಾಪತಯೇ ನಮಃ
ಹಿರಣ್ಯಗರ್ಭಾಯ ನಮಃ ೭೦
ಭೂಗರ್ಭಾಯ ನಮಃ
ಮಾಧವಾಯ ನಮಃ
ಮಧುಸೂದನಾಯ ನಮಃ
ಈಶ್ವರಾಯ ನಮಃ
ವಿಕ್ರಮಿಣೇ ನಮಃ
ಧನ್ವಿನೇ ನಮಃ
ಮೇಧಾವಿನೇ ನಮಃ
ವಿಕ್ರಮಾಯ ನಮಃ
ಕ್ರಮಾಯ ನಮಃ
ಅನುತ್ತಮಾಯ ನಮಃ
ದುರಾಧರ್ಷಾಯ ನಮಃ
ಕೃತಜ್ಞಾಯ ನಮಃ
ಕೃತಯೇ ನಮಃ
ಆತ್ಮವತೇ ನಮಃ
ಸುರೇಶಾಯ ನಮಃ
ಶರಣಾಯ ನಮಃ
ಶರ್ಮಣೇ ನಮಃ
ವಿಶ್ವರೇತಸೇ ನಮಃ
ಪ್ರಜಾಭವಾಯ ನಮಃ
ಅಹ್ನೇ ನಮಃ ೯೦
ಸಂವತ್ಸರಾಯ ನಮಃ
ವ್ಯಾಲಾಯ ನಮಃ
ಪ್ರತ್ಯಯಾಯ ನಮಃ
ಸರ್ವದರ್ಶನಾಯ ನಮಃ
ಅಜಾಯ ನಮಃ
ಸರ್ವೇಶ್ವರಾಯ ನಮಃ
ಸಿದ್ಧಾಯ ನಮಃ
ಸಿದ್ಧಯೇ ನಮಃ
ಸರ್ವಾದಯೇ ನಮಃ
ಅಚ್ಯುತಾಯ ನಮಃ ೧೦೦
ವೃಷಾಕಪಯೇ ನಮಃ
ಅಮೇಯಾತ್ಮನೇ ನಮಃ
ಸರ್ವಯೋಗವಿನಿಸ್ಸೃತಾಯ ನಮಃ
ವಸವೇ ನಮಃ
ವಸುಮನಸೇ ನಮಃ
ಸತ್ಯಾಯ ನಮಃ
ಸಮಾತ್ಮನೇ ನಮಃ
ಸಮ್ಮಿತಾಯ ನಮಃ
ಸಮಾಯ ನಮಃ
ಅಮೋಘಾಯ ನಮಃ ೧೧೦
ಪುಂಡರೀಕಾಕ್ಷಾಯ ನಮಃ
ವೃಷಕರ್ಮಣೇ ನಮಃ
ವೃಷಾಕೃತಯೇ ನಮಃ
ರುದ್ರಾಯ ನಮಃ

ಬಹುಶಿರಸೇ ನಮಃ
ಬಭ್ರವೇ ನಮಃ
ವಿಶ್ವಯೋನಯೇ ನಮಃ
ಶುಚಿಶ್ರವಸೇ ನಮಃ
ಅಮೃತಾಯ ನಮಃ
ಶಾಶ್ವತಸ್ಥಾಣವೇ ನಮಃ ೧೨೦
ವರೋಹಾಯ ನಮಃ
ಮಹಾತಪಸೇ ನಮಃ
ಸರ್ವಗಾಯ ನಮಃ
ಸರ್ವವಿದ್ಭಾನವೇ ನಮಃ
ವಿಷ್ವಕ್ಸೇನಾಯ ನಮಃ
ಜನಾರ್ದನಾಯ ನಮಃ
ವೇದಾಯ ನಮಃ
ವೇದವಿದೇ ನಮಃ
ಅವ್ಯಂಗಾಯ ನಮಃ
ವೇದಾಂಗಾಯ ನಮಃ ೧೩೦
ವೇದವಿದೇ ನಮಃ
ಕವಯೇ ನಮಃ
ಲೋಕಾಧ್ಯಕ್ಷಾಯ ನಮಃ
ಸುರಾಧ್ಯಕ್ಷಾಯ ನಮಃ
ಧರ್ಮಾಧ್ಯಕ್ಷಾಯ ನಮಃ
ಕೃತಾಕೃತಾಯ ನಮಃ
ಚತುರಾತ್ಮನೇ ನಮಃ
ಚತುರ್ವ್ಯೂಹಾಯ ನಮಃ
ಚತುರ್ದಂಷ್ಟ್ರಾಯ ನಮಃ
ಚತುರ್ಭುಜಾಯ ನಮಃ ೧೪೦
ಭ್ರಾಜಿಷ್ಣವೇ ನಮಃ
ಭೋಜನಾಯ ನಮಃ
ಭೋಕ್ತ್ರೇನಮಃ
ಸಹಿಷ್ಣವೇ ನಮಃ

ಜಗದಾದಿಜಾಯ ನಮಃ
ಅನಘಾಯ ನಮಃ
ವಿಜಯಾಯ ನಮಃ
ಜೇತ್ರೇ ನಮಃ
ವಿಶ್ವಯೋನಯೇ ನಮಃ
ಪುನರ್ವಸವೇ ನಮಃ ೧೫೦
ಉಪೇಂದ್ರಾಯ ನಮಃ
ವಾಮನಾಯ ನಮಃ
ಪ್ರಾಂಶವೇ ನಮಃ
ಅಮೋಘಾಯ ನಮಃ
ಶುಚಯೇ ನಮಃ
ಊರ್ಜಿತಾಯ ನಮಃ
ಅತೀಂದ್ರಾಯ ನಮಃ
ಸಂಗ್ರಹಾಯ ನಮಃ
ಸರ್ಗಾಯ ನಮಃ
ಧೃತಾತ್ಮನೇ ನಮಃ ೧೬೦
ನಿಯಮಾಯ ನಮಃ
ಯಮಾಯ ನಮಃ
ವೇದ್ಯಾಯ ನಮಃ
ವೈದ್ಯಾಯ ನಮಃ
ಸದಾಯೋಗಿನೇ ನಮಃ
ವೀರಘ್ನೇ ನಮಃ
ಮಾಧವಾಯ ನಮಃ
ಮಧವೇ ನಮಃ
ಅತೀಂದ್ರಿಯಾಯ ನಮಃ
ಮಹಾಮಾಯಾಯ ನಮಃ ೧೭೦
ಮಹೋತ್ಸಾಹಾಯ ನಮಃ
ಮಹಾಬಲಾಯ ನಮಃ
ಮಹಾಬುದ್ಧಯೇ ನಮಃ
ಮಹಾವೀರ್ಯಾಯ ನಮಃ

ಮಹಾಶಕ್ತಯೇ ನಮಃ
ಮಹಾದ್ಯುತಯೇ ನಮಃ
ಅನಿರ್ದೇಶ್ಯವಪುಷೇ ನಮಃ
ಶ್ರೀಮತೇ ನಮಃ
ಅಮೇಯಾತ್ಮನೇ ನಮಃ
ಮಹಾದ್ರಿಧೃತೇ ನಮಃ ೧೮೦
ಮಹೇಷ್ವಾಸಾಯ ನಮಃ
ಮಹೀಭರ್ತ್ರೇ ನಮಃ
ಶ್ರೀನಿವಾಸಾಯ ನಮಃ
ಸತಾಂ ಗತಯೇ ನಮಃ
ಅನಿರುದ್ಧಾಯ ನಮಃ
ಸುರಾನಂದಾಯ ನಮಃ
ಗೋವಿಂದಾಯ ನಮಃ
ಗೋವಿದಾಂ ಪತಯೇ ನಮಃ
ಮರೀಚಯೇ ನಮಃ
ದಮನಾಯ ನಮಃ ೧೯೦
ಹಂಸಾಯ ನಮಃ
ಸುಪರ್ಣಾಯ ನಮಃ
ಭುಜಗೋತ್ತಮಾಯ ನಮಃ
ಹಿರಣ್ಯನಾಭಾಯ ನಮಃ
ಸುತಪಸೇ ನಮಃ
ಪದ್ಮನಾಭಾಯ ನಮಃ
ಪ್ರಜಾಪತಯೇ ನಮಃ
ಅಮೃತ್ಯವೇ ನಮಃ
ಸರ್ವದೃಶೇ ನಮಃ
ಸಿಂಹಾಯ ನಮಃ ೨೦೦
ಸಂಧಾತ್ರೇ ನಮಃ
ಸಂಧಿಮತೇ ನಮಃ
ಸ್ಥಿರಾಯ ನಮಃ
ಅಜಾಯ ನಮಃ

ದುರ್ಮರ್ಷಣಾಯ ನಮಃ
ಶಾಸ್ತ್ರೇ ನಮಃ
ವಿಶ್ರುತಾತ್ಮನೇ ನಮಃ
ಸುರಾರಿಘ್ನೇ ನಮಃ
ಗುರವೇ ನಮಃ
ಗುರುತಮಾಯ ನಮಃ ೨೧೦
ಧಾಮ್ನೇ ನಮಃ
ಸತ್ಯಾಯ ನಮಃ
ಸತ್ಯಪರಾಕ್ರಮಾಯ ನಮಃ
ನಿಮಿಷಾಯ ನಮಃ
ಅನಿಮಿಷಾಯ ನಮಃ
ಸ್ರಗ್ವಿಣೇ ನಮಃ
ವಾಚಸ್ಪತಯೇ ಉದಾರಧಿಯೇನಮಃ
ಅಗ್ರಣ್ಯೇ ನಮಃ
ಗ್ರಾಮಣ್ಯೇ ನಮಃ
ಶ್ರೀಮತೇ ನಮಃ ೨೨೦
ನ್ಯಾಯಾಯ ನಮಃ
ನೇತ್ರೇ ನಮಃ
ಸಮೀರಣಾಯ ನಮಃ
ಸಹಸ್ರಮೂರ್ಧ್ನೇ ನಮಃ
ವಿಶ್ವಾತ್ಮನೇ ನಮಃ
ಸಹಸ್ರಾಕ್ಷಾಯ ನಮಃ
ಸಹಸ್ರಪದೇ ನಮಃ
ಆವರ್ತನಾಯ ನಮಃ
ನಿವೃತ್ತಾತ್ಮನೇ ನಮಃ
ಸಂವೃತಾಯ ನಮಃ ೨೩೦
ಸಂಪ್ರಮರ್ದನಾಯ ನಮಃ
ಅಹಸಂವರ್ತಕಾಯ ನಮಃ
ವಹ್ನಯೇ ನಮಃ
ಅನಿಲಾಯ ನಮಃ

ಧರಣೀಧರಾಯ ನಮಃ
ಸುಪ್ರಸಾದಾಯ ನಮಃ
ಪ್ರಸನ್ನಾತ್ಮನೇ ನಮಃ
ವಿಶ್ವಧೃತೇ ನಮಃ
ವಿಶ್ವಭುಜೇ ನಮಃ
ವಿಭವೇ ನಮಃ ೨೪೦
ಸತ್ಕರ್ತ್ರೇ ನಮಃ
ಸತ್ಕೃತಾಯ ನಮಃ
ಸಾಧವೇ ನಮಃ
ಜಹ್ನವೇ ನಮಃ
ನಾರಾಯಣಾಯ ನಮಃ
ನರಾಯ ನಮಃ
ಅಸಂಖ್ಯೇಯಾಯ ನಮಃ
ಅಪ್ರಮೇಯಾಯ ನಮಃ
ವಿಶಿಷ್ಟಾಯ ನಮಃ
ಶಿಷ್ಟಕೃತೇ ನಮಃ ೨೫೦
ಶುಚಯೇ ನಮಃ
ಸಿದ್ಧಾರ್ಥಾಯ ನಮಃ
ಸಿದ್ಧಸಂಕಲ್ಪಾಯ ನಮಃ
ಸಿದ್ಧಿದಾಯ ನಮಃ
ಸಿದ್ಧಿಸಾಧನಾಯ ನಮಃ
ವೃಷಾಹಿಣೇ ನಮಃ
ವೃಷಭಾಯ ನಮಃ
ವಿಷ್ಣವೇ ನಮಃ
ವೃಷಪರ್ವಣೇ ನಮಃ
ವೃಷೋದರಾಯ ನಮಃ ೨೬೦
ವರ್ಧನಾಯ ನಮಃ
ವರ್ಧಮಾನಾಯ ನಮಃ
ವಿವಿಕ್ತಾಯ ನಮಃ
ಶ್ರುತಿಸಾಗರಾಯ ನಮಃ
ಸುಭುಜಾಯ ನಮಃ
ದುರ್ಧರಾಯ ನಮಃ
ವಾಗ್ಮಿನೇ ನಮಃ
ಮಹೇಂದ್ರಾಯ ನಮಃ
ವಸುದಾಯ ನಮಃ
ವಸವೇ ನಮಃ ೨೭೦
ನೈಕರೂಪಾಯ ನಮಃ
ಬೃಹದ್ರೂಪಾಯ ನಮಃ
ಶಿಪಿವಿಷ್ಟಾಯ ನಮಃ
ಪ್ರಕಾಶನಾಯ ನಮಃ
ಓಜಸ್ತೇಜೋದ್ಯುತಿಧರಾಯ ನಮಃ
ಪ್ರಕಾಶಾತ್ಮನೇ ನಮಃ
ಪ್ರತಾಪನಾಯ ನಮಃ
ಋದ್ಧಾಯ ನಮಃ
ಸ್ಪಷ್ಟಾಕ್ಷರಾಯ ನಮಃ
ಮಂತ್ರಾಯ ನಮಃ ೨೮೦
ಚಂದ್ರಾಂಶವೇ ನಮಃ
ಭಾಸ್ಕರದ್ಯುತಯೇ ನಮಃ
ಅಮೃತಾಂಶೂದ್ಭವಾಯ ನಮಃ
ಭಾನವೇ ನಮಃ
ಶಶಬಿಂದವೇ ನಮಃ
ಸುರೇಶ್ವರಾಯ ನಮಃ
ಔಷಧಾಯ ನಮಃ
ಜಗತಸ್ಸೇತವೇ ನಮಃ
ಸತ್ಯಧರ್ಮಪರಾಕ್ರಮಾಯ ನಮಃ
ಭೂತಭವ್ಯಭವನ್ನಾಥಾಯ ನಮಃ
ಪವನಾಯ ನಮಃ [೨೯೦
ಪಾವನಾಯ ನಮಃ
ಅನಲಾಯ ನಮಃ
ಕಾಮಘ್ನೇ ನಮಃ

ಕಾಮಕೃತೇ ನಮಃ
ಕಾಂತಾಯ ನಮಃ
ಕಾಮಾಯ ನಮಃ
ಕಾಮಪ್ರದಾಯ ನಮಃ
ಪ್ರಭವೇ ನಮಃ
ಯುಗಾದಿಕೃತೇ ನಮಃ ೩೦೦
ಯುಗಾವರ್ತಾಯ ನಮಃ
ನೈಕಮಾಯಾಯ ನಮಃ
ಮಹಾಶನಾಯ ನಮಃ
ಅದೃಶ್ಯಾಯ ನಮಃ
ವ್ಯಕ್ತರೂಪಾಯ ನಮಃ
ಸಹಸ್ರಜಿತೇ ನಮಃ
ಅನಂತಜಿತೇ ನಮಃ
ಇಷ್ಟಾಯ ನಮಃ
ಅವಿಶಿಷ್ಟಾಯ ನಮಃ
ಶಿಷ್ಟೇಷ್ಟಾಯ ನಮಃ ೩೧೦
ಶಿಖಂಡಿನೇ ನಮಃ
ನಹುಷಾಯ ನಮಃ
ವೃಷಾಯ ನಮಃ
ಕ್ರೋಧಘ್ನೇ ನಮಃ
ಕ್ರೋಧಕೃತ್ಕರ್ತ್ರೇ ನಮಃ
ವಿಶ್ವಬಾಹವೇ ನಮಃ
ಮಹೀಧರಾಯ ನಮಃ
ಅಚ್ಯುತಾಯ ನಮಃ
ಪ್ರಥಿತಾಯ ನಮಃ
ಪ್ರಾಣಾಯ ನಮಃ ೩೨೦
ಪ್ರಾಣದಾಯ ನಮಃ
ವಾಸವಾನುಜಾಯ ನಮಃ
ಅಪಾಂ ನಿಧಯೇ ನಮಃ
ಅಧಿಷ್ಠಾನಾಯ ನಮಃ
ಅಪ್ರಮತ್ತಾಯ ನಮಃ
ಪ್ರತಿಷ್ಠಿತಾಯ ನಮಃ
ಸ್ಕಂದಾಯ ನಮಃ
ಸ್ಕಂದಧರಾಯ ನಮಃ
ಧುರ್ಯಾಯ ನಮಃ
ವರದಾಯ ನಮಃ ೩೩೦
ವಾಯುವಾಹನಾಯ ನಮಃ
ವಾಸುದೇವಾಯ ನಮಃ
ಬೃಹದ್ಭಾನವೇ ನಮಃ
ಆದಿದೇವಾಯ ನಮಃ
ಪುರಂದರಾಯ ನಮಃ
ಅಶೋಕಾಯ ನಮಃ
ತಾರಣಾಯ ನಮಃ
ತಾರಾಯ ನಮಃ
ಶೂರಾಯ ನಮಃ
ಶೌರಯೇ ನಮಃ ೩೪೦
ಜನೇಶ್ವರಾಯ ನಮಃ
ಅನುಕೂಲಾಯ ನಮಃ
ಶತಾವರ್ತಾಯ ನಮಃ
ಪದ್ಮಿನೇ ನಮಃ
ಪದ್ಮನಿಭೇಕ್ಷಣಾಯ ನಮಃ
ಪದ್ಮನಾಭಾಯ ನಮಃ
ಅರವಿಂದಾಕ್ಷಾಯ ನಮಃ
ಪದ್ಮಗರ್ಭಾಯ ನಮಃ
ಶರೀರಭೃತೇ ನಮಃ
ಮಹರ್ದ್ಧಯೇ ನಮಃ ೩೫೦
ಋದ್ಧಾಯ ನಮಃ
ವೃದ್ಧಾತ್ಮನೇ ನಮಃ
ಮಹಾಕ್ಷಾಯ ನಮಃ
ಗರುಡಧ್ವಜಾಯ ನಮಃ

ಅತುಲಾಯ ನಮಃ
ಶರಭಾಯ ನಮಃ
ಭೀಮಾಯ ನಮಃ
ಸಮಯಜ್ಞಾಯ ನಮಃ
ಹವಿರ್ಹರಯೇ ನಮಃ
ಸರ್ವಲಕ್ಷಣಲಕ್ಷಣ್ಯಾಯ ನಮಃ ೩೬೦
ಲಕ್ಷ್ಮೀವತೇ ನಮಃ
ಸಮಿತಿಂಜಯಾಯ ನಮಃ
ವಿಕ್ಷರಾಯ ನಮಃ
ರೋಹಿತಾಯ ನಮಃ
ಮಾರ್ಗಾಯ ನಮಃ
ಹೇತವೇ ನಮಃ
ದಾಮೋದರಾಯ ನಮಃ
ಸಹಾಯ ನಮಃ
ಮಹೀಧರಾಯ ನಮಃ
ಮಹಾಭಾಗಾಯ ನಮಃ ೩೭೦
ವೇಗವತೇ ನಮಃ
ಅಮಿತಾಶನಾಯ ನಮಃ
ಉದ್ಭವಾಯ ನಮಃ
ಕ್ಷೋಭಣಾಯ ನಮಃ
ದೇವಾಯ ನಮಃ
ಶ್ರೀಗರ್ಭಾಯ ನಮಃ
ಪರಮೇಶ್ವರಾಯ ನಮಃ
ಕರಣಾಯ ನಮಃ
ಕಾರಣಾಯ ನಮಃ
ಕರ್ತ್ರೇ ನಮಃ ೩೮೦
ವಿಕರ್ತ್ರೇ ನಮಃ
ಗಹನಾಯ ನಮಃ
ಗುಹನಾಯ ನಮಃ
ವ್ಯವಸಾಯಾಯ ನಮಃ

ವ್ಯವಸ್ಥಾನಾಯ ನಮಃ
ಸಂಸ್ಥಾನಾಯ ನಮಃ
ಸ್ಥಾನದಾಯ ನಮಃ
ಧ್ರುವಾಯ ನಮಃ
ಪರರ್ದ್ಧಯೇ ನಮಃ
ಪರಮಸ್ಪಷ್ಟಾಯ ನಮಃ
ತುಷ್ಟಾಯ ನಮಃ ೩೯೦
ಪುಷ್ಟಾಯ ನಮಃ
ಶುಭೇಕ್ಷಣಾಯ ನಮಃ
ರಾಮಾಯ ನಮಃ
ವಿರಾಮಾಯ ನಮಃ
ವಿರತಾಯ ನಮಃ
ಮಾರ್ಗಾಯ ನಮಃ
ನೇಯಾಯ ನಮಃ
ನಯಾಯ ನಮಃ
ಅನಯಾಯ ನಮಃ ೪೦೦
ವೀರಾಯ ನಮಃ
ಶಕ್ತಿಮಂತಾಂ ಶ್ರೇಷ್ಠಾಯ ನಮಃ
ಧರ್ಮಾಯ ನಮಃ
ಧರ್ಮವಿದುತ್ತಮಾಯ ನಮಃ
ವೈಕುಂಠಾಯ ನಮಃ
ಪುರುಷಾಯ ನಮಃ
ಪ್ರಾಣಾಯ ನಮಃ
ಪ್ರಾಣದಾಯ ನಮಃ
ಪ್ರಣವಾಯ ನಮಃ
ಪೃಥವೇ ನಮಃ ೪೧೦
ಹಿರಣ್ಯಗರ್ಭಾಯ ನಮಃ
ಶತ್ರುಘ್ನಾಯ ನಮಃ
ವ್ಯಾಪ್ತಾಯ ನಮಃ
ವಾಯವೇ ನಮಃ

ಅಧೋಕ್ಷಜಾಯ ನಮಃ
ಋತವೇ ನಮಃ
ಸುದರ್ಶನಾಯ ನಮಃ
ಕಾಲಾಯ ನಮಃ
ಪರಮೇಷ್ಠಿನೇ ನಮಃ
ಪರಿಗ್ರಹಾಯ ನಮಃ ೪೨೦
ಉಗ್ರಾಯ ನಮಃ
ಸಂವತ್ಸರಾಯ ನಮಃ
ದಕ್ಷಾಯ ನಮಃ
ವಿಶ್ರಾಮಾಯ ನಮಃ
ವಿಶ್ವದಕ್ಷಿಣಾಯ ನಮಃ
ವಿಸ್ತಾರಾಯ ನಮಃ
ಸ್ಥಾವರಸ್ಥಾಣವೇ ನಮಃ
ಪ್ರಮಾಣಾಯ ನಮಃ
ಅವ್ಯಯಾಯ ಬೀಜಾಯ ನಮಃ
ಅರ್ಥಾಯ ನಮಃ ೪೩೦
ಅನರ್ಥಾಯ ನಮಃ
ಮಹಾಕೋಶಾಯ ನಮಃ
ಮಹಾಭೋಗಾಯ ನಮಃ
ಮಹಾಧನಾಯ ನಮಃ
ಅನಿರ್ವಿಣ್ಣಾಯ ನಮಃ
ಸ್ಥವಿಷ್ಠಾಯ ನಮಃ
ಅಭುವೇ ನಮಃ
ಧರ್ಮಯೂಪಾಯ ನಮಃ
ಮಹಾಮುಖಾಯ ನಮಃ
ನಕ್ಷತ್ರನೇಮಯೇ ನಮಃ ೪೪೦
ನಕ್ಷತ್ರಿಣೇ ನಮಃ
ಕ್ಷಮಾಯ ನಮಃ
ಕ್ಷಾಮಾಯ ನಮಃ
ಸಮೀಹನಾಯ ನಮಃ

ಯಜ್ಞಾಯ ನಮಃ
ಇಜ್ಯಾಯ ನಮಃ
ಮಹೇಜ್ಯಾಯ ನಮಃ
ಕೃತವೇ ನಮಃ
ಸತ್ರಾಯ ನಮಃ
ಸತಾಂ ಗತಯೇ ನಮಃ ೪೫೦
ಸರ್ವದರ್ಶಿನೇ ನಮಃ
ವಿಮುಕ್ತಾತ್ಮನೇ ನಮಃ
ಸರ್ವಜ್ಞಾಯ ನಮಃ
ಜ್ಞಾನೋತ್ತಮಾಯ ನಮಃ
ಸುವ್ರತಾಯ ನಮಃ
ಸುಮುಖಾಯ ನಮಃ
ಸೂಕ್ಷ್ಮಾಯ ನಮಃ
ಸುಘೋಷಾಯ ನಮಃ
ಸುಖದಾಯ ನಮಃ
ಸುಹೃದೇ ನಮಃ ೪೬೦
ಮನೋಹರಾಯ ನಮಃ
ಜಿತಕ್ರೋಧಾಯ ನಮಃ
ವೀರಬಾಹವೇ ನಮಃ
ವಿದಾರಣಾಯ ನಮಃ
ಸ್ವಾಪನಾಯ ನಮಃ
ಸ್ವವಶಾಯ ನಮಃ
ವ್ಯಾಪಿನೇ ನಮಃ
ನೈಕಾತ್ಮನೇ ನಮಃ
ನೈಕಕರ್ಮಕೃತೇ ನಮಃ
ವತ್ಸರಾಯ ನಮಃ ೪೭೦
ವತ್ಸಲಾಯ ನಮಃ
ವತ್ಸಿನೇ ನಮಃ
ರತ್ನಗರ್ಭಾಯ ನಮಃ
ಧನೇಶ್ವರಾಯ ನಮಃ

ಧರ್ಮಗುಪೇ ನಮಃ
ಧರ್ಮಕೃತೇ ನಮಃ
ಧರ್ಮಿಣೇ ನಮಃ
ಸತೇ ನಮಃ
ಅಸತೇ ನಮಃ
ಕ್ಷರಾಯ ನಮಃ ೪೮೦
ಅಕ್ಷರಾಯ ನಮಃ
ಅವಿಜ್ಞಾತ್ರೇ ನಮಃ
ಸಹಸ್ರಾಂಶವೇ ನಮಃ
ವಿಧಾತ್ರೇ ನಮಃ
ಕೃತಲಕ್ಷಣಾಯ ನಮಃ
ಗಭಸ್ತಿನೇಮಯೇ ನಮಃ
ಸತ್ತ್ವಸ್ಥಾಯ ನಮಃ
ಸಿಂಹಾಯ ನಮಃ
ಭೂತಮಹೇಶ್ವರಾಯ ನಮಃ
ಆದಿದೇವಾಯ ನಮಃ ೪೯೦
ಮಹಾದೇವಾಯ ನಮಃ
ದೇವೇಶಾಯ ನಮಃ
ದೇವಭೃದ್ಗುರವೇ ನಮಃ
ಉತ್ತರಾಯ ನಮಃ
ಗೋಪತಯೇ ನಮಃ
ಗೋಪ್ತ್ರೇ ನಮಃ
ಜ್ಞಾನಗಮ್ಯಾಯ ನಮಃ
ಪುರಾತನಾಯ ನಮಃ
ಶರೀರಭೂತಭೃತೇ ನಮಃ
ಭೋಕ್ತ್ರೇ ನಮಃ ೫೦೦
ಕಪೀಂದ್ರಾಯ ನಮಃ
ಭೂರಿದಕ್ಷಿಣಾಯ ನಮಃ
ಸೋಮಪಾಯ ನಮಃ
ಅಮೃತಪಾಯ ನಮಃ
ಸೋಮಾಯ ನಮಃ
ಪುರಜಿತೇ ನಮಃ
ಪುರುಸತ್ತಮಾಯ ನಮಃ
ವಿನಯಾಯ ನಮಃ
ಜಯಾಯ ನಮಃ
ಸತ್ಯಸಂಧಾಯ ನಮಃ ೫೧೦
ದಾಶಾರ್ಹಾಯ ನಮಃ
ಸಾತ್ವತಾಂ ಪತಯೇ ನಮಃ
ಜೀವಾಯ ನಮಃ
ವಿನಯಿತಾಸಾಕ್ಷಿಣೇ ನಮಃ
ಮುಕುಂದಾಯ ನಮಃ
ಅಮಿತವಿಕ್ರಮಾಯ ನಮಃ
ಅಂಭೋನಿಧಯೇ ನಮಃ
ಅನಂತಾತ್ಮನೇ ನಮಃ
ಮಹೋದಧಿಶಯಾಯ ನಮಃ
ಅಂತಕಾಯ ನಮಃ ೫೨೦
ಅಜಾಯ ನಮಃ
ಮಹಾರ್ಹಾಯ ನಮಃ
ಸ್ವಾಭಾವ್ಯಾಯ ನಮಃ
ಜಿತಾಮಿತ್ರಾಯ ನಮಃ
ಪ್ರಮೋದನಾಯ ನಮಃ
ಆನಂದಾಯ ನಮಃ
ನಂದನಾಯ ನಮಃ
ನಂದಾಯ ನಮಃ
ಸತ್ಯಧರ್ಮಣೇ ನಮಃ
ತ್ರಿವಿಕ್ರಮಾಯ ನಮಃ ೫೩೦
ಮಹರ್ಷಯೇ ಕಪಿಲಾಚಾರ್ಯಾಯ [ನಮಃ
ಕೃತಜ್ಞಾಯ ನಮಃ
ಮೇದಿನೀಪತೆಯೇ ನಮಃ
ತ್ರಿಪಾದಾಯ ನಮಃ

ತ್ರಿದಶಾಧ್ಯಕ್ಷಾಯ ನಮಃ
ಮಹಾಶೃಂಗಾಯ ನಮಃ
ಕೃತಾಂತಕೃತೇ ನಮಃ
ಮಹಾವರಾಹಾಯ ನಮಃ
ಗೋವಿಂದಾಯ ನಮಃ
ಸುಷೇಣಾಯ ನಮಃ ೫೪೦
ಕನಕಾಂಗದಿನೇ ನಮಃ
ಗುಹ್ಯಾಯ ನಮಃ
ಗಭೀರಾಯ ನಮಃ
ಗಹನಾಯ ನಮಃ
ಗುಪ್ತಾಯ ನಮಃ
ಚಕ್ರಗದಾಧರಾಯ ನಮಃ
ವೇಧಸೇ ನಮಃ
ಸ್ವಾಂಗಾಯ ನಮಃ
ಅಜಿತಾಯ ನಮಃ
ಕೃಷ್ಣಾಯ ನಮಃ ೫೫೦
ದೃಢಾಯ ನಮಃ
ಸಂಕರ್ಷಣಾಯ ಅಚ್ಯುತಾಯ [ನಮಃ
ವರುಣಾಯ ನಮಃ
ವಾರುಣಾಯ ನಮಃ
ವೃಕ್ಷಾಯ ನಮಃ
ಪುಷ್ಕರಾಕ್ಷಾಯ ನಮಃ
ಮಹಾಮನವೇ ನಮಃ
ಭಗವತೇ ನಮಃ
ಭಗಘ್ನೇ ನಮಃ
ಆನಂದಿನೇ ನಮಃ ೫೬೦
ವನಮಾಲಿನೇ ನಮಃ
ಹಲಾಯುಧಾಯ ನಮಃ
ಆದಿತ್ಯಾಯ ನಮಃ
ಜ್ಯೋತಿರಾದಿತ್ಯಾಯ ನಮಃ

ಸಹಿಷ್ಣವೇ ನಮಃ
ಗತಿಸತ್ತಮಾಯ ನಮಃ
ಸುಧನ್ವನೇ ನಮಃ
ಖಂಡಪರಶವೇ ನಮಃ
ದಾರುಣಾಯ ನಮಃ
ದ್ರವಿಣಪ್ರದಾಯ ನಮಃ ೫೭೦
ದಿವಃಸ್ಪೃಶೇ ನಮಃ
ಸರ್ವದೃಗ್ವ್ಯಾಸಾಯ ನಮಃ
ವಾಚಸ್ಪತಯೇ ಅಯೋನಿಜಾಯ [ನಮಃ
ತ್ರಿಸಾಮ್ನೇ ನಮಃ
ಸಾಮಗಾಯ ನಮಃ
ಸಾಮ್ನೇ ನಮಃ
ನಿರ್ವಾಣಾಯ ನಮಃ
ಭೇಷಜಾಯ ನಮಃ
ಭಿಷಜೇ ನಮಃ
ಸಂನ್ಯಾಸಕೃತೇ ನಮಃ ೫೮೦
ಶಮಾಯ ನಮಃ
ಶಾಂತಾಯ ನಮಃ
ನಿಷ್ಠಾಯೈ ನಮಃ
ಶಾಂತಯೇ ನಮಃ
ಪರಾಯಣಾಯ ನಮಃ
ಶುಭಾಂಗಾಯ ನಮಃ
ಶಾಂತಿದಾಯ ನಮಃ
ಸ್ರಷ್ಟ್ರೇ ನಮಃ
ಕುಮುದಾಯ ನಮಃ
ಕುವಲೇಶಯಾಯ ನಮಃ ೫೯೦
ಗೋಹಿತಾಯ ನಮಃ
ಗೋಪತಯೇ ನಮಃ
ಗೋಪ್ತ್ರೇ ನಮಃ
ವೃಷಭಾಕ್ಷಾಯ ನಮಃ

ವೃಷಪ್ರಿಯಾಯ ನಮಃ
ಅನಿವರ್ತಿನೇ ನಮಃ
ನಿವೃತ್ತಾತ್ಮನೇ ನಮಃ
ಸಂಕ್ಷೇಪ್ತ್ರೇ ನಮಃ
ಕ್ಷೇಮಕೃತೇ ನಮಃ
ಶಿವಾಯ ನಮಃ ೬೦೦
ಶ್ರೀವತ್ಸವಕ್ಷಸೇ ನಮಃ
ಶ್ರೀವಾಸಾಯ ನಮಃ
ಶ್ರೀಪತಯೇ ನಮಃ
ಶ್ರೀಮತಾಂ ವರಾಯ ನಮಃ
ಶ್ರೀದಾಯ ನಮಃ
ಶ್ರೀಶಾಯ ನಮಃ
ಶ್ರೀನಿವಾಸಾಯ ನಮಃ
ಶ್ರೀನಿಧಯೇ ನಮಃ
ಶ್ರೀವಿಭಾವನಾಯ ನಮಃ
ಶ್ರೀಧರಾಯ ನಮಃ ೬೧೦
ಶ್ರೀಕರಾಯ ನಮಃ
ಶ್ರೇಯಸೇ ನಮಃ
ಶ್ರೀಮತೇ ನಮಃ
ಲೋಕತ್ರಯಾಶ್ರಯಾಯ ನಮಃ
ಸ್ವಕ್ಷಾಯ ನಮಃ
ಸ್ವಂಗಾಯ ನಮಃ
ಶತಾನಂದಾಯ ನಮಃ
ನಂದಯೇ ನಮಃ
ಜ್ಯೋತಿರ್ಗಣೇಶ್ವರಾಯ ನಮಃ
ವಿಜಿತಾತ್ಮನೇ ನಮಃ ೬೨೦
ಅವಿಧೇಯಾತ್ಮನೇ ನಮಃ
ಸತ್ಕೀರ್ತಯೇ ನಮಃ
ಛಿನ್ನಸಂಶಯಾಯ ನಮಃ
ಉದೀರ್ಣಾಯ ನಮಃ

ಸರ್ವತಶ್ಚಕ್ಷುಷೇ ನಮಃ
ಅನೀಶಾಯ ನಮಃ
ಶಾಶ್ವತಸ್ಥಿರಾಯ ನಮಃ
ಭೂಶಯಾಯ ನಮಃ
ಭೂಷಣಾಯ ನಮಃ
ಭೂತಯೇ ನಮಃ ೬೩೦
ವಿಶೋಕಾಯ ನಮಃ
ಶೋಕನಾಶನಾಯ ನಮಃ
ಅರ್ಚಿಷ್ಮತೇ ನಮಃ
ಅರ್ಚಿತಾಯ ನಮಃ
ಕುಂಭಾಯ ನಮಃ
ವಿಶುದ್ಧಾತ್ಮನೇ ನಮಃ
ವಿಶೋಧನಾಯ ನಮಃ
ಅನಿರುದ್ಧಾಯ ನಮಃ
ಅಪ್ರತಿರಥಾಯ ನಮಃ
ಪ್ರದ್ಯುಮ್ನಾಯ ನಮಃ ೬೪೦
ಅಮಿತವಿಕ್ರಮಾಯ ನಮಃ
ಕಾಲನೇಮಿನಿಘ್ನೇ ನಮಃ
ವೀರಾಯ ನಮಃ
ಶೌರಯೇ ನಪುಃ
ಶೂರಜನೇಶ್ವರಾಯ ನಮಃ
ತ್ರಿಲೋಕಾತ್ಮನೇ ನಮಃ
ತ್ರಿಲೋಕೇಶಾಯ ನಮಃ
ಕೇಶವಾಯ ನಮಃ
ಕೇಶಿಘ್ನೇ ನಮಃ
ಹರಯೇ ನಮಃ ೬೫೦
ಕಾಮದೇವಾಯ ನಮಃ
ಕಾಮಪಾಲಾಯ ನಮಃ
ಕಾಮಿನೇ ನಮಃ
ಕಾಂತಾಯ ನಮಃ

ಕೃತಾಗಮಾಯ ನಮಃ
ಅನಿರ್ದೇಶ್ಯವಪುಷೇ ನಮಃ
ವಿಷ್ಣವೇ ನಮಃ
ವೀರಾಯ ನಮಃ
ಅನಂತಾಯ ನಮಃ
ಧನಂಜಯಾಯ ನಮಃ ೬೬೦
ಬ್ರಹ್ಮಣ್ಯಾಯ ನಮಃ
ಬ್ರಹ್ಮಕೃತೇ ನಮಃ
ಬ್ರಹ್ಮಣೇ ನಮಃ
ಬ್ರಹ್ಮಣೇ ನಮಃ
ಬ್ರಹ್ಮವಿವರ್ಧನಾಯ ನಮಃ
ಬ್ರಹ್ಮವಿದೇ ನಮಃ
ಬ್ರಾಹ್ಮಣಾಯ ನಮಃ
ಬ್ರಹ್ಮಿಣೇ ನಮಃ
ಬ್ರಹ್ಮಜ್ಞಾಯ ನಮಃ
ಬ್ರಾಹ್ಮಣಪ್ರಿಯಾಯ ನಮಃ ೬೭೦
ಮಹಾಕ್ರಮಾಯ ನಮಃ
ಮಹಾಕರ್ಮಣೇ ನಮಃ
ಮಹಾತೇಜಸೇ ನಮಃ
ಮಹೋರಗಾಯ ನಮಃ
ಮಹಾಕ್ರತವೇ ನಮಃ
ಮಹಾಯಜ್ವನೇ ನಮಃ
ಮಹಾಯಜ್ಞಾಯ ನಮಃ
ಮಹಾಹವಿಷೇ ನಮಃ
ಸ್ತವ್ಯಾಯ ನಮಃ
ಸ್ತವಪ್ರಿಯಾಯ ನಮಃ ೬೮೦
ಸ್ತೋತ್ರಾಯ ನಮಃ
ಸ್ತುತಯೇ ನಮಃ
ಸ್ತೋತ್ರೇ ನಮಃ
ರಣಪ್ರಿಯಾಯ ನಮಃ

ಪೂರ್ಣಾಯ ನಮಃ
ಪೂರಯಿತ್ರೇ ನಮಃ
ಪುಣ್ಯಾಯ ನಮಃ
ಪುಣ್ಯಕೀರ್ತಯೇ ನಮಃ
ಅನಾಮಯಾಯ ನಮಃ
ಮನೋಜವಾಯ ನಮಃ ೬೯೦
ತೀರ್ಥಕರಾಯ ನಮಃ
ವಸುರೇತಸೇ ನಮಃ
ವಸುಪ್ರದಾಯ ನಮಃ
ವಸುಪ್ರದಾಯ ನಮಃ
ವಾಸುದೇವಾಯ ನಮಃ
ವಸವೇ ನಮಃ
ವಸುಮನಸೇ ನಮಃ
ಹವಿಷೇ ನಮಃ
ಸದ್ಗತಯೇ ನಮಃ
ಸತ್ಕೃತಯೇ ನಮಃ ೭೦೦
ಸತ್ತಾಯೈ ನಮಃ
ಸದ್ಭೂತಯೇ ನಮಃ
ಸತ್ಪರಾಯಣಾಯ ನಮಃ
ಶೂರಸೇನಾಯ ನಮಃ
ಯದುಶ್ರೇಷ್ಠಾಯ ನಮಃ
ಸನ್ನಿವಾಸಾಯ ನಮಃ
ಸುಯಾಮುನಾಯ ನಮಃ
ಭೂತವಾಸಾಯ ನಮಃ
ವಾಸುದೇವಾಯ ನಮಃ
ಸರ್ವಾಸುನಿಲಯಾಯ ನಮಃ ೭೧೦
ಅನಲಾಯ ನಮಃ
ದರ್ಪಘ್ನೇ ನಮಃ
ದರ್ಪದಾಯ ನಮಃ
ದೃಪ್ತಾಯ ನಮಃ

ದುರ್ಧರಾಯ ನಮಃ
ಅಪರಾಜಿತಾಯ ನಮಃ
ವಿಶ್ವಮೂರ್ತಯೇ ನಮಃ
ಮಹಾಮೂರ್ತಯೇ ನಮಃ
ದೀಪ್ತಮೂರ್ತಯೇ ನಮಃ
ಅಮೂರ್ತಿಮತೇ ನಮಃ ೭೨೦
ಅನೇಕಮೂರ್ತಯೇ ನಮಃ
ಅವ್ಯಕ್ತಾಯ ನಮಃ
ಶತಮೂರ್ತಯೇ ನಮಃ
ಶತಾನನಾಯ ನಮಃ
ಏಕಾಯ ನಮಃ
ನೈಕಾಯ ನಮಃ
ಸವಾಯ ನಮಃ
ಕಾಯ ನಮಃ
ಕಸ್ಮೈ ನಮಃ
ಯಸ್ಮೈ ನಮಃ ೭೩೦
ತಸ್ಮೈ ನಮಃ
ಪದಾಮನುತ್ತಮಾಯ ನಮಃ
ಲೋಕಬಂಧವೇ ನಮಃ
ಲೋಕನಾಥಾಯ ನಮಃ
ಮಾಧವಾಯ ನಮಃ
ಭಕ್ತವತ್ಸಲಾಯ ನಮಃ
ಸುವರ್ಣವರ್ಣಾಯ ನಮಃ
ಹೇಮಾಂಗಾಯ ನಮಃ
ವರಾಂಗಾಯ ನಮಃ
ಚಂದನಾಂಗದಿನೇ ನಮಃ ೭೪೦
ವೀರಘ್ನೇ ನಮಃ
ವಿಷಮಾಯ ನಮಃ
ಶೂನ್ಯಾಯ ನಮಃ
ಘೃತಾಶಿಷೇ ನಮಃ
ಅಚಲಾಯ ನಮಃ
ಚಲಾಯ ನಮಃ
ಅಮಾನಿನೇ ನಮಃ
ಮಾನದಾಯ ನಮಃ
ಮಾನ್ಯಾಯ ನಮಃ
ಲೋಕಸ್ವಾಮಿನೇ ನಮಃ ೭೫೦
ತ್ರಿಲೋಕಧೃತೇ ನಮಃ
ಸುಮೇಧಸೇ ನಮಃ
ಮೇಧಜಾಯ ನಮಃ
ಧನ್ಯಾಯ ನಮಃ
ಸತ್ಯಮೇಧಸೇ ನಮಃ
ಧರಾಧರಾಯ ನಮಃ
ತೇಜೋವೃಷಾಯ ನಮಃ
ದ್ಯುತಿಧರಾಯ ನಮಃ
ಸರ್ವಶಸ್ತ್ರಭೃತಾಂ ವರಾಯ ನಮಃ
ಪ್ರಗ್ರಹಾಯ ನಮಃ ೭೬೦
ನಿಗ್ರಹಾಯ ನಮಃ
ವ್ಯಗ್ರಾಯ ನಮಃ
ನೈಕಶೃಂಗಾಯ ನಮಃ
ಗದಾಗ್ರಜಾಯ ನಮಃ
ಚತುರ್ಮೂರ್ತಯೇ ನಮಃ
ಚತುರ್ಬಾಹವೇ ನಮಃ
ಚತುರ್ವ್ಯೂಹಾಯ ನಮಃ
ಚತುರ್ಗತಯೇ ನಮಃ
ಚತುರಾತ್ಮನೇ ನಮಃ
ಚತುರ್ಭಾವಾಯ ನಮಃ
ಚತುರ್ವೇದವಿದೇ ನಮಃ
ಏಕಪದೇ ನಮಃ
ಸಮಾವರ್ತಾಯ ನಮಃ
ಅನಿವೃತ್ತಾತ್ಮನೇ ನಮಃ

ದುರ್ಜಯಾಯ ನಮಃ
ದುರತಿಕ್ರಮಾಯ ನಮಃ
ದುರ್ಲಭಾಯ ನಮಃ
ದುರ್ಗಮಾಯ ನಮಃ
ದುರ್ಗಾಯ ನಮಃ
ದುರಾವಾಸಾಯ ನಮಃ ೭೮೦
ದುರಾರಿಘ್ನೇ ನಮಃ
ಶುಭಾಂಗಾಯ ನಮಃ
ಲೋಕಸಾರಂಗಾಯ ನಮಃ
ಸುತಂತವೇ ನಮಃ
ತಂತುವರ್ಧನಾಯ ನಮಃ
ಇಂದ್ರಕರ್ಮಣೇ ನಮಃ
ಮಹಾಕರ್ಮಣೇ ನಮಃ
ಕೃತಕರ್ಮಣೇ ನಮಃ
ಕೃತಾಗಮಾಯ ನಮಃ
ಉದ್ಭವಾಯ ನಮಃ ೭೯೦
ಸುಂದರಾಯ ನಮಃ
ಸುಂದಾಯ ನಮಃ
ರತ್ನನಾಭಾಯ ನಮಃ
ಸುಲೋಚನಾಯ ನಮಃ
ಅರ್ಕಾಯ ನಮಃ
ವಾಜಸನಾಯ ನಮಃ
ಶೃಂಗಣೇ ನಮಃ
ಜಯಂತಾಯ ನಮಃ
ಸರ್ವವಿಜ್ಜಯಿನೇ ನಮಃ
ಸುವರ್ಣಬಿಂದವೇ ನಮಃ ೮೦೧
ಅಕ್ಷೋಭ್ಯಾಯ ನಮಃ
ಸರ್ವವಾಗೀಶ್ವರೇಶ್ವರಾಯ ನಮಃ
ಮಹಾಹ್ರದಾಯ ನಮಃ
ಮಹಾಗರ್ತಾಯ ನಮಃ

ಮಹಾಭೂತಾಯ ನಮಃ
ಮಹಾನಿಧಯೇ ನಮಃ
ಕುಮುದಾಯ ನಮಃ
ಕುಂದರಾಯ ನಮಃ
ಕುಂದಾಯ ನಮಃ
ಪರ್ಜನ್ಯಾಯ ನಮಃ ೮೧೦
ಪಾವನಾಯ ನಮಃ
ಅನಿಲಾಯ ನಮಃ
ಅಮೃತಾಶಾಯ ನಮಃ
ಅಮೃತವಪುಷೇ ನಮಃ
ಸರ್ವಜ್ಞಾಯ ನಮಃ
ಸರ್ವತೋಮುಖಾಯ ನಮಃ
ಸುಲಭಾಯ ನಮಃ
ಸುವ್ರತಾಯ ನಮಃ
ಸಿದ್ಧಾಯ ನಮಃ
ಶತ್ರುಜಿತೇ ನಮಃ ೮೨೦
ಶತ್ರುತಾಪನಾಯ ನಮಃ
ನ್ಯಗ್ರೋಧಾಯ ನಮಃ
ಔದುಂಬರಾಯ ನಮಃ
ಅಶ್ವತ್ಥಾಯ ನಮಃ
ಚಾಣೂರಾಂಧ್ರನಿಷೂದನಾಯ ನಮಃ
ಸಹಸ್ರಾರ್ಚಿಷೇ ನಮಃ
ಸಪ್ತಜಿಹ್ವಾಯ ನಮಃ
ಸಪ್ತೈಧಸೇ ನಮಃ
ಸಪ್ತವಾಹನಾಯ ನಮಃ
ಅಮೂರ್ತಯೇ ನಮಃ ೮೩೦
ಅನಘಾಯ ನಮಃ
ಅಚಿಂತ್ಯಾಯ ನಮಃ
ಭಯಕೃತೇ ನಮಃ
ಭಯನಾಶನಾಯ ನಮಃ

ಅಣವೇ ನಮಃ
ಬೃಹತೇ ನಮಃ
ಕೃಶಾಯ ನಮಃ
ಸ್ಥೂಲಾಯ ನಮಃ
ಗುಣಭೃತೇ ನಮಃ
ನಿರ್ಗುಣಾಯ ನಮಃ ೮೪೦
ಮಹತೇ ನಮಃ
ಅಧೃತಾಯ ನಮಃ
ಸ್ವಧೃತಾಯ ನಮಃ
ಸ್ವಾಸ್ಯಾಯ ನಮಃ
ಪ್ರಾಗ್ವಂಶಾಯ ನಮಃ
ವಂಶವರ್ಧನಾಯ ನಮಃ
ಭಾರಭೃತೇ ನಮಃ
ಕಥಿತಾಯ ನಮಃ
ಯೋಗಿನೇ ನಮಃ
ಯೋಗೀಶಾಯ ನಮಃ ೮೫೦
ಸರ್ವಕಾಮದಾಯ ನಮಃ
ಆಶ್ರಮಾಯ ನಮಃ
ಶ್ರಮಣಾಯ ನಮಃ
ಕ್ಷಾಮಾಯ ನಮಃ
ಸುಪರ್ಣಾಯ ನಮಃ
ವಾಯುವಾಹನಾಯ ನಮಃ
ಧನುರ್ಧರಾಯ ನಮಃ
ಧನುರ್ವೇದಾಯ ನಮಃ
ದಂಡಾಯ ನಮಃ
ದಮಯಿತ್ರೇ ನಮಃ ೮೬೦
ದಮಾಯ ನಮಃ
ಅಪರಾಜಿತಾಯ ನಮಃ
ಸರ್ವಸಹಾಯ ನಮಃ
ನಿಯಂತ್ರೇ ನಮಃ

ಅನಿಯಮಾಯ ನಮಃ
ಅಯಮಾಯ ನಮಃ
ಸತ್ತ್ವವತೇ ನಮಃ
ಸಾತ್ತ್ವಿಕಾಯ ನಮಃ
ಸತ್ಯಾಯ ನಮಃ
ಸತ್ಯಧರ್ಮಪರಾಯಣಾಯ ನಮಃ
ಅಭಿಪ್ರಾಯಾಯ ನಮಃ [೮೭೦
ಪ್ರಿಯಾರ್ಹಾಯ ನಮಃ
ಅರ್ಹಾಯ ನಮಃ
ಪ್ರಿಯಕೃತೇ ನಮಃ
ಪ್ರೀತಿವರ್ಧನಾಯ ನಪುಃ
ವಿಹಾಯಸಗತಯೇ ನಮಃ
ಜ್ಯೋತಿಷೇ ನಮಃ
ಸುರುಚಯೇ ನಮಃ
ಹುತಭುಜೇ ನಮಃ
ವಿಭವೇ ನಮಃ ೮೮೦
ರವಯೇ ನಮಃ
ವಿರೋಚನಾಯ ನಮಃ
ಸೂರ್ಯಾಯ ನಮಃ
ಸವಿತ್ರೇ ನಮಃ
ರವಿಲೋಚನಾಯ ನಮಃ
ಅನಂತಾಯ ನಮಃ
ಹುತಭುಜೇ ನಮಃ
ಭೋಕ್ತ್ರೇ ನಮಃ
ಸುಖದಾಯ ನಮಃ
ನೈಕಜಾಯ ನಮಃ ೮೯೦
ಅಗ್ರಜಾಯ ನಮಃ
ಅನಿರ್ವಿಣ್ಣಾಯ ನಮಃ
ಸದಾಮರ್ಷಿಣೇ ನಮಃ
ಲೋಕಾಧಿಷ್ಠಾನಾಯ ನಮಃ

ಅದ್ಭುತಾಯ ನಮಃ
ಸನಾತೇ ನಮಃ
ಸನಾತನತಮಾಯ ನಮಃ
ಕಪಿಲಾಯ ನಮಃ
ಕಪಯೇ ನಮಃ
ಅಪ್ಯಯಾಯ ನಮಃ ೯೦೦
ಸ್ವಸ್ತಿದಾಯ ನಮಃ
ಸ್ವಸ್ತಿಕೃತೇ ನಮಃ
ಸ್ವಸ್ತಿನೇ ನಮಃ
ಸ್ವಸ್ತಿಭುಜೇ ನಮಃ
ಸ್ವಸ್ತಿದಕ್ಷಿಣಾಯ ನಮಃ
ಅರೌದ್ರಾಯ ನಮಃ
ಕುಂಡಲಿನೇ ನಮಃ
ಚಕ್ರಿಣೇ ನಮಃ
ವಿಕ್ರಮಿಣೇ ನಮಃ
ಊರ್ಜಿತಶಾಸನಾಯ ನಮಃ
ಶಬ್ದಾತಿಗಾಯ ನಮಃ [೯೧೦
ಶಬ್ದಸಹಾಯ ನಮಃ
ಶಿಶಿರಾಯ ನಮಃ
ಶರ್ವರೀಕರಾಯ ನಮಃ
ಅಕ್ರೂರಾಯ ನಮಃ
ಪೇಶಲಾಯ ನಮಃ
ದಕ್ಷಾಯ ನಮಃ
ದಕ್ಷಿಣಾಯ ನಮಃ
ಕ್ಷಮಿಣಾಂ ವರಾಯ ನಮಃ
ವಿದ್ವತ್ತಮಾಯ ನಮಃ ೯೨೦
ವೀತಭಯಾಯ ನಮಃ
ಪುಣ್ಯಶ್ರವಣಕೀರ್ತನಾಯ ನಮಃ
ಉತ್ತಾರಣಾಯ ನಮಃ
ದುಷ್ಕೃತಿಘ್ನೇ ನಮಃ

ಪುಣ್ಯಾಯ ನಮಃ
ದುಃಸ್ವಪ್ನನಾಶನಾಯ ನಮಃ
ವೀರಘ್ನೇ ನಮಃ
ರಕ್ಷಣಾಯ ನಮಃ
ಸಂತಾಯ ನಮಃ
ಜೀವನಾಯ ನಮಃ ೯೩೦
ಪರ್ಯವಸ್ಥಿತಾಯ ನಮಃ
ಅನಂತರೂಪಾಯ ನಮಃ
ಅನಂತಶ್ರಿಯೇ ನಮಃ
ಜಿತಮನ್ಯವೇ ನಮಃ
ಭಯಾಪಹಾಯ ನಮಃ
ಚತುರಾಶ್ರಾಯ ನಮಃ
ಗಭೀರಾತ್ಮನೇ ನಮಃ
ವಿದಿಶಾಯ ನಮಃ
ವ್ಯಾದಿಶಾಯ ನಮಃ
ದಿಶಾಯ ನಮಃ ೯೪೦
ಅನಾದಯೇ ನಮಃ
ಭೂರ್ಭುವಾಯ ನಮಃ
ಲಕ್ಷ್ಮ್ಯೈ ನಮಃ
ಸುವೀರಾಯ ನಮಃ
ರುಚಿರಾಂಗದಾಯ ನಮಃ
ಜನನಾಯ ನಮಃ
ಜನಜನ್ಮಾದಯೇ ನಮಃ
ಭೀಮಾಯ ನಮಃ
ಭೀಮಪರಾಕ್ರಮಾಯ ನಮಃ
ಆಧಾರನಿಲಯಾಯ ನಮಃ ೯೫೦
ಅಧಾತ್ರೇ ನಮಃ
ಪುಷ್ಪಹಾಸಾಯ ನಮಃ
ಪ್ರಜಾಗರಾಯ ನಮಃ
ಊರ್ಧ್ವಗಾಯ ನಮಃ

ಸತ್ಪಥಾಚಾರಾಯ ನಮಃ
ಪ್ರಾಣದಾಯ ನಮಃ
ಪ್ರಣವಾಯ ನಮಃ
ಪಣಾಯ ನಮಃ
ಪ್ರಮಾಣಾಯ ನಮಃ
ಪ್ರಾಣನಿಲಯಾಯ ನಮಃ ೯೬೦
ಪ್ರಾಣಭೃತೇ ನಮಃ
ಪ್ರಾಣಜೀವನಾಯ ನಮಃ
ತತ್ತ್ವಾಯ ನಮಃ
ತತ್ತ್ವವಿದೇ ನಮಃ
ಏಕಾತ್ಮನೇ ನಮಃ
ಜನ್ಮಮೃತ್ಯುಜರಾತಿಗಾತಾಯ
ಭೂರ್ಭುವೇಸ್ಸ್ವಸ್ತರವೇ [ನಮಃ
ತಾರಾಯ ನಮಃ [ನಮಃ
ಸವಿತ್ರೇ ನಮಃ
ಪ್ರಪಿತಾಮಹಾಯ ನಮಃ ೯೭೦
ಯಜ್ಞಾಯ ನಮಃ
ಯಜ್ಞಪತಯೇ ನಮಃ
ಯಜ್ವನೇ ನಮಃ
ಯಜ್ಞಾಂಗಾಯ ನಮಃ
ಯಜ್ಞವಾಹನಾಯ ನಮಃ
ಯಜ್ಞಭೃತೇ ನಮಃ
ಯಜ್ಞಕೃತೇ ನಮಃ
ಯಜ್ಞಿನೇ ನಮಃ

ಯಜ್ಞಭುಜೇ ನಮಃ
ಯಜ್ಞಸಾಧನಾಯ ನಮಃ ೯೮೦
ಯಜ್ಞಾಂತಕೃತೇ ನಮಃ
ಯಜ್ಞಗುಹ್ಯಾಯ ನಮಃ
ಅನ್ನಾಯ ನಮಃ
ಅನ್ನಾದಾಯ ನಮಃ
ಆತ್ಮಯೋನಯೇ ನಮಃ
ಸ್ವಯಂಜಾತಾಯ ನಮಃ
ವೈಖಾನಾಯ ನಮಃ
ಸಾಮಗಾಯನಾಯ ನಮಃ
ದೇವಕೀನಂದನಾಯ ನಮಃ
ಸ್ರಷ್ಟ್ರೇ ನಮಃ ೯೯೦
ಕ್ಷಿತೀಶಾಯ ನಮಃ
ಪಾಪನಾಶನಾಯ ನಮಃ
ಶಂಖಭೃತೇ ನಮಃ
ನಂದಕೀನೇ ನಮಃ
ಚಕ್ರಿಣೇ ನಮಃ
ಶಾರ್ಙ್ಗಧನ್ವನೇ ನಮಃ
ಗದಾಧರಾಯ ನಮಃ
ರಥಾಂಗಪಾಣಯೇ ನಮಃ
ಅಕ್ಷೋಭ್ಯಾಯ ನಮಃ
ಸರ್ವಪ್ರಹರಣಾಯುಧಾಯ ನಮಃ
೧೦೦೦

ಬೆಲೆ : 4 ರೂ.